ಸನ್ಮತಿ ಗ್ರಂಥಮಾಲಾ ಪುಷ್ಪ ೨೨

★

ಕವಿಚಕ್ರವರ್ತಿ ರನ್ನಮಹಾಕವಿ ವಿರಚಿತ

ಅಜಿತ ತೀರ್ಥಕರ ಪುರಾಣತಿಲಕಂ

ಸಂಪಾದಕರು:

ಎಚ್. ದೇವೀರಪ್ಪ, ಎಂ.ಎ.

ದೇ. ಜವರೇಗೌಡ, ಎಂ.ಎ.

ಪೋಷಕರು :

[ಶ್ರೀ]ಮತಿ ಕೆ. ಲಕ್ಷ್ಮೀದೇವಮ್ಮನವರು

(... ಕೀರೆ ಪಚ್ಚೆ ಕೃಷ್ಣಯ್ಯಗೌಡರವರ ಧರ್ಮಪತ್ನಿಯವರು)

ಪ್ರಕಾಶಕರು:

ಜೈನ ಸಾಹಿತ್ಯ ಪ್ರಚಾರ ಸಂಘ

ಮತ್ತು

ಜೈನ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್

ಮೈಸೂರು.

ವಿ. ಶ. ೨೪೮೬] [ಕ್ರಿ. ಶ. ೧೯೫೯

ವಿಷಯಸೂಚಿ

ಸನ್ಮತಿ ಗ್ರಂಥಮಾಲಾ ಪುಷ್ಪ ೨೨

★

ಕವಿಚಕ್ರವರ್ತಿ ರನ್ನಮಹಾಕವಿ ವಿರಚಿತ

ಅಜಿತ ತೀರ್ಥಕರ ಪುರಾಣತಿಲಕಂ

ಸಂಪಾದಕರು:

ಎಚ್. ದೇವೀರಪ್ಪ, ಎಂ.ಎ.

ದೇ ಜವರೇಗೌಡ, ಎಂ.ಎ.

ಪೋಷಕರು :

ಶ್ರೀಮತಿ ಕೆ. ಲಕ್ಷ್ಮೀದೇವಮ್ಮನವರು

(ದಿವಂಗತ ಶ್ರೀ: ಕೀರೆ ಪಚ್ಚೆ ಕೃಷ್ಣಯ್ಯಗೌಡರವರ ಧರ್ಮಪತ್ನಿಯವರು)

ಪ್ರಕಾಶಕರು:

ಜೈನ ಸಾಹಿತ್ಯ ಪ್ರಚಾರ ಸಂಘ

ಮತ್ತು

ಜೈನ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್

ಮೈಸೂರು.

ವ. ಶ. ೨೪೮೧] [ಕ್ರಿ. ಶ. ೧೯೫೫

ಪ್ರಥಮ ಮುದ್ರಣ

ಬೆಲೆ: ನಾಲ್ಕು ರೂಪಾಯಿ

ಮುದ್ರಕರು:
ಶ್ರೀ: B. V. ಅಳಹಿಯಮಣವಾಳ್,
ಪ್ರೊಪ್ರೈಟರ್
ಶ್ರೀ ವಿಜಯಲಕ್ಷ್ಮೀ ಪ್ರೆಸ್, 355. ಡಿ. ಸುಬ್ಬಯ್ಯ ರಸ್ತೆ, ಮೈಸೂರು.

ಅಭಿನಂದನೆ

ಧರ್ಮಬಾಂಧವರೇ !

ನಮ್ಮ ಮೈಸೂರು ಜೈನಸಾಹಿತ್ಯ ಪ್ರಚಾರ ಸಂಘವು 1950 ರಲ್ಲಿ ಜನ್ಮವೆತ್ತಿ ಅನೇಕಧರ್ಮಾತ್ಮರುಗಳನ್ನು ಗ್ರಂಥಪ್ರಕಟನೆಗಾಗಿ ಪ್ರೋತ್ಸಾಹಿಸಿತು. ಮೈನಾಡಿನಲ್ಲಿ ಸಂಘದ ಪ್ರಚಾರ ಕೈಕೊಂಡಾಗ ಮೈನಾಡಿನ ದಿವಂಗತ ಶ್ರೀ: ಕೀರೆಪಚ್ಚೆ ಕೃಷ್ಣೇಗೌಡರವರ ಧರ್ಮಪತ್ನಿ ಶ್ರೀಮತಿ ಲಕ್ಷ್ಮೀದೇವಮ್ಮನವರು ಮತ್ತು ಅವರ ಮಕ್ಕಳುಗಳಾದ ಶ್ರೀ: ಪದ್ಮರಾಜಗೌಡರು, ಶ್ರೀ: ಪಿ. ಕೆ. ವಜ್ರೇಗೌಡರವರು, ಶ್ರೀ: ಪಿ. ಕೆ. ನಾಗಪ್ಪಗೌಡರವರು ಇವರುಗಳು ರನ್ನನ 'ಅಜಿತ ಪುರಾಣ ತಿಲಕ' ವನ್ನು ಪ್ರಕಟಿಸಲು ನಿಶ್ಚಯಿಸಿ ಆ ಭಾರವನ್ನು ಅವರೇ ಹೊತ್ತರು. ಅನಂತರ ಈ ಗ್ರಂಥ ಸಂಪಾದನೆಗಾಗಿ ಪ್ರಾರ್ಥಿಸಲ್ಪಟ್ಟ ಶ್ರೀ: ಎಚ್. ದೇವೀರಪ್ಪ, M.A.; ರವರೂ ಶ್ರೀ: ದೇ. ಜವರೇಗೌಡ, M.A., ರವರೂ ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಆ ಹೊಣೆಯನ್ನು ನಿರ್ವಹಿಸಿರುವರು. ಈ ಸಂದರ್ಭದಲ್ಲಿ ಶ್ರವಣಬೆಳಗೊಳದ ಶ್ರೀ ಮಠದ ಸರಸ್ವತೀಭಂಡಾರದ ಒಂದು ಓಲೆಯ ಪುಸ್ತಕವು ಶ್ರೀಮಠದಿಂದಲೂ ಓರಿಯಂಟಲ್ ರೀಸರ್ಚ್ ಇನ್ಸ್ಟಿಟ್ಯೂಟಿನ ಕೈಬರಹದ ಪ್ರತಿಗಳು O.R.I. ಅಧಿಕಾರಿಗಳಿಂದಲೂ ದೊರಕಿ ಗ್ರಂಥಸಂಪಾದಕರೇ ಪ್ರೂಫ್ ಕರೆಕ್ಷನ್ವಗೈರೆ ಹೊಣೆಯನ್ನು ಹೊತ್ತುದರಿಂದ ಗ್ರಂಥವನ್ನು ಉತ್ತಮರೀತಿಯಲ್ಲಿ ಪ್ರಕಟಿಸಲು ಅವಕಾಶ ಒದಗಿತು.

ಈ ಸಂದರ್ಭದಲ್ಲಿ ಗ್ರಂಥಸಂಪಾದಕರುಗಳಿಗೆ ನಮ್ಮ ಸಂಘದ ಪರವಾಗಿ ಹೃತ್ಪೂರ್ವಕವಂದನೆಗಳನ್ನರ್ಪಿಸುತ್ತೇನೆ. ಇಂತಹ ಗ್ರಂಥರತ್ನವನ್ನು ಪ್ರಕಟಿಸಿ ಶಾಸ್ತ್ರದಾನರೂಪವಾದ ಮಹಾಪುಣ್ಯಫಲವನ್ನು ಹೊಂದಿ ಅಭಿನವ ಅತ್ತಿಮಬ್ಬೆಯೆಂದು ಕೀರ್ತಿವೆತ್ತ ಶ್ರೀ: ಲಕ್ಷ್ಮೀದೇವಮ್ಮನವರಿಗೂ ಅವರ ಸುಪುತ್ರರಿಗೂ ಗ್ರಂಥಪ್ರಕಟನೆಗೆ ಪ್ರೋತ್ಸಾಹವಿತ್ತ ಶ್ರೀ: ವಿ ಕೆ. ವರ್ಧಮಾನಯ್ಯನವರಿಗೂ ಅನಂತಾಭಿನಂದನೆಗಳನ್ನು ಅರ್ಪಿಸುತ್ತೇನೆ. ಹಾಗೂ ಅಜಿತಪುರಾಣದ ಪ್ರತಿಗಳನ್ನು ಒದಗಿಸಿಕೊಟ್ಟ ಸ್ವಸ್ತಿ ಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರಿಗೂ O.R.I. ಮುಖ್ಯಾಧಿಕಾರಿಗಳಿಗೂ ಅನಂತವಂದನೆಗಳನ್ನರ್ಪಿಸುವೆನು. ಮುದ್ರಣ ಕಾರ್ಯದಲ್ಲಿ ಪ್ರತಿಹೆಜ್ಜೆಗೂ ಸಹಾಯಸಹಕಾರಗಳನ್ನಿತ್ತ ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ವಿಜಯಲಕ್ಷ್ಮೀಪ್ರೆಸ್ ಮಾಲೀಕರಾದ ಶ್ರೀ: B.V. ಅಳಹಿಯಮಣವಾಳ್ರವರಿಗೆ ಕೃತಜ್ಞತಾಪೂರ್ವಕ ವಂದನೆಗಳನ್ನು ಈ ಮೂಲಕ ಅರ್ಪಿಸುವೆನು.

ಈ ಸಂದರ್ಭದಲ್ಲಿ ಗ್ರಂಥಕರ್ತೃವಿನವಿಷಯದಲ್ಲಿ ನಮ್ಮ ಭಕ್ತಿಯ ಕಾಣಿಕೆಯನ್ನು ಅರ್ಪಿಸುವುದು ಯುಕ್ತ ಆದ್ದರಿಂದ ಕೆಲವು ಮಾತುಗಳನ್ನು ಬರೆದು ಈ ಲೇಖನಿಗೆ ವಿರಾಮಕೊಡಬಯಸುವೆನು.

ಕನ್ನಡ ಚಂಪೂಗ್ರಂಥವಾದ ಅಜಿತಪುರಾಣವು ಪುರಾಣಗಳಿಗೆಲ್ಲಾ ತಿಲಕಪ್ರಾಯವಾಗಿದೆ. ಪಂಪನು ಆದಿಪುರಾಣದಲ್ಲಿ ಮೊದಲನೇ ವೃಷಭತೀರ್ಥಂಕರರ ಚರಿತ್ರೆಯನ್ನೂ ಪ್ರಥಮಚಕ್ರಿಯ ಚರಿತ್ರೆಯನ್ನೂ ಅತಿಸುಂದರವಾಗಿ ವರ್ಣಿಸಿರುವನು. ಉತ್ತಮನಾಯಕರ ಚರಿತ್ರೆಯನ್ನು ರಚಿಸುವುದರಿಂದ ಕೃತಾರ್ಥರಾಗುವೆವೆಂಬ ದೃಢಮನೋಭಾವದಿಂದ ರನ್ನಮಹಾಕವಿಯೂ ಸಹ ಅಜಿತತೀರ್ಥಂಕರರ ಪುರಾಣವನ್ನೂ ಸಗರಚಕ್ರವರ್ತಿಯ ಮಹಾವೈಭವವನ್ನೂ ವಿವರಿಸುವ ಪುರಾಣವನ್ನು ವಿರಚಿಸಿದನು. 949 ರಲ್ಲಿ ಜಮಖಂಡಿಯಲ್ಲಿರುವ ಮುದುವೊಳಲುವಿನಲ್ಲಿ ಹುಟ್ಟಿದ ಈತನ ತಾಯಿ ಅಬ್ಬಲಬ್ಬೆ; ತಂದೆ ಜಿನೇಂದ್ರವಲ್ಲಭೇಂದ್ರ; ಮಡದಿ ಜಕ್ಕಿ, ಶಾಂತಿ; ಮಗ ರಾಯ; ಮಗಳು ಅತ್ತಿಮಬ್ಬೆ. ಈತನ ಪುರೋಭಿವೃದ್ಧಿಗೆ ಅಜಿತಸೇನಾಚಾರ್ಯರು ಸ್ವಾಮಿ ಚಾವುಂಡರಾಯ ತೈಲಪಚಕ್ರವರ್ತಿ ಇವರೆಲ್ಲರೂ ಕಾರಣಭೂತರಾಗಿರುವರು. ತೈಲಪಚಕ್ರವರ್ತಿಯೇ ಕನಕದಂಡ, ಚಾಮರ, ಆನೆ, ಛತ್ರಿಯೇ ಮೊದಲಾದ ಬಿರುದುಗಳನ್ನು ಕೊಟ್ಟು ಕವಿಚಕ್ರವರ್ತಿಯೆಂದು ಗೌರವಿಸಿದನು. ಇದಲ್ಲದೆ ಅನೇಕ ಬಿರುದುಗಳೂ ಇವೆ. ಈತನು ಗದಾಯುದ್ಧ ರನ್ನನ ನಿಘಂಟು ಇವುಗಳನ್ನು ರಚಿಸಿರುವನು. ಇವಲ್ಲದೆ ಪರಶುರಾಮಚರಿತೆ ಚಕ್ರೇಶ್ವರಚರಿತೆ ಎಂಬ ಎರಡುಗ್ರಂಥಗಳನ್ನು ಈತನು ರಚಿಸಿರುವನು. ಆದರೆ ಈ ಗ್ರಂಥಗಳು ಉಪಲಬ್ಧವಾಗಿಲ್ಲ. ಇಂತಹ ಮಹಾನುಭಾವನಿಗೆ ಭಕ್ತಿನಮ್ರಪ್ರಣಾಮಗಳನ್ನು ಅತ್ಯಂತಕೃತಜ್ಞತೆಯಿಂದ ಸಮರ್ಪಿಸುತ್ತೇನೆ.

ಇಂತು ತಮ್ಮ ಧರ್ಮಬಂಧು

ಯಂ. ಸಿ. ಪದ್ಮನಾಭಶರ್ಮ
ನ್ಯಾಯತೀರ್ಥ
ಗೌರವ ಕಾರ್ಯದರ್ಶಿ
ಜೈನ ಸಾಹಿತ್ಯ ಪ್ರಚಾರ ಸಂಘ,
ಮೈಸೂರು.

ಮೈಸೂರು
16—4—59
ಮ. ಶ. ೨೬೨೧

ಕಥಾಸಾರ

ಪ್ರಥಮಾಶ್ವಾಸದಲ್ಲಿ, ಕವಿ ಜಿನಸ್ತುತಿಯನ್ನೂ, ಗುರುಸ್ತುತಿಯನ್ನೂ ಮಾಡಿ, ವಾಕ್ಸುಂದರಿಯನ್ನು ತನ್ನ ಮುಖಾಂಭೋಜದಲ್ಲಿ ನೆಲಸುವಂತೆ ಬೇಡಿ, ದಾನಚಿಂತಾಮಣಿಯಾದ ಅತ್ತಿಮಬ್ಬೆಯ ವಂಶದ ಹಿರಿಮೆಯನ್ನು ಕೊಂಡಾಡಿ, ಅವಳ ಗುಣಗಳನ್ನು ಹಲವು ಪದ್ಯಗಳಲ್ಲಿ ವರ್ಣಿಸಿ ಅತ್ತಿಮಬ್ಬೆ ಜಿನಪದಭಕ್ತೆಯಾಗಿ ಜಿನಧರ್ಮೋದ್ಧಾರಕ್ಕಾಗಿ ಮಾಡಿದ ಕೃತಿಗಳೆಲ್ಲವನ್ನೂ ಸ್ಮರಿಸಿ ಕೊಂಡಾಡಿದ್ದಾನೆ. ಅವಳ ಪ್ರೀತ್ಯರ್ಥವಾಗಿ ಈ ಪುರಾಣತಿಲಕವನ್ನು ಹೇಳುತ್ತೇನೆಂದು ಹೇಳಿ, ತನ್ನ ಪುರಾಣದ ಹಿರಿಮೆಯನ್ನೂ, ತನ್ನ ಕವಿತೆಯ ಹಿರಿಮೆಯನ್ನೂ ಹೇಳಿಕೊಂಡಿದ್ದಾನೆ.

ಜಂಬೂದ್ವೀಪದ, ಮಂದರಪರ್ವತದ ದಕ್ಷಿಣಕ್ಷೋಣೀತಳದಲ್ಲಿ ಭರತ ಕ್ಷೇತ್ರದ ಮಧ್ಯವರ್ತಿಯಾಗಿ ಅಯೋಧ್ಯಾದೇಶ ಸೊಂಪಿನಿಂದ ವಿರಾಜಿಸುತ್ತಿತ್ತು. ಆ ದೇಶದ ಸಾಕೇತಪುರದಲ್ಲಿ ಕ್ಷತ್ರಿಯಕುಲತಿಲಕನೆನಿಸಿದ ಇಕ್ಷ್ವಾಕು ವಂಶೋತ್ಪನ್ನನಾದ 'ಜಿತಶತ್ರು'ವೆಂಬ ಅರಸು ಆಳುತ್ತಿದ್ದನು. ಆತನ ಮನೋವಲ್ಲಭೆ ಸರ್ವಗುಣಾಲಂಕೃತಳಾದ 'ವಿಜಯಸೇನಾದೇವಿ' ಯೆಂಬುವಳು ಶೃಂಗಾರಸಾರೆಯಾಗಿ ಶೋಭಿಸುತ್ತಿದ್ದಳು. ಆ ಮಹಾದೇವಿಯ ಜೊತೆಯಲ್ಲಿ ಆ ಮಹಾನುಭಾವನು ಅನೇಕ ರೀತಿಯಾಗಿ ಮನ್ಮಥಸುಖವನ್ನು ಅನುಭವಿಸಿ, ವಿಜಿಗೀಷು ವೃತ್ತಿಯನ್ನು ಅವಲಂಬಿಸಿ, ವಿಕ್ರಮದಿಂದ ಎಲ್ಲ ಶತ್ರುಗಳನ್ನೂ ಗೆದ್ದು ಜಿತಶತ್ರು ಎಂಬ ಹೆಸರನು ಅನ್ವರ್ಥವನ್ನಾಗಿ ಮಾಡಿಕೊಂಡು ಸುಖದಿಂದಿದ್ದನು.

ಇತ್ತ ಜಂಬೂದ್ವೀಪದ ಪೂರ್ವ ವಿದೇಹದ ಸೀತಾನದಿಯ ತೆಂಕಣನಾಡಿನ ವತ್ಸಕಾವತೀದೇಶದ ಸುಸೀಮಾನಗರವನ್ನು ಆಳುತ್ತಿದ್ದ ವಿಮಲವಾಹನನೆಂಬುವನು ತನ್ನ ಕೆನ್ನೆಯಲ್ಲಿ ನರೆಕೂದಲು ಬಂದದ್ದನ್ನು ಕನ್ನಡಿಯಲ್ಲಿ ನೋಡಿ ವೈರಾಗ್ಯಪರನಾಗಿ ಇಹಭೋಗಗಳೆಲ್ಲವನ್ನೂ ಹಳಿದು 'ಈ ಏಳು ಶರೀರ ಧಾತುಗಳೇ ಏಳು ನರಕಗಳು' ಎಂದು ತಿಳಿದು, ಆತ್ಮನ ಸಾರವಾದ ಜಿನಧರ್ಮ ಮಹಿಮೆಯನ್ನು ತಿಳಿದು ಮಂತ್ರಿ ಪ್ರಮುಖರನ್ನು ಕರೆಸಿ, ಮಗನಿಗೆ ಪಟ್ಟಕಟ್ಟಿ ಜಿನದೀಕ್ಷೆಯನ್ನು ವಹಿಸಿ ತಪಸ್ಸಿಗೆ ಹೋದನು. ತೀರ್ಥಂಕರ ಪದವಿಗೆ ಕಾರಣವಾದ ದರ್ಶನ ಚಾರಿತ್ರಗಳೇ ಮೊದಲಾದ ಜಿನಧರ್ಮ ಭಾವನೆಗಳನ್ನು ಭಾವಿಸಿ ಕಾಲಾಂತರದಲ್ಲಿ ಸಮಾಧಿಮರಣದಿಂದ ಶರೀರ ಪರಿತ್ಯಾಗಮಾಡಿ ಪಂಚಾಣೂತ್ತರಗಳೊಳಗಣ ವಿಜಯವೆಂಬ

ವಿಮಾನದಲ್ಲಿ ಅಹಮಿಂದ್ರನಾಗಿ ಹುಟ್ಟಿ ಅಣಿಮಾದ್ಯಷ್ಟೈಶ್ವರ್ಯ ಸುಖಸಂತೃಪ್ತಿಯನ್ನು ಪಡೆದು ಭರತಕ್ಷೇತ್ರದಲ್ಲಿ ಎರಡನೆಯ ತೀರ್ಥಂಕರನಾಗಿ ಜನಿಸಿದನು. ಆಗ ಇಂದ್ರನು ಅಜಿತನಾಥನು ಜಿತಶತ್ರುರಾಜನಿಗೆ ಮಗನಾಗಿ ಹುಟ್ಟುವನೆಂಬುದನ್ನು ಅವಧಿಬೋಧದಿಂದ ತಿಳಿದು ಆ ರಾಜನ ಮಡದಿಯಾದ ವಿಜಯಸೇನಾದೇವಿಯ ಗರ್ಭವನ್ನು ಶುದ್ಧಿಮಾಡಲು ದೇವಾಂಗನೆಯರನ್ನು ನಿಯಮಿಸಿದನು. ಆ ದೇವಾಂಗನೆಯರು ಅರಸಿಯರನ್ನು ಬಹುವಿಧದಿಂದ ಉಪಚರಿಸಿ, ಅಜಿತ ತೀರ್ಥಂಕರನು ಬರಲಿರುವ ಆ ದೇವಿಯ ಗರ್ಭಶೋಧನೆಯನ್ನು ಮಾಡಿ ವೀಣಾವಾದನ, ಲೀಲಾ ಕೇಳಿಗಳೇ ಮೊದಲಾದ ವಿವಿಧ ವಿನೋದಗಳಿಂದ ಮೆರೆಸುತ್ತಿರಲು ಜ್ಯೇಷ್ಠಮಾಸದಮಾವಾಸ್ಯೆಯ ರೋಹಿಣೀನಕ್ಷತ್ರದ ಬೆಳಗಿನ ಜಾವದಲ್ಲಿ ವಿಜಯಸೇನಾದೇವಿ ದಿವ್ಯ ಶಯನಗೃಹದ ವೈಡೂರ್ಯ ಪರ್ಯಂಕದಲ್ಲಿ ಪವಡಿಸಿರಲು ಹದಿನಾರು ಶುಭಸ್ವಪ್ನಗಳನ್ನು ಕಂಡು ನಿಜಮನೋವಲ್ಲಭನಿಗೆ ತಿಳುಹಲು, ಜಿತಶತ್ರು ಮಹಾರಾಜನು ಆ ಶುಭಸ್ವಪ್ನಗಳ ಫಲವನ್ನು ತಿಳಿದು 'ರಾಜಕುಂಜರನು ನಿನಗೆ ಮಗನಾಗುವನೆಂ'ದು ಹದಿನಾರು ಶುಭಸ್ವಪ್ನ ಫಲಗಳನ್ನೂ ಅರುಹಿದನು. ಜ್ಯೇಷ್ಠಮಾಸದ ಅಮಾವಾಸ್ಯೆಯ ರೋಹಿಣೀ ನಕ್ಷತ್ರದ ಬೆಳಗಿನ ಜಾವದಲ್ಲಿ ವಿಜಯವಿಮಾನದಿಂದ ವಿಜಯವಾಹನಚರಾಹಮಿಂದ್ರನು ವಿಜಯಸೇನಾದೇವಿಯ ಗರ್ಭಕ್ಕೆ ಬಂದು ನೆಲಸಿ ಪ್ರತಿದಿನವೂ ಪ್ರವರ್ಧಮಾನನಾಗುತ್ತಿರಲು, ಅರಸಿಗೆ ಜಿನಧರ್ಮ ಪಾಲನೆಯಲ್ಲಿಯೇ ಅತ್ಯಂತ ಆಸಕ್ತಿಹುಟ್ಟಿ ಅದನ್ನೇ ಆಚರಿಸುತ್ತಿರುವಲ್ಲಿ ಮಾಘ ಶುದ್ಧ ದಶಮಿಯ ದಿನ ಬೆಳಗಿನ ಜಾವದಲ್ಲಿ ಮೂಡಣದಿಕ್ಕಿನಲ್ಲಿ ದಿನೇಶನೂ ವಿಜಯಸೇನಾದೇವಿಯಲ್ಲಿ ಅಜಿತ ತೀರ್ಥೇಶನೂ ಉದಯಿಸಿದರು.

ಹೀಗೆ ಉದಯಿಸಿದುದನ್ನು ತಿಳಿದ ಇಂದ್ರನು ದೇವಗಣದೊಡನೆ ಗಗನವನ್ನಲಂಕರಿಸಿದನು. ಸುರಲೋಕ ಅಹಿಲೋಕಗಳೆರಡೂ ಪಾಳಾದುವೆಂಬಂತೆ ಎಲ್ಲರೂ ನೆರೆದು ನೃತ್ಯಗಾನಗಳಿಂದ ಮನಂಗೊಳಿಸಿರಲು, ಸೌಧರ್ಮೇಂದ್ರನು ಜಿನಶಿಶುವಿಗೆ ನಮಸ್ಕರಿಸಿ, ವಿಜಯಸೇನಾದೇವಿಗೆ ಮಾಯಾನಿದ್ರೆಯನ್ನು ಬರಿಸಿ ಮಾಯಾಶಿಶುವನ್ನು ಸೂತಿಕಾಗೃಹದಲ್ಲಿಟ್ಟು ಜಿನಶಿಶುವನ್ನು ತರಬೇಕೆಂದು ಶಚೀದೇವಿಗೆ ತಿಳಿಸಿದನು. ಅವಳು 'ಜಗದಮೂಲ್ಯರತ್ನ'ವಾದ ಜಿನಶಿಶುವನ್ನು ತಂದು ಇಂದ್ರನ ಕಯ್ಯಲ್ಲಿಟ್ಟಳು. ಇಂದ್ರನು ಆ ಜಿನಶಿಶುವಿಗೆ ಮತ್ತೆ ಮತ್ತೆ ಪೊಡೆಮಟ್ಟು, ಆ ಶಿಶುವನ್ನು ನೆತ್ತಿಯಮೇಲಿಟ್ಟು, ನೊಸಲಮೇಲಿಟ್ಟು, ಅದನ್ನು ಅಗಲಲಾರದೆ ಕಣ್ಣಾರೆನೋಡಿ, ಮನವಾರೆ ಪೊಗಳಲು, ದೇವತೆಗಳೆಲ್ಲರೂ 'ಈ ಜಿನಶಿಶುವನ್ನು ಪಡೆದ ಜಿತಶತ್ರುವೂ ವಿಜಯಸೇನೆಯೂ ಪುಣ್ಯವಂತರು' ಎಂದು ಹೊಗಳಿದರು. ನಂತರ ಇಂದ್ರನು ಜಿನಶಿಶುವನ್ನು ಎತ್ತಿಕೊಂಡು ಐರಾವತ ಗಜಸ್ಕಂಧಾರೂಢನಾಗಿ ಸಮಸ್ತದಿವಿಜಪರಿವಾರದೊಡನೆ ಮೇರುಪರ್ವತದ ಅಗ್ರದಲ್ಲಿರುವ ಪಾಂಡುಕ

B. P. Vasanthakumari

ಶಿಲೆಯ ಮಹೋತ್ತುಂಗ ಸಿಂಹಾಸನದ ಮೇಲೆ ಶಿಶುವನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸಿ ತೂರ್ಯಗೀತ ಮಧುರಧ್ವಾನಂಗಳು ದಿಗಂತಗಳಲ್ಲಿ ಮೊಳಗಲು ಸೌಧರ್ಮ ಕಲ್ಪೇಶ್ವರನು, ದೇವತೆಗಳು ಸಾಲಾಗಿ ನಿಂತು ಕ್ಷೀರಸಮುದ್ರದಿಂದ ಸ್ವರ್ಣಕುಂಭಗಳಲ್ಲಿ ತಂದ ದುಗ್ಧಜಲವನ್ನು ಜಿನಶಿಶುವಿನ ಶಿರದಲ್ಲಿ ಸುರಿಯಲು ಆ ಕ್ಷೀರಜಲವು ಹರಿದು ಸಮಸ್ತ ಚರಾಚರವಸ್ತುಗಳನ್ನೂ ಬಿಳಿಯವನ್ನಾಗಿಮಾಡಿ, ಪುನೀತಗೊಳಿಸಿದುವು. ಹೀಗೆ, ಅಷ್ಟವಿಧದರ್ಚನೆಯಿಂದ ಇಂದ್ರಾದಿ ಅಮರರು ಜಿನಶಿಶುವಿನ ಪಾದಪದ್ಮಂಗಳನ್ನು ಅರ್ಚಿಸಿ, ಸೌಧರ್ಮ ಕಲ್ಪಾಧಿಪತಿಯು ಜಿನಾಧಿಪತಿಯನ್ನು ಅನೇಕ ಸ್ತುತಿಸಹಸ್ರಗಳಿಂದ ಸ್ತುತಿಸಲು ಸನತ್ಕುಮಾರಾದಿ ದೇವತೆಗಳೆಲ್ಲರೂ ನಮಸ್ಕರಿಸಿದರು. ಇಂದ್ರನು ಆನಂದ ನೃತ್ಯವನ್ನು ಮಾಡಲು ಊರ್ವಶಿ, ರಂಭೆ, ಮೇನಕೆಯರೇ ಮೊದಲಾದ ಸುರನರ್ತಕಿಯರು ನರ್ತಿಸಿದರು. ಇಂತು ಜನ್ಮಾಭಿಷೇಕವನ್ನು ಮಾಡಿ ಬಾಹ್ಯಾಭ್ಯಂತರ ಶತ್ರುಗಳಿಗೆ ಅಜಿನನಪ್ಪುದರಿಂದ ಆವನಿಗೆ 'ಅಜಿತನಾಥ' ಎಂದು ಹೆಸರಿಟ್ಟು, ಆ ಧರ್ಮತೀರ್ಥೇಶ್ವರನನ್ನು ಅಯೋಧ್ಯಾ ಪಟ್ಟಣಕ್ಕೆ ತಂದು ಜಿನಜನನಿಯ ಮುಂದಿಟ್ಟು ಗುರುಜನವನ್ನು ಪೂಜಿಸಿ ತೀರ್ಥಂಕರ ಗುರುಗಳಿಗೆ ಜನ್ಮಾಭಿಷೇಕ ಕಲ್ಯಾಣವನ್ನು, ಶ್ರೀಮದಜಿತ ನಾಮಕರಣವನ್ನೂ ತಿಳಿಸಿ ಮಣಿಮಯೋತ್ತುಂಗಸಿಂಹಾಸನದ ಮೇಲೆ ಪೂರ್ವಾಭಿಮುಖವಾಗಿ ಕುಳ್ಳಿರಿಸಿ ಮತ್ತೆ ಆನಂದನೃತ್ಯವನ್ನು ಮಾಡಲು, ಇಂದ್ರಸ್ತ್ರೀಯರು ಲೀಲಾನೃತ್ಯವನ್ನು ಮಾಡಿ ಕಣ್ಗೆವ ನಕ್ಕೆ ಹಬ್ಬವನ್ನುಂಟುಮಾಡಿದರು. ನಂತರ, ಇಂದ್ರಾದಿ ಅಮರರು ದೇವಲೋಕಕ್ಕೆ ಹಿಂದಿರುಗಿದರು.

ಇತ್ತ ಅಜಿತನು ಅಮಾನುಷ ಶಿಶುವಾಗಿ ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುವ ರೀತಿಯಲ್ಲಿ ಬೆಳೆದನು. ಸಕಲವಿದ್ಯೆಗಳಲ್ಲೂ ಕಲಿಸಿಕೊಳ್ಳದೆ ಪ್ರವೀಣನಾದನು. ನಿತ್ಯವೂ ಅಮರರು ದೇವಲೋಕದ ಫಲಪುಷ್ಪಗಳನ್ನು ತಂದು ಅಜಿತನಿಗೆ ಅರ್ಪಿಸಿ ಕೆಲದಲ್ಲಿಯೇ ಇರುತ್ತಿದ್ದರು. ಯಾವ ಕೊರತೆಯೂ ಇಲ್ಲದೆ ಬಾಲ್ಯವನ್ನು ಕಳೆದ ಅಜಿತನು ಯೌವನದಲ್ಲಿ ಕಾಲಿಟ್ಟು ಅಂಗಾಗ ಶೋಭೆಯಿಂದ ಪರಿಪೂರ್ಣನಾಗಿ ಮನ್ಮಥನಂತೆ ಮೆರೆಯುತ್ತಿದ್ದನು.

ಮಗನು ಯೌವನಸ್ಥನಾದುದನ್ನು ನೋಡಿ, ಜನನೀಜನಕರು ಮಗನಿಗೆ ಸಂತಾನಪ್ರಾಪ್ತಿಯಾಗಲೆಂದು ಮದುವೆಯಾಗುವಂತೆ ಅವನನ್ನು ಒಡಂಬಡಿಸಿ ರಾಜಯೋಗ್ಯತೆಗೆ ತಕ್ಕಂತೆ ಸಾಸಿರಕನ್ಯೆಯರನ್ನು ತಂದು ಮಹೋತ್ಸಾಹದಿಂದ ಶುಭದಿನದಲ್ಲಿ ವಿವಾಹಮಂಗಳವನ್ನು ನೆರವೇರಿಸಿದರು. ಹೀಗೆ ಸಹಸ್ರರಾಣಿಯರ ವಲ್ಲಭನಾದ ಅಜಿತನನ್ನು ಸಾಮ್ರಾಜ್ಯ ಲಕ್ಷ್ಮೀವಲ್ಲಭನನ್ನಾಗಿ ಮಾಡಲು ಜಿತಶತ್ರು ಮಹಾರಾಜನು ಮಗನನ್ನು ಪ್ರಶಸ್ತಲಗ್ನದಲ್ಲಿ ಸುವರ್ಣ ಕಲಶಗಳಲ್ಲಿ ತುಂಬಿದ

ಪುಣ್ಯತೀರ್ಥದಿಂದ ಸೌಧರ್ಮೇಂದ್ರನು ಜನ್ಮಾಭಿಷೇಕವನ್ನು ಮಾಡಿದ ರೀತಿಯಲ್ಲಿ ರಾಜ್ಯಾಭಿಷೇಕವನ್ನು ಮಾಡಿ ಮಣಿಮಯೋತ್ತುಂಗ ಸಿಂಹಾಸನವನ್ನೇರಿಸಿ ತಾನು ವಿಶ್ರಾಂತಿ ಸುಖವನ್ನನುಭವಿಸಿದನು.

ಹೀಗೆ ಅಜಿತಸ್ವಾಮಿಯು ಸಾಮ್ರಾಜ್ಯವಾಳುತ್ತಿರಲು ವಸಂತಕಾಲವು ಕಣ್ಣಿಗೆ ಮತ್ತು ಮನಕ್ಕೆ ಹಬ್ಬವನ್ನುಂಟುಮಾಡುತ್ತ ಬಂದಿತು. ಆ ವಸಂತ ಸಮಯದಲ್ಲಿ ಅಜಿತಮಹಾಸ್ವಾಮಿಗೆ ಒಬ್ಬ ಸಂಪೂರ್ಣ ಪುಣ್ಯನೆನಿಸಿದ ಮಗನು ಹುಟ್ಟಿದನು. ಸೌಧರ್ಮೇಂದ್ರನು ಅಜಿತಸ್ವಾಮಿಯ ವಿವಾಹಮಹೋತ್ಸವವನ್ನೂ ಪಟ್ಟಾಭಿಷೇಕೋತ್ಸವವನ್ನೂ ನೋಡಿ ಆನಂದಪಟ್ಟು ಆಶೀರ್ವದಿಸಿ ಹಿಂದಿರುಗಿದನು. ಮಗನು ಬೆಳೆದು ಪುತ್ರಜನ್ಮೋತ್ಸವವನ್ನೂ ಯುವಕನಾದಮೇಲೆ ಯುವರಾಜಪದವಿಯನ್ನೂ ವಹಿಸಿ, ತಾನು ಸುಖವಾಗಿದ್ದನು. ಹೀಗೆ ರಾಜರತ್ನತ್ರಯವೂ ಶೋಭಿಸುತ್ತಿರುವಾಗ್ಗೆ ಒಂದು ದಿನ ರಾತ್ರಿ ಚಂದ್ರಿಕಾಶ್ರೀವಿಲಾಸದಲ್ಲಿ ವಿದ್ಯಾಧರನಾದ ಅಜಿತನಾಥನು, ವಿದ್ಯಾಧರರೋಲಗಗೊಟ್ಟೇಲು ದಿಗವಲೋಕನವನ್ನು ಮಾಡುತ್ತಿರಲು ನಭಸ್ಥಳದಿಂದ ಉಲ್ಕಾಪಾತವಾದುದನ್ನು ಕಂಡು ನಶ್ವರವಾದ ಈ ಸಂಸಾರಭೋಗದಲ್ಲಿ ಮುಳುಗಿರುವುದು ಮರುಳ್ತನವೆಂದು ತಿಳಿದು, ವಿರಕ್ತನಾಗಿ ಜಿನಧರ್ಮದ ವೈರಾಗ್ಯ ಭಾವಗಳಾದ ದ್ವಾದಶಾನುಪ್ರೇಕ್ಷೆಗಳನ್ನು ಧ್ಯಾನಿಸುತ್ತಿರಲು, ಕಲ್ಪಾಂತರವಾಸಿಗಳಾದ ಎಂಟುಜನ ಲೋಕಾಂತಿಕದೇವರು ತೀರ್ಥಂಕರ ಪರಮದೇವನಾದ ಅಜಿತಸ್ವಾಮಿಯು ಭಾವಿಸುತ್ತಿರುವುದನ್ನು ಅವಧಿಜ್ಞಾನದಿಂದ ತಿಳಿದು ಪ್ರತಿಬೋಧಿಸುವ ಉದ್ದೇಶದಿಂದ ಬಂದು 'ಈಸಂಸಾರಭೋಗಭಾಗ್ಯಗಳೆಲ್ಲವನ್ನೂ ತೊರೆದು ಸಂಸಾರ ಸಾಗರವನ್ನುತ್ತರಿಸಿ ಮುಕ್ತಿಗೆ ಮಾರ್ಗವಾಗಿರುವ ತಪಸ್ಸನ್ನು ಕೈಗೊಂಡು ಅಕ್ಷಯ ಸುಖವನ್ನು ಕೊಡುವ ಮುಕ್ತಿಯನ್ನು ಪಡೆ; ಘಾತಿ ಮತ್ತು ಅಘಾತಿ ಕರ್ಮಗಳೆಲ್ಲವನ್ನೂ ಜೈನಶಾಸ್ತ್ರಶಸ್ತ್ರಹತಿಯಿಂದ ನಾಶಮಾಡಿ ಪುರುದೇವನಂತೆ ಮುಕ್ತ್ಯಂಗನೆಯೊಳು ನೆರೆದು ಸುಖವಾಗಿರು' ಎಂದು ಪ್ರತಿಬೋಧಿಸಲು, ಅಜಿತನ ಹೃದಯವು ಸ್ಫಟಿಕದಂತೆ ನಿರ್ಮಲವಾಗಿ ತಪಸ್ಸಿಗಾಗಿ ವನಕ್ಕೆ ಹೋಗಲು ಅಯೋಧ್ಯಾಪಟ್ಟಣವನ್ನು ಬಿಡಲು ಸುರರೂ ನರರೂ ವಿದ್ಯಾಧರರೂ ಅವನನ್ನು ಪಲ್ಲಕ್ಕಿಯಲ್ಲಿ ಹೊತ್ತು ವನಕ್ಕೊಯ್ದರು. ಹೀಗೆ ಅಜಿತನು ಅಯೋಧ್ಯೆಯನ್ನು ಬಿಡಲು ಅಯೋಧ್ಯೆಯೇ ಶೋಕಾಕ್ರಾಂತವಾಯಿತು. ಶೋಕಾಕ್ರಾಂತ ಜನರೆಲ್ಲರಿಗೂ ವಿವೇಕಿಗಳಿಂದ ಹೇಳಿಸಿ ಸಮಾಧಾನಪಡಿಸಿದರೂ ರಾಣೀವಾಸದವರೆಲ್ಲರೂ ಮತ್ತೆಮತ್ತೆ ಪ್ರಲಾಪಗೆಯ್ದು ರಾಜನು ಹೋದಲ್ಲಿ ತಾವೂ ಹೋಗಲು ಉದ್ಯೋಗಿಸಲು ಕಂಚುಕಿಯರು ಅವರನ್ನು ತಡೆದರು. ಇತ್ತ ತಪೋನಿರತನಾದ ಅಜಿತನು ಚಂದ್ರಕಾಂತ ಶಿಲಾತಲದಲ್ಲಿ ಪೂರ್ವಾಭಿಮುಖವಾಗಿ ಬದ್ಧಪರ್ಯಂಕಾಸನನಾಗಿ ಕುಳಿತು ಪರಿಜನರೆಲ್ಲರನ್ನೂ ತೊರೆದು, ಸಮಸತ್ವವನ್ನು ಭಾವಿಸಿ 'ನಮಃಸಿದ್ಧೇಭ್ಯ' ಎಂದು ಹೇಳಿ ಕರ್ಮದ

ಬೇರುಗಳನ್ನೇ ಹರಿದು ಬಿಸಾಡುವ ರೀತಿಯಲ್ಲಿ ಕೇಶಸಮೂಹವೆಲ್ಲವನ್ನೂ ಹರಿದು ಬಿಸಾಡಿ ಧ್ಯಾನಸ್ಥನಾಗಿರಲು, ಶೋಕದಿಂದ ಪೂರಿತನಾದ ಅಜಿತಸೇನಕುಮಾರನನ್ನು ಸಂತಯಿಸಿ ನಗರಿಗೆ ಹಿಂದಿರುಗಿಸಿ, ಪ್ರಥಮತೀರ್ಥೇಶನಿಗೆ ಮಾಡಿದ ರೀತಿಯಲ್ಲಿ ಪರಿನಿಷ್ಕ್ರಮಣಪೂಜೆಯನ್ನು ಮಾಡಿ ವಿವಿಧ ನಾಮಾವಳಿಗಳಿಂದ ಸ್ತುತಿಸಿ, ಅಷ್ಟವಿಧದರ್ಚನೆಯಿಂದ ಪೂಜಿಸಿ ಸುರಪತಿಗಳು ತಮ್ಮ ಸ್ಥಾನಕ್ಕೆ ತೆರಳಿದರು.

ಅಜಿತನಾಥನು ತಪಸ್ಸಂಯಮಾರೂಢನಾದನು. ಚರಿಗೆಗಾಗಿ ಅಯೋಧ್ಯೆಯ ಅರಸನ ಮನೆಗೆ ಆಗಮಿಸಿದನು. ಉತ್ತಮ ಪಾತ್ರದಾನದ ಫಲವಾಗಿ ಪಂಚಾಶ್ಚರ್ಯಗಳಾದುವು. ಈ ಪರಮೇಶ್ವರನ ಪಯಣ ಮುಂದುವರಿಯಿತು. ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾ ಮುಖಗಳಲ್ಲಿ ತಿರುಗಾಡಿದನು. ಅವನು ತಪಸ್ಸಿಗೆಂದು ನಿಂತ ನೆಲೆಯಲ್ಲಿ ಮೃಗಪಕ್ಷಿ ಕ್ರಿಮಿಕೀಟಗಳು ತಮ್ಮ ತಮ್ಮ ವೈರವನ್ನು ಬಗೆಯದೆ ಶಾಂತರೂಪದಿಂದಿದ್ದುವು. ಅವರಲ್ಲಿ ರೌದ್ರರಸ ಸಂಪೂರ್ಣವಾಗಿ ಇಂಗಿಹೋಗಿತ್ತು. ಶಾಂತರಸವೆ ತುಂಬಿಕೊಂಡಿತ್ತು. ಪ್ರಕೃತಿಯೆ ಆ ಮುನೀಶ್ವರನ ಸೇವೆಮಾಡುತ್ತಿದ್ದಿತು. ಹೀಗೆ ಹನ್ನೆರಡು ವರ್ಷಗಳು ಸಂದುವು.

ಇಂತು ಅಜಿತಮಹಾಯೋಗಿಯು ಉಗ್ರೋಗ್ರತಪಸ್ಸು ಮಾಡಿದನು. ಅನಂತಜ್ಞಾನ ಅನಂತದರ್ಶನ ಅನಂತಸುಖ ಅನಂತಶಕ್ತಿಗಳನ್ನು ಮುಸುಕಿದ ಜ್ಞಾನಾವರಣೀಯ ದರ್ಶನಾವರಣೀಯ ಮೋಹನೀಯ ಅಂತರಾಯ ಎಂಬ ನಾಲ್ಕು ಘಾತಿ ಕರ್ಮಗಳನ್ನು ನಿವಾರಿಸಿ ಅನಂತಜ್ಞಾನವೇ ಮೊದಲಾದ ಗುಣಗಳನ್ನು ಪಡೆದು ಸರ್ವಜ್ಞನಾದನು. ಪುಷ್ಯಮಾಸದ ಶುಕ್ಲಪಕ್ಷದ ಏಕಾದಶಿಯ ಅಪರಾಹ್ಣ ಸಮಯದಲ್ಲಿ ರೋಹಿಣೀನಕ್ಷತ್ರವಿರಲು ಅಜಿತನಾಥನಲ್ಲಿ ಕೈವಲ್ಯ ಬೋಧ ಹುಟ್ಟಿತು.

ಅಜಿತನಲ್ಲಿ ವಿಮಲಕೇವಲಭಾನೂದಯವಾದುದನ್ನು ಅವಧಿಬೋಧೆಯಿಂದ ಅರಿತ ನಾಗೇಂದ್ರ ಸೌಧರ್ಮೇಂದ್ರ ದೇವೇಂದ್ರರೂ ದೇವತೆಗಳೂ ಅಜಿತಜಿನನ ಕೇವಲಜ್ಞಾನೋತ್ಪತ್ತಿ ಕಲ್ಯಾಣಪೂಜೆಯನ್ನು ಮಾಡಲೆಂದು ಒಂದು ಮೂರು ಸೂಳು ಪ್ರದಕ್ಷಿಣೆಮಾಡಿ ಪುಷ್ಪಾಂಜಲಿಯಿತ್ತು ಅವನತ ಮಣಿಕಿರೀಟರಾಗಿ ಸ್ತೋತ್ರಗೈದರು.

ಅಜಿತಸ್ವಾಮಿಗಾಗಿ ಲೋಕೋತ್ತರವೂ ಭವ್ಯವೂ ಮಂಗಳಮಯವೂ ಆದ ಸಮವಸರಣ ಮಂಟಪವು ಸುರಪತಿಯ ಆಣತಿಯಂತೆ ನಿರ್ಮಾಣವಾಯಿತು. ಸ್ವಾಮಿಯು ಮಂಟಪವನ್ನು ಅಲಂಕರಿಸಿದನು. ಕೇವಲಜ್ಞಾನವನ್ನು ಪಡೆದ, ಸಕಲ ತತ್ತ್ವಗಳನ್ನೂ ಅರಿತ, ಅರ್ಹಂತ ಲಕ್ಷ್ಮೀನಿಲಯನಾದ, ಸರ್ವಸುರಾಧೀಶ್ವರರಿಂದ ಪೂಜೆಯನ್ನು ಕೈಕೊಂಡ, ಪರಮಸ್ವಾಮಿಯು ಸಮವಸರಣದಲ್ಲಿ ಕಲಧೌತಗಿರಿಯಂತೆ ಕಂಗೊಳಿಸಿದನು.

ಸುರಾಸುರರಿಂದ ಅಭಿವಂದನೆಯನ್ನು ಸ್ವೀಕರಿಸಿದ ಅಜಿತನೇ ಕಲ್ಪವೃಕ್ಷ; ಅಜಿತನೇ ಅಧಿಕ ಪುಣ್ಯನು. ಅನಿಮಿಷ ಸುಂದರಿಯರು ಬಂದು ಗರ್ಭಸಂಶೋಧನೆ ಮಾಡಿ ಜಿನಜನನಿಯನ್ನು ಓಲೈಸುವರೆಂದರೆ ಅದು ಸಾಮಾನ್ಯವೆ? ದೇವತೆಗಳು ನೀರುನಾನೆಯು ಆಳುಗಳು; ಮೇರುಪರ್ವತ ಸಿಂಹಾಸನ; ನಿನ್ನ ಅಭಿಷೇಕಕ್ಕಾಗಿ ದಧಿ ಘೃತ ದುಗ್ಧ ಸಮುದ್ರಗಳು ಬರಿದಾದವು; ನಿನ್ನ ಮಹಿಮೆ ಸಾಮಾನ್ಯವೆ! ಈ ವಯಸ್ಸು, ಈ ರೂಪು, ಈ ವಿಭವ! ಅಜಿತನಾಥ, ರಾಜ್ಯಶ್ರೀವಲ್ಲಭೆಯನ್ನು ನೀನು ತೊರೆದೆ; ಉಳಿದ ಚಂಚಲಚಿತ್ತರಿಗೆ ಸಾಧ್ಯವೆ? ಮಂದರಾದ್ರಿಗೆ ಮಂದ ರಾದ್ರಿಯೆ ಸಮ. ದಾನಚಿಂತಾಮಣಿಯ ಚೂಡಾಮಣಿಮರೀಚಿಯಿಂದ ರಂಜಿತ ವಾಗಿರುವವನು ನೀನು, ಅಜಿತನಾಥ! ಎಂದು ಮುಂತಾಗಿ ದೇವತೆಗಳು ಮತ್ತೆ ಮತ್ತೆ ಸ್ತುತಿಪಾಠ ಮಾಡಿದರು.

ಆದಿತೀರ್ಥೇಶ್ವರನ ಪಾದಪೂಜೆಯನ್ನು ತೀರ್ಥಭೂಪಾಲನು ಆತ್ಯಾದರದಿಂದ ಮಾಡಿ 'ಉರುತರ ಪುಣ್ಯೋಪಾರ್ಜನೆ' ಮಾಡಿದನು. ನಾನೂ ಅವನಂತೆಯೇ ಅಜಿತ ನಾಥನ ಚರಣಗಳನ್ನು ಆರಾಧಿಸುವೆನು ಎಂದು ಸತ್ಯಭಾವನೆಂಬ ತೀರ್ಥಕ್ಷತ್ರಿ ಯನು ಅಜಿತಜಿನನ ಪಾದಪೂಜೆಮಾಡಿದನು.

ಅನಂತರ ಜಿನೇಂದ್ರನು ತೀರ್ಥಕ್ಷತ್ರಿಯ, ಯಕ್ಷ, ಯಕ್ಷಿಣಿ, ಗಣಧರ, ಪುರ್ವಧರರು, ಶಿಕ್ಷಕರು, ಅವಧಿಜ್ಞಾನಿಗಳು, ಕೇವಲಿಗಳು ವಿಕ್ರಿಯರ್ಧಿಸಂಪನ್ನರು, ಮನಃ ಪರ್ಯಾಯ ಜ್ಞಾನಿಗಳು, ವಾದಿಗಳು, ಅಜ್ಜಿಕೆಯರು, ಶ್ರಾವಕರು, ಶ್ರಾವಕ ಶ್ರಾವಕಿಯರು ಮೊದಲಾದ ಪರಿವಾರದೊಡನೆ ದ್ವಾದಶಗಣ ಪರಿವೃತನಾಗಿ ಹೊರಟನು. ಧರ್ಮಕ್ಷೇತ್ರಗಳಲ್ಲಿ ಭವ್ಯಸಮಿತಿಗೆ ಧರ್ಮಾಮೃತವನ್ನು ಕರೆಯುತ್ತ ಸಮ್ಮೇದಾಚಲದ ಕಡೆಗೆ ಹೊರಟನು. ಅಜಿತನಾಥನು ತನ್ನಲ್ಲಿಗೆ ಬರುವನೆಂದು ಸಮ್ಮೇದಾಚಲಕ್ಕೂ ಹೆಮ್ಮೆ.

'ಕೃತ ಸಕಳ ಮೇದಿನೀ ವಿಹರಣ'ನು ಒಂದು ತಿಂಗಳು ವಿಹರಣ ವಿಧಿಯನ್ನು ಬಿಟ್ಟು ಸಮ್ಮೇದಾಚಲಕ್ಕೆ ಬಂದು ಶುಕ್ಲಧ್ಯಾನವೆಂಬ ವಿಶಿಷ್ಟ ಯೋಗಮಾರ್ಗದಿಂದ ಜ್ಞಾನಾವರಣೀಯ ದರ್ಶನಾವರಣೀಯ ಮೋಹನೀಯ ಅಂತರಾಯ ಎಂಬ ಘಾತಿ ಕರ್ಮಗಳನ್ನೂ ವೇದನೀಯ ಆಯುಷ್ಯನಾಮ ಗೋತ್ರ ಎಂಬ ಅಘಾತಿ ಸೂಕ್ಷ್ಮ ಕರ್ಮಗಳನ್ನೂ ನಿಶ್ಶೇಷವಾಗಿ ಕೆಡಿಸಿ ಚೈತ್ರಶುದ್ಧ ಪಂಚಮಿಯ ಪೂರ್ವಾಹ್ಣದಲ್ಲಿ ಪ್ರಥಮಯೋಗದಲ್ಲಿದ್ದನು. ಕೈವಲ್ಯ ಬೋಧೋದಯವನ್ನು ಪಡೆದು 'ಶಿವಪದ ಸುಖಮಂ ಪೊರ್ದಿದ' ಅಜಿತನಾಥನ ಮಾತಾಪಿತೃಗಳೂ ಪುತ್ರನೂ ಉತ್ಕೃಷ್ಟ ಚಾರಿತ್ರದಿಂದ ಚರಿತಾರ್ಥರಾದರು.

ಸಗರ ಚಕ್ರವರ್ತಿ–ಎರಡನೆಯ ತೀರ್ಥನಾಥನ ಚರಿತದೊಂದಿಗೆ ಎರಡನೆಯ ಚಕ್ರನಾಥನ ಚರಿತ್ರೆ ಒಡಗೂಡಬೇಕು. ಅಂಥ ಪದವಿಗೆ ಅಜಿತ ಜಿನೇಶ್ವರನ ಪರಮ ಭಕ್ತನಾದ ಸಗರ ಚಕ್ರವರ್ತಿಯೆ ತಕ್ಕವನು.

ಸೀತಾ ನದಿಯ ತೆಂಕಣತೀರದ ವತ್ಸಕಾವತೀ ನಾಡಿನ ಪೃಥ್ವೀನಗರದಲ್ಲಿ ಜಯಸೇನನೆಂಬ ಅರಸ; ಆತನ ಮಹಾದೇವಿ ವಿಜಯಸೇನೆ. ಅವರಿಗೆ ರತಿಷೇಣ ಧೃತಿಷೇಣ ಎಂಬಿಬ್ಬರು ಮಕ್ಕಳು. ರತಿಷೇಣನು ಕಾರಣಾಂತರದಿಂದ ಮೃತಿಹೊಂದಲು ಪುತ್ರವಿಯೋಗ ದುಃಖದಿಂದ ಸಂತಪ್ತಚಿತ್ತನಾಗಿ ಪ್ರಲಾಪಮಾಡುತ್ತಿರಲು ಅರಸನ ಮೈದುನನು ಬಂದು ಮಗ ಹೋದನೆಂದು ಮರುಗಿದರೆ ವಿವೇಕವಲ್ಲ, ಖೇದವನ್ನು ನಂಬದೆ ಜಿನಮತವನ್ನು ನಂಬು, ನಾನೂ ನೀನೂ ಸಂಸಾರ ಕಾಂತಾರದಿಂದ ಹೊರಡೋಣ ಎನ್ನಲು, ಜಯಸೇನನು ಶೋಕವನ್ನು ಬಿಟ್ಟನು. ತಾನು ತನ್ನ ಮೈದುನ ಮಹಾರುತನಂತೆ ಜಿನದೀಕ್ಷೆಯನ್ನು ಕೈಗೊಂಡು ಸನ್ಯಸನ ಮರಣದಿಂದ ಆರಣ ವೆಂಬ ಹದಿನೈದನೆಯ ಕಲ್ಪದಲ್ಲಿ ಮಹಾಬಲದೇವನಾಗಿ ಹುಟ್ಟಿದನು. ಮಹಾರುತನೂ ಅದೇಕಲ್ಪದಲ್ಲಿ ಮಣಿಕೇತುವೆಂಬ ದೇವನಾದನು. ಎಷ್ಟೋದಿನ ಇಬ್ಬರೂ ಗೀರ್ವಾಣಸುಖವನ್ನನುಭವಿಸಿದರು. ಅವರಿಬ್ಬರಲ್ಲಿ ಒಂದು ಗೊತ್ತುವಳಿ ಆಯಿತು: 'ಮೊದಲು ಮನುಷ್ಯಲೋಕಕ್ಕೆ ಹೋದವನನ್ನು ದೇವಲೋಕದಲ್ಲಿದ್ದವನ ಹೋಗಿ "ತನ್ನ ಬಲ್ಲಂದದಿ" ಬೋಧಿಸಿ ಸನ್ಮಾರ್ಗ ದರ್ಶನ ಮಾಡಬೇಕು.'

ಜಯಸೇನನಾಗಿದ್ದು ಮಹಾಬಳನೆಂಬ ದಿವಿಜನಾಗಿ ಹುಟ್ಟಿದ್ದವನು ಮತ್ತೆ ಅಯೋಧ್ಯೆಯಲ್ಲಿ ಸಗರನೆಂಬ ರಾಜಕುಮಾರನಾಗಿ ಹುಟ್ಟಿದನು. ಸಕಲಚಕ್ರವರ್ತಿಯಾಗಿ ಸಾಮ್ರಾಜ್ಯಲಕ್ಷ್ಮಿಯನ್ನು ಆಳಿದನು. ಅಲ್ಲಿಯವರೆಗೆ ರಾಜವತಿಯಾಗಿದ್ದ ದೇಶ ರಾಜನ್ವತಿಯಾಯಿತು. ಹೀಗೆ ಸುಖಸಂಕಥಾವಿನೋದದಿಂದ ರಾಜ್ಯವಾಳುತ್ತಿರುವಲ್ಲಿ, ಒಂದು ಶರತ್ಕಾಲ, ವಿಜಯಾಭಿಷೇಕ ಮಾಡಿಕೊಂಡು ವಿಜಯಯಾತ್ರೆ ಹೊರಟವನು ಅರಿನೃಪರನ್ನು ಜಯಿಸಿ ಅವರಿಂದ ಕಪ್ಪಕಾಣಿಕೆಯನ್ನು ಕೊಂಡು ಅಮೂಲ್ಯವಸ್ತುಗಳನ್ನೂ ದಿವ್ಯರತ್ನ ಸ್ತ್ರೀರತ್ನಗಳನ್ನೂ ಒಪ್ಪಿಸಿಕೊಳ್ಳುತ್ತ ಮುಂದುವರಿದನು. ಉತ್ತರ ಭರತ ಮಧ್ಯಮ ಖಂಡಮಧ್ಯವರ್ತಿಯಪ್ಪ ವೃಷಭಾಚಲಕ್ಕೆ ಬಂದು ತನ್ನ ವಿಜಯ ಪ್ರಶಸ್ತಿಯನ್ನು ಬರೆಯಿಸಬೇಕೆಂದು ಬಯಸಿದನು. ಪುರಾತನ ಚಕ್ರವರ್ತಿಗಳ ದಿಗ್ವಿಜಯ ಕೀರ್ತಿಗಳನ್ನು ಓದಿಸಿ ಕೇಳಿದ ಮೇಲೆ ಅವನ ಗರ್ವ ಇಳಿಯಿತು. ಸ್ವಲ್ಪಭಾಗವನ್ನು ತನ್ನ ದಂಡರತ್ನದಿಂದ ತೊಡೆಯಿಸಿ, ಭರತೇಶ್ವರ ಚಕ್ರವರ್ತಿಯ ಪ್ರಶಸ್ತಿಯ ಸಮೀಪದಲ್ಲಿಯೇ ತನ್ನ ಪ್ರಶಸ್ತಿಯನ್ನು ಕಾಕಿಣೀರತ್ನದಲ್ಲಿ ಕವಿರತ್ನನಿಂದ ಬರೆಯಿಸಿದನು. ಮುಂದುವರಿದು, ಅಖಂಡ ದಿಗ್ವಿಜಯವನ್ನು ಪಡೆದು ಅನೇಕ ದೇಶಾಧೀಶ್ವರರು ಅರ್ಪಿಸಿದ ಕನ್ಯಾ

ರತ್ನಗಳನ್ನೂ ಅನರ್ಘ್ಯ ರತ್ನಗಳನ್ನೂ ಸ್ವೀಕರಿಸುತ್ತಾ ಸಮ್ಮೇದಪರ್ವತಕ್ಕೆ ಬಂದನು. ಭಗವಾನ್ ಅಜಿತಭಟ್ಟಾರಕನ ಪರಿನಿರ್ವಾಣಕಲ್ಯಾಣಪವಿತ್ರಕ್ಷೇತ್ರ ವೆನಿಸಿದ ಆ ಪರ್ವತವನ್ನು ವಿವಿಧಾರ್ಚನೆಗಳಿಂದ ಆರಾಧಿಸಿದನು. ದ್ವಿತೀಯ ತೀರ್ಥೇಶ್ವರನ ಪೂಜೆ ಪ್ರಾರ್ಥನೆ, ಅದ್ವಿತೀಯ ಭಕ್ತಿಯಿಂದ ದ್ವಿತೀಯ ಚಕ್ರೇಶ್ವರ ನಿಂದ ನಡೆಸಲ್ಪಟ್ಟವು. ಚಕ್ರವರ್ತಿಯಿಂದ ಆಜ್ಞಪ್ತರಾದ ಸ್ಥಪತಿಗಳು ಉತ್ತುಂಗ ತೋರಣಗಳುಳ್ಳ ಅನೇಕ ಚೈತ್ಯಾಲಯಗಳನ್ನು ನಿರ್ಮಿಸಿದರು

ಅಯೋಧ್ಯಾನಗರ ಇವನನ್ನು ಎದರುಗೊಳ್ಳುವುದಕ್ಕಾಗಿ ಸಕಲಸಿದ್ಧತೆಗಳನ್ನು ಮಾಡಿಕೊಂಡು ಕಾಯುತ್ತಿದ್ದಿತು. 'ನಗರಜನ ನಾರೀಜನ ವಿಲಾಸಮುಮಂ ನಗರ ಮುಮಂ ಒಡನೊಡನೆ ಪೊಕ್ಕು' ಪುರಜನರ ಪಾದಾಭಿಷೇಕವನ್ನೂ ಮಹಾಕ್ಷತ್ರಿಯ ರಿಂದ ಸಾರ್ವಭೌಮರಾಜ್ಯಾಭಿಷೇಕವನ್ನೂ ಮಾಡಿಸಿಕೊಂಡು ಮಹೋತ್ತುಂಗ ಸಿಂಹಾಸನಾಸೀನನಾಗಿ ಜಗಚಕ್ರಕ್ಕೆ ತನ್ನ ಕೀರ್ತಿಯನ್ನು ಬಿತ್ತರಿಸುತ್ತಿದ್ದು ಸಕಲ ಚಕ್ರವರ್ತಿಸಾಮ್ರಾಜ್ಯ ಪರಿಕರ ಪರಿವೃತನಾಗಿ ದಶಾಂಗ ಭೋಗದೊಳ್ ಕೂಡಿ ಅನಂತಸುಖವನ್ನು ಅನುಭವಿಸುತ್ತಿದ್ದನು. ಅವನಿಗೆ ಕಾಲಕ್ರಮೇಣ ಅರವತ್ತು ಸಾವಿರ ಮಂದಿ ಮಕ್ಕಳುಗಳಾದರು.

ಒಂದು ದಿನ ಸಗರನು ತನ್ನ ಪರಿವಾರದೊಂದಿಗೆ ಭಟ್ಟಾರಕರೆಂಬ ಕೇವಲ ಜ್ಞಾನಿಗಳನ್ನು ಪೂಜಿಸಿ ಧರ್ಮಶ್ರವಣಮಾಡುತ್ತಿರಲು, ಅದೇ ಸ್ಥಳಕ್ಕೆ ಇವನ ಪೂರ್ವಜನ್ಮದ ಗೆಳೆಯ ಮಣಿಕೇತುದೇವನು ಇವನನ್ನು ಹುಡುಕಿಕೊಂಡು ಬಂದನು. ಇವನನ್ನು ದಿವ್ಯವಸ್ತ್ರಾಭರಣಗಳಿಂದ ಸತ್ಕರಿಸಿ ಪೂಜಿಸಿ, 'ಪ್ರಭು, ನಾನು ನಿನ್ನ ಗೆಳೆಯನಾದ ಮಣಿಕೇತು. ನೀನು ಹಿಂದಿನ ಜನ್ಮದಲ್ಲಿ ಮಹಾ ಬಲನಾಗಿದ್ದೆ' ಎನ್ನಲು ರಾಜನಿಗೆ ಅರಿವಾಗಲಿಲ್ಲ. ಆರಣಕಲ್ಪದಲ್ಲಿ ತಾನೇ ಒಪ್ಪಿ ಮಾಡಿಕೊಂಡ ವ್ಯವಸ್ಥೆಯನ್ನು ಅದೇ ಗೆಳೆಯನೇ ಪ್ರತ್ಯಕ್ಷ ಬಂದು ಹೇಳಿದರೂ ಇವನು ಗಮನಿಸಲಿಲ್ಲ. ಅರುವತ್ತು ಸಾವಿರ ಮಕ್ಕಳು, ಮಹಾಸಾಮ್ರಾಜ್ಯ! ತೊರೆ ಯಲು ಶಕ್ತಿ ಬೇಕು. ಏನು ಮಾಡಿದರೂ ಈ ಚಕ್ರವರ್ತಿ ಎಚ್ಚರಲಿಲ್ಲ. ದಿವಿಜನು ದಿವಿಜಲೋಕಕ್ಕೆ ಮರಳಿದ. ಇವನು ಇವನ ರಾಜ್ಯವೈಭವದಲ್ಲಿ ಮುಳುಗೇಳುತ್ತಿ ದ್ದನು. ಹೀಗೆಯೇ ಅನೇಕ ಸಂವತ್ಸರಗಳು ಉರುಳಿದವು. ಇದರೆ ಗೆಳೆಯನ ಆಸೆ ಇಂಗಲಿಲ್ಲ. ಮತ್ತೊಮ್ಮೆ ಚಾರಣ ಋಷಿಯ ರೂಪದಲ್ಲಿ ಬಂದನು. ಸಗರ ಚಕ್ರವರ್ತಿ ವಂದನಾಭಕ್ತಿಯಿಂದ ಬಂದು ವಂದಿಸಿದಾಗ ಮಣಿಕೇತು ತನ್ನ ದಿವ. ರೂಪವನ್ನು ತೋರಿಸಿ ತನಗೂ ಇವನಿಗೂ ಆದ ವಚನವನ್ನು ನೆನಪಿಸುತ್ತಾನೆ. 'ಅನಂತಸುಖನಂತೆ ಅಜರಾಮರನಂತೆ ಭವಸಾಗರದಲ್ಲಿ ಮುಳುಗುವುದು ವಿಹಿತ ವಲ್ಲ, ಮುಕ್ತಿದಾಯಕವಾದ ಪರಮದೀಕ್ಷೆಯನ್ನು ಪಡೆಯುವುದೇ ಶ್ರೇಯಸ್ಕರ

ಎಂದು ಮುಂತಾಗಿ ಒಳ್ನುಡಿ ನುಡಿದನು. ಆಗಲೂ ಸಗರನಲ್ಲಿ ಜ್ಞಾನೋದಯ ವಾಗಲಿಲ್ಲ. ಮಣಿಕೇತುವಿಗೆ ಒಂದು ಉಪಾಯ ಹೊಳೆಯುತ್ತದೆ: 'ಇವನಿಗೆ ಪುತ್ರ ವಿಯೋಗವಾದರೆ ತನಗೆ ತಾನೇ ಧರ್ಮದ ಕಡೆಗೆ ತಿರುಗುತ್ತಾನೆ. ಆದಕ್ಕಾಗಿ ಸಮಯ ಕಾಯುತ್ತಿರುತ್ತೇನೆ.'

ಹಲವು ಸಂವತ್ಸರಗಳು ಉರುಳಿದವು. ಅರವತ್ತು ಸಾವಿರ ಮಕ್ಕಳು. ಅವ ರಿಗೆ ಕಾಲ ಕಳೆಯುವುದೆ ಕಷ್ಟ. ತಂದೆಯ ಬಳಿಗೆ ಬಂದು ತಮ್ಮನ್ನು ಯಾವುದಾ ದರೂ ಕಾರ್ಯದಲ್ಲಿ ನಿಯೋಜಿಸಿರಿ; ಎಂದು ತಂದೆಯನ್ನು ಕೇಳಿಕೊಂಡರು. ತಂದೆ ಅವರಿಂದ ಮಾಡಿಸುವ ಕೆಲಸ ಯಾವುದು? ಚಕ್ರರತ್ನ ಏನು ಕೆಲಸವನ್ನಾ ದರೂ ಮಾಡಬಲ್ಲದು. ಆದುದರಿಂದ ಅವರಿಗೆ, ನೀವೆಲ್ಲ ನನ್ನೊಡನೆ ಸಾಮ್ರಾಜ್ಯ ಸುಖವನ್ನು ಅನುಭವಿಸುತ್ತಿರುವುದು; ಅದೇ ಬೆಸನ ಎಂದನು. ಕಾಯಲೂ ಈಯಲೂ ಶಕ್ತರಾದ ಮಕ್ಕಳವರು, ಹಲವು ಮದಗಳು ಸೇರಿ ಮದೋದ್ಧತರಾದವರು, ದಿನ ದಿನವೂ ಕಾಡಿಸುತ್ತಿದ್ದರು. ಕೊನೆಗೆ ತಂದೆಯ ಆಜ್ಞೆಯಂತೆ ಕೈಲಾಸ ಪರ್ವತದ ಸುತ್ತಲೂ ಅಗಳು ತೆಗೆಯುವುದಕ್ಕೆ ಹೋಗುವರು. ಮಣಿಕೇತುವಿಗೆ ಒಳ್ಳೆಯ ಸಂದರ್ಭ ಸಿಕ್ಕಿದಂತಾಯಿತು. ವಿಷಸರ್ಪನ ರೂಪದಲ್ಲಿ ಬಂದು ಮಾಯದಿಂದ ಅಷ್ಟು ಮಕ್ಕಳೂ ಸುಟ್ಟು ಬೂದಿಯಾದವರಂತೆ ಕಾಣುವಂತೆ ಮಾಡಿ ಸುದ್ದಿಯನ್ನು ತಿಳಿಸಲೆಂದು ಭಗೀರಥನೊಬ್ಬನನ್ನು ಉಳಿಸುವನು. ಮತ್ತೆ ವಿಪ್ರವೇಷದಲ್ಲಿ ಅಯೋಧ್ಯೆಗೆ ಬಂದು, ಅಯ್ಯೋ ಕಾಪಾಡಿ! ಕಾಪಾಡಿ!! ನನ್ನ ಏಕೈಕಪುತ್ರನ ಜೀವ ವನ್ನು ನಿಷ್ಕರುಣಿಯಾದ ಯಮನು ತೆಗೆದುಕೊಂಡನು. ಸಕಲ ಭೂಮಂಡಲವನ್ನು ಕಾಯುವ ಈ ಚಕ್ರವರ್ತಿ ನನ್ನ ಕೂಸನ್ನು ಉಳಿಸಿ ಕೊಡಬಾರದೆ! ನನ್ನ ಪುತ್ರ ನನ್ನು ಯಾರೂ ಬದುಕಿಸದಿದ್ದರೆ ನಾನೂ ಇಲ್ಲಿಯೇ ಈ ರಾಜಾಲಯದ್ವಾರದಲ್ಲಿಯೇ ಪ್ರಾಣಬಿಡುತ್ತೇನೆ. ಕಾಪಾಡಿ! ಕಾಪಾಡಿ!!—ಹೀಗೆ ಅಸುಹೋದ ಮಗನನ್ನಪ್ಪಿ ಕೊಂಡು ಹಲುಬುತ್ತಿರಲು ಅದನ್ನು ಕೇಳಿದ ದೊರೆ,

''ಇಲ್ಲಿಯವರೆಗೂ ಇಂಥ ಆಕ್ರಂದನವನ್ನು ಕೇಳಲಿಲ್ಲ! ಆಶ್ಚರ್ಯ" ಎನ್ನುತ ಆ ಪಾರ್ವನನ್ನು ಕರೆಸುತ್ತಾನೆ.

ಅಲ್ಲಿಗೆ ಬಂದ 'ಪಾರ್ವನು' ಭರತ ಚಕ್ರವರ್ತಿಯು ಪಡೆದಂಥ ಪಾರ್ವ ವಂಶದ ನನ್ನನ್ನು ದುಃಖಸಾಗರದಿಂದ ಉದ್ಧರಿಸು ಎಂದು ಬೇಡಿಕೊಂಡನು. ದೇವ ರಿಗೆ ಎಷ್ಟು ಹರಕೆ ಹೊತ್ತಿದ್ದೆ! ಈ ಕಂದನನ್ನು ಪಡೆಯುವದಕ್ಕಾಗಿ ಏನು ಪಾಡು ಪಟ್ಟೆ!! ಪುಣ್ಯಪುಂಜಸ್ವರೂಪನಾದ ಈಕಂದನನ್ನು ಪಡೆದೆ; ಇನ್ನು ಇವನ ಮದುವೆ ಮಾಡಬೇಕಾಗಿತ್ತು. ಅಷ್ಟರೊಳಗೆ ಆ ಹಾಳಾದ ಯಮನೆಂಬ ಸಿಡಿಲೆರಗಿತು. ನಾನು

ನಿನ್ನಡಿಗೆ ಎರಗಿದೆನು. ಮಗನನ್ನು ಕೊಡಲೇಬೇಕು. ಶರಣಾಗು. ನಾನು ದ್ವಿಜನು- ನನಗೆ ಕರುಣಿಸು. ನನ್ನ ಮಗನನ್ನು ಯಮಪುರದಿಂದ ಹಿಂದಕ್ಕೆ ತರಿಸು .... ಅಯ್ಯೋ ನನಗೆ ಮರಣವೇ ಶರಣು ಅಥವಾ ನಿನ್ನ ಪಾದವೇ ಶರಣು."

''ಆ ಭರತ ಚಕ್ರವರ್ತಿ ದ್ವಿಜವಂಶವನ್ನೇ ಸೃಷ್ಟಿಸಿದ. ನೀನೂ ಚಕ್ರವರ್ತಿ. ನೀನು ಒಬ್ಬ ಬಡ ದ್ವಿಜಕುಮಾರನನ್ನು ಕಾಯುವುದು ಅಸಾಧ್ಯವೆ?''

ಇವನ ಗೋಳನ್ನು ಕೇಳುತ್ತಿದ್ದ ದೊರೆಗೆ ವಿಸ್ಮಯವುಂಟಾಯಿತು. ಆವನೆಂದುಕೊಂಡ: 'ಶಿರಬಾಗದ ಮಂಡಲವನ್ನು ಇಕ್ಕಿ ಮೆಟ್ಟಿದೆ. ಎರಗದವರನ್ನು ಎರಗಿಸಿದೆ, ಆದರೆ! ಆ ಯಶಸ್ಸೆಲ್ಲ ಈ ದ್ವಿಜನ ನುಡಿಯಿಂದ ಮಾಸಿಹೋಯಿತು. ಏನು ಮಾಡಲಿ ? ಇವನಿಗೆ ಏನೆಂದು ಉತ್ತರ ಹೇಳಲಿ ? ನನ್ನ ಕೀರ್ತಿಲಕ್ಷ್ಮಿಗೆ ಕುಂದು ಬಂದಂತಾಯಿತಲ್ಲ.'

"ಸತ್ತವರನ್ನು ಬದುಕಿಸುವುದು ? ಎಲ್ಲಿಯ ಮಾತಿದು? ಎಲ್ಲಿಯ ಹಾರುವಯ್ಯಾ ಬಂದನಪ್ಪ"

ದೊರೆಯ ಚಿಂತೆಯನ್ನು ಅರಿತ ಇಂಗಿತಜ್ಞ ಮಂತ್ರಿಗೆ ಒಂದು ಉಪಾಯ ಹೊಳೆಯಿತು 'ಯಾರ ಮನೆಯಲ್ಲಿಯೂ ಎಂದೆಂದೂ ಒಂದು ಕೂಸೂ ಸತ್ತಿರುವುದಿಲ್ಲವೋ ಆ ಮನೆಯ ಹುಲ್ಲನ್ನೂ, ಆ ಮನೆಯವರಿಂದ ಬೆಂಕಿಯನ್ನೂ ತರಬೇಕು. ತಂದರೆ ನಿನ್ನ ಮಗನನ್ನು ಬದುಕಿಸುವುದಾಗುವುದು' ಎಂದು ಪಾರ್ವನಿಗೆ ಹೇಳಿದನು.

ವೇಷಧಾರಿ ವಿಪ್ರ ಅರಿತೂ ಅರಿಯದವನಂತೆ, ಸ್ವಲ್ಪದೂರ ಹೋದವನಂತೆ ಮಾಡಿ ಮತ್ತೆ ಹಿಂದಿರುಗಿ ಬಂದು' ಎಲ್ಲಿಯೂ ಸಿಕ್ಕಲಿಲ್ಲ'ಎಂದು ಹೇಳಿದನು. ಅದಕ್ಕೆ ಮಂತ್ರಿ, 'ಈ ಜಗತ್ತಿನಲ್ಲಿ ಯಾರು ಜವನ ದಾಡೆಯಿಂದ ಬದುಕಿದ್ದಾರೆ ? ಮೃತ್ಯುವನ್ನು ಗೆಲ್ಲಬೇಕಾದರೆ ಜಿನರಾಜನೊಬ್ಬನೆ' ಎಂದು ಉಪದೇಶ ಮಾಡಿದನು.

''ತಾವು ಹೇಳಿದ ಧರ್ಮ ನನಗೆ ಮಾತ್ರ ಅನ್ವಯಿಸುತ್ತದೆಯೋ ನಿಮಗೂ ಅನ್ವಯಿಸುವುದೊ''

ಎಂದು ಮರು ಮಾತು ತೆಗೆದು ಅವರ ನುಡಿಯಿಂದ ಅವರನ್ನು ಬಂಧಿಸಿದನು. ದೊರೆ, "ನನಗೂ ಅದೇ ಮಾತು ಅನ್ವಯಿಸುತ್ತದೆ" ಎನ್ನುವನು

ನಿನ್ನ ಮಕ್ಕಳೆಲ್ಲ ಫಣಿರಾಜನ ವಿಷದಿಂದ ದಗ್ಧರಾದರು ಎಂದು ಆ ಬ್ರಾಹ್ಮಣನು ಎಚ್ಚರಿಸುತ್ತಾನೆ; ದೊರೆ 'ಅವರು ಎಂದು ಹುಟ್ಟಿದರೋ ಅಂದೇ

ಸತ್ತರು. ಸಂಸಾರಿ ಜೀವಿಗಳವರು' ಇದೇನು ಚೋದ್ಯ ಎಂದು ಉತ್ತರಿಸಿ ಮುನ್ನಿ, ಸಂತೆ ಧರ್ಮಕಥಾ ಶ್ರವಣ ಕಥನದಲ್ಲಿರಲು ಭಗೀರಥನು ಬಂದು ತನ್ನ ಸಹೋದರರ ಮರಣವಾರ್ತೆಯನ್ನು ತಿಳಿಸುತ್ತಾನೆ. ಅಂತಃಪುರವೆಲ್ಲ ಶೋಕಸಾಗರದಲ್ಲಿ ಮುಳುಗಿತು. ಮತ್ತೆ ಅದೇ ದೊರೆಯನ್ನು ಅದೇ ಪ್ರಶ್ನೆ ಬಾಧಿಸಿತು. ತೊಂಬತ್ತಾರು ಸಾವಿರ ಬಾಯಿಗಳಿಂದ ಅದೇಪ್ರಶ್ನೆ:

"ನಿನ್ನ ಮಕ್ಕಳನ್ನು ಬದುಕಿಸಿಕೊಡು. ಸೊಸೆಯರ ಮುಖಗಳನ್ನು ನೋಡಿದರೂ ಪುತ್ರರನ್ನು ಉಳಿಸಿಕೊಡು" ಯಾ

ಎರಗಿದ ದೊರೆಗಳು ತಲೆಯೆತ್ತದೆ ಶಿರಬಾಗಿ ನಿಂತಿದ್ದಾರೆ.

ಆದರೆ ಮೇರು ಪರ್ವತದಂತೆ ಅಚಲನಾಗಿದ್ದವನು ಸಗರನೊಬ್ಬನೆ. ಸೂರ್ಯನ ಪ್ರಕಾಶವನ್ನು, ಮೋಡಗಳೆಷ್ಟಿದ್ದರೇನು, ತಡೆಯಬಲ್ಲುವೆ?

"ಮಗನನ್ನು ಉಳಿಸೆಂದು ಆ ವಿಪ್ರ ಕೇಳುತ್ತಿದ್ದಾನೆ. ಮಕ್ಕಳನ್ನು ಬದುಕಿಸೆಂದು ತಾಯಿಯರು ಗೋಳಿಡುತ್ತಿದ್ದಾರೆ. ಅವನೂ ಬಡವ; ಇವರೂ ಬಡವರು"

ಎಂದು ಕೊಂಡು, ಮರದ ಮನುಷ್ಯನಂತೆ ಕಲ್ಲಿನಂತೆ ಅವಿಚಲಿತನಾಗಿರುವ ಸಗರನ ಮೇಲೆ ಬಿಳಿಯ ಎಳ್ಳನ್ನು ಸುರಿದ ಬುದ್ಧಿ ಸಾಗರನು ಅವನ ಅಳಲೆಷ್ಟೆಂಬದನ್ನು ತೋರಿಸಿ ಕೊಡುತ್ತಾನೆ. ಅರವತ್ತು ಸಾವಿರ ಮಕ್ಕಳ ಮರಣ; ಒಂದೆ ದಿನ; ಒಂದೆ ಕಡೆ; ಒಂದೆ ಸಲ.

ಮೌನದಿಂದ ಎದ್ದು ಓಲಗವನ್ನುಬಿಟ್ಟು ತೆರಳಿದನು. 'ರಾಜ್ಯ ವಿಭವ ಮುಗಿಯಿತು ಮೋಹೋದಯ ಕಡೆಗಂಡಿತು. ಮಂಗಳ ಮಹಾ ಶ್ರೀ ಆಗಲಿ' ಎಂದು ಕೊಂಡನು.

ಇತ್ತ ಮಣಿಕೇತುವು ಗೆಳೆಯನನ್ನು ಭವಸಾಗರದಿಂದ ಹೊರಗೆ ತಂದೆನೆಂದು ಆನಂದಿಸಿದ

ಮತ್ತೆ ಅದೇ ಕಪಟ ಬ್ರಾಹ್ಮಣನು ಸತ್ತವರಂತೆ ಬಿದ್ದಿದ್ದ ಕುಮಾರರನ್ನು ಎಚ್ಚರಿಸಿ ಅವರ ತಂದೆ ದೀಕ್ಷೆ ಪಡೆದನೆಂದು ಅರುಹಿದನು. ಅವರೂ ನಿರ್ವೇಗ ಪರರಾಗಿ ದೃಢಧರ್ಮ ಕೇವಲಿಗಳ ಸನ್ನಿಧಿಯಲ್ಲಿ ತಪೋನಿಧಿಗಳಾದರು. ಈ ವರ್ತಮಾನವನ್ನು ಕೇಳಿದ ಭಗೀರಥನೂ ಮುನಿಸನ್ನಿಧಿಗೆ ಬಂದು ಅವರಿಂದ ಕರ್ಮ ಪ್ರಕೃತಿ ಲೋಕ ವಿಭಾಗ, ಜೀವಸ್ವರೂಪಗಳನ್ನು ತಿಳಿದು, ಶ್ರಾವಕ ವ್ರತಗಳನ್ನು ಕೈಗೊಂಡ.

ಹೊರಟು ಹೋದನು. ಮಣಿಕೇತುವು ತಾನು ಮಾಡಿದ ಷಟ್ಪ್ರಪಂಚವನ್ನು ಪ್ರಕಟಮಾಡಿ ತನ್ನ ನಿವಾಸಕ್ಕೆ ಹೋದನು. ಅವನನ್ನು ಸಗರನೂ ಸಗರ ಪುತ್ರರೂ ಮನವಾರೆ ಕೊಂಡಾಡಿದರು.

ಕೆಲಕಾಲಾನಂತರ ಸಗರ ಮುನಿಯೂ ಅವರ ಪುತ್ರರೂ ಪರಮ ಗತಿಯನ್ನು ಪಡೆದರೆಂದು ತಿಳಿದು ಭಗೀರಥನೂ ನಿರ್ವೇಗಪರನಾದನು. ವರದತ್ತನೆಂಬ ಕುಮಾರನಿಗೆ ರಾಜ್ಯಭಾರವನ್ನು ಕೊಟ್ಟು ತಪೋಭಾರವನ್ನು ವಹಿಸಲೆಂದು ಕೈಲಾಸ ಪರ್ವತಕ್ಕೆ ಬಂದು ಶಿವಗುಪ್ತ ಮುನಿಗಳ ಸಮಕ್ಷದಲ್ಲಿ ದೀಕ್ಷೆಯನ್ನು ಕೈಕೊಂಡು ತಪೋನಿರತನಾದನು.

ಅವನ ತಪಸ್ಸು ಉಗ್ರವಾದುದಾಗಿತ್ತು. ಭಾರಿಮಳೆಯಾಗಲಿ ಕೊರೆಯುವ ಚಳಿಯಾಗಲಿ ಕಡು ಬೇಸಿಗೆಯಾಗಲಿ, ಅವನ ಶ್ರದ್ಧೆಗೆ ಭಂಗತರಲು ಸಾಧ್ಯವಾಗಲಿಲ್ಲ. ನಿಶ್ಚಲನಾಗಿ ಕಲ್ಲಿನಂತೆ ನಿಂತು ತಪಸ್ಸು ಮಾಡಿದನು. ಕಾಲಾನುಕ್ರಮದಲ್ಲಿ ಅವನ ಕರ್ಮಕ್ಷಯವಾಯಿತು. ಮೋಕ್ಷಲಕ್ಷ್ಮಿಯ ಸುಖವು ಲಭಿಸಿತು.

ವರದತ್ತನು ದಾನ ಧರ್ಮ ಜಿನಪೂಜೆಗಳಲ್ಲಿ ನಿರತನಾಗಿ ದಾನಚಿಂತಾಮಣಿಯೆನಿಸಿಕೊಂಡು ಯಶೋವಂತನಾದನು.

ಕವಿ ಕಾವ್ಯ ಪರಿಚಯ

ಶ್ರವಣಬೆಳುಗೊಳದ ಚಂದ್ರಗಿರಿಯಲ್ಲಿ ಒಂದು ಹೆಬ್ಬಂಡೆ, "ಶ್ರೀ ಕವಿರತ್ನ" ಎಂಬ ಐದು ಅಕ್ಷರಗಳನ್ನು ಧರಿಸಿ ಅಲ್ಲಿನ ಇನ್ನೆಲ್ಲ ಬಂಡೆಗಳಿಗಿಂತ ತಾನೆ ಪುಣ್ಯಶಾಲಿ ಎಂಬಂತೆ ವಿಜೃಂಭಿಸುತ್ತಿದೆ. "ಶ್ರೀ ಕವಿರತ್ನ"! ಕನ್ನಡ ಸಾಹಿತ್ಯ ಸಂಸ್ಕೃತಿಗಳ ಪರಿಚಯವಿರುವ ಭಾವುಕರಿಗೆ ಈ ಲಿಪಿಗಳು ಬರೀ ಲಿಪಿಗಳಲ್ಲ, ಹಿರಿದೊಂದು ಸಾರಸ್ವತ ಪ್ರಪಂಚಕ್ಕೆ ಕೊಂಡೊಯ್ಯುವ ಬೀಜಾಕ್ಷರಗಳು; ಪಂಚಾಕ್ಷರೀ ಮಹಾಮಂತ್ರ. 'ಅಜಿತತೀರ್ಥಕರ ಪುರಾಣತಿಲಕ' ಎಂಬ ಈ 'ಕಾವ್ಯರತ್ನ'ವನ್ನು ರಚಿಸಿದ 'ಶ್ರೀ ಕವಿರತ್ನ'ನು ಆ ಬಂಡೆಯ ಮೇಲೆ ಮೂಡಿಸಿ ಪರಮಪವಿತ್ರವೂ ಪರಮಸುಂದರವೂ ಆಗಿರುವ ಆ ಸನ್ನಿವೇಶದ ಪ್ರಭಾವದಿಂದ ಎಷ್ಟುಸಲ ಭಾವಪರವಶನಾಗಿದ್ದನೊ; ಏನೇನೊಂದು ದಿವ್ಯಸ್ವಪ್ನಗಳನ್ನು ಕಂಡಿದ್ದನೋ; ಎಂತೆಂತಹ ಭವ್ಯಕಾವ್ಯಗಳನ್ನು, ವರ್ಣಚಿತ್ರಗಳನ್ನು ಚಿತ್ತಫಲಕದ ಮೇಲೆ ಮೂಡಿಸಿಕೊಂಡಿದ್ದನೊ ಜೈನಧರ್ಮ, ಜೈನಸಾಹಿತ್ಯ ಜೈನವ್ಯಾಕರಣಗಳನ್ನು ಕುರಿತು ಎಷ್ಟುಸಲ ಚಿಂತಿಸಿದ್ದನೊ. ಸುವಿಶಾಲವಾದ ಆ ಅರೆಕಲ್ಲಿನ ಸುತ್ತುಮುತ್ತಿನ ಎಡೆಯಂತೂ ಅವನ ಪಾದಸ್ಪರ್ಶದಿಂದ ಪಾವನವಾಗಿರಬೇಕು; ಅನೇಕ ಸಲ ಪುಲಕಿತವಾಗಿರಬೇಕು ಹೀಗೆ ಹಲವಾರು ಕಲ್ಪನೆಗಳು ಕನ್ನಡ ಸರಸ್ವತಿಯ ಆರಾಧಕರಲ್ಲಿ ಮೂಡಿ ಮೇಲೇಳಬಹುದು. 'ಔನ್ನತ್ಯಮುಂ ಮತಸೌಂದರ್ಯಮುಂ ಊರ್ಜಿತಾತಿಶಯಮುಂ' ಕೂಡಿ ಮುಪ್ಪುರಿಗೊಂಡು ಸಾಕ್ಷಾತ್ ಜಗದ್ಗುರುವಿನಂತೆ ಮೆರೆಯುತ್ತಿರುವ ಶ್ರೀ ಗೊಮ್ಮಟೇಶ್ವರನಿಗೆ ಮಹಾಮಸ್ತಕಾಭಿಷೇಕವಾಗುವಂದು ಆಕ್ಷ್ಯೇಪಮವಾದ ಆ ಶ್ರೀ ರೂಪವೈಭವವನ್ನು ಹತ್ತಿರದಿಂದ ಕಂಡು ಮನದಣಿಯದೆ ಆ ಬಂಡೆಯಲ್ಲಿಗೆ ಬಂದು ಅಲ್ಲಿಂದಲೂ ನೋಡಿ ಆನಂದಿಸಿರಬಹುದು. ಅಂತೂ ಶ್ರವಣಬೆಳುಗೊಳದ ಸುಜ್ಞಾನತೀರ್ಥವನ್ನು ಸವಿದು ಇವನ ಕವಿತಾವಲ್ಲರಿಯು ಬೆಳೆದು ಬಲಿತು ಪ್ರವರ್ಧಮಾನವಾಗಿರಬೇಕೆಂದು ಅನುಮಾನಿಸುವುದಕ್ಕೆ ಆ ಪಂಚಾಕ್ಷರಗಳೆ ಸಾಕ್ಷಿಯಂತಿವೆ.

ಸುಮಾರು ಸಹಸ್ರವರ್ಷಗಳ ಹಿಂದೆ ಇಂದಿನ ಬೆಳಗಾಂ–ಬಿಜಾಪುರ ಪ್ರಾಂತದ ಭಾಗಕ್ಕೆ ಬೆಳುಗಲಿ ಐನೂರು ಎಂಬ ಹೆಸರಿತ್ತು. ಕೃಷ್ಣಾ ಘಟಪ್ರಭಾ ನದಿಗಳು ಜೀವನಾಡಿಯಂತೆ ಹರಿಯುತ್ತಿರುವ, ತದ್ದವಾಡಿಗೆ ತೆಂಕಲೂ ತೊರಗಲೆಗೆ ಬಡಗಲೂ ಆಗಿದ್ದ, 'ಸುಖೋದ್ದೀಪಮೆನಿಸಿ' ಬೆಳಗುತ್ತಿದ್ದ ಆ ಬೆಳುಗಲಿ ಐನೂರರಲ್ಲಿ ಜಂಬುಖಂಡಿ ಎಪ್ಪತ್ತು ಎಂಬ ಉಪಪ್ರಾಂತದಲ್ಲಿ, ಆ ನಾಡಿಗೆ ತಿಲಕಪ್ರಾಯವಾಗಿ ರಂಜಿಸುತ್ತಿದ್ದ ಮುದುವೊಳಲು ಎಂಬ ಹೊಳಲು ಕವಿರತ್ನನ ಜನ್ಮಭೂಮಿ. ಘಟಪ್ರಭಾ ನದಿಯ ದಂಡೆಯ ಮೇಲೆ, ಜಮುಖಂಡಿಯ ದಕ್ಷಿಣಕ್ಕೆ ಹನ್ನೆರಡು ಮೈಲಿ ದೂರದಲ್ಲಿರುವ

ಈಗಿನ ಮುಧೋಳ್ ಪಟ್ಟಣವೆ ಅದು. ಕವಿಯು ಆ ಊರಿನ ಒಂದು ಬಳೆಗಾರ ಕುಲದ ಕುಡಿಯಾಗಿ ಬೆಳೆಯುತ್ತಾನೆ. ತಾಯಿ. ಪತಿವ್ರತಾಗುಣವಿಭೂಷಣದಿಂದ ನೆಗಳ್ದ 'ಅಬ್ಬಲಬ್ಬೆ;' ತಂದೆ ಜಿನೇಂದ್ರಪಾದಕಮಲಭ್ರಮರನಾದ ಜಿನವಲ್ಲಭೇಂದ್ರ; ಅಣ್ಣಂದಿರು, ದೃಢಬಾಹುವಾದ ರೇಚಣನೊಬ್ಬ, ಉದಾರ ಗುಣನೂ ಗುಣಿಯೂ ಆಗಿದ್ದ ಮಾರಮಯ್ಯನೊಬ್ಬ–ಇಂತಹ ಸುಪ್ರಸಿದ್ಧ ಶೀಲವಂತ ಮನೆತನದಲ್ಲಿ ಹುಟ್ಟಿ ರನ್ನನು 'ವಣಿಕ್ಕುಳಾರ್ಕ' ನೆನಿಸಿದನು. ಸಾವಿರದ ಎಂಟು ವರ್ಷಗಳ ಹಿಂದೆ ಸೌಮ್ಯಸಂವತ್ಸರದಲ್ಲಿ ಕರ್ಕಾಟಕ ರಾಶಿಯಲ್ಲಿ ಈ ಶಿಶುವನ್ನು ಪಡೆದ ಕನ್ನಡ ತಾಯಿ ಭಾಗ್ಯವಂತಳಾದಳು.

ಈ ಕವಿಯು ಬಾಲಕನಾಗಿದ್ದಾಗ ತನ್ನ ವಿದ್ಯಾಭ್ಯಾಸವನ್ನು ನಿರಾಂತಕವಾಗಿ ನಡೆಸಿರಬೇಕೆಂದು ತೋರುತ್ತದೆ, ಬಹುಶಃ ಅಣ್ಣಂದಿರಿಬ್ಬರೂ ಕುಲಕ್ರಮಾಗತವಾಗಿ ಬಂದ ಬಳೆಯ ವ್ಯಾಪಾರದಲ್ಲಿ ತೊಡಗಿ ದುಡಿಯುತ್ತಿದ್ದುದರಿಂದ. ತನ್ನ ಊರಿನಲ್ಲಿಯೇ ಇದ್ದ ಓಜರಲ್ಲಿ ವಿದ್ಯಾಭ್ಯಾಸಮಾಡಿ ಮುಗಿಸಿದ ರನ್ನನು ಇನ್ನಷ್ಟು ಜ್ಞಾನದಾಹವಾಗಿ ಬಂಕಾಪುರಕ್ಕೆ ಹೋಗಿ ಅಜಿತಸೇನಾಚಾರ್ಯರ ಕೃಪೆಯನ್ನು ಸಂಪಾದಿಸಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಿದನು. ಇವನ ಜೈನಾಗಮವನ್ನೂ ಸಾಹಿತ್ಯಶಾಸ್ತ್ರಗಳನ್ನೂ ಅಭ್ಯಾಸಮಾಡಿ ಪ್ರಾವೀಣ್ಯತೆಪಡೆದುದು ಅಲ್ಲಿಯೇ. ಇವನ 'ಜೈನೇಂದ್ರ ವಚೋವಿಭವ'ವೂ 'ಶಬ್ದಾನುಶಾಸನ ಪ್ರಭವ ವಚೋವಿಭವ'ವೂ ಅಜಿತಸೇನಾಚಾರ್ಯರ ಕೃಪಾಪ್ರಸಾದವೇ ಎಂದು ಧಾರಾಳವಾಗಿ ಹೇಳಬಹುದು. ಅಷ್ಟೇ ಅಲ್ಲ, ತಮ್ಮ ದರ್ಶನಾಶಿರ್ವಾದಗಳಿಗೆಂದು ಆಗಾಗ ಅಲ್ಲಿಗೆ ಆಗಮಿಸುತ್ತಿದ್ದ ಚಾವುಂಡರಾಯನ ಉದಾರಾಶ್ರಯವು ಇವನಿಗೆ ಲಭಿಸುವಂತೆ ಮಾಡಿದವರೂ ಅದೇ ಗುರುಗಳೇ ಇರಬೇಕು.

ಹೀಗೆ ಮುಧುವೊಳಲು ಎಂಬ ಊರಿನಲ್ಲಿ ಸಾಮಾನ್ಯ ಬಳೆಗಾರನೊಬ್ಬನ ಮಗನಾಗಿ ಜನಿಸಿದ ರನ್ನನು, ರತ್ನದ ಬೆಲೆಯನ್ನು ನಿಷ್ಕೃಷ್ಟವಾಗಿ ನಿರ್ಧರಿಸಬಲ್ಲ ರತ್ನಪಡಿವರ್ತಕನ ಕೈಗೆ ಸಿಕ್ಕಿದ ರತ್ನದಂತೆ, 'ಗಂಗಮಂಡಲ ಚಕ್ರೇಶ್ವರ ಕಟಕೋತ್ತಮ ನಾಯಕ'ನಾದ ಚಾವುಂಡರಾಯನ 'ವಿರಚನೆ'ಯಿಂದ ಅನರ್ಘ್ಯರತ್ನನಾದನು; ವಸುಧಾಧಿಪತಿ ಗಂಗರಾಜಮಲ್ಲನ ಕಯ್ಯ ಹೊಂಗಡಗದಲ್ಲಿ ಶೋಭಿಸುವಂತಹ ಮಹಾರತ್ನವಾದನು. ಪ್ರಾಯಃ ಇದೇ ಸಮಯದಲ್ಲಿ 'ಪರಶುರಾಮ ಚರಿತ' ಎಂಬ ರಸವತ್ಕಾವ್ಯವನ್ನು ರಚಿಸಿದನು. ಗಂಗಸಾಮ್ರಾಜ್ಯವು ಬಿದ್ದುಹೋದ ತರುವಾಯ ಈ ಕವಿಯು ಚಾಲುಕ್ಯ ಚಕ್ರವರ್ತಿಯಾದ ಆಹವಮಲ್ಲತೈಲಪನ ಆಶ್ರಯವನ್ನು ಪಡೆದನು. ಅಲ್ಲಿ, ಚಾವುಂಡರಾಯನಂತೆಯೇ ಧರ್ಮಾಭಿಮಾನಿಯೂ ಅವನಿಗಿಂತ ಹೆಚ್ಚಾಗಿ ಭುವನಕ್ಕಾರಾಧ್ಯೆಯೂ ಆದ ದಾನಚಿಂತಾಮಣಿ ಅತ್ತಿಮಬ್ಬೆಯ ಆಶ್ರಯವೂ ದೊರೆಯುವಂತಾಯಿತು.

ಮೊದಲೊಳ್ ಸಾಮಂತರಿನಿನಿ
ಸುದಿತೋದಿತನಾಗಿ ಮಂಡಲೇಶ್ವರಸಿಂದ
ಭ್ಯುದಯ ಪರನೆನಿಸಿ ಚಕ್ರಿಯಿ
ನುದಯ ಪರಂಪರೆಯನೆಯ್ದಿದಂ ಕವಿ ರನ್ನಂ

ಗಂಗರಾಜನುಲ್ಲನಲ್ಲಿ ಮಂತ್ರಿಯಾಗಿದ್ದ ಚಾವುಂಡರಾಯನೇ ಮೊದಲಾದ ಶ್ರೀಮಂತರ ಪ್ರೋತ್ಸಾಹದ ಫಲವಾಗಿ ಈ ಕವಿ ಪರಶುರಾಮ ಚರಿತ, ಚಕ್ರೇಶ್ವರ ಚರಿತ ಎಂಬ ಎರಡು ಮಹಾಕಾವ್ಯಗಳನ್ನು ರಚಿಸಿರಬೇಕು. ಆದರೆ ಸುವಿಖ್ಯಾತನಾಗಿ 'ಮಹಿಮೋನ್ನತಿಯುಂ' ಪಡೆದುದು ಚಾಲುಕ್ಯಚಕ್ರವರ್ತಿ ತೈಲಪನ ಆಸ್ಥಾನದಲ್ಲಿ. ಪ್ರಾಚೀನ ಭಾರತದಲ್ಲಿ ಕವಿಚಕ್ರವರ್ತಿಗೆ ಸಾಂಪ್ರದಾಯಿಕವಾಗ ಸಲ್ಲಬೇಕಾದ ಎಲ್ಲ ಘನತೆ ಗೌರವ ಪ್ರತಿಷ್ಠೆ ಪರಿವಾರ ಇವನಿಗೆ ಲಭಿಸಿದುವು. ಮದನಾವತಾರ, ಕನಕ ದಂಡ, ಚಾಮರ ಆನೆ ಕುದುರೆ, ಈ ರಾಜಮರ್ಯಾದೆಗಳೂ ಭತ್ತಗಾವೆ (ಭತ್ತ ಗ್ರಾಮ ?) ಯೆಂಬ ಗ್ರಾಮವೂ ಕಲಾರಾಧಕ ಚಾಲುಕ್ಯ ಚಕ್ರವರ್ತಿಯಿಂದ ಕಲಾ ಯೋಗಿ ಕವಿಚಕ್ರವರ್ತಿಗೆ ನೀಡಲ್ಪಟ್ಟವು. ತನ್ನ ಸ್ವಾಮಿಯಾದ ಇರಿವಬೆಡಂಗ ಸತ್ಯಾ ಶ್ರಯನ ಶೌರ್ಯಸಾಹಸಗಳನ್ನೂ, ವಿಜಯ ವೈಭವನನ್ನೂ ಕುರಿತ ಗದಾಯುದ್ಧವೆಂಬ ಸಾಹಸಭೀಮವಿಜಯವು ಇವನ ಕೀರ್ತಿ ಪ್ರತಿಷ್ಠೆಗಳನ್ನು ಮತ್ತಷ್ಟು ಬೆಳೆಯಿಸಿತು.

ಪುಣ್ಯವಂತನಾದ ಈ ರಸಿಕಚಕ್ರಿಗೆ ಶಾಂತಿ, ಜಕ್ಕಿ ಎಂಬ ಇಬ್ಬರು ಮಡದಿ ಯರು. ದೈವಭಕ್ತಿ ಪತಿಭಕ್ತಿಗಳೇ ಸತಿಗೆ ಪರಮಶ್ರೇಷ್ಠ ಭೂಷಣಗಳೆಂದರಿತು ತಮ್ಮ ಧರ್ಮಕ್ಕೂ ತಮ್ಮ ಕುಲಕ್ಕೂ ಮರ್ಯಾದೆ ತರುವಂತಹ ಸಮುಚಿತಶುದ್ಧ ವೃತ್ತಿಯಿಂದ ಆಚರಿಸುತ್ತಿದ್ದ ಸದ್ಗುಣಶೀಲೆಯರವರು. ಈ ಕವಿಗೆ ಉತ್ತರೋತ್ತರ ಜಾತಕವುಳ್ಳ ರಾಯ ಎಂಬ ಮಗನೂ 'ನಿಜವಂಶೋತ್ತಮೆ'ಯಾದ ಅತ್ತಿಮಬ್ಬೆ ಎಂಬ ಮಗಳೂ ಇದ್ದರೆಂದು ಗೊತ್ತಾಗುತ್ತದೆ.

ತುಂಬುಸಂಸಾರದಲ್ಲಿ ಹುಟ್ಟಿ ತುಂಬುಜೀವನವನ್ನು ನಡೆಸಿ ಅಂದಿನಿಂದ ಇಂದಿನ ವರೆಗೆ ರಸಿಕರ ಕಿವಿದುಂಬಿ ಮನದುಂಬಿ ತಣಿದೂಗಿಸುತ್ತಿದ್ದಾನೆ ಈ ಕವಿ. ಇವನ ಕಲಿಕೆಗೆ ಏನೆಲ್ಲ ಪ್ರೋತ್ಸಾಹವೂ ತಂದೆಯಿಂದ, ಅಣ್ಣಗಳಿಂದ ದೊರಕಿತು. ಅಜಿತ ಸೇನಾಚಾರ್ಯರಂತಹ ಗುರುಗಳು; ಚಾವುಂಡರಾಯ ಅತ್ತಿಮಬ್ಬೆಯರಂತಹ ದಾತೃ ಗಳು; ಪತಿಯ ಕಾವ್ಯಕಲ್ಪವೃಕ್ಷಕ್ಕೆ ಸತ್ಪ್ರೇಮ ಸಹಕಾರಗಳ ನೀರೆರೆದು ಬೆಳೆಸಿದ ಕುಲಾಂಗನೆಯರು, ಅಪ್ಪಂತ ಮಕ್ಕಳು, ರಾಜಮರ್ಯಾದೆ; ರಾಜಭೋಗ- ಇನ್ನೇನುಬೇಕು ?

ಕನ್ನಡನಾಡಿನಲ್ಲಿ ಎಷ್ಟೋ ಜನ ರಾಜ ಮಹಾರಾಜರುಗಳು, ಚಕ್ರವರ್ತಿಗಳು ಬಾಳಿ ಬೆಳಗಿದರು. ತಮ್ಮ ಮಹಿಮೆಯನ್ನು ಮುಗಿಸಿ ನಡೆದರು. ಅವರ ಹೆಸರುಗಳೂ ಭಾರತೀಯ ಇತಿಹಾಸದ ಸುವರ್ಣ ಸಂಪುಟಗಳನ್ನು ಅಲಂಕರಿಸಿರಬಹುದು. ಆದರೆ ಜನತೆಯ ಮನದ ಮಂಚದ ಮೇಲೆ ಮಂಡಿಸಿ ಆನಂದಸುಧೆಯನ್ನು ಸತತವೂ ನೀಡುತ್ತಿರುವ ರನ್ನನಂತಹ ಸರಸ್ವತೀಪುತ್ರರಿಗೆ ಆಶ್ರಯವಿತ್ತು ಪೋಷಿಸಿದ ಪರೋಪಕಾರರಾದ ರಾಜಮಹಾರಾಜರುಗಳು, ಮಾಂಡಲಿಕರು, ಮನ್ನೆಯರು, ಸಾಮಂತರು ಇವರೆಲ್ಲ ಆ ಮಹಾಕವಿಗಳ ಕೀರ್ತಿಯ ಬೆಳಕಿನಲ್ಲಿ ಇನ್ನೂ ಉಜ್ವಲವಾಗಿ ಬೆಳಗುತ್ತಿರುವರು. 'ಕೀರ್ತಿಯೊಂದೆ ಶಾಶ್ವತ; ಉದಧಿಯುಮೆಯ್ದಿ, ದಿಗ್ಗಜಮುಮೆಯ್ದಿ ಕುಲಾದ್ರಿಯುಮೆಯ್ದಿ ನೀಳ್ದು ನಿಲ್ವುದು ಜಸಂ! ಕೊಟ್ಟಧನ ಉಳಿಯಿತೆ? ಕೊಟ್ಟವರು ನಿಂತರೆ? ಕೊಂಡವರು ಬದುಕಿರುವರೆ'? ಈ ಮಾತುಗಳು ಕವಿ ತನ್ನ ಬಗೆಗೆ ಹೇಳಿಕೊಂಡುವೇನೋ ಎನ್ನಿಸುತ್ತದೆ. ಇದಲ್ಲದೆ ಈ ಕವಿಯು ತನ್ನ ಹುಟ್ಟೂರಿನ ಬಂಧು ಬಾಂಧವರ, ಹೆಂಡತಿಯರು ಮಕ್ಕಳ, ತನಗೆ ಆಶ್ರಯವಿತ್ತು ಬೆಳೆಸಿ ದೊಡ್ಡವನನ್ನಾಗಿ ಮಾಡಿದ ಮಹನೀಯರುಗಳ ಪರಿಚಯವನ್ನು ಅತ್ಯಂತ ಅಕ್ಕರೆಯಿಂದ ಮಾಡಿಕೊಟ್ಟಿರುತ್ತಾನೆ. ದಾನಚಿಂತಾಮಣಿ ಅತ್ತಿಮಬ್ಬೆ, ಬಂಕಾಪುರದ ಅಜಿತಸೇನಾಚಾರ್ಯ ಚಾವುಂಡರಾಯ, ಆಹವಮಲ್ಲತೈಲಪ, ಇರಿವಬೆಡಂಗ ಸತ್ಯಾಶ್ರಯ, 'ಗಂಗರಾಚಮಲ್ಲ' ಪಡೆವಳತೈಲ, ಮಲ್ಲಪಯ್ಯ, ಪೊನ್ನಮಯ್ಯ, ಪುಂಗನೂರು ನಾಗಮಯ್ಯ, ಚಮೂಪತಿ ನಾಗಮಯ್ಯ, ಕುಲಾಂಗನೆಯರಾದ ಜಕ್ಕಿಶಾಂತಿಯರು, ಕುಲದೀಪಗಳಂತಿರುವ ರಾಯ ಅತ್ತಿಮಬ್ಬೆಯರು; ಅಬ್ಬಲಬ್ಬೆ, ಜಿನವಲ್ಲಭೇಂದ್ರ- ಈ ಮುಂತಾದ ವ್ಯಕ್ತಿಗಳು ರನ್ನಮಹಾಕವಿಯ ಕಾವ್ಯರತ್ನಪ್ರದೀಪದ ಪ್ರಭೆಯಲ್ಲಿ ರಾರಾಜಿಸುತ್ತಿರುವರು. ಇದರಿಂದ ಒಂದು ವಿಷಯ ಹೊರಪಡುತ್ತದೆ: ಇವನ ಚಿರನವಿನೂತನ ಕಾವ್ಯವಾಹಿನಿಯಂತೆ ಇವನ ಜೀವನ ಪ್ರವಾಹವೂ ರಸದುಂಬಿ ಹರಿಯಿತು. ಈ ರಸಋಷಿಯ ಉನ್ನತ ಸಂಸ್ಕೃತಿ, ಸರಸಸಜ್ಜನಿಕೆ, ಬಂಧುಪ್ರೇಮ, ದೇಶಭಕ್ತಿ ಮುಂತಾದ ಸದ್ಗುಣಗಳನ್ನು ಕಂಡು ಕೈಮುಗಿಯಬೇಕು.

ದಾನಚಿಂತಾಮಣಿ ಅತ್ತಿಮಬ್ಬೆಯನ್ನು ಈ ಕವಿಯು ಪರಮಭಕ್ತಿಪೂರ್ವಕವಾಗಿ ಕೊಂಡಾಡುತ್ತಾನೆ. ಅಜಿತಪುರಾಣದ ಪ್ರಥಮಾಶ್ವಾಸದ ಮುಕ್ಕಾಲುಭಾಗ 'ಮಹಾಸತೀತಿಲಕ'ವೆನಿಸಿದ ಅತ್ತಿಮಬ್ಬೆಯ ಧರ್ಮಶ್ರದ್ಧೆ ಶೀಲ ಸಜ್ಜನಿಕೆಗಳ, ದಾನಗುಣದ, ಇವೆಲ್ಲಕ್ಕೂ ಮಿಗಿಲಾದ ಮಹಿಮಾತಿಶಯದ ವರ್ಣನೆಗೆ ವಿನಿಯೋಗವಾಗಿದೆ. ಪುರಾಣದ ಅಂತ್ಯಭಾಗದಲ್ಲಿ ಮತ್ತೆ ಅವೇ 'ಕವಿವರ ಕಾಮಧೇನು'ವಿನ ರಸವತ್ತಾದ ವರ್ಣನೆಯಿದೆ. ತನ್ನ ಕೃತಿರತ್ನವನ್ನು ಪರೀಕ್ಷಿಸಿ ನೋಡ ಹೊರಡುವವನಿಗೆ ಎಂಟೆದೆಯೇ ?– ಎಂದು ಗರ್ಜಿಸಿದ ಭೀಮಕವಿ ರನ್ನನ ಆ ಗಂಡುಗೆಚ್ಚೆಲ್ಲ ದಾನಚಿಂತಾಮಣಿಯ ಹೆಸರು ಕೇಳಿದೊಡನೆ ಭಕ್ತಿ ಕೃತಜ್ಞತೆಗಳಾಗಿ ಮಾರ್ಪಡುತ್ತದೆ. ಹೀಗಾಗು

ಪ್ರವಕ್ಕೆ ಆ ಗುಣದಂಕಕಾರ್ತಿಯ ಆ ಮಹಾಸತಿಯ, ಆ ಕವಿವರ ಕಾಮಧೇನುವಿನ ಹಿರಿಮೆಗರಿಮೆಗಳೆ ಕಾರಣವಾಗಿರಬೇಕು. ಆ ಮಹಾತಾಯಿಯನ್ನು ಹೊಗಳುವಾಗ ಅದೆಂತಹ ಗಾಢತಮಭಕ್ತಿ ಈ ಕವಿಗೆ! ಅದೆಂತಹ ಹಾರ್ದಿಕತೆ!! ಅತ್ತಿಮಬ್ಬೆಯಂತಹ ಪರಮಪೂಜ್ಯ ಮಹಿಳೆಯ ಆಶ್ರಯ ಲಭಿಸಿದ್ದೂ ಈ ಕವಿಯ ಪುಣ್ಯ; ರನ್ನನಂತಹ ಕವಿಚಕ್ರವರ್ತಿಯಿಂದ ಹೊಗಳಿಸಿಕೊಂಡುದೂ ಅತ್ತಿಮಬ್ಬೆಯ ಪುಣ್ಯ-ವಿಶೇಷ. ಇರಿವಬೆಡಂಗ ಸತ್ಯಾಶ್ರಯನನ್ನು 'ಅನಿಲಜನೊಳ್ವೋಲಿಸಿ' ಹೇಳಿದ ಗದಾಯುದ್ಧದ ಪ್ರತಿ ಆಶ್ವಾಸದ ಅಂತ್ಯದಲ್ಲಿಯೂ ತಾನು 'ಶ್ರೀಮದಾಹವಮಲ್ಲದೇವ ಶ್ರೀಪಾದಕಲ್ಪಪಾದಪಾಶ್ರಯಾಸನ್ನವರ್ತಿ ಕವಿಚಕ್ರವರ್ತಿ' ಎಂದು ಕವಿಯೇನೋ ಹೇಳಿಕೊಂಡಿದ್ದಾನೆ. ಆದರೆ ಅತ್ತಿಮಬ್ಬೆಯ ವರ್ಣನೆಯಲ್ಲಿ ಕಾಣುವ ಸಹಜ ಕವಿತೆ ಭಾವನಿರ್ಭರತೆ ಇರಿವ ಬೆಡಂಗನ ವರ್ಣನೆಯಲ್ಲಿಲ್ಲ. ಗದಾಯುದ್ಧ ಕಾವ್ಯವನ್ನು ಓದುವಾಗ ನಮ್ಮ ಗಮನ ಹರಿಯುವುದು ಕಾವ್ಯದ ನಾಯಕಪ್ರತಿನಾಯಕರಾದ ಭೀಮ ದುರ್ಯೋಧನರ ಕಡೆಗೆ. ರನ್ನ ನೆನಪಿಸಿದರೆ ಮಾತ್ರ ಇರಿವಬೆಡಂಗನ ನೆನಪು. ಆದರೆ, ಕವಿ ತನ್ನ ಈ 'ಕಾವ್ಯರತ್ನ'ದ ವಿಷಯದಲ್ಲಿ ತಾನೇನೆ ಹೇಳಿಕೊಳ್ಳಲಿ ಇದನ್ನು ಓದಿದಾಗ ನನ್ನ ಮನಸ್ಸಿನ ಮೇಲೆ ಸ್ಫುಟವಾಗಿ ಮೂಡುವುದು ಅತ್ತಿಮಬ್ಬರಸಿಯರ ಭವ್ಯಚಿತ್ರವೊಂದೆ.

ಕೃತಜ್ಞತಾ ಸಮರ್ಪಣೆಮಾಡುವಲ್ಲಿಯೂ ಈ ಕವಿಯ ಒಂದು ವೈಶಿಷ್ಟ್ಯವನ್ನು ಕಾಣಬಹುದು. ತಾನು ಯಾರ ಉದಾರಾಶ್ರಯವನ್ನು ಪಡೆದು ಅರಮನೆ ಗುರುಮನೆಗಳ ಗೌರವ ಮರ್ಯಾದೆಗಳಿಗೆ ಪಾತ್ರನಾದನೋ ಆ ಪುಣ್ಯಾತ್ಮರ ಹೆಸರನ್ನು ತಾನು ಸದಾ ಹೇಳುವಂತಾಗಲೆಂದೂ ಆ ಮೂಲಕ ಅವರ ಉಪಕಾರಸ್ಮರಣೆಯಾಗಲೆಂದೂ ತನ್ನ ಮಗಳಿಗೆ ಅತ್ತಿಮಬ್ಬೆಯೆಂದೂ ತನ್ನ ಮಗನಿಗೆ ರಾಯನೆಂದೂ ನಾಮಕರಣಮಾಡುತ್ತಾನೆ. ರನ್ನನ ದೃಷ್ಟಿಯಲ್ಲಿ ತನ್ನ ಇಬ್ಬರು ಮಕ್ಕಳೂ 'ಶುದ್ಧ' ಕೃತಿಗಳು. ಒಂದು ಪಕ್ಷ ಆ 'ಕೃತಿ' ಗಳು ಶುದ್ಧವಲ್ಲ ಎಂದರೂ ಭಾವನೆಗೆ ಬಡತನವೆ? ಆ ಎರಡು ಮಕ್ಕಳೂ ನಿಜವಾಗಿಯೂ ಚಿರಂಜೀವಿಗಳು. ಅವರ ಪುಣ್ಯವೇ ಪುಣ್ಯ! ಕವಿರತ್ನನ ಮಕ್ಕಳು ಅವರು.

ರಾಜಗುರುಗಳಾದ ಅಜಿತಸೇನಾಚಾರ್ಯರ ಅಚ್ಚುಮೆಚ್ಚಿನ ಶಿಷ್ಯನಾಗಿದ್ದ ರನ್ನನು ಆ ಕಾಲದಲ್ಲಿಯೇ ಉದ್ದಾಮಪಂಡಿತನೆಂದು ಪ್ರಸಿದ್ಧನಾಗಿರಬೇಕು. ಕವಿಯ ಘೋಷಣೆಯಿಂದಲೆ ಈ ಅಂಶ ಸ್ಥಿರಪಡುತ್ತದೆ. 'ಕವಿರತ್ನನಂತೊಳಪುಗಪ್ಪುದು ಪೊಗ್ಗಾಯ್ತೆ ಜಿನಮತಾಂಬೋಧಿಯುಂ'? 'ಜಿನಕಲ್ಯಾಣಮಯುಪ್ಪುಂ ಸವಿಸ್ತರದಿಂದಿರ್ಪುವು ವರ್ಣಕಂಗಳವರಿಂ ಭವ್ಯಾಂಗ ಮೇನೊಪ್ಪದೆ'? ಎಂದು ಕವಿಯ ದೃಢವಿಶ್ವಾಸ. 'ಕವಿಚತುರ್ಮುಖ' ನೆನಿಸಿದ ತಾನು 'ಆಗಮೋದಿ'ಯಾಗಿರು

ವುದರಿಂದ ಮತ್ತಿನ ಪುರಾಣಗಳಲ್ಲಿ ಹೇಳಿರುವ ವಿಷಯಗಳೆಲ್ಲವನ್ನೂ ಈ 'ಪುರಾಣ ತಿಲಕ'ದಲ್ಲಿ ಹೇಳಲು ಶಕ್ತನಾಗಿರುವನಲ್ಲದೆ ಆ ಪುರಾಣಗಳಲ್ಲಿಲ್ಲದ ಆಗಮಗಳಲ್ಲಿ ಮಾತ್ರ ಹೇಳಿರುವ ವಿಷಯಗಳನ್ನೂ ಪಂಪನ ಪೊನ್ನನ ಪುರಾಣಗಳಲ್ಲಿ ಯಾವು ವಾದರೂ ಪರಿಸ್ಫುಟಗೊಳ್ಳದ ಅಂಶಗಳಿದ್ದರೆ ಆ ಅಂಶಗಳನ್ನು ಪ್ರತಿಪಾದನೆ ಮಾಡಲು ಶಕ್ತನಾಗಿರುತ್ತಾನೆ.

ಈ ಕವಿಯಲ್ಲಿ, ಒಬ್ಬಿಬ್ಬರು ಕನ್ನಡಕವಿಗಳಲ್ಲಿ ಮಾತ್ರ ಕಾಣಬಹುದಾದ ಪ್ರತಿಭಾಸಂಪತ್ತೂ ಕವಿತಾಶಕ್ತಿಯೂ ಇದ್ದಿತೆಂಬುದು ಗದಾಯುದ್ಧವನ್ನೂ ಇವನ ಪುರಾಣತಿಲಕದ ಕೆಲವು ಭಾಗಗಳನ್ನೂ ಓದಿದರೆ ಅರಿವಾಗಬಹುದು. ಇವನ ಉದ್ಧೃಕೃತಿಗಳು ಸಾವಿರವರ್ಷ ಬದುಕಿರುವುದೂ ಅಂದಿನಿಂದ ಇಂದಿನವರೆಗೆ ರಸಿಕರೂ ವಿದ್ವಜ್ಜನರೂ ಇವನ ಕವಿತಾಶಕ್ತಿಯನ್ನು ಮುಕ್ತಕಂಠದಿಂದ ಹೊಗಳಿರುವುದೂ ಈ ಮಾತಿಗೆ ಸಾಕ್ಷೀಭೂತವಾಗಿವೆ. ಈ ಕವಿ ತಾನೆ ತನ್ನ ಬಗೆಗೆ ಹೀಗೆ ಹೇಳಿಕೊಂಡಿದ್ದಾನೆ:

ಶ್ರುತ ರಮಣೀಯನೆ ಕವಿತಾ
ಚತುರನೆ ಚಾರಿತ್ರರತ್ನಜಲಧಿಯ ರತ್ನಂ

ಆರಾತೀಯ ಕವೀಶ್ವರ
ರಾರುಂ ಮುನ್ನಾರ್ತರಿಲ್ಲ ವಾಗ್ದೇವಿಯ ಭಂ
ಡಾರದ ಮುದ್ರೆಯನೊಡೆದಂ
ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನಂ

ಚಾರಿತ್ರ ರತ್ನಜಲಧಿಯರತ್ನ, ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನ. ಅಷ್ಟೇ ಅಲ್ಲ. ರಸ ಭಾವ ಕಾಳಾಸ ಕುಣಿಕೆ–ಇವನ್ನು ಅರಿತುಕೊಂಡು ಕವಿಮಾರ್ಗದಲ್ಲಿ, 'ಪೊಸದೇಸೆಯ ನುಡಿಗಳೊಳಂ ಪೊಸೆಯಿಪ ಬಲ್ಮೆಗೆ ಚತುರ್ಮುಖಂ ಕವಿರತ್ನಂ'. ಅಲ್ಲದೆ,

ರತ್ನಪರೀಕ್ಷಕನಾಂ ಕೃತಿ
ರತ್ನಪರೀಕ್ಷಕನೆನೆಂದು ಫಣಿಪತಿಯ ಫಣಾ
ರತ್ನಮುಮಂ ರನ್ನನ ಕೃತಿ
ರತ್ನಮುಮಂ ಪೇಳ್ ಪರೀಕ್ಷಿಪಂಗೆಂಟೆರ್ದೆಯೇ

ಎಂದು ಬೆದರಿಸಿಯೂ ಇದ್ದಾನೆ. ಇದಲ್ಲದೆ ತಾನೇ ಹೇಳಿಕೊಂಡಿರುವಂತೆ,

ಕವಿಮುಖಚಂದ್ರಂ ಕವಿ ಚ
ಕ್ರವರ್ತಿ ಕವಿರಾಜಶೇಖರಂ ಕವಿರಾಜಂ
ಕವಿಜನ ಚೂಡಾರತ್ನಂ
ಕವಿತಿಲಕಂ ಕವಿಚತುರ್ಮುಖಂ ಕವಿರತ್ನಂ

ಈ ಮುಂತಾದ ಬಿರುದುಗಳನ್ನು ಧರಿಸಿದನನು. ತನ್ನಂತೆ ಕವಿಮಾರ್ಗದಲ್ಲಿ ಒಕ್ಕಣಿಸುವವರು ಠನಣಿಸುವವರು ಕಮ್ಮೈಸುವವರು ಯಾರಿದ್ದಾರೆ? 'ಬಹುರತ್ನಾ ವಸುಂಧರಾ'-ಎಂಬ ಸೂಕ್ತಿಯು ಸುಳ್ಳಾಯಿತು, ವಸುಂಧರೆಯಲ್ಲಿ ಈ ಒಂದೆ ರತ್ನ ಲಭಿಸುವುದರಿಂದ. ಚಕ್ರವರ್ತಿಗಳಲ್ಲಿ ತೈಲಪಚಕ್ರವರ್ತಿ ರಣಜಯಕ್ಕೆ ಅಸಹಾಯನಾಗಿರುವಂತೆ ಕವಿಗಳಲ್ಲಿ ಕವಿಚಕ್ರವರ್ತಿ ರನ್ನನು 'ಕೃತಿಗಸಹಾಯಂ'. ತಾನು ಯಾವ ಚಕ್ರವರ್ತಿಗೂ ಕಡಮೆಯಲ್ಲ. ಮತಿ ಕೋಶವಾಗಿ, ಪದವಿದ್ಯೆ ಕಂಠಿಯಾಗಿ ಯಶಸ್ಸು ಶ್ವೇತಾತಪತ್ರವಾಗಿ, ಸರಸ್ವತಿ ಮಾದೇವಿಯಾಗಿ ಪನೋಕ್ತಿ ಭೇರಿಯಾಗಿ ಕಲಿತ ಸಿಂಹಾಸನವಾಗಿ, ಅಲಂಕಾರಗಳು ಚಾಮರವಾಗಿ, ಕವಿತಾಸಾಮ್ರಾಜ್ಯದಲ್ಲಿ ಕವಿರತ್ನನು ಕವಿಚಕ್ರವರ್ತಿ. ಸರಸ್ವತಿಯ ಆಸ್ಥಾನದಲ್ಲಿ ಪಂಪ, ಪೊನ್ನ, ತಾನು ಸಮಾನ ಸ್ಥಾನವನ್ನು ಪಡೆದಿದ್ದಾರೆ. ಪಂಪನೂ ಪೊನ್ನಿಗನೂ ರಟ್ಟರಾಜ್ಯದಲ್ಲಿದ್ದು ಕವಿತಾರಚನೆ ಮಾಡಿ ಖ್ಯಾತಿ ಗಳಿಸಿದಂತೆ 'ಉಭಯಕವಿ'ಯೆನಿಸಿದ ತಾನು ಚಾಲುಕ್ಯರಾಜ್ಯದಲ್ಲಿದ್ದು ಕೀರ್ತಿವಂತನಾದನು. ಆದಿಪುರಾಣವನ್ನು ಪಂಪನೂ ಅಜಿತಪುರಾಣವನ್ನು ತಾನೂ 'ಎಸೆಯೆ ಪೇಳ್ದುದರಿಂ' ಪಂಪನು ದ್ವಿಜವಂಶಧ್ವಜನಾದನು; ತಾನು 'ವೈಶ್ಯವಂಶಧ್ವಜ.'

ಭಾಷಾಶೈಲಿಯು ಮಾತನ್ನೆತ್ತಿ ತನ್ನ ಕನ್ನಡವು 'ಎರಡರುನೂರರತಿರುಳು' ಎಂದೂ ಸಂಸ್ಕೃತವು ಮಧುರಮ್ಯೋತ್ಪನ್ನ ಎಂದೂ ಹೇಳಿಕೊಂಡಿರುವುದರಿಂದಲೂ 'ಉಭಯಕವಿ' ಎಂದು ಹೇಳಿಕೊಂಡಿರುವುದರಿಂದಲೂ ಈತನು 'ಉಭಯ ವ್ಯಾಕರಣ ಪರಿಣತ'ನಾಗಿದ್ದನಲ್ಲದೆ ಕನ್ನಡ ಸಂಸ್ಕೃತ ಎರಡು ಭಾಷೆಗಳಲ್ಲಿಯೂ ಕಾವ್ಯರಚನೆ ಮಾಡುತ್ತಿದ್ದಿರಬೇಕೆಂದು ತೋರುತ್ತದೆ.

ಈ ಕವಿಯ ಕಾವ್ಯಮೀಮಾಂಸೆಯೂ ಮನನೀಯವಾದುದು - ಕವಿ ಎಂದರೆ 'ಕವಿಮಾರ್ಗದೊಳೊಳಪೊಕ್ಕು' ಅಗೆದು ನವರಸಜಲದ ಸಂಚಾರದ ಜಾಡುಹಿಡಿದು ನವರಸದ ಬುಗ್ಗೆಯನ್ನು ಚಿಮ್ಮಿಸಬಲ್ಲ ರಸಜಲಶಿಲ್ಪಿ. ಅವನೆ ಸತ್ಕವಿ. ಏನೋ ಗೂಢಾರ್ಥವನ್ನಿಟ್ಟಿರುವೆನೆಂದು 'ಗೂಡಾರದ 'ಕವಿ' ಯಂತಿರೆ' ಗೂಡಾರವನ್ನು ಕವಿಸಿಹೋದವನು ಅಸತ್ಕವಿ. ಸಹೃದಯರ ಹೃದಯವನ್ನು ಸೂರೆಗೊಳ್ಳಬಲ್ಲ 'ನೆಗಳ ರಸ,' ಮನಂಗೊಳಿಸುವ 'ಮಾರ್ಗ', ದೇಶೀಶೈಲಿಗೆ ಹೊಂದಿಕೆಯಾಗುವ ಧಾಟಿ– ಈ ಮೂರೂ ಮುಪ್ಪುರಿಗೊಂಡ ಪದಮಾಲೆಯೆ ಕಾವ್ಯ. ಶುಷ್ಕಪಾಂಡಿತ್ಯ ರಸಪಂತಿಕೆಗೆ

ಎಡೆಕೊಡಬೇಕು; ಅರ್ಥಕ್ಕಾಗಿ 'ಕುದಿದು' ನುಡಿಸೆಣ್ಣಿನ ಗೋಣುಮುರಿಯಬಾರದು; ಭಾಷೆಗೂ ಮರ್ಯಾದೆಯಿದೆ ಎಂಬುದನ್ನು ಅರಿತಿರಬೇಕು. ಮಾತಿನ ಭಾವ ಬೆಡಗುಗಳನ್ನೂ ರಸಪಾಣಗಳನ್ನೂ ಅರ್ಥಪುಷ್ಟಿಯನ್ನೂ ಪ್ರತಿಭೆಯ ಬೆಳಕಿನಲ್ಲಿ ಅರಿತು ತನ್ನ ಕಾವ್ಯದಲ್ಲಿ ಅವನ್ನು ಅಳವಡಿಸಿಕೊಳ್ಳಬಲ್ಲನನೆ ಸತ್ಕವಿ. ದ್ರವ್ಯಾರ್ಜನೆಗಾಗಿ ಗುಣರಹಿತವಾದ ಕಾವ್ಯವನ್ನು ಕಟ್ಟೆ 'ಪಾಪಕ್ಕೆ ಪಕ್ಕಪ್ಪುದೆ' ? ಗುಣವನ್ನು ಕಾಯದೆ ಹಣವನ್ನು ಕಾಯುವುದಾದರೂ ಏಕೆ? ಅನ್ಯರಿಂದ ಅರಸರಿಂದ ದಾಯಾದರಿಂದ ಕಳ್ಳರಿಂದ ಹಣವು ಕೆಡಲೇಬೇಕು. ಗುಣಕ್ಕೆ ಕೇಡುಂಟೆ ? ಆದುದರಿಂದ ಕಾವ್ಯಗಳಲ್ಲಿ ಗುಣವನ್ನು ಬೈಯಿತ್ತಿಡಬೇಡನೆ ? ನಿಲ್ಲುವುದಾದರೆ ಗುಣ ನಿಲ್ಲುವುದು; ಹಣ ನಿಲ್ಲುವುದೆ ? - ಈ ಮಾತುಗಳು ಕಾವ್ಯದ ಬಗೆಗೆ ಈ ಕವಿಯ ಕಲ್ಪನೆ ಏನಿದ್ದಿತೆಂಬುದನ್ನು ಸೂಚಿಸುತ್ತಿವೆ – ಈ ಸೂತ್ರಗಳನ್ನು ಅನುಲಕ್ಷಿಸಿ 'ಅಜಿತಪುರಾಣ'ವನ್ನು ವಿಮರ್ಶಿಸುವ 'ಎಂಟೆರ್ದೆ' ಮಾಡಬಹುದು.

ಕವಿಚತುರ್ಮುಖನಾದ ರನ್ನನು ಅಜಿತಪುರಾಣವನ್ನು ಕಂದ ವೃತ್ತ ವಚನ ರಗಳೆಗಳೆಂಬ ಚತುರ್ಮುಖ ಛಂದಸ್ಸಿನಲ್ಲಿ ಕಟ್ಟಿರುತ್ತಾನೆ. ಕಥಾವಸ್ತುವೇನೋ ಅತ್ಯಂತ ಪ್ರಾಚೀನವಾದುದು; ದ್ವಿತೀಯ ತೀರ್ಥಂಕರನಾದ ಅಜಿತಸ್ವಾಮಿಯ ಪುಣ್ಯ ಚರಿತೆ. ಪ್ರಾಚೀನ ಕಾವ್ಯಗಳಲ್ಲಿ ಬೀಜರೂಪದಲ್ಲಿದ್ದ ಈ ಕತೆ ಅಂಕುರಿಸಿ ಪಲ್ಲವಿಸಿ ಹರೆಯಿಟ್ಟು ಶಾಖೋಪಶಾಖೆಗಳಾಗಿ ಬೆಳೆದು ಬಂದು ಹೆಮ್ಮರವಾಗಿದೆ 'ಕವಿಚತುರ್ಮುಖ'ನ ಕೈವಾಡದಿಂದ. ಪ್ರಥಮಾಶ್ವಾಸದಲ್ಲಿ ಮುಖ್ಯವಾಗಿ ಅತ್ತಿಮಬ್ಬೆಯ ಗುಣಶೀಲ ಗೌರವ, ಆ ತಾಯಿಯ ವಂಶವರ್ಣನೆ ಇದೆ. ಕೊನೆಯದಾದ ಹನ್ನೆರಡನೆ ಆಶ್ವಾಸದಲ್ಲಿ ಪುರಾಣ ಸಮಾಪ್ತಿ ಕವಿ ಮತ್ತು 'ಕವಿವರ ಕಾಮಧೇನು' ಅತ್ತಿಮಬ್ಬೆಯ, ಪಡೆವಳತೈಲನ ಸಂಗತಿ ಹೆಚ್ಚಾಗಿ ಬರುತ್ತದೆ. ಉಳಿದ ಹತ್ತು ಆಶ್ವಾಸಗಳ ಆದಿಯ ಏಳು ಆಶ್ವಾಸ (೨–೮) ಗಳು ಅಜಿತಸ್ವಾಮಿಯ ಚರಿತ್ರೆಗೂ ಉಳಿದ ಮೂರು ಆಶ್ವಾಸ (೯–೧೧) ಗಳು ಸಗರಚಕ್ರವರ್ತಿಯ ಚರಿತ್ರೆಗೂ ಮೀಸಲಾಗಿರುತ್ತದೆ.

ಇಲ್ಲಿ ಏಳುನೆಲೆಯ ದಿವ್ಯರಥದಂತೆ ಅಜಿತನಾಥನ ಪುರಾಣಸ್ಥಿತಿ. ಒಂದನೆಯ ನೆಲೆಯಲ್ಲಿ ಆಶ್ವಾಸ (೨) ತೀರ್ಥಂಕರನ ತಾಯಿತಂದೆಗಳು, ಅವರು ಆಳುತ್ತಿದ್ದ ನಾಡಿನ ರುಚಿರವರ್ಣನೆ, ತೀರ್ಥಂಕರರ ಪೂರ್ವಜನ್ಮವೃತ್ತಾಂತ; ಎರಡನೆಯ ನೆಲೆಯಲ್ಲಿ (೩) ಸುರಲೋಕಾವತರೋತ್ಸವ, ಮೂರನೆಯ (೪) ನೆಲೆಯಲ್ಲಿ ಜನ್ಮಾಭಿಷೇಕೋತ್ಸವ; ನಾಲ್ಕನೆಯ (೫) ನೆಲೆಯಲ್ಲಿ ದೇವೇಂದ್ರನ ಆನಂದನೃತ್ಯದ ಸೊಗಸಾದ ವರ್ಣನೆ; ಅಜಿತನಾಥನ ಬಾಲಕೇಳಿ, ಕೌಮಾರ್ಯ ಯೌವನ, ವಿವಾಹ, ಪಟ್ಟಬಂಧೋತ್ಸವ, ಐದನೆಯದರಲ್ಲಿ (೬) ವಸಂತಾಗಮನ, ಅಜಿತಸೇನ ಜನನ, ವೈರಾಗ್ಯಪ್ರಾಪ್ತಿ;

ಪರಿವಾರದ ಪೌರರ ರಾಜಬಂಧುಗಳ ಕೊರಗು, ದೀಕ್ಷಾಗ್ರಹಣ; ಆರನೆಯ (೬) ಸ್ಥಲದಲ್ಲಿ ಸಮವಸರಣ ಮಹಾಮಂಟಪದರಚನೆ; ಏಳನೆಯ (೭) ಸ್ಥಲದಲ್ಲಿ ದೇವೇಂದ್ರಾದಿಗಳು ಅಜಿತನಾಥನನ್ನು ಸ್ತೋತ್ರಗಯ್ಯುವುದು, ಪರಿನಿರ್ವಾಣ. ಸಗರಚಕ್ರವರ್ತಿಯ ಕಥೆಗೆ ಮುಡಿಪಾಗಿರುವ ಮೂರು ಆಶ್ವಾಸಗಳಲ್ಲಿ, ಕ್ರಮವಾಗಿ ದಿಗ್ವಿಜಯ ತಪೋವನಗಮನ ಧರ್ಮೋಪದೇಶವರ್ಣನೆಗಳು ಅಡಕವಾಗಿವೆ. ತೀರ್ಥಂಕರನ ತಪೋವರ್ಣನೆಯನ್ನೂ ಜೈನಮತಪ್ರಕ್ರಿಯೆಗಳನ್ನೂ ಒಳಗೊಂಡಿರುವ ಬಹುಸ್ವಲ್ಪ ಭಾಗವನ್ನು ಬಿಟ್ಟು ಉಳಿದ ಭಾಗವು ಸರ್ವರೂ ಓದಬೇಕಾದ ಓದಿ ರಸಾನುಭವ ಪಡೆಯಬಹುದಾದ ಕಾವ್ಯ.

ಕಾವ್ಯದ ಒಡಲಲ್ಲಿ ಅಲ್ಲಲ್ಲಿ ಶೃಂಗಾರ ರಸದ ಸ್ವಾರಸ್ಯವಾದ ಬಣ್ಣನೆ ಬಂದಿರುವುದಾದರೂ ಇದರ ಮುಖ್ಯ ರಸ ಶಾಂತರಸವೆ. ವೀರರಸವೇ ಪ್ರಧಾನವಾಗಿರುವ ಕಾವ್ಯಗಳನ್ನು ರಚಿಸುವುದು ಅಷ್ಟೇನೂ ಅತಿಶಯವಲ್ಲ. ರಸಗಳಲ್ಲೆಲ್ಲ ರಸವಾದ ಶಾಂತರಸವೇ ಪ್ರಧಾನವಾದ ಕೃತಿಗಳನ್ನು ಬರೆಯುವುದು ವರಕವಿಗಳಿಗೆ ಮಾತ್ರ ಸಾಧ್ಯ. ಈ ರಸರಾಜನ ಪರಿವಾರವಾಗಿ, ಶೃಂಗಾರ ಮೊದಲಾಗಿ ಭೀಭತ್ಸ ಕಡೆಯಾಗಿ ಎಲ್ಲ ರಸಗಳೂ ಬಂದು ನಿಂತು ತಮ್ಮ ಕರ್ತವ್ಯವನ್ನು ನಿರ್ವಹಿಸಿ ಸಾರ್ಥಕವನ್ನು ಪಡೆದಿವೆ: ಅನೇಕ ಪವಾಡಗಳನ್ನು ಮೆರೆದ ಮಹಿಮಾವಂತಳೂ ಜಿನಧರ್ಮ ಪತಾಕೆಯೂ ಆದ ಅತ್ತಿಮಬ್ಬೆಯ ವಿಚಾರವಾಗಿ ಕವಿ ಆಡಿರುವ ಮಾತುಗಳಲ್ಲಿ ಭಕ್ತಿ ವಾತ್ಸಲ್ಯ, ವಿಜಯಸೇನಾದೇವಿಯ ಸಂಗತಿ ಬಂದಾಗ ಶೃಂಗಾರ, ದೇವೇಂದ್ರಾದಿಗಳು ಬಂದು ಜನ್ಮಾಭಿಷೇಕಕಲ್ಯಾಣ ಮಾಡಿ ನಾಟ್ಯವಾಡುವಲ್ಲಿ ಅದ್ಭುತರಸ, ಸಗರಚಕ್ರವರ್ತಿಯ ಬಗ್ಗೆ ಹೇಳುವಾಗಲೂ ಅತ್ತಿಮಬ್ಬೆಯ ಅನುಬಂಧಿಗಳನ್ನು ಕುರಿತು ಬರೆಯುವಾಗಲೂ ವೀರರಸ. ಪುರವರ್ಣನೆ, ವಸಂತಋತು ವರ್ಣನೆ, ಚಂದ್ರೋದಯ, ಬೆಳುದಿಂಗಳು, ಕಾಳರಾತ್ರಿ, ಪ್ರಭಾತ, ಸೂರ್ಯೋದಯ ಮಾನುಷ್ಯದೇಹದ ಹೇಯತಾವರ್ಣನೆ, ಅಜಿತನಾಥನ ಮತ್ತು ಸಗರನ ತಪೋವರ್ಣನೆ, ಸಗರನು ಸಂಸಾರದಿಂದ ವೈರಾಗ್ಯಕ್ಕೆ ಅಡಿಯಿರಿಸಿದ ರಸಮಯಸನ್ನಿವೇಶ –ಇಲ್ಲೆಲ್ಲ, ಒಂದೆಡೆಯಲ್ಲಿಲ್ಲ, ಕಾವ್ಯದ ಪರ್ವಪರ್ವದಲ್ಲಿಯೂ ರಸಜೇನು ಒಸರುತ್ತಿದೆ.

ಕವಿಯೇನೋ ಹೇಳಿಕೊಂಡಿದ್ದಾನೆ: ‘ ಈ ದೊರೆಯ ಕಥಾನಾಯಕ, ಈ ದೊರೆಯ ಮಹಾಪ್ರಸಿದ್ಧ ಕವಿ ಪೊಂದರೊಳಿಲ್ಲ ಆದರೊಳಿಲ್ಲ ಅಪ್ಪರೊಳಿಲ್ಲ; ಈ ದೊರೆಯವು ಕೃತಿಗಳಿಲ್ಲ’ ಎಂದು. ಈ ಮಾತು ಮಾತ್ರ ಅತಿಶಯೋಕ್ತಿಯೇನೋ ಎನ್ನಿಸುತ್ತದೆ. ಈ ಮೊದಲೇ ಹೇಳಿರುವಂತೆ ಅಜಿತಪುರಾಣವನ್ನು ಓದುವಾಗ ನಮ್ಮ ಮನಸ್ಸಿನಲ್ಲಿ ಶಾಶ್ವತವಾಗಿ ನಿಲ್ಲುವ ವ್ಯಕ್ತಿ, ಶಕ್ತಿ ಆ ಅತ್ತಿಮಬ್ಬೆ ಒಂದು; ಇನ್ನೊಂದು ಸಗರನು ವೈರಾಗ್ಯಪರನಾದ ಸಂದರ್ಭ.

ಜೈನಪುರಾಣಗಳಲ್ಲಿ ಆದಿಕವಿ ಪಂಪನ ಆದಿಪುರಾಣದ ರೇಖೆಗೆ, ಕವಿಚಕ್ರವರ್ತಿ ಪೊನ್ನಿಗನ ಶಾಂತಿಪುರಾಣದ ರೇಖೆಗೆ ಬರಬಲ್ಲ ಕೃತಿ ಅಜಿತತೀರ್ಥಂಕರ ಪುರಾಣವೊಂದೇ ಎಂದು ಕವಿಯ ನಂಬುಗೆ.

ಆದರೆ ಈ ಕೃತಿಯಲ್ಲಿ ಆದಿಪುರಾಣ ಶಾಂತಿಪುರಾಣಗಳಲ್ಲಿ ಕಾಣದ ಇನ್ನೊಂದು ವೈಶಿಷ್ಟ್ಯವಿದೆ. ಅತ್ತಿಮಬ್ಬೆಯನ್ನು ಕುರಿತಾಗ ಕವಿ,

ಜನಪದ ಭಕ್ತೆ ಜಗತ್ರಯ
ಜನ ವಂದಿತೆ ಚಕ್ರವರ್ತಿಪೂಜಿತೆ ಜಿನಶಾ
ಸನರುಚಿ ಪಡೆವಳ ತೈಲನ
ಜನನಿಯೆ ತೀರ್ಥಕರ ಜನನಿಯೆನ್ನದರೊಳರೇ

ಮನದೊಳ್ ತಾಳ್ದುವಳೀಸತಿ
ಜಿನನಂ ಜಿನಜನನಿ ಗರ್ಭದೊಳ್ ತಾಳ್ದುವಳಿಂ
ಬಿನಿತೆ ವಿಕಲ್ಪಂ ತೈಲನ
ಜನನಿಗೆ ಜಿನಜನನಿಗೇಂ ವಿಕಲ್ಪಮುಂಟೆ

—ಹೀಗೆಂದು ಭಾವಾವೇಶಭರಿತನಾಗಿ ಹಾಡಿರುತ್ತಾನೆ. ಅಲ್ಲದೆ ಜಿನಜನನಿಯೊದ ವಿಜಯಸೇನಾದೇವಿಗೂ ಮಹಾನುಭಾವೆಯಾದ ಅತ್ತಿಮಬ್ಬರಸಿಗೂ ಅಭೇದವನ್ನು ಕಲ್ಪಿಸಿರುವಂತೆ ತೋರುತ್ತಿದೆ. ಗುಣದಂಕಕಾರ್ತಿ ದಾನಚಿಂತಾಮಣಿ ಶೀಲಾಲಂಕಾರೆ ಚಕ್ರವರ್ತಿಪೂಜಿತೆ, ಕವಿವರಕಾಮಧೇನು, ಭವ್ಯಮನೋರಥ ಜನ್ಮಭೂಮಿ, ದರ್ಶನವಿಶುದ್ಧೆ ಮಹಾಸತಿ, ಜಿನಧರ್ಮಪತಾಕೆ– ಈ ಎಲ್ಲ ವಿಶೇಷಣಗಳನ್ನೂ ಇಬ್ಬರು ಮಹಾಮಾತೆಯರನ್ನು ಹೊಗಳುವಾಗಲೂ ಬಳಸಿರುತ್ತಾನೆ; ಅಷ್ಟೆ ಅಲ್ಲ, ಕವಿಯ ದೃಷ್ಟಿಯಲ್ಲಿ ವಿಜಯಸೇನಾದೇವಿಗಿಂತಲೂ ಅತ್ತಿಮಬ್ಬೆಯೇ ಒಂದು ತೂಕ ಹೆಚ್ಚು 'ದರ್ಶನವಿಶುದ್ಧಿಯಿನೆ ನೆಗಳ್ದ 'ಜಯಂತಾಂಬಿಕೆಯೋ ಅಜಿತ ಜಿನಾಂಬಿಕೆಯೋ ತೈಲಾಂಬಿಕೆಗೆ ' ಸಮನಪ್ಪೊಡೆ ಅಕ್ಕೆ ' ಎಂದು ಕವಿಯ ಅಭಿಮಾನಪೂರ್ವಕ ವಾಣಿ.

ಪೃಥ್ವೀವಲ್ಲಭನಾದ ಇರಿವಬೆಡಂಗ ಸತ್ಯಾಶ್ರಯದೇವನನ್ನು ಅಸಿಲಜನಿಗೆ ಹೋಲಿಸಿ ಸಾಹಸಭೀಮವಿಜಯವನ್ನು ರಚಿಸಿರುವ ಕವಿತಿಲಕನು ಪುರಾಣತಿಲಕದಲ್ಲಿ 'ಮಹಾಸತೀತಿಲಕ'ಳಾದ ಅತ್ತಿಮಬ್ಬರಸಿಯನ್ನು ಜಿನಜನನಿಗೆ ಹೋಲಿಸಿರುವಂತೆ ತೋರುತ್ತಿದೆ. ಆದರೆ ಈ ಅಂಶವನ್ನು ಕವಿಯು ವಾಚ್ಯವಾಗಿ ಎಲ್ಲಿಯೂ ಹೇಳಿರುವುದಿಲ್ಲ.

"ಬಿಳಿಯರಳೆಯಂತೆ ಗಂ
ಜಳದಂತೆಸೆವ ಜಿನಸೇನ ಮುನಿಪತಿಯ ಗುಣಾ
ವಳಿಯಂತೆ ನೆಗಲ್ದ ಕೊಪಣಾ
ಚಳದಂತೆ"

ಪವಿತ್ರವಾದ ಅತ್ತಿಮಬ್ಬೆಯ ಪುಣ್ಯಚರಿತೆಯು ವಿಜಯಸೇನಾದೇವಿಯ ಚಾರಿತ್ರಕ್ಕಿಂತ ಮಿಗಿಲಾದುದೆಂದು ಕವಿಯ ಅಭಿಪ್ರಾಯವಾಗಿರಬಹುದು.

x x x x

ಇನ್ನು ಗ್ರಂಥಸಂಪಾದನೆಯ ಬಗ್ಗೆ. ಈ ಕಾವ್ಯರತ್ನವನ್ನು ಶ್ರವಣಬೆಳುಗೊಳದ ಮಠದ ಶ್ರೀಗಳವರು ಕೃಪೆಯಿಟ್ಟು ಕಳಿಸಿದ ಪ್ರತಿ, ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿದ್ದ ಮೂರು (ಕೆ ೮, ಎ ೧೬, ಎ ೫೩) ಹಸ್ತಪ್ರತಿಗಳು, ಕರ್ಣಾಟಕ ಕಾವ್ಯ ಕಲಾನಿಧಿಯಲ್ಲಿ ಬಂದಿರುವ ಮುದ್ರಿತಪ್ರತಿ, ಮಂಗಳೂರಿನಲ್ಲಿ ಅಚ್ಚಾಗಿರುವ ಮೊದಲ ಎರಡು ಆಶ್ವಾಸಗಳು. ಇಷ್ಟು ಮಾತೃಕೆಗಳ ಸಹಾಯದಿಂದ ಸಂಪ್ರತಿಸಲಾಗಿದೆ. ಇನ್ನೂ ಉತ್ತಮವಾದ ಮಾತೃಕೆಗಳು ದೊರೆಯಲಿಲ್ಲವಾದುದರಿಂದ ಪಾಠವನ್ನು ಸಂಪೂರ್ಣವಾಗಿ ಶುದ್ಧಗೊಳಿಸುವುದು ಸಾಧ್ಯವಾಗಲಿಲ್ಲ. ಅವುಗಳಲ್ಲಿ ಕಡೆ ಪದ್ಯಗಳು ಅರ್ಥವಾಗುವುದಿಲ್ಲ. ಗತ್ಯಂತರವಿಲ್ಲದೆ ಹಾಗೆಯೇ ಇಟ್ಟಿದೆ.

ಇಂತು
ಸಂಪಾದಕರು.

ಅರ್ಪಣೆ

ರನ್ನಮಹಾಕವಿಯು ಜೈನಪುರಾಣಗಳಿಗೆಲ್ಲಾ ತಿಲಕವಾಗಿರುವ ಈ ಅಜಿತತೀರ್ಥ
ಕರಪುರಾಣತಿಲಕವನ್ನು ವಿನಿರ್ಮಿಸಿ ಕವಿಚಕ್ರವರ್ತಿಯೆನಿಸಿದನು. ಅತ್ತಿಮ
ಬ್ಬಾಂಬೆಯೂ ಈ ಪುರಾಣತಿಲಕದ ಪ್ರಾಶಸ್ತ್ಯಪ್ರಕಟನಾರ್ಥವಾಗಿ ಈ
ಗ್ರಂಥರತ್ನವನ್ನೂ ಬರೆಯಿಸಿ ಐರಾವತಕುಂಭಾರೋಹಣೋತ್ಸವ ಪುರ
ಸ್ಸರವಾಗಿ ಸ್ವರ್ಣನಿರ್ಮಿತ ಜಿನಬಿಂಬಗಳೊಡನೆ ದಾನವಂ ಮಾಡಿ
ದಾನಚಿಂತಾಮಣಿಯಾಗಿ ಬೆಳಗಿ ಆಚಂದ್ರಾರ್ಕಸ್ಥಾಯಿಯಾದ
ಕೀರ್ತಿಯಂ ಪೆತ್ತಳು. ಈ ಕೃತಿರತ್ನಂ ಹೊರಹೊರಟು ಸಹಸ್ರ
ವರ್ಷಂಗಳ್ ಸಂದುದರ ಜ್ಞಾಪಕಾರ್ಥವಾಗಿಯೂ, ಅತ್ತಿ
ಮಬ್ಬಾಂಬಾವಿರಚಿತಐರಾವತಕುಂಭಾರೋಹಣೋತ್ಸವ
ಜ್ಞಾಪಕಾರ್ಥವಾಗಿಯೂ, ಶ್ರವಣಬೆಳ್ಗೊಳ ಶ್ರೀ
ಬಾಹುಬಲಿಸ್ವಾಮಿಮಹಾಮಸ್ತಕಾಭಿಷೇಕಾವಸರ
(3-3-1953ರಲ್ಲಿ) ಸಹಸ್ರಮಾನೋತ್ಸವ
ಸುಸಂದರ್ಭದಲ್ಲಿ ಐರಾವತಕುಂಭೋ
ಪರಿ ಪುರಾಣಾರೋಹಣೋತ್ಸವ
ಪುರಸ್ಸರವಾಗಿ

ಕವಿಚಕ್ರವರ್ತಿ ಶ್ರೀ ರನ್ನಮಹಾಕವಿವರ್ಯನಿಗೆ

ಅಜಿತತೀರ್ಥಕರಪುರಾಣತಿಲಕವು ಅರ್ಪಿಸಲ್ಪಟ್ಟಿದೆ.

|| ನಮಸ್ಸಿದ್ಧೇಭ್ಯಃ ||

ಅಜಿತತೀರ್ಥಕರ ಪುರಾಣ ತಿಲಕಂ

ಪ್ರಥಮಾಶ್ವಾಸಂ

ಶ್ರೀಮನ್ನಮ್ರಾಮರೇಂದ್ರಾರುಣಮಣಿಮುಕುಟದ್ಯೋತಿಬಾಲಾರ್ಕಲೀಲೋ
ದ್ದಾಮಂ ಕಾಶ್ಮೀರರಾಗಂ ತನಗೆ ವಿನತನಾಗೇಂದ್ರಹಸ್ತಾರುಣಾಬ್ಜಂ
ಹೈಮಂ ಕ[1]ರ್ಣಾ[1] ವತಂಸಂ ತನಗೆನೆ ಕರಮೊಪ್ಪಿರ್ದೊ[2]ಳಾರ್ಹಂತ್ಯ[2] ಲಕ್ಷ್ಮೀ
ಧಾಮಂ ಮಾೞ್ಕೆಮ್ಮ ಹೃತ್ಪದ್ಮಮನಜಿತಜಿನೇಂದ್ರಕ್ರಮಾಂಭೋರುಹಶ್ರೀ ೧

ಮೊದಲೊಳೆ ಸಿದ್ಧಭಕ್ತಿ ಸಕಳಕ್ರಿಯೆಗಾದುದು ಸಿದ್ಧಮಾತೃಕಾ
ಪದವಿಗೆ ತಾನೆ ಪೊತ್ತ ಮೊದಲಾದುದುಮಲ್ಲದೆ ಸಿದ್ಧಶೇಷೆಯೆಂ
ಬುದು ಶುಭವಾಕ್ಯಮಾಯ್ತೆನಿಪ ಸಿದ್ಧರನಂತಸುಖಪ್ರಯುಕ್ತ[3]ರ
ಭ್ಯುದಯಸುಖಂಗಳಂ ನಮಗೆ ಮಾಡಿ ನಿಮಿರ್ಚುಗೆ ಕಾವ್ಯಸಿದ್ಧಿಯಂ ೨

*ನೆಗೞ್ದ ದರ್ತ್ತಮುಜ್ಜೈನಮಾರ್ಗರುಚಿಯಿಂ ಚಾರಿತ್ರಸಂಸಿದ್ಧಿಯೊಳ್

*ನೆಗೞ್ದ ಶಿಷ್ಯರುಮಂ ನೆಗೞ್ಚಿ ವರದಕಾರ್ಶಾಚಾರ್ಯರೆಂಬೀ ಪೆಸರ್
ಜಗತೀವ್ಯಾಪಕಮಾಗೆ ತಾಮೆ ಕಣಿಯಾಗಿರ್ದರ್ ಗುಣಂಗಳ್ಗೆ ಭ
ವ್ಯಗಣಂಗಳ್ಗಮುದಂ ನಿಮಿರ್ಚಿ ಮೆಱೆ[3]ಗಾಚಾರ್ಯರ್ ನಿಜೌದಾರ್ಯಮಂ ೩

ಇವು ಸುಜ್ಞಾನದ ಸಲ್ಪ ಬಟ್ಟೆಗಳಿವಜ್ಞಾನಾಂಧಕೂಪಂಗಳೆಂ
ದು ವಿಶುದ್ಧೋದಿತಬುದ್ಧಿಯಿಂದಱಿಪಿ ಲಾಭಖ್ಯಾತಿಪೂಜಾನಪೇ[4]
ಕ್ಷೆ ವಿನೇಯರ್ಕಳೊಳಾಗ ತತ್ತ್ವಗೃಹದೊಳ್ ರತ್ನಪ್ರದೀಪಂಗಳಿ
ರ್ಪಪ್ರೊಲಿರ್ಪನ್ನರಪಾಯರೀಗೆಮಗುಪಾಧ್ಯಾಯರ್ಸ್ವರ್ಗಮೋಕ್ಷೋಪಾಯಮಂ ೪

ಘನಕಾಂತಾರವಿಶಾಲದೊಳ್ ವಿಷಯಮಂ ವಿಚ್ಛೇದಿಸಲ್ ಚಿತ್ತಸಂ
ಭವನಂ ಸಂಹರಿಸಲ್ ಕಷಾಯಭಟರಂ ಬೆನ್ನಟ್ಟಲಾರ್ಪೀ[5] ಮಹಾ

1 ರ್ಣಾ (ಅಇಉ). 2 ದ (ಅಇಉಎ). 3 ತ (ಅಇಉಎ). 4 ವಿ (ಇ). 5 ಲೆಸಿಪ್ಪೀ ([illegible]).

ವ್ಯವಸಾಯಂ ತಮಗಾಗೆ ಭವ್ಯಜನಕೆಲ್ಲಂ ಶಾಂತಿಮಿಚ್ಛಂತಿ ಸಾ
ಧವ ಎಂಬುತ್ತಮಸಾಧುವರ್ಗಮೆ ನೆರಂ ಸ್ವರ್ಗಾಪವರ್ಗಂಬರಂ ೫

ಜಿನವೃಂದಾರಕರಿ[1]ರ್ಪ
ತ್ತ[1]ನಾಲ್ವ[2]ರಾತೀರ್ಥನಾಥಸಮುದಾಯ[2]ದ ಶಾ
ಸನದೇವಿಯರ್ಕಳಿರ್ಪ
ತ್ತು ನಾಲ್ವರೀಗೆಮಗೆ ಯಕ್ಷರಕ್ಷಯಸುಖಮಂ ೬

ಸುರಪತಿಪೂಜಿತಂ ನೃಪತಿಸೇವಿತಮುನ್ನತಗಂಗಮಂಡಲೇ
ಶ್ವರಮಕುಟಾರ್ಚ್ಚಿತಂ ಭುವನದಿಂ ತಮಗೆಂಬ ನೆಗೞ್ತೆವೆತ್ತಲಂ
ಕರಿಸಿ ಜಗತ್ಪವಿತ್ರಮೆನೆ ಸಂದುದಱಿಂದೆಮಗಿಷ್ಟಸಿದ್ಧಿಯಂ
ದೊರೆಕೊಳಿಸುತ್ತುಮಿ[3]ರ್ಕೆ[3] ಜಿತಸೇನಮುನೀಂದ್ರಪದಾಂಬುಜದ್ವಯಂ ೭

ಅಸದೃಶಸಮ್ಯಗ್ದರ್ಶನ
ಮೆಸೆಯೆ ಮನೋವಚನಕಾಯಶುದ್ಧಿಯಿನಾರಾ
ಧಿಸುವೆಂ ನೆಗೞ್ದ*ರ್ಹತ್ಸಿ
ದ್ಧಸಾಧುಧರ್ಮಂಗಳಂ ಚತುರ್ಮಂಗಳಂ ೮

ಆಱುವು ನೆಗೞ್ತೆಯೆಂಬುಭಯಕಾಂಡಮೆ ಮುಕ್ತಿಪಥಕ್ಕೆ ಹೇತುವೆಂ
ದಱಿಪುವರನ್ಯರಂತವರೊಳೇನೊ ಜಿನಾಗಮಮಂತುಟಲ್ತು ಮಿ
ಕ್ಕಱಿವಿನ ಮಿಕ್ಕ ನಂಬುಗೆಯ ಮಿಕ್ಕ ನೆಗೞ್ತೆಯ ಕೂಟದಿಂದ[4]ಮಾ[4]
ದಱಿವನಿತರ್ಕಮಾನೆಱಗಿ ಪೊರ್ದ್ದು[5]ವೆನ[5]ಕ್ಕಪವರ್ಗಮಾರ್ಗಮಂ ೯

ನೆಗೞ್ದ* ಜಿತನಜೇಯಂ ಧರ್ಮಚಕ್ರಕ್ಕೆ ಕರ್ಮಾ
ರಿಗಳಗಿಯೆ ಜಿನಶ್ರೀಸೇವ್ಯನಪ್ಪಂದು ಭವ್ಯಾ
ಳಿಗೆ ಹಿತಕರನಾದಂ ಧರ್ಮಮಂ ನಿರ್ಮಲಂ ಮಾ
ಡುಗೆ [6]ಗಣ[6]ಧರಸೇನಾನಾಯಕಂ ಸಿಂಹಸೇನಂ ೧೦

ಎರಡ[7]ರ್ಕಂ[7] ಪ್ರತ್ಯಕ್ಷಂ
ಪರೋಕ್ಷಮೆಂಬಿವುಮಿ ಭೇದಮಲ್ಲದೆ ಭೇದಾಂ

1 ಪ್ಪತ್ತ(ಅಇಉಎ). 2 ರಿರ್ಪತ್ತು ನಾಲ್ವರಾತೀರ್ಥ(ಬ). 3 ರ್ಕ(ಕ). 4 ಕೂಟ ದಿಂದ ಮಂ(ಬ), ಕೂಟದಿಂ(ಇಉ), ಕೋಟಿಕೂಟದಿಂ(ಎ). 5 ವನ(ಕ). 6 ಜಿನ(ಬ). 7 ಕ್ಕಂ(ಅಇಉಎ).

ತರಮುಂಟೆ ಸಕಳತತ್ವ
ಪ್ರರೂಪಿಗಳ್ ಕೇವಲಶ್ರುತಜ್ಞಾನಂಗಳ್ ೧೧

ಅಕ್ಕುಂ ಬೋಧಂ ಶ್ರುತದೊಳ
ಪೊಕ್ಕಂ ತಾ ಬೋಧದಿಂದೆ ಸುಗತಿಯನೆಯ್ದ
ಲ್ಕಕ್ಕುಮದಱಿಂದಮುಭಯಭ
ವಕ್ಕಂ ಶ್ರುತದಿಂದೆ ಹಿತಕರಂ ಪೆಱತುಂಟೆ ೧೨

ಪದಿನಾಱಿಲ್ಲವಲಂಕ್ರಿಯಾರಚನೆ ಮೂವತ್ತಾಱು ನೇರ್ಪಟ್ಟುಪೊಂ
ದಿದ ಶೃಂಗಾರಮದಲ್ಲ ವೊಂದೆ ರಸವೊಂಬತ್ತೆಯ್ದೊಡಂಬಟ್ಟುವೆಂ
ಬುದನೆಂಬನ್ನೆಗಮುಂಗ್ರನೋಚಿತರಸಾಲಂಕಾರಮುಂ ತಾ[1]ಳ್ದ[1]ದೊ
ಪ್ಪಿದ ವಾಕ್ಸುಂದರಿ ಬಂದು ಸನ್ನಿಹಿತೆಯಕ್ಕಸ್ಮನ್ಮುಖಾಂಭೋಜದೊಳ್ ೧೩

ಶ್ರೀಮದಗಣ್ಯ ಪುಣ್ಯನಿಧಿ ಜೈನಪದಾಂಬುಜಭೃಂಗಿ ಜೈನಧ
ರ್ಮಾಮೃತವಾರಿವರ್ಧಿತವಿನೇಯಜನೋತ್ಸವಸಸ್ಯಭೂಮಿ ಮ
ದ್ಭೂಮಿಗೆ ತಾನೆ ಬೇಲಿಯೆನಿಪಂಕದ ರೋಹಿಣಿಯಕ್ಕೆ ದಾನಚಿಂ
ತಾಮಣಿ ಮಾಳ್ಕೆ ಚಿಂತಿತಮನೋರಥಮುಂ ಕವಿಚಕ್ರವರ್ತಿಯಾ ೧೪

ಪರಿಪೂರ್ಣಾಯತವಕ್ಷನಂಬುರುಹಪತ್ರಾಕ್ಷಂ ಜಿನೇಂದ್ರಾಂಘ್ರಿಪಂ
ಕರುಹಾನಂದಕಕಲ್ಪವೃಕ್ಷನಜಿತಶ್ರೀತೀರ್ಥಕೃತ್ಸಿಂಹನಿ
ಷ್ಟುರಸಂರಕ್ಷಣವಕ್ಷ ನಕ್ಷಯಫಲಾಪೇಕ್ಷಂ ಮಹಾಯಕ್ಷನಾ
ದರದಿಂ ರಕ್ಷಿಸುತಿರ್ಕುಪಾಸಕ[2]ಗ[2]ಣಶ್ರೀಸೇವ್ಯರಂ ಭವ್ಯರಂ ೧೫

ಪಸರಿಸಿದ ಕುತೀರ್ಥಧ್ವಾಂತಮುಂ ತೂಳ್ದಿ ಭವ್ಯ
ಪ್ರಸರಕಮಲಬೋಧಾವಾಪ್ತಿಯಂ ತಾಳ್ದಿ ಪೆಂಪಿಂ
[3]ವಿಶದವಿಭವ[3]ತೇಜಶ್ಚಕ್ರ[4]ಮರ್ಕಂ[4]ಬೊಲುದ್ಯೋ
ತಿಸುಗೆ ಸಕಲಧಾತ್ರೀಚಕ್ರದೊಳ್ ಧರ್ಮಚಕ್ರಂ ೧೬

ವಿಜಯಧ್ವಜಮುಂ ದುರಿತ
ಧ್ವಜನಿಧ್ವಂಸನದೊಳೆತ್ತಿ [5]ನೀಡುಂ[5] ಧರ್ಮ

1 ಳ (ಕ೧ಖ೨). 2 ಗು (ಬ). 3 ನಿಸದನಿಜತ (ಇಖ೨), ನಿಸದನಿಜದ (ಅ).
4 ವಕ್ರ (ಅ೧ಖ೨). 5 ವಾು (ಆ೩ಖ೨).

ಧ್ವಜನೆನಿಸಿದಜಿತನಾಥನ
ಗಜಧ್ವಜಂ ಮಾಡುಗೆಮಗೆ ಕೀರ್ತಿಧ್ವಜಮಂ ೧೭

ಅಜಿತಂ ವಿಷಯವಿಷಂಗ
ಳ್ಗಜಿತನನಂಗಂಗೆ ಖಳಕಷಾಯಭಟರ್ಕ
ಳ್ಗಜಿತನೆನಿಪಜಿತಜಿನನಪ
ವೃಜಿನನಪಾಕೃತಕೃತಾಂತಕೋಪಾಟೋಪಂ ೧೮

ಅಜಿತಜಿನಪದಪಯೋರುಹ
ರಜಸ್ಸಮಾಸಂಗಿಭೃಂಗಿ ಗುಣಶೀಲ[1]ದಯಾ[1]
ಧ್ವಜೆಯೆಂದು ನಾಡೆ ಸುವಿಸೇ
ಯಜನಂ ಬಣ್ಣಿಪುದು ದಾನಚಿಂತಾಮಣಿಯಂ ೧೯

ದಿಗಿಭದೊಳಗಮರಕರಿ ದಾ
ನಿಗಳೊಳಗಗ್ಗಳದ ದಾನಚಿಂತಾಮಣಿ ಚ
ಕ್ರಿಗಳೊಳಗಾಹವಮಲ್ಲಂ
ಮಿಗಿಲೆನಿಕುಂ ವಿಷಯದೊಳಗೆ ವೆಂಗೀವಿಷಯಂ ೨೦

ತುಂಗಮತಂಗಜೇಂದ್ರವನದಿಂ ಫಲಭಾರವಿನಮ್ರನಾಳಿಕೇ
ರಂಗಳಿನದ್ರಿಕಾನನದಿನುತ್ತ ಮಶಾಳಿವನಂಗಳಿಂ ಚಳ
[2]ಧೃಲ[2]ಂಗಕುಳಾಕುಳೀಕೃತಸರೋರುಹಷಂಡದಿನಿಕ್ಷು ಪುಷ್ಪವಾ
ಟಂಗಳಿನಾವ ಮುಂಡಲಮುಮಂ ಗೆಲೆವಂದುದು ವೆಂಗಿಮುಂಡಲಂ ೨೧

ಅಲ್ಲಿ ಕಂಟಕವೃತ್ತಿಯುಂ ವಯಃಪರಿಣತಿಯುಂ ಫಲತರುಗಳೊಳೆ, ದಾನಭಂಗಮುಂ ಗಜಂಗಳೊಳೆ, ಕಂಠಗ್ರಹಮುಂ ಸಂಭೋಗದೊಳೆ, ಚಳನ ಕ್ರಿಯೆಯುಂ[3] ರಸವಾದದೊಳೆ; ಮತ್ತಂ ಧನದರಲ್ಲದ ಧನದರಿಲ್ಲ, ತಕ್ಕರಲ್ಲದೆ ಟಕ್ಕರಿಲ್ಲ, ಜನ್ನಮಲ್ಲದೆ ಬನ್ನಮಿಲ್ಲ, ಭೋಗಮಲ್ಲದೆ [4]ರಾಗ[4]ಮಿಲ್ಲ, ಅಜಿನಲ್ಲದೆ ಬಜಿನಿಲ್ಲ, ಪೆರ್ಚ್ಚಲ್ಲದೆ ಬೆರ್ಚ್ಚಿಲ್ಲ, ಕುಲೀನರಲ್ಲದಕುಲೀನರಿಲ್ಲ, ವಂದಿಯಲ್ಲದೆ ಬಂದಿಯಿಲ್ಲ, ಜಾತಿಯಲ್ಲದೆ ವಿಜಾತಿಯಿಲ್ಲ, ವಿದಗ್ಧರಲ್ಲದವಿದಗ್ಧರಿಲ್ಲ, ಸುರಾಲಯಮಲ್ಲದಸುರಾಲಯಮಿಲ್ಲ, ವಿಪ್ರಾಳಾಪಮಲ್ಲದೆ ವಿಪ್ರಳಾಪಮಿಲ್ಲ,[5] ಪಾರಿಜಾತಮಲ್ಲದೆ ಪರಾಜಿತಮಿಲ್ಲ,[6] ಅಧಿಕಾರಿಗಳಲ್ಲದೆ ವಿಕಾರಿಗಳಿಲ್ಲ,[7] ವಿಪ್ರಯುಕ್ತರಲ್ಲದೆ[8] ವಪ್ರ

1 ಯಶೋ (ಬ). (ಅಇಉಎ). 2 ಭ(ಇಉಎ). 3 ಮಾರಣಕ್ರಿಯೆಯುಂ (ಬ). 4 ರೋ (ಇ). 5 ಸುಪ್ರಳಾಪಮಿಲ್ಲದೆ ಪ್ರಳಾಪಮಿಲ್ಲ (ಇಉಎ). 6 ಪಾರಿಜಾತನಲ್ಲ ಪಾರಿಜಾತಮಿಲ್ಲ (ಇಉಎ). 7 ದವಿಕಾರಿಗಳಿಲ್ಲ (ಅ). 8 ದವಿಪ್ರಯುಕ್ತರಿಲ್ಲ(ಆಕ).

ಯುಕ್ತರಿಲ್ಲ, ಪರಲೋಕ ಭಯಮಲ್ಲ[1]ದ[1]ಪರಲೋಕಭಯಮಿಲ್ಲ, ಪರಾರ್ಥವೇಷಿಗಳಲ್ಲ[2]ದೆ ಪರಾರ್ಥ[2]ವೇಷಿಗಳಿಲ್ಲ, [3]ಪಾಪಭೀರುಗಳಲ್ಲದಪಾಪಭೀರುಗಳಿಲ್ಲ,[3] ಪರಹಿತವ್ಯಸನಿಗಳಲ್ಲದೆ ದುರ್ವ್ಯಸನಿಗಳಿಲ್ಲ, ಗೋಸಾಸಮಲ್ಲದೆ ಕನ್ನೆಗೋಸಾಸಮಿಲ್ಲ.

ಸಕಲವಿನೇಯಸಂಪತಿಯೊಳಲ್ಲದವಗ್ರಹಮೆಂಬುದಿಲ್ಲ ದೈ
ವಕೃತಮದಾಡೊಡಂ [4]ಕಳೆಯ ಕಟ್ಟದ ಕಾಲ್ಗಳ ನೀರೆ ಸಾರ್ವಕಾ[4]
ಲಿಕಫಲದಾಯಿಯಗ್ಗಳದ ಬತ್ತದ ಪೆರ್ಬೆಳಸಿಂದೆ ದೇವಮಾ
ತೃಕಮುಮುತ್ಕೃಷ್ಟಪಥ್ಯಮುಮೆನಲ್ಕೊರೆವೆತ್ತುದು ವೆಂಗಿಮಂಡಲಂ ೨೨

ಅಳಿಗೀತಕುಸುಮಪರಿಮಳ
ಫಲರಸಮಂದಾನಿಲಾದ್ರಿಕಾನನಲೀಲಾ
ವಿಲಸನದಿಂ ಭೋಗಮಹೀ
ತಳಮೆನಿಪುದು ವಿಷಯಜನಕೆ ವೆಂಗೀವಿಷಯಂ ೨೩

ಜಳಧಿತರಂಗತಾಡಿತಮಹೀತಳದೊಳ್ ನೆಗೞ್ದಿತ್ತು ವೆಂಗಿಮಂ
ಡಲಮದಱೊಳ್ ಜಿತಾನ್ಯವಿಷಯಂ ನೆಗೞ್ದಿರ್ದುದು ಕಂಮೆದೇಶಮ
ಗ್ಗಳಿಕೆಯ ಕಂಮೆದೇಶಮನಲಂಕರಿಸಿರ್ದುದು [5]ಪು[5]ಂಗನೂರ್ ಜಗ
ತ್ತಿಲಕಮದ[6]ರ್ಕೆ[6]ಮುಖ್ಯಮೆನೆ ಪೆಂಪೆಸೆದಿರ್ದುದು ನಾಗಮಯ್ಯನಾ ೨೪

ನಾಗಮನರ್ಥಿಮಯೂರಘ
ನಾಗಮನಧಿಗತವಿನೇಯಜನಹಿತಕರಜೈ
ನಾಗಮನ[7]ಧಿ[7]ಕರಿಪೊಂ ದಿ
ಗ್ನಾಗಮನಕ್ಷೂಣಭದ್ರಲಕ್ಷಣಗುಣದಿಂ ೨೫

ಆನೆಗೞ್ದ ನಾಗಮಯ್ಯನ
ಸೂನುಗಳಿರ್ವ್ವರೆ ದಲವರೊಳಗ್ರಸುತಂ ವಿ
ದ್ಯಾನಿಧಿ ಮಲ್ಲಪನನುಜನ
ನೂನಗುಣಂ ಪೊನ್ನಮಯ್ಯನಣ್ಣನ ಭಕ್ತಂ ೨೬

ನೃಪಶಾಸ್ತ್ರಜ್ಞತೆಗಿಲ್ಲಿ ಮಲ್ಲಪನೊಳಶ್ವೇಭಾಗಮಕ್ಕಿಲ್ಲಿ ಮ
ಲ್ಲಪನೊಳ್ ಶೂರತೆಗಿಲ್ಲಿ ಮಲ್ಲಪನೊಳ್ಕಾರ್ತಿಕ್ಯವೋಳ್ಗುಣಕ್ಕಿಲ್ಲಿ ಮ

---

1 ಪಿ (ಇಉಎಬ). 2 ದೆ ಅಪರಾರ್ಥ (ಇಉಎಬ). 3 ಈ ಭಾಗ (ಇಉಎ) ಗಳಲ್ಲಿಲ್ಲ. 4 ಕಳಿಯಟ್ಟದ ಕಾಲ್ಗಳ ನೀರೆ ಸಾರ್ವಕಳಿಕಾ (ಇಉ), ಕಳೆಯಟ್ಟದ ಕಾಲ್ಗಳ ನೀರೆ ಸಾರ್ವಕಳಿಕಾ (ಎ). 5 ಪ (ಅಇಉಎ). 6 ಕ್ಕೆ (ಅಇಉಎ). 7 ನು (ಬ).

ಪನೊಳ್ ಭವ್ಯತೆಗಿಲ್ಲಿ ಮಲ್ಲಪನೊಳಾಚಾರಕ್ರಮಕ್ಕಿಲ್ಲಿಮ
ಪನೊಳ್ ನೋ[1]ಟ್ಪೊ[1]ಡೆ ಕಾಣಲಾಗದು ಸಮಾನಂ ಮಾನವಾನೀಕಮಂ

ಪಂಡಿತಮಂಡಳಿಗಂ ಕವಿ
ಮಂಡಳಿಗಂ ತನ್ನ ಮನೆ ತವರ್ಮನೆಯೆನೆ ಕೆ
ಯ್ಕೊಂಡು ಪೊಗೞ್ವುದು ಭುವನಂ
ಕೌಂಡಿನ್ಯಕುಲಪ್ರದೀಪನಂ ಮಲ್ಲಪನಂ ೨೮

ನೃಪಸಭೆಯೊಳ್ ನುಡಿಪಂ ಮ
ಲ್ಲಪ[2]ನಂ[2]ಸತ್ಯಾಕ್ಷರಕ್ಕೆ[3]ಗೆಂಟ[3]ಪಱಂ ಮ
ಲ್ಲಪನ ಮತ[4]ವಿಂ[4]ತು[5]ಟಾ[5]ದೇ
ಶಪೂರ್ವಕಂ ನುಡಿಯದಾತನುಂ ತದ್ವಿ[6]ಧ[6]ನೇ ೨೯

ಪಡೆವೆಂ ಪುತ್ರನನೊರ್ವನಂ,ಪಡೆವೆನಾನೊಂದ್ದೇ[7]ಸಿ[7]ನಕ್ಕಂ ಜಯಂ,
ನುಡಿವೆಂ,ಕೇಳ್ದಿರಿವೆಂದು ಮುನ್ನ ಋಷಿ ತತ್ತದ್ವಿದ್ಯನಾಚಾರದೊಳ್
ಗುಡಿಯಂ ಕಟ್ಟೆ, ಕುಮಾರಲೋಧ್ರಸಮರಪ್ರಾರಂಭದೊಳ್,ಬಲ್ಮೆ ನೇ
ರ್ಪಡೆ ಭೂಪಲ್ಲಭನಂ ಮನಂಗೊಳಿಸಿದಂ ಶೌರ್ಯೋರ್ಜಿತಂ ಮಲ್ಲಪಂ,

ಅಱಿವೆಡೆಯೊಳ್ ಕಾಲತ್ರಯ
ಮಿಱಿವೆಡೆಯೊಳ್ ತನ್ನ ಶೌರ್ಯಮಂ ಬಲ್ಮೆಯುಮಂ
ಮೆಱೆಪಂ ಮಲ್ಲಪನಲ್ಲದೆ
ಪೆಱನಾವನೊ ಶಾಸ್ತ್ರಶಸ್ತ್ರವಿದ್ಯಾಕುಶಲಂ ೩೧

ಪೊನ್ನಂ ನಯವಿವನಯಸಂ
ಪನ್ನಂ ಮಂದರಗಿರೀಂದ್ರದನ್ನಂ ನಿಜಧೈ
ರ್ಯೋನ್ನತಿಯೊಳ್ ಬಲ್ಮೆಯೊಳಜ್ಜ
ನೆನ್ನಂ ಧರ್ಮಕ್ಕೆ ಧರ್ಮನಂದನನನ್ನಂ ೩೨

ಬಳದೇವವಾಸುದೇವರ
ನಱಿ[8]ಪ್ಪುದು[8] ಗುಣಮೊಳ್ಪು ರಾಮಲಕ್ಷ್ಮಣರಂ ಪೆಂ
ಪಱಿ[9]ಪುದು[9]ಭೀಮಾರ್ಜುನರುಮ
ನಿಱಿಪುದು ಮಲ್ಲಪನ ಪೊನ್ನಮಯ್ಯನ ಚರಿತಂ , ೩೩

1 ಟ್ಪಿ (ಅಇಉಎ). 2 ನುಮ (ಇಉಎ). 3 ಗಂಡ(ಬ). 4 ಮಂ (ಅಕ). 5 ಟದೆ (ಅಇಉಎಕ). 6 ಧ (ಅ). 7 ರಿ (ಬ). 8 ಪಿದ (ಅಇಉಎ). 9 ಪಿದ (ಅಇಉಎ).

ಗುರು ಜಿನಚಂದ್ರಮುನೀಂದ್ರರ
ಪರೋಕ್ಷದೊಳ್ ತಂಮುತಿರ್ವರುಂ, ಪೊನ್ನಿಗನಿಂ
ಬರೆಯಿಸಿದರ್ ಸಕಳೋರ್ವಿಗೆ
ಪರೆಯಿಸಿದರ್ ಸಲೆ ಪುರಾಣಚೂಡಾಮಣಿಯಂ ೩೪

ಜಿನಭಕ್ತಂ ಮಲ್ಲಪನ
ಣ್ಣನ ಭಕ್ತಂ ಪೊನ್ನಮಯ್ಯನವರಿರ್ವ[1]ರ ಮಾಂ
ತನದ[1]ಳವನಳೆಯಲಜನಾ
ಜನೆನಿಸಿ ಕೌಂಡಿನ್ಯಗೋತ್ರಮಂಡನರಾದರ್ ೩೫

ಪರಮ್ಮದ್ರೋಹರೊಳೊಂದಿ ತನ್ನೊಳ್ಳಿಱಿಯಲ್ಕೋವಿಂದರಂ ಬರ್ಪುದುಂ
ಸೆರಗಂ ಪಾರದೆ ತಾಗೆ ತೈಲಪನೃಪಂ ಬಾಳ್ಗಿಂದು ಬಾಳ್ಗಿತ್ತು ಮ
ಚ್ಚರದಿಂ ಸಾರ್ಚಿದರಂ ಪಡಲ್ವಡಿಸಿ ಕಾವೇರೀಸರಿತ್ತೀರದೊಳ್
ಸುರಲೋಕಾತಿಥಿಯಾದ, ಪೊನ್ನನೆ ವಲಂ ಗಂಡಂ ಪೆಱರ್ ಗಂಡರೇ ೩೬

ತಲೆ ಪಗೆವರ ಕೆಯ್ಯೊಳ್ ಸುರ
ಲಲನೆಯ ತೋಳೊಳಗೆ, ಪತಿಯ ಭಂಡಾರದೊಳಂ
ನೆಲಸೆ, ಸುಭಟರ್ಕಳೊಳ್ ಮಾ
ದಲೆ ನೆಗೞ್ದುದು ಪೊನ್ನನನ್ನ ನಾವನೊ ಮೊನೆಯೊಳ್ ೩೭

ಅವನೊಳಪ್ರತಿಮವಿಪ್ರಕುಲದೀಪನುಂ, ಅಸಹಾಯಸಾಹಸೋತ್ಸಾಹಸ
ಮುದಿತಸಂಪತ್ಸಂಪನ್ನನುಂ[2] ಶರಣಾಗತವಜ್ರಪ್ರಾಕಾರನುಂ, ಅಭಿಮಾನತುಂಗನುಂ
ಅಹಿತಗಜಘಟಾಸಿಂಹನುಂ, ಪತಿಹಿತಾಚಾರ್ಯನುಂ, ಅಭಿನವಕೃಪಾಚಾರ್ಯನುಂ,
ಅವಲೋಕಿತಕಾಲತ್ರಯನುಂ, ಆರಾ[3]ಧಿ[3]ತರತ್ನತ್ರಯನುಮಖಿಲಜಗತ್ರಯಪ್ರಸಿದ್ಧ
ದಿಗಂಬರ ವೈರೋಚನ ಶ್ರೀ ಜಿನಚಂದ್ರದೇವ ಚರಣಾರವಿಂದಾರಾಧನಾವಿ[4]ಧಿ[4]
ಕೃತಾಂತಃಕರಣನುಂ, ಚಾಳುಕ್ಯಾಭರಣನುಂ, ಶ್ರೀಮದಾಹವಮಲ್ಲದೇವಸಾಮ್ರಾಜ್ಯ
ಲಕ್ಷ್ಮೀಪ್ರವರ್ಧಮಾನಹೇತುಭೂತನಿಜಾದೇಶ ಪರಂಪರಾಪ್ರಕಾಶಿತಪರಿಜ್ಞಾನಾತಿ
ಶಯನುಮಪ್ರತಿ[5]ಮ[5]ಲ್ಲನುಮೆನಿಪ ಮಲ್ಲಪಂಗೆ,

ವಿನಯ[6]ಮ[6]ತಿನಾಗಿಯಬ್ಬೆಗ
ಮನೂನಗುಣನೆನಿಪನಾಗಮಯ್ಯಂಗಂ ನಂ

1 ಉಮಪನಾಂತಉನ (ಅ). ಲಮಾತ (ಬ). 2 + ಸತ್ಯಶೌಚಾಚಾರನುಂ (ಬ).
3 ಳಿ (ಅಉಬ). 4 ಧಿ (ಅ), ಧೀಯಿ (ಅಉಬ). 5 ಮಮ (ಅಉಬ). 6 ಮ (ಬ).

ದನೆಯೆನಿಸಿದಪ್ಪಕಬ್ಬೆಯೆ
ಜಿನಪಾದಪಯೋಜಭೃಂಗಿ ಕುಲವಧುವಾದಳ್ ೩೮

ಅಂತಾ ಪುಣ್ಯಭಾಜನರಪ್ಪವರ್ಗೆ ಗುಂಡಮಯ್ಯನುಮೆಳಮಯ್ಯನುಂ, ಪೊನ್ನ[1]ಮ[1]ಯ್ಯನುಂ, ಅಹವಮಲ್ಲನುಂ, ವಲ್ಲನುಮೆಂಬ ಪುರುಷರತ್ನಂಗಳುಂ ; ಅತ್ತಿಮಬ್ಬೆಯುಂ, ಗುಂಡಮಬ್ಬೆಯುಂ, ನಾಗಿಯಬ್ಬೆ[2]ಯು[2]ಮೆಂಬ ಕನ್ಯಾರತ್ನಂಗಳುಂ ಪುಟ್ಟಿ; ಸಚಿವೋತ್ತಮನುಮುತ್ತಮಜಾತಿಯುಂ, ಸಕಲ ಚಕ್ರವರ್ತಿಯ ಸಭಾಸಂವಾಸಚತುರನುಂ, ಚತು[3]ರುಪಧಾ[3]ವಿಶುದ್ಧನುಮೆನಿಸಿದ ಚಾಳುಕ್ಯಚಕ್ರವರ್ತಿಗೆ ಮಹಾಮಂತ್ರಿಯಪ್ಪ[4]ದ[4]ಲ್ಲಪಂಗೆ, ಪುಟ್ಟಿ ನಿಜಮಹೀಪತಿಯ ಮಹೀಭಾಗಕ್ಕೆ ದಿಗ್ನಾಗನುಂ, ನಾಗರಾಜನುಮೆನಿಸಿದ ನಾಗದೇವನೆಂಬ ಪುರುಷರತ್ನಕ್ಕೆ ರತ್ನತ್ರಯಾಲಂಕೃತೆಯುಂ, ದಾನಚಿಂತಾಮಣಿಯುಂ, ಚಾರಿತ್ರಮೇರುವುಂ, ಗುಣದಂಕಕಾರ್ತಿಯುಂ, ಭವ್ಯಮನೋರಥಜನ್ಮಭೂಮಿಯುಂ, ಕವಿ[5]ವರ[5]ಕಾಮಧೇನುವುಂ, ಜಿನಧರ್ಮಪತಾಕೆಯುಂ, ಮಹಾಸತೀಕುಲತಿಲಕೆಯುಮೆನಿಸಿದತ್ತಿಮಬ್ಬೆಯುಂ, ಪತಿವ್ರತಾಗುಣಮಂಡನಮಂಡಿತೆಯೆನಿಸಿದ ಗುಂಡಮಬ್ಬೆಯುಮೆಂಬ ಕನ್ಯಾರತ್ನದ್ವಯಮಂ ಕೊಟ್ಟನಿಬರುಂ ಸು[6]ಖಮಿ[6]ರೆ; ಮಲ್ಲಪತನೂಜಂ ಗುಂಡನ[7]ತಿಪ್ರಚಂಡ[7]ನಾಗಿ,

ನರನೆನಿಪ ಶೌರ್ಯದಿಂ ಗೋ
ನರನಂ ಪೆಣೆದಿಱಿದು ಗೆಲ್ದು ನಿಜವಿಜಯಯಶಂ
ಪರೆಯೆ ನೆಗೞ್ದಿದನವನೀ
ಧರೆಯೊ[9]ಳ್[9] ಮಲ್ಲಪನ ತನಯನೆಂಬುನ್ನತಿಯಂ ೩೯

ವೀರಾವತಾರನೆನಿಸಿದ
ವೀರಂ ಮಲ್ಲಪನ ತಮ್ಮನುಂ ನಂದನ[10]ರುಂ[10]
ವೀರನಳಿಯಂ ನೆಗೞ್ತೆಯ
ವೀರಾಗ್ರಣಿ ನಾಗದೇವನೊಜಟರ ಮಲ್ಲಂ ೪೦

ಎನೆ ನೆಗೞ್ದ ದಲ್ಲನನಂ
ದನಂಗಮಾ ಕಾಂತೆಯತ್ತಿಮಬ್ಬೆಗಮಾದಂ
ತನಯಂ ಪಡೆವಳ ತೈಲಂ
ವಿನಯಾಲಂಕಾರನೆನಿಸಿದಣ್ಣಿಗದೇವಂ ೪೧

---

1 ಪ್ಯೆ(ಇಉಎ). 2 (ಇಉಎ) ಗಳಲ್ಲಿ ಇಲ್ಲ. 3 ರಪಧಾ(ಇಉಎ). 4 ಪ (ಇಉಎ). 5 ವೃಂದ (ಇ). 6 ಖಿಸಿ(ಅಬ). 7 ಪ್ರತಿಪ (ಇಉಎ). 8 ಪಿ (ಇಉಎ). 9 ಳು (ಇಉಎ). 10 ನುಂ (ಇಉಎ).

ಅಂತು ನಿಜಕುಲತಿಲಕನೆನಿಸಿದ ನನ್ನಿನಾರಾಯಣಂ ತನಗೆ ತನಯನಾಗೆ ನಾಗದೇವನಭಿನವಕಾಮದೇವನುಂ, ಹಯವತ್ಸರಾಜನುಂ, ಸುಭಟಚೂಡಾಮಣಿಯು[1]+ ಮೊಱಟರಮಲ್ಲನುಮಾಹವಮಲ್ಲದೇವಪಾದಪಂಕಜಭ್ರಮರನುಮೆನಿಸಿ,

[2]ಕು[2]ಮರರ ಕಾಳಗದೊಳ್ ಪತಿ
ಯ ಮುಂದೆ ತಱಸಂದು ನಿಂದು ಕಡಿತ್ತಲೆಗೊಂಡ
ನ್ಯಮತಂಗಜಂಗಳಂ ವಿ
ಕ್ರಮಸಿಂಹಂ ದಲ್ಲನಂದನಂ [3]ಪೊಣರ್ದಿ[3]ಱಿದಂ ೪೨

ಜನಪತಿ ಮೆಚ್ಚಿ ತನ್ನಯ ಚಮೂಪತಿ ಮಾಡಿದನಾಪ್ತಮಂತ್ರಿ ದ
ಲ್ಲನ ಮಗನೀತನಂ[4]ತದಟರುಂ[4] ಪತಿಭಕ್ತರುಮಿಾಗಳಾರುಮಿ
ಲ್ಲೆನಿಸಿದ ನಾಗದೇವನಣ್ಣೆ ಮುಟ್ಟೆ ಧುರಂಧರನಾಗದೇವನೆಂ
ಬಿನಮಿಱಿದಿಕ್ಕಿದಂ ಸೆಣಸಿ ಪೊಕ್ಕರನಾಜಿಯೊಳಂಗರಕ್ಕ[5]ಸಂ[5] ೪೩

ಕಳಕುಳವಾಗೆ ಪಂಚಲನ ಬಲ್ಪಡೆ ಪಂಚಲನಶ್ವಸಂಕುಲಂ
ಕಳಕುಳವಾಗೆ ಪಂಚಲನ ದಂತಿಘಟಾವಳಿ ಯುದ್ಧರಂಗದೊಳ್
ಕಳಕುಳಮಾಗೆ ಗಾತ್ರಕರದಂತಿವಿಘಾತದೊಳುಗ್ರದಂತಿಮು
ಕ್ಕಳಕರುವಾಗರಂ ಪರಿದುದುಪ್ಪಟನಿಂ [6]ಸುಭಟ[6]ತ್ರಿಣೇತ್ರನಿಂ ೪೪

ಬಲ್ಲಹನ ಬೆಸದೊಳೊಱಟರ
ಮಲ್ಲಂ ದಲ್ಲನ ತನೂಭವಂ ಕರಹ[7]ಟ[7]ದಿಂ
ಮಲ್ಲಮನಂ ಬೆನ್ನಟ್ಟಿದ
ಬಲ್ಲಾಳ್ತನದಿಂ ನಿಜೇಶನಂ ಮೆಚ್ಚಿಸಿದಂ ೪೫

ಅಂತನೇಕಸಂಗ್ರಾಮರಂಗಲಬ್ಧ ವಿಜಯಲಕ್ಷ್ಮೀ ಸಮಾಗಮದೊಳಮಾಹವಮಲ್ಲದೇವಪ್ರಸಾದಾಸಾದಿತ ಸೈನ್ಯಾಧಿಪತ್ಯ ಸಂಪತ್ಸಮಾಗಮದೊಳಮತ್ಯಂತಕಾಂತಕಾಂತಾಪ್ರಯ ಸಮಾಗಮದೊಳಮುದ್ದಾಮ ಯೌವನ ಲಕ್ಷ್ಮೀಸಮಾಗಮದೊಳಂ ನೆಱೆದು ದೇವಾಂಗನಾಜನಸಮಾಗಮೋತ್ಸುಕಚಿತ್ತ[8]+ನಾಗಿ ನಾಗದೇವಂ ದೇವಲೋಕಕ್ಕೆ ಪೋಗೆ,

ಎರಡೆ ಪಲಂ ಕುಲಪಥಗಾ
ಚರಿಸಲ್ ಪತಿಯಿಂ ಪರೋಕ್ಷದೊಳ್ ಜಿನದೀಕ್ಷಾ

1 ಸುಭಟತ್ರಿಣೇತ್ರನುಂ (ಬ). 2 ಕೊ (ಇಉಎಬ). 3 ಪೆಣೆದಿ (ಬ). 4 ತಿರಿತರರ್ (ಅಇಉಎ). ತಿರಿತರರ್ (ಕ). 5 ರಂ (ಬ). 6 ಕದನ (ಬ). 7 ಡ (ಅಬ). 8 ಕ (ಬ).

ಚರಣಂ ಮೋಣ್ ಶುಭಚರಿತದೆ
ಮರಣಂ ಮೇಣ್ಗಳಿಪಿನಿಂದೆ ಬಾಳ್ವುದು ದೊರೆಯೇ ೪೭

ಎಂದು ಪರಿಚ್ಛೇದಿಸಿ ತಮ್ಮಕ್ಕನತ್ತಿಮಬ್ಬೆಯಲ್ಲಿಗೆ ಗುಂಡಮಬ್ಬೆ ಬಂದು ಬದ್ಧಾಂಜಲಿಯಾಗಿ

ನಿನಗೆ ಮಗಂ ಜಗತ್ತಿಲಕನಿರ್ದಪನಕ್ಕ ಮಗಂ ಸಮರ್ಥನ
ಪ್ಪಿನಮಿರು ನಾಗದೇವನೊಡನಾಂ ಬೆಸ[1]ಕೇಳ್ದ[1]ಪೆನೆಂದು ಬೇಡಿ ಕೊಂ
ಡಿನಿಯನನಪ್ಪಿಕೊಂಡುಚಿತಮಾಗೆ ಚಿತಾಗ್ನಿಯೊಳಂಗ್ರಮ ಸತ್ತ ಸ
ಜ್ಜನಿಕೆಯ ಪೆಂಪು ಸಜ್ಜನಕೆ ಬಣ್ಣಿಸೆ ಸಂದುದು ಗುಂಡಮಬ್ಬೆಯಾ ೪೮

ಅಂತು ಗುಂಡೆಲ್ಲಂ ಪೊಗಟಿ[3] ಗುಂಡಮಬ್ಬೆ ಮಹಾಸತೀಸಮುಚಿತಾ [2]ಚಾರದೊಳಪ್ಪಾಭರಣದೊಳ್[2] ನೆಗಟಿ[3];

ನೆರೆಯ[3]ದೆ[3] ದಲ್ಲಿನಂದನನೊಳ್ಳಾದರದಿಂ ಬಯಸುತ್ತುಮಿ[4]ರ್ಪನ[4]
ಮ್ಮಿರವಕೃತಾರ್ಥಮಾದುದೊಡಸತ್ತು ಪತಿವ್ರತೆ ಗುಂಡಮಬ್ಬೆ [5]ಸೌಂ[5]
ದರಸುಭಟಂಗೆ ಸಗ್ಗದೊಳಮಿಲ್ಲಿ ಮನಃಪ್ರಿಯೆಯಾದಳೆಂದು ಮ
ಚ್ಚರಿಸುವರಿಂದ್ರ[6]ಸೌಂ[6]ದರಿಯರೇಂ ಸೊಬಗೋ ಸುಭಟತ್ರಿಣೇತ್ರಸಾ ೪೯

ಅಂತಿರ್ವರುಂ ಗೀರ್ವಾಣಲೋಕದೊಳೆ ದಂಪತಿಗಳಾಗೆ,

ಪತಿಯೊಡನೆನ್ನ ತಂಗೆ ದಹನಾರ್ಚಿಯೊಳೊಂದೆ ಮುಹೂರ್ತದೊಳ್ [7]ದಿವೋ[7]
ದಿತತನುವಾದಳಾಂ ಪಿರಿಯೆನಪ್ಪುದಱಿಂ ಪಿರಿದಪ್ಪ ದಾರುಣ
ವ್ರತದಹನಾರ್ಚಿಯಿಂದನುದಿನಂ ತನುವಂ ತನುಮಾಡುತಿರ್ಪೆನೆಂ
ಬತನುವಿರೋಧಮುಂ ತನುವಿರೋಧಮುಮೊಪ್ಪುಗುಮತ್ತಿಮಬ್ಬೆಯೊಳ್

ಪತಿವಿಗ್ರಮದೊಳಸಿಧಾರಾ
ವ್ರತಂಗಳಂ ತಾಳ್ದಿ ಧರ್ಮಮಂ ಮಾಡುವ ಸಂ
ತತಿಯಂ ಕಾಯುತೆ ಕಾಯ
ಸ್ಥಿತಿ[8]ಯಂ ತಾ[8]ನತ್ತಿಮಬ್ಬೆ ಮಾಣ್ಬಳೆ ಮಾಣಳ್ ೫೦

ಒಡಲನುಪವಾಸದಿಂ ತ
ನ್ನೊಡಮೆಯನನವರತದಾನದಿಂ ತವಿಸಿ ಜಸಂ

---

1 ವೇಚ್ಚಿ (ಕಬ). 2 ಚರಣಮೂಳಾಮರಮೊಳಂ (ಬ). 3 ದ (ಅಇಉಎಕ). 4 ರ್ಪಮೆ (ಇಉಎ), ರ್ಪಮೆ (ಅಕ). 5 ಸುಂ (ಬ) .6 ಸುಂ (ಇಉಎಬ). 7 ನಿವೇ (ಅಇಉಎಕ). 8 ಯಾಯ್ತಾ (ಅಇಉಎಕ).

ಬಡೆದವಳ್ ನೂರ್ಮಡಿ ತೈಲನ
ಪಡೆವಳ ತೈಲಪನ ಜನನಿಗೆಣೆ ಪೆಱರೊಳರೇ ೫೧

ದಶದಿಗ್ವಳಯದೊಳಮ್ಮಳ್ಳಿನ
ಯಶಮೆಸೆವಿನಮತ್ತಿಮಬ್ಬೆ ಜಿನಧರ್ಮದಯಾ
ವಶವರ್ತಿ[1]ನಿ ದಾನಂ[1] ಪೂ
ಜೆ ಶೀಲಮುಪವಾಸಮೆಂಬಿವಂ ಪ್ರಕಟಿಸಿದಳ್ ೫೨

ಶ್ರಾವಕಧರ್ಮದೊಳ್ ದೊರೆಯೆನಲ್ ಪೆಱರಿಲ್ಲೆನೆ ಸಂದ ರೇವತೀ
ಶ್ರಾವಕಿ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆ ಶೀಲದೊಳ್
ದೇವಕಿ ತಾನೆ ದಾನಗುಣದಿಂದೆ ಸುಲೋಚನೆ ತಾನೆ ಎಂದು ಭ
ವ್ಯಾವಳಿ ಮೆಚ್ಚಿ ಬಣ್ಣಿಪುದು ಭವ್ಯಮನೋರಥಜನ್ಮಭೂಮಿ[2]ಯಂ[2] ೫೩

ಬುಧಜನವಂದಿತೆ ಧರ್ಮ
ಪ್ರಧಾನ ದರ್ಶನವಿಶುದ್ಧೆ ದಾನಗುಣೈಕಾಂ
ಬುಧಿಯೆನಿಸಿದ ಕವಿವರಕಾ
ಮಧೇನುವೆಂದೆಂಬುದತ್ತಿಮಬ್ಬೆಯನೆ ಜಗಂ ೫೪

ಜಿನಪದಭಕ್ತೆ ಜಗತ್ರಯ
ಜನವಂದಿತೆ ಚಕ್ರವರ್ತಿಪೂಜಿತೆ ಜಿನಶಾ
ಸನರುಚಿ ಪಡೆವಳ ತೈಲನ
ಜನನಿಯೆ ತೀರ್ಥಕರಜನನಿಯೆನ್ನದರೊಳರೇ ೫೫

ಮನದೊಳ್ ತಾಳ್ದುವಳೀ ಸತಿ
ಜಿನನಂ ಜಿನಜನನಿ ಗರ್ಭದೊಳ್ ತಾಳ್ದುವಳೆಂ
ಬಿನಿತೆ ವಿಕಲ್ಪಂ ತೈಲನ
ಜನನಿಗೆ ಜಿನಜನನಿಗೇಂ ವಿಕಲ್ಪಮುಮುಂಟೇ ೫೬

ಆಸನ್ನಭವ್ಯೆಯುಂ ಜಿನ
ಶಾಸನದೀಪಿಕೆಯುಮೆನಿಸಿ ಮಣಿಕನಕಮ[3]ಯೋ[3]
ದ್ಭಾಸಿ ಜಿನಪ್ರ[4]ತಿ[4]ಮೆಗಳಂ
ಸಾಸಿರದಪ್ಪುಜ್ಜಜಿನಕೀ[5]ರ್ತಿಯಿಂ[5] ಮಾಡಿಸಿದಳ್ ೫೭

---

1 ವರ್ತಿ ಪಾವನ (ಇಉಎ). ಯು ದಾನ (ಅಕ). 2 ಮಾ (ಇಉಎ). 3 ಹೋ (ಇಉಎ). 4 ತು (ಅಇಉಎ). 5 ಟ್ಟು ಯಿಂ (ಕಬ).

ಸ್ಫುರಿತೋದ್ಯನ್ಮಣಿಘಂಟಿಗಳ್ ಮಣಿವಿತಾನಶ್ರೇಣಿಗಳ್ ಸ್ವರ್ಣಭಾ
ಸುರದೀಪಂಗಳ ಮಾಲೆ ದಿವ್ಯವಸನಪ್ರಾರಬ್ಧ ಶುಂಭಧ್ವಜೋ
ತ್ಕರಮುದ್ಭಾಸಿತರತ್ನತೋರಣಗಣಂ ಮಾಡಿರ್ದುವೊಂದೊಂದು ಸಾ
ಸಿರದಯ್ನೂಱ[1]ನೆಯ[1]ತ್ತಿಮಬ್ಬೆಗೆಣೆಯೆಲ್ಲೀ ಕಾಲದೊಳ್ ದಾನಿಗಳ್ ೫೮

ಸಮಯಕ್ಕೆ ಪಂಚಶತ[2]ವ[2]ಧಿ
ಕಮಾಗೆ ಸಮಯಿಸಿ ಸಹಸ್ರಕೂಟಸಹಸ್ರಾ
ಪ್ರಮುಮಂ ಸಮಯಿಸಲಾರ್ಗಂ
ಸಮಯಿಸಿದಳ್ ಸಮನೆ ದಾನಚಿಂತಾಮಣಿಯೊಳ್ ೫೯

ಉನ್ನತಕುಕ್ಕುಟೇಶ್ವರಜಿನೇಶ್ವರನಂ ಜಿನಭಕ್ತೆ ಪೋಗಿ ಕಾ
ಣ್ಬನ್ನೆಗಮನ್ನಮಂ ಬಿಸುಟು ಪರ್ವತಮಂ ಪರಿದೇಱಿ ತಜ್ಜಿನಾ
ಸನ್ನದೊಳತ್ತಿಮಬ್ಬೆಗೆ ಪಥಶ್ರಮಮಾ[3]ದುದ[3]ಕಾಲವೃಷ್ಟಿಯಾ
ಯ್ತನ್ನ[4]ದೊ[4] ದೇವಭಕ್ತಿಗದು ಚೋದ್ಯಮೆ ಕೊಳ್ಳವೆ ಪುಷ್ಪವೃಷ್ಟಿಗಳ್ ೬೦

ಗುಣಿಗಳು*ಮಂ ನೆಗೞ್ದೊಳ್ಪಿನ
ಕಣಿಗಳುಮಂ ಕಾಣಲಪ್ಪುದದಱಿಂದವಸ
ರ್ಪಿಣಿಯಲ್ತು ಕಾಲಮುತ್ಸ
ರ್ಪಿಣಿಯೆಂಬಂತಾಯ್ತು ದಾನಚಿಂತಾಮಣಿಯಿಂ ೬೧

ಈ ಮಹಿಗೆಲ್ಲಮುಗ್ಗಳದ ದಾನಿಯನಗ್ರಣಿಮಾಡಿ ದಾನಚಿಂ
ತಾಮಣಿಯಂ ನೆಗೞ್ತೆವಡೆದೊಪ್ಪ[5]ಮೆ[5] ಸಾಲ್ಗುಮದರ್ಕೆ ಮುನ್ನ ಚಿಂ
ತಾಮಣಿ ಕಾಮಧೇನು ಸುರಭೂರುಹಮೆಂಬಿವನೇಕೆ ಮಾಡಿದಂ
ತಾಮರಸೋದ್ಭವಂ ಜಡಜಜಂ[6]ಗೆ[6] ವಿವೇಕಮದೆಲ್ಲಿ ಬಂದುದೋ ೬೨

ಫಳಲತಿಕೆ ಕಲ್ಪಲತಿಕೆಯ
ನ್ನಿಱಿಸಿ ಸವತ್ಸಮರೇಂದ್ರಧೇನುವ ಗುಣಮಂ
ತಳೆ[7]ದಿ[7]ಳೆಯೊಳ್ ನೆಗೞ್ದುದು ಪೆ[8]ಡ[8]
ವಳ ತೈಲನ ಜನನಿಯತ್ತಿಮಬ್ಬೆಯ ದಾನಂ ೬೩

ಪಡೆದೆ[9]ಱ[9]ದರ್ಥಿಜನಕ್ಕಿ
ತ್ತುದೆ ಧನಮಿನ್ನಾಯದುದೆ ಕೆಟ್ಟುದೆಂದರ್ಥಮನೀ

---

1 ನಿಪ (ಬ). 2 ಮ (ಅಇಉಎಬ). 3 ಜಲ (ಕಬ). 4 ದ (ಇಉಎ). 5 ದೆ (ಅಇಉಎಬ). 6 ಗ (ಕ). 7 ದೆ (ಇಉಎ). 8 ಡೆ (ಕಬ). 9 ಱ (ಅಇಉಎ).

ವುದಱಿಂ "ತನ್ನಿಷ್ಟಂ ಯು
ನ್ನದೀಯತ್ರೇ" ಎನಿಪುದತ್ತಿಮಬ್ಬೆಯ ದಾನಂ ೬೪

ಕಲಿಯೆನೆ ನೆಗಱ್ದ* ಳ್ ಕಸವರ
ಗಲಿಯೆನೆ ಗುಣದಂಕಕಾರ್ತಿ ವೊ[1]ನೆ[1]ಯೊಳ್ ಮನೆಯೊಳ್
ವೊಲೆವೊತ್ತ ತೈಲಜನನಿಯ
ಕೆಲದೊಳ್ ರಂಜಿಪರೆ ಮಾಸೆವೊತ್ತಣ್ಣಂಗಳ್ ೬೫

ಅಸಿಲತೆಯೆಂದು ಬಣ್ಣಿಪುದು ಧರ್ಮವಿರೋಧಿಜನಕ್ಕೆ ಧರ್ಮದಿಂ
ದೆಸೆಪ ಜನಕ್ಕೆ ಕಲ್ಪಲತೆಯೆಂ[2]ದೆ[2]ಳೆ ಬಣ್ಣಿಪುದೆಂಬ ತನ್ನ ಪೆಂ
ಪೆಸೆಯೆ ಜಗಜ್ಜನಂ ಪೊಗೞೆ[3] ಸಂದ ಮಹಾಸತಿಯಂ ತಗುಳ್ದು ಬ
ಣ್ಣಿಸುವುದು ಪುಣ್ಯಮಲ್ತೆ ಜಿನಧರ್ಮಪತಾಕೆಯನತ್ತಿಮಬ್ಬೆಯಂ ೬೬

ಸಂದೆಯಮಾವುದೊ ಮಾಡುವೆ
ನೆಂದೊಡೆ ಮಾಡಿದೊಡೆ ಕುಡುವೆನೆಂದೊಡೆ ಪೆಱತೇ
ನಂದೊಡಮೆ ಗೊಟ್ಟಳಾ ನುಡಿ
ದಂದದೊಳೆನೆ ಪೊಗೞೆ ದಾನಚಿಂತಾಮಣಿಯಂ ೬೭

ಜಿನಪದ ಪಂಕಜ ಭ್ರಮರನೆಂಬ ನೆಗೞ್ತೆಯನಾಂತ ಮಲ್ಲಪ
ಯ್ಯನ ನೆಗೞ್ದಪ್ಪಕಬ್ಬೆಯ ಮಗಳ್ ಸಚಿವೋತ್ತಮನಪ್ಪ ದಲ್ಲಪ
ಯ್ಯನ ಸೊಸೆ ನಾಗದೇವನ ಕುಲಾಂಗನೆ ತೈಲನ ತಾಯ್ ಜಸಕ್ಕೆ ಭಾ
ಜನಮೆನಿಪತ್ತಿಮಬ್ಬೆ ಜಿನಶಾಸನಮಂ ಬೆಳಗುತ್ತಮಿರ್ದಪಳ್ ೬೮

ಶ್ರೀಜಿನಧರ್ಮವಿಭೂತಿ ವಿ
ರಾಜಿತೆಯಂ ಚಕ್ರವರ್ತಿಪೂಜಿತೆಯಂ ಭ
ವ್ಯಾಜಿ[3]ರಕ[3]ಲ್ಪಲತಾವಿ
ಭ್ರಾಜಿತೆಯಿಂ ಪೊಗ[4]ೞೆ[4] ದಾನಚಿಂತಾಮಣಿಯಂ ೬೯

ಉತ್ತಮಗೋತ್ರೋದ್ಭವೆ ಸ
ದ್ವೃತ್ತೆ ಮಹಾಸತಿ ವಿನೇಯಚೂಡಾಮಣಿ ತಾ
ನೆತ್ತಂ ಬಿಪದೆತ್ತ ಪಿರ್ಕ್ಕು ವೊ
ಡತ್ತಿಯ ಪೆಣ್ಣತ್ತಿಮಬ್ಬೆಯಲ್ಲದರ ಗುಣಂ ೭೦

---

1 ಳೆ (ಇಉಎ). 2 ದಿ (ಆಇಉಎಕ). 3 ಕರ (ಇಉಎ). 4 ೞ್ಗೆ (ಇಉಎ).

ಸತಿಯರೊಳಗಗ್ಗಳದವನೀ
ಸುತೆ ಸೀತೆ ಪುಲೋಮಸುತೆ ಶಚೀದೇವಿ ಕುಭೃ
ತ್ಸುತೆ ಗಂಗೆ ದಕ್ಷಸುತೆ ಭವ
ಸತಿಯರ್ ಸಮ[1]ನ[1] [2]ಪ್ಪ[2]ಡಕ್ಕೆ ಮಲ್ಲಪಸುತೆಯೊಳ್ ೭೧

ಅಂಗನೆಯರೊಳಗೆ ಶೀಲಗು
ಣಂಗಳನೊಳಕೊಂಡು ನೆಗಟ್ದ ರಾಮಾಂಗನೆ ಕಾ
ಮಾಂಗನೆ ಪಂಕೇರುಹನಾ
ಭಾಂಗನೆ ಸಮ[3]ನ[3]ಕ್ಕೆ ನಾಗದೇವಾಂಗನೆಯೊಳ್ ೭೨

ನಂಬುಗೆ ಜಿನಮತದಲ್ಲಿ ಮ
ನಂಬುಗೆ ದರ್ಶನವಿಶುದ್ಧಿ[4]ಯಿ[4]ನೆ ನೆಗಟ್ದ ಜಯಂ
ತಾಂಬಿಕೆ ಸಲೆ ನೆಗಟ್ದ ಜಿತಜಿ
ನಾಂಬಿಕೆ ಸಮನಪ್ಪೊಡಕ್ಕೆ ತೈಲಾಂಬಿಕೆಯೊಳ್ ೭೩

ಶೀಲಾಲಂಕೃತೆಯಂ ಗುಣ
ಮಾಲಾಲಂಕೃತೆಯನಾ ಮಹಾಸತಿಯಂ ಶ್ರೀ
ತೈಲಾಂಬಿಕೆಯಂ ಪೆಸರ್ಗೊಳೆ
ಬಾಲೆಯರಂ ಖಳಕಲಂಕಮೇಂ ಪೊರ್ದುಗುಮೇ ೭೪

ಅಳುರದು ಕಿರ್ಚು ಮುಟ್ಟದು ವಿಷಾಹಿ ಮಹಾಸತಿಯಿರ್ದ ಮಂಡಲಂ
ಬೆಳೆವುದು ಬೇಡಿದಂತೆ ಮ[5]ಟ[5]ಕೊಳ್ವುದೆನಿಪ್ಪ ಜಸಕ್ಕೆ ನೋಂತ ಭೂ
ತಿಲಕಪವಿತ್ರೆಯಂ ಗುಣಪವಿತ್ರೆಯನಾ ಸತಿಯಂ ಮಹಾಸತೀ
ತಿಲಕೆಯನತ್ತಿಮಬ್ಬರಸಿಯಂ ಪೆಸರ್ಗೊಳ್ವುದು ಪುಣ್ಯಕಾರಣಂ ೭೫

ಅದು ಕಾರಣದಿಂ

ಭ್ರಾಂತೇನಾದಿಪುರಾಣದ
ಶಾಂತಿಪುರಾಣದ ಸಮಾನಮೆನೆ ಕೃತಿಯಂ ಕ
ಲ್ಪಾಂತಸ್ಥಾಯಿಯನಾಶ್ರಿತ
ಚಿಂತಾಮಣಿಗತ್ತಿಮಬ್ಬೆ ಗ[6]ರ್ತಿ[6]ಯ ಪೇಟ್ಪಿಂ ೭೬

---

1 ವ (ಇಉಎ). 2 ಪ್ಪೊ (ಕಬ). 3 ಮ (ಇಉಎ). 4 ಯೆ (ಅಇಉಎಕ). 5 ಱ (ಕ). 6 ಟ್ (ಕಬ).

ಪೊನ್ನಿಗ[1][ನಿಂ][1] ಮಲ್ಲಪನುಂ
ಪೊನ್ನನುಮ[2]ರ್ತಿ[2]ಯೆ ಪುರಾಣ ಚೂಡಾಮಣಿಯಂ
ಮುನ್ನಂ ಪೇೞಿಸಿದಂತೆ ಗು
ಣೋನ್ನತಕವಿರತ್ನನಿಂದಿದಂ ಪೇೞಿಸಿದಳ್ ೭೭

ಎನಿತುಂಟಾಗಮವರ್ಣನ
ಮನಿತುಮನೊಳಕೊಂಡು ಸಕಲಭವ್ಯಜನಂಗ
ಳ್ಗನುರಾಗಮನೊಡರಿಸಿದಪು
ದೆನಿಪ ಪುರಾಣಂ ಪುರಾಣತಿಲಕಮಿದಲ್ತೇ ೭೮

ಜಿನತಿಲಕಚರಿತಮೆಸೆದಿರೆ
ಜಿನೇಂದ್ರನುತಿಮತಿ ಮಹಾಸತೀತಿಲಕಂ ಪೆಂ
ಪಿನ ಕಣಿ ಪೇೞಿಸೆ ಪೇ[3]ಬ್ಬಿಂ[3]
ಮನವೊಸೆದು ಪುರಾಣತಿಲಕಮಂ ಕವಿತಿಲಕಂ ೭೯

ಕವಿಮುಖ[4]ಚಂದ್ರಂ[4] ಕವಿಚ
ಕ್ರವರ್ತಿ ಕವಿರಾಜಶೇಖರಂ ಕವಿರಾಜಂ
ಕವಿಜನಚೂಡಾರತ್ನಂ
ಕವಿತಿಲಕಂ ಕವಿಚತುರ್ಮುಖಂ ಕವಿರತ್ನಂ ೮೦

ಕೊಂಡಾಟದ ಸಾಮಂತರ
ಮಂಡಳಿಕರ ಸಕ[5]ಲ[5]ಚಕ್ರವರ್ತಿಗಳ ಸಭಾ
ಮಂಡಲದೊಳುಭಯಕವಿಮುಖ
ಮಂಡನನಾಗಿರ್ಪ ರತ್ನಮಾ ಕವಿರತ್ನಂ ೮೧

ಕವಿಮಾರ್ಗಮೋ[6]ಳೋ[6]ಖ್ಯಾಣಿಪ
ಠವಣಿಪ ಕಮ್ಮೈಸುವೆಡೆಯೊಳಖ್ಯಾಣಿಸಲುಂ
ಠವಣಿಸಲುಂ ಕಮ್ಮೈಸಲು
ಮವನಂತಾರ್ ಬಲ್ಲರೆನಿಸಿದಂ ಕವಿರತ್ನಂ ೮೨

ವಸುಧೆಯೊಳಗೊಂದು ರತ್ನಮಿ
ದೆಸೆದಿರ್ದುದು ಪಲವು ರತ್ನಮಿಲ್ಲೆಂಬಿನಮೇಂ

1 ನುಂ (ಅಇಉಎಕ). 2 ಚಿತ್ರ(ಕಬ). 3 ಟ್ಟಿಂ (ಇಉ). 4 ಮುಖ್ಯಂ(ಬ). 5 ಳ (ಇಉಎಕ). 6 ಳ (ಇಉಎಬ).

ಮಸುಳಿಸಿದನೊ "ಬಹುರತ್ನಾ
ವಸುಂಧರಾ "ಯೆಂಬ ವಾಕ್ಯಮಂ ಕವಿರತ್ನಂ ೮೩

ಅವನಿಪರೊಳ್ ನಿಜಭುಜಚ
ಕ್ರವರ್ತಿ ರಣಜಯಕೆ ತೈಲನೆಂತಸಹಾಯಂ
ಕವಿಗಳೊಳಮಂತೆ ಕವಿಚ
ಕ್ರವರ್ತಿ ಕವಿರನ್ನನಂತು ಕೃತಿಗಸಹಾಯಂ ೮೪

ಮತಿಕೋಶಂ ಪದವಿದ್ಯೆ ಕಂಠಿಕೆ ಜಸಂ ಶ್ವೇತಾತಪತ್ರಂ ಸರ
ಸ್ವತಿ ಮಾದೇವಿ ಪದೋಕ್ತಿ ಭೇರಿಕಳಿತಂ ಸಿಂಹಾಸನಂ ಸಂದಲಂ
ಕೃತಿ ಚಂಚಚ್ಚಮರೀಜಮಾಗೆ ಕವಿತಾಸಾಮ್ರಾಜ್ಯಮಂ ತಾಳ್ದಿದು
ನ್ನತಿಯಿಂದಂ ಕವಿಚಕ್ರವರ್ತಿವೆಸರೇಂ ರ[1]ನ್ನಂ[1]ಗೆ ಮೆಯ್ವೆತ್ತುದೋ ೮೫

ಕವಿಮಾರ್ಗದೊಳೊಳ್[2]ಪ್ಪೊ[2]ಕ್ಕಂ
ನವರಸಮಂ ತೆಱಿಯೆ ನುಡಿದನೆನಿಸಿದ ಕವಿ ಸ
ತ್ತ್ರವಿಯೆನಿಕುಂ ಗೂಡಾರ
ಕವಿಯೆಂತಿರೆ ಮುಚ್ಚಿ ಪೋ[3]ದ[3] ಕವಿಯುಂ ಕವಿಯೇ ೮೬

ಕಾರಕಪೂರಕವಸ್ತುವಿ
ಚಾರಕ[4]ನಿ[4]ಸ್ತಾರಕರ್ಕಳೋಳಿಯೆ ಸಭೆಗೊ
ಟ್ಟೋರಂತೆ ನಾಲ್ವರಿರ್ದುಂ ವಿ
ಚಾರಂಬೇಟ್ಪಂತೆ ಪೇಟಿ ಕೃತಿಯುಂ ಕೃತಿಯೇ ೮೭

ವರಪುರಮುಮಂಟಿಸ್ಣುಂಟೆಯು
ಮುರಿವೊರಕನುಮೆನಿಸಿ ತಜಿತಱಿಂ ನುಡಿದು ಸಭಾಂ
ತರದೊಳ್ ರಂಜಿಪುದೆ ರಸಾಂ
ತರಂಗಳಂ ಮುಟ್ಟೆ ನುಡಿದು ರಂಜಿಸವೇಡಾ ೮೮

ಸರಸತಿಯನೆಬಲೆಯುಂ ಗೋ
ಣ್ಮುರಿಗೊಂಡರ್ಥಕ್ಕೆ ಕುದಿದು ನೋಯಿಸುವವನ
ಕ್ಕರಗನೆ ಪಾತಕನಾತನೆ
ಸರಸ್ವತೀದ್ರೋಹನವನನಾರ್ ಮುಟ್ಟುವರೋ ೮೯

---

1 ತ್ನ (ಬ). 2 ನೊ (ಬ). 3 ಪ (ಬ). 4 ವಿ (ಬ).

ಪೊಸದೇಸೆಯಂ ಬೆಡಂಗಂ
ರಸ[1]ಘ[1]ಟ್ಟೆಯನರ್ಥದೃಷ್ಟಿಯಂ ಬಗೆವರೊ ಭಾ
ವಿಸುವರೊ ಸಾರ[2]ಣೆ[2]ಯಂತಿರೆ
ಕಸಮಂ ಪಿಡಿವರ್ ಕೆಲರ್ ಮಹಾಪುರುಷರ್ಕಳ್ ೯೦

ಗುಣಮುಂ ಕಾಯದೆ ಕಾವರೇ [3]ಪಣಮುಮಂ[3] ಕಲ್ಪಾಂತರಸ್ಥಾಯಿಯೇ
ಗುಣವಂತಾ ಪಣಮನ್ಯರಿಂದರಸರಿಂ ದಾಯಾದರಿಂ ಕಳ್ಳರಿಂ
ಪಣಮೆಂತುಂ ಕಿಡಲಿರ್ಪುದುಳ್ಳ ಗುಣಕೇಂ ಕೇಡುಂಟೆ ಕಾವ್ಯಂಗಳೊಳ್
ಗುಣಮಂ ಬೈಯ್ತಿಡವೇಡ ನಿಲ್ವೊಡೆ ಗುಣಂ ನಿಲ್ಕುಂ ಪಣಂ ನಿಲ್ಕುಮೇ ೯೧

ಶೃಂಗಾರನದಿಯನೆಳವೆಱಿ
ಮೂಂಗಾಯನೆ ಮಱಿಸಿ ಪೇೞವೇೞ್ಪುದೆ ರಸಭಾ
ವಂಗಳನಾಗಮಮುಮಂ ಕಾ
ವ್ಯಾಂಗ[4]ಮೆ[4] ಬಹುಯುದ್ಧರೋ[5]ಮುಕರ್ಕಶ[5]ವಚನಂ ೯೨

ಜಿತಕಂದರ್ಪಮೆನಿಪ್ಪ ಶಾಂತರಸಮೆತ್ತುದ್ದಾಮಶೃಂಗಾರಮೆ
ತ್ತತಿಗಂಭೀರಜಿನೋಕ್ತಿಯೆತ್ತ ಸಕಲಂ ಲೋಕೋಕ್ತಿಯೆತ್ತಾಗಮಾ
ಮೃತಮೆತ್ತನ್ಯಮತಪ್ರಚಂಡವಿಷಮೆತ್ತೆಂಬಂತು ಕಂಕೇನ ಸಂ
ಗತಮೆಂಬಂತಿರೆ ಪೇೞ್ದು ಧರ್ಮಕಥೆಯಂ ಪಾಪಕ್ಕೆ ಪಕ್ಕಪ್ಪುದೇ ೯೩

ನೆಗೞ್ದ ಕವಿರತ್ನನಂತೊಳ್
[6]ಪು[6]ಗುವುದು ಮೊಗ್ಗಾಯ್ತೆ ಜಿನಮ[7]ತಾಂ[7]ಬೋಧಿಯುಮಂ
ಪುಗದಾಗಮಮುೞಿವರ ಬಗೆ
ಪುಗದೆ ಕೆಲರ್ ಕವಿಗ[8]ಳ್[8]ಡಿದರ್ ತಡಿ[9]ತ[9]ಡಿ[10]ಯೊ[10]ಳ್ ೯೪

ಸುರಲೋಕಾವತರೋತ್ಸವಂ ಪರಿಕೃತಂ ಜನ್ಮಾಭಿಷೇಕೋತ್ಸವಂ
ಪರಿನಿಷ್ಕ್ರಾಂತಿಮಹೋತ್ಸವಂ ಪ್ರವಿಮಲಂ ಕೈವಲ್ಯಬೋಧೋತ್ಸವಂ
ಪರನಿರ್ವಾಣಮಹೋತ್ಸವಂ ಜಿನಕಲ್ಯಾಣಮುಯ್ದುಂ ಸವಿ
ಸ್ತರದಿಂದಿರ್ಪುವು ವ[11]ರ್ಣ[11]ಕಂಗಳವಱಿಂ ಭವ್ಯಾಂಗಮೇನೊಪ್ಪದೇ ೯೫

---

1 ಘ್ಯ (ಬ). 2 ಜೆ (ಬ). 3 ಕೆಪಣಮಂ (ಬ). 4 ಮ (ಇಉಬ). 5 ಷ ಕಂಟಕ (ಬ). 6 ಪ್ರ (ಬ). 7 ಪಾ (ಬ). 8 ಳೋ (ಬ). 9 ಪ (ಅಕಬ). 10 ಯಂ (ಬ). 11 ರ್ಣ (ಕಬ).

ಪೆಸರ್ಗೊಂಡ[1]ತ್ರಿರ್[1]ಯೊಳತ್ತಿಮಬ್ಬೆಯ ಗುಣವ್ರಾತಂಗಳಂ ಕೇಳ್ದ ಭ
ವ್ಯಸಮೂಹಂ ಪೊಗಟ್ಬಿಂತು ಕೀರ್ತಿ ನೆಗಟ್ಬಿಂತೀ ಲೋಕದೊಳ್ ಬಲ್ಮೆರಂ
ಜಿಸೆ ಬಲ್ಲರ್ಗೆಡೆಗೊಂಡು ಬಣ್ಣಿಸೆ ಮಹಾಕಾವ್ಯಂಗಳೊಳ್ ಮೆ[2]ಚ್ಚೆ[2]ಬ
ಣ್ಣಿಸುವೆಂ ಪುಣ್ಯಪುರಾಣಮಂ ಜಿತಮನೋಜಾತಾಜಿತಸ್ವಾಮಿಯಾ ೯೬

ಇದು ಸಕಲ ಮುನೀಂದ್ರ ವೃಂದ ವೃಂದಾರಕ ಶ್ರೀಮದಜಿತಸೇನ ಭಟ್ಟಾರಕ

ಶ್ರೀಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ

ಶ್ರೀಮದಭಿನವಕವಿಚಕ್ರವರ್ತಿ

ಕವಿರತ್ನ ನಿರ್ಮಿತ

ಶ್ರೀ ದಾನಚಿಂತಾಮಣಿ ನಿರ್ಮಾಪಿತ

ಶ್ರೀಮದಜಿತತೀರ್ಥಕರ ಪುರಾಣತಿಲಕದೊಳ್

—ಕಥಾಪರಿವರ್ಣನಂ ಪ್ರಥಮಾಶ್ವಾಸಂ—

---

1 ಜ್ರಿ (ಕಬ). 2 ಚ್ಚಿ (ಕಬ)

ದ್ವಿತೀಯಾಶ್ವಾಸಂ

ಶ್ರೀಮದಮರೇಂದ್ರರುಂದ್ರಶಿ
ಖಾಮಣಿಮಾಲಾರ್ಚಿತಾಂಘ್ರಿ ಭುವನತ್ರಯಚೂ
ಡಾಮಣಿಯೆನೆ ನೆಗೞ್ದಜಿತ
ಸ್ವಾಮಿಯ ಜಿನಪತಿಯ ಚರಿತಮುಪಗತದುರಿತಂ ೧

ಅದೆಂತೆಂದೊಡೆ—ಅಖಿಲಜಲಚರಕುಲಕರಬಧಿರಕೋಳಾಹಳಸಮುಚ್ಚಲಿತ ಪ್ರಬಲರೌದ್ರ ಲವಣಸಮುದ್ರಮಧ್ಯಸ್ಥಿತ ಜಂಬೂದ್ರುಮೋಪಲಕ್ಷಿತಜಂಬೂದ್ವೀಪ ಮಧ್ಯವರ್ತಿಯುಂ, ಸಕಲಕುಲಾಚಲಚಕ್ರವರ್ತಿಯುಂ, ನಿಖಿಳಶೈಲಕುಲಚಕ್ರವಾಳ ಚೂಡಾಮಣಿಯುಮೆನಿಸಿ,

ಎರಡುಂ ವಿದೇಹವಿಷಯದ
ಭರತೈರಾವತದ ನಟ್ಟನಡುವಿರ್ದುದು [1]ಸೌಂ[1]
ದರಮಂದರಾಚಲಂ ಕಂ
ದರೋದರಂ ಕಿನ್ನರಾಮರಸ್ತ್ರೀರಮ್ಯಂ ೨

ವನಧಿದ್ವೀಪಕುಲಾದ್ರಿಮುದ್ರಿತಜಗಚ್ಚಕ್ರಂ ಯುಗಾಂತಪ್ರಭಂ
ಜನನೀರಾವತಚಕ್ರದಂತೆ ತಿರಿವಂತಾಳ್ದುಂ ನಿರಾಳಂಬಮಾ
ಬನವಾಸಂ ರಸೆಗೆಂಬ ಶಂಕೆಯೊಳೆ ದೇವೇಂದ್ರಾಲಯಂಗಳ್ಗೆ ದೇ
ವನಗಂ ಸ್ರೋಲ್ವುದು ಪದ್ಮಗರ್ಭನ ಕಿರೀಟಸ್ತಂಭಮಂ ಸ್ತಂಭಮುಂ ೩

ಕ್ರಮದಿಂದಂ ಬಂದು ಪರಿ
ಭ್ರಮಣಂಗೆ[2]ಯ್ದು[2]ಲ್ಲಿ ಮಂದರಾದ್ರಿಗೆ ರತ್ನೋ
ತ್ತಮಕುಂಡಲಯುಗಮೆನೆ ಪೌ
ರ್ಣಮಿಯಂದಿನ ಚಂದ್ರಸೂರ್ಯಮಂಡಲಮೆಸೆಗುಂ ೪

---

1 ಸೌಂ (ಬ). 2 ಯ್ದು (ಇಉಎ).

ಮೇರುನೃಪಂಗೆ ನಭಃಶ್ರೀ
ನೀರಾಜನವಿಧಿಯನೊಸೆದು ಮಾೞ್ಪಂತೆಸೆದ,
ತ್ತಾರಾತ್ರಿಕದೀಪದವೊಲ
ಹೋರಾತ್ರಂ ಬಳಸಿ ಬರ್ಪ ತಾರಾಚಕ್ರಂ ೫

ನಾಭೇಯಜಿನಮಹಾಜ
ನ್ಮಾಭಿಷವಕ್ಷೀರವಾರಿಧಾರಾಪ್ರಸರಂ
ಶೋಭಿಪ ನಿಜಕೀರ್ತಿಪತಾ
ಕಾಭಾ[1]ವ[1]ದಿನೆಸೆದುದಂದು ಮಂದರಶೈಲಂ ೬

ಆ ಮಂದರದ ದಕ್ಷಿಣಕ್ಷೋಣೀತಳದ ಭರತಕ್ಷೇತ್ರದ ಮಧ್ಯವರ್ತಿಯಾಗಿ

ನೆಗೞ್ದಿಕ್ಷ್ವಾಕುಕುಲಪ್ರಸೂತಸಕಲಕ್ಷ್ಮಾಪಾಲಭೂಪಾಲಲ
ಕ್ಷ್ಮಿಗಧಿಷ್ಠಾನಮುಮಾದಿತೀರ್ಥಕರಜನ್ಮಸ್ಥಾನಮುಂ ಚಕ್ರವ
ರ್ತಿಗೆ ನಾಭೇಯತನೂಭವಂಗೆ ಭರತಂಗೇಕಾತಪತ್ರಪ್ರಭಾ
ಸ್ಫುರಿತಾಸ್ಥಾನಮುಮೆಂಬ [2]ಪೆಂಪನೊಳಕೊಂಡಿರ್ದತ್ತಯೋಧ್ಯಾಪುರಂ[2] ೭

ಉತ್ಸಾಹ ರಗಳೆ

ಅದಱ ಬಳಸಿದುಪವನಂಗ ಳುದಿತಕೋಕಿಲಸ್ವನಂಗ
ಳೆಸೆವಶೋಕಚೂತವನದ ಮಿಸುಪ ವಕುಳತಿಲಕವನದ
ನಾಗ[3]ನ[3]ಕ್ತಮಾಲವನದ ಪೂಗವನ ತಮಾಲವನದ
ಲೀಲೆ ಕರಮೆ ಕಣ್ಗೆವ[4]ಕ್ಕುರ್[4] ಮೋಳಿವಟ್ಟು ಸೊಗಯಿಸಿ[5]ರ್ಕುರ್[5]
ಮಲೆವ ಮಲೆಯ ಪವನನಿಂದಮಲುಪ ಸೆಳ್ಳೆಗೊಂಬಿನಿಂದ
ಮುದಿರ್ದ ಕುಸುಮರಜದ ಧೂಳಿ ಪುದಿದುಮೋದುವರಶುಕಾಳಿ
ಪಾಡುತಿರ್ಪ ತುಂಬಿಯಿಂದಮಾಡುತಿರ್ಪ ಸೋಗೆಯಿಂದ
ಮೊಸೆಯೆ ಪುೞಿಲ ನೆೞಲ ತಾಣ[6]ಮಿ[6]ಸೆ ಕಡಂಗಿ ಕುಸುಮಬಾಣ
ನೆಳೆಯ ಲತೆಯ ಕಾವಣಂಗಳೊಳಗೆ ಕಾಮಿನೀಗಣಂಗ
[7]ಳಳಿಪಿ[7] ಪೊಕ್ಕು ನೀತಿ ಪೆರ್ಚೆ ಕ[8]ಳಿ[8]ಯೆ ಮದನಬಾಣಮುರ್ಚೆ
ನ್ಮೃದುಮೃಣಾಳಲೋಲಲೀಲೆ ವಿದಳದಬ್ಜ ಕುಸುಮಮಾಲೆ

1 ಸ (ಇಉಎ). 2 ಪೆರ್ಸರನಾಂತಿರ್ದತ್ತಯೋಧ್ಯಾಪುಂ (ಇಉಎ). 3 ರ (ಬ).
4 ಕ್ಕ (ಇಎ). 5 ಕ್ಕ (ಇಎ). 6 ಪಿ (ಇಉಎ). 7 ಳೆಳಸಿ (ಉಎ). 8 ಳೆ (ಕ).

ತಾರಹಾರಭಾರದಿಂಬು ಸಾರಚಂದನದ್ರುಮಾಂಬು
ಬೀಸುತಿರ್ಪ ತಾಳವೃಂತ ಮಾಸೆಯಾಗದಿರ ನಿತಾಂತ
ಮಾಸೆಮಾಡಲಾಱವೆಂದು ಬೇಸಱಿೞೊ[1]ದವೆ[1] ಮನದೆ ನಿಂದು
ನಿಂದ ಬಿರಯಿಗದವಳಲ್ ಕುಂದದೆನಿಪ ಪೊಱವೊೞಲ್ ೮

ಹರಿತಾಳದೊಳ್ ನಖಾಗ್ರದೆ
ಬರೆದ ನಿಜಾವಸ್ಥೆಯಂ ನಿವೇದಿಸೆ ಬನದಿಂ
ದರಗಿಳಿ ತಳರ್ವುವು ದೇಶಾಂ
ತರಕ್ಕೆ ಸಂದೇಶಹರರವೋಲ್ ಬಿರಯಿಗಳಾ ೯

ಅಡೆವೊತ್ತಿ[2]ನ[2] ತಳಿರ್ವಾಸಿನ
ಪಿಡಿದಿರ್ದಂಬುಜದ ನಡುವೆ ಮದನನಿನೊಡನೆ
ದೊರ್ಡಲು[3]ರಿ[3]ಪದೆ ಪುಟಪಾಕಂ
[4]ಗುಡೆ ಸುಡುವಂತಿರ್ಪುವಲ್ಲಿ[4] ವಿರಹಿಜನಂಗಳ್ ೧೦

ಮೇದಿನಿ ಪೆರ್ಚೆಳಸಿಂ ಕಣ್ಗಾ
ದಮೆ ಬರೆ ತಾಮೆ ತಮ್ಮ ಪರಿಣತಕಣಿಶಾ
ಮೋದದೊಳೆ ಸೊರ್ಕಿ ತಲೆಕೆಳ
ಗಾದಂತಿರ್ಪುವು ಸುಗಂಧಶಾಲಿವನಂಗಳ್ ೧೧

ಇವೆ ವಿಜಯಚಾಪಮುಂಗೋ
ದ್ಭವಂಗೆ ವಿಜಯಾಸ್ತ್ರಮಿವೆ ಮನೋಜಂಗೆನೆ ಬ
ರ್ಪುವು ಜನದ ಮನಕೆ ಪುಂಡ್ರೇ
ಕ್ಷುವಾಟಮುಂ ಪುಷ್ಪವಾಟಮುಂ ಪೊಱವೊೞಲೊಳ್ ೧೨

ವನಲತಿಕಾಗೃಹಂ ತಳಿರ ತೊಂಗಲ ತೋರಣದಿಂದೆ ಕಾಮದೇ
ವನ ಮನೆಯಂತೆ ಸೋರ್ಪ ಸಹಕಾರದೆ ತೀವಿದ ಬಾವಿ ಕಾಮದೇ
ವನ ರಸ ಕೂಪದಂತೆ ತಲೆಯುದ್ದದ ಪೂವಿನ [5]ಪುಟ್ಟೆ[5] ಕಾಮದೇ
ವನ ಕೃತಕಾದ್ರಿಯಂತೆಸೆಯೆ ಕಣ್ಗೆಸೆಗುಂ ಸಹಕಾರನಂದನಂ ೧೩

---

1 ಡಸೆ (ಇಉ೩). 2 ಪ (ಅಕ). 3 ಳಿ (ಅಕ). 4 ಬಡೆ ಸುಡೆ ಪಡುತಿರ್ಪ ರ (ಒ). 5 ಘಟ್ಟೆ (ಅಇಉಎಕ).

ಮಲೆಯೆಲರಲೆಪುಂ ಮನಸಿಜ
ನಲೆಪುಂ ಕೋಗಿಲೆಯ ಜಡಿಪುಮೊಡನೆಗಲ್ವಿನಮೋ
ನ[1]ಲ[1]ಜಡಿಯಾದಂತಿರ್ಪುವ
ಗಲದಾ ವನಲತೆಯ ಜೊಂಪದೊಳ್ [2]ಜಂ[2]ಪತಿಗಳ್ ೧೪

ಕೊಳದಿಂ ಮಜ್ಜನಕಾರ್ಯಮುಚ್ಚನನೆಯಿಂ ಭೂಷಾವಿ[3]ಧೇಯಂ[3]ಫಲಾ
ವಳಿಯಿಂ ಭೋಜನಕೃತ್ಯಮಬ್ಜದಳದಿಂ ಶಯ್ಯಾವಿಧಾನಂ ಪುಱಿ
ಲ್ಗಳಿನುದ್ಯಾನಮಹೀವಿಹಾರವಿಧಿ ಭೃಂಗಾನೀಕದಿಂ ನಿತ್ಯಮಂ
ಗಳಗೇಯಕ್ರಿಯೆ ತೀಱಿ ಮೆಚ್ಚಿ ಸುಱಿವರ್ ಪಾಂಥರ್ ವನೋಪಾಂತದೊಳ್ ೧೫

ಪಾತಾಳತಳಮನೆಯ್ದಿದ
ಖಾತಂ ಸುರಪುರಮನೆಯ್ದಿದಟ್ಟಳೆ ಪೆಂಪು
ದ್ಯೋತಿಸೆ ಪುರವಿಱಿಪುದು ಭೋ
ಗಾತಿಶಯದ ಭೋಗವತಿಯನಮರಾವತಿಯಂ ೧೬

ಆ ಪುರದ ರತ್ನಭವನ ಕ
ಳಾಪದ್ಯುತಿ ನೆಗೞೆ ಗಗನತಳದೊಳ್ [4]ಬಲಭಿ[4]
ಚ್ಚಾಪರುಚಿಗೆತ್ತು ಮತ್ತೆ ಕ
ಳಾಪಿಗಳಾಡುವುವು ಮಧುರಕೇಕಾರವದಿಂ ೧೭

ವಿವಿಧ ಮಣಿಕನಕಕೃತಗೃಹ
ಗವಾಕ್ಷಜಾಳಂಗಳಿಂದಮಾದಂ ಪೊಱಪೊ
ಣ್ಮುವ ಧೂಪಧೂಮಯಷ್ಟಿಗೆ
ನವಿಲೊಸೆದೆಱಗುವು[5]ದು[5] ಪಾ[6]ವು[6]ಗೆತ್ತಾ ಪುರದೊಳ್ ೧೮

ಶೋಣಮಣಿದೀಪ್ತಿರುಚಿ ಕೋ
ಣ್ಗೋಣೊಳ್ ಪಜ್ಜಳಿಸೆ ರತ್ನದೀ[7]ಪ್ತ[7] ಸುವರ್ಣ
ಕ್ಷೋಣೀಧರಮೆನಿಪುದು [8]ನೇ[8]
ರಾಣಿಯ ಪೊಂಬೆಸದ ಸಮೆದ ರಾಣೀವಾಸಂ ೧೯

---

1 ಲೆ (ಬ). 2 ಪಂ(ಅಇಉಎಕ). 3 ರೋಹಂ (ಕ), ರೇಹಂ(ಅಇಉಎ). 4 ಜಲಭೃ (ಅಕ), ಬಲಭೃ (ಇಉಎ). 5 ವು(ಬ). 6 ವಿ (ಇಉಎ), ವೆ (ಅಬ). 7 ಪ್ತಿ (ಅಇಉಎಕ). 8 ಮನೆ (ಎ), ವೆರೆ (ಇಉ).

ತಳದಿಂ ಕಳಶಂಬರಮೊಂ
ದಳವಿಯ ರೂವಾರಮೆನಿಸಿ ಬಹುರೂಪಿಣಿಯೊ
[1]ಳ್ವೊಳಗೆ[1]ಗಳಿಂ ಜ್ಯೋತಿರ್ಜ್ಜಂ
ಡಳದವೊಲೊಪ್ಪುವುವು ನಾಡೆಯುಂ ಕರುಮಾಡಂ ೨೦

ಪುರದೊಳ್ ಸಂದಿರ್ದಯೋಧ್ಯಾಪುರತಿಲಕಮೆನಿಪ್ಪೀ ಪುರಸ್ತ್ರೀಯರಂ ಪೋ
ಲ್ವರೆ ನಿಸ್ನಾನಚ್ಛ್ಮತಿ[2]ರ್ಪಚ್ಚ[2]ರಸಿಯರಿದಱುದ್ಯಾನದೊಳ್ ನಂದನಂ ಪೇೞ್
ದೊರೆಯೇ[3]ಸೀಂ[3]ಬಂದ ಸಂಕ್ರಂದನಪುರ[4]ಮಿದನೇಂ[4] ಪೋಲ್ವುದೆಂದಾಪುರ[5] ಶ್ರೀ[5]
ಪುರುಹೂತಾಹೂತಿಗೆಯ್ವಂತಿರೆ ಸೊಗಯಿಸುಗುಂ ಕೇತುಹಸ್ತಂಗಳಿಂದಂ ೨೧

ಜಾಣ್ಗಿಡೆ ಬಣ್ಣಿಪ ವರ್ಣನೆ
ಮಾಣ್ಗೆಮ ಚತುರಶ್ರಮಾಗಿ ನೋೞ್ಪೊಡೆ ನಾಲ್ವ
ತ್ತೆಣ್ಗಾವುದಗಲಮೆಂಬ ಪ
ವಣ್ಗೆ ನಿಕೇತನಮದಾಯ್ತು ಸಾಕೇತಪುರಂ ೨೨

ಅದೆ ಸಾಕೇತಮಯೋಧ್ಯೆಯು
ಮದೆ ಸಂಪ[6]ತ್ಕೌ[6]ಶಲಾಭಿಧಾನೆಯುಮೆನೆ ಮ
ತ್ತದು ನೆಗೞ್ದ ವಿನೀತೆಯುಮೆನಿ
ಸಿದ ನಾಲ್ಕುಂ ಪೆಸರ್ಗಳೆಸೆದುವಾ ಪುರವರದೊಳ್ ೨೩

ಅದನಾಳ್ವನಖಿಲಜಗತೀ[7]ತಳಾಲಂ[7]ಕಾರನುಮುದಾತ್ತಕ್ಷತ್ರಕುಲತಿಲಕನುಮಿಕ್ಷ್ವಾಕುವಂಶೋತ್ತಂಸನುಮಶೇಷಜಗತ್ಪವಿತ್ರ ಕಾಶ್ಯಪಗೋತ್ರಮಂಡನನುಮೆನಿಸಿ ನಿಜಭುಜಬಲಾವಲೇಪಪ್ರತಾಪಾಟೋಪನಿರ್ಜಿತಾನೇಕಶತ್ರುಜಿತಶತ್ರುವೆಂಬರಸನಾ ಮಹೀವಲ್ಲಭನ ಮನೋವಲ್ಲಭೆ ವಿಜಯಸೇನೆಯೆಂ[8]ಬೊ[8]ಳಾ ಪರಮೇಶ್ವರಿ ಸಕಳಜಗ[9]+ತ್ತುಂಗಕುಲ[10]ಸ್ತಂಭೆಯು[10]ಮಖಿಲಾಂತಃಪುರಪ್ರಧಾನಭೂತೆಯುಮಶೇಷಯೋಷಿದ್ಗುಣಾಲಂಕೃತೆಯುಮಾಗಿ

ಶ್ರೀವೀರಶ್ರೀ ಕೀರ್ತಿ
ಶ್ರೀ ವಾಕ್ಛ್ರೀಯೆಂಬ ದೇವಿಯರೆ ನೆಲಸಿರೆ ಸ

1 ಳ್ವೊಳಗೆ (ಇಉಎ), ಳ್ವೆಳಗು (ಬ). 2 ಪ್ಸಪ್ಸ (ಇಉಎ). 3 ನೀ (ಅಇಉಕ). 4 ಮಹಿಮ (ಅಕ), ಮಹಿಮೆ (ಇಉಎ). 5 ರಂ ಶ್ರೀ (ಅಇಎಕ). 6 ದಕೌ (ಅಇಉಎಕ). 7 ತಿಲಕಾ (ಇಉಎ). 8 ಬ (ಅಕ), ಬಮ (ಇಉಎ). 9 ದು (ಇಉಎ). 10 ಸಂಭೂತೆ (ಬ).

ದ್ಭಾವದೊಳೆ ವಿಜಯಸೇನಾ
ದೇವಿ ಮಹಾದೇವಿಯೆಂಬ ಪೆಸರಂ ಪಡೆದಳ್ ೨೪

ಧವಳವಿಲೋಚನಂ ಧವಳಚಾಮರಮಾಗೆ ಲಲಾಟಪಟ್ಟಮೊ
ಪ್ಪುವ ಪೊಸ[1]ವ[1]ಟ್ಟಮಾಗೆ ಕಟ ಕೇಸರಿವಿಷ್ಟರಮಾಗೆ ಚಿತ್ತಸಂ
ಭವಭುವನೇಶ್ವರಂಗಳಕಜಾಳಮೆ ಸೀಗುರಿಯಾಗೆ ಪೋಲ್ತು ತೋ
ಱುವುದಸಿತೋತ್ಪಲೇಕ್ಷಣೆಯ ಯೌವನಲಕ್ಷ್ಮಿಯ ರಾಜ್ಯಲಕ್ಷ್ಮಿಯಂ ೨೫

ಅರುಣಮೃದುಚರಣಪಲ್ಲವ
ಕರಪಲ್ಲವ ವಿಳಸದಧರಪಲ್ಲವಲೀಲಾ
ಪರಿಕಲಿತಶ್ರೀಯಿಂದನು
ಕರಿಸುವಳಾ ಲಲನೆ ಪಲ್ಲವಿತವನಲತೆಯಂ ೨೬

ಲತೆಯೊಳ್ ಕೇದಗೆಯೆತ್ತ ಪೊಂಗೊಡಮಿದೆತ್ತಂಭೋಜಮೆತ್ತುತ್ಪಲ
ಸ್ಥಿತಿಯೆತ್ತಂಗಜಚಾಪಮೆತ್ತ ಮಿಳಿರ್ವೊಳ್ಗೊಂಬೆತ್ತ ಕಿಂಕೇನಸಂ
ಗತಮೆಂಬಂತಿರೆ ಸೆಳ್ಳುಗುರ್ ಮೊಲೆ ಮೊಗಂ ಕಣ್ಪುರ್ವುತೋಳ್ಕಿಲ್ಪುವೆ
ತ್ತತಿಗಂಭೀರಮತಿಪ್ರಸನ್ನಮೆನಿಸುತ್ತಿರ್ಕುಂ ಮಹಾದೇವಿಯಾ ೨೭

ಮಣಿನೂಪುರ ಮಣಿಕಾಂಚೀ
ಮಣಿಹಾರವಿಲಾಸಮೆಸೆಯೆ ಭಾಸುರವಿದ್ಯಾ
ಮಣಿಯಿಂ ಭಾಸ್ವಚ್ಚೂಡಾ
ಮಣಿಯಿಂ ಪೋಲ್ತೆಸವಳಬಲೆ ಮಣಿಪುತ್ರಿಕೆಯಂ ೨೮

ಕಮಳಾಸ್ಯೆಯ ನಿರ್ಮಳಿನ
ಪ್ರಮಾಣದಿಂ ಕಱೆಯೆ ಬಳೆದ ಜಘನಸ್ಥಳಮಂ
ಕಮಳಜನಳೆಯಲ್ಮಾಡಿ
ರ್ದ ಮಾನಸೂತ್ರಂಬೊಲೊಪ್ಪುಗುಂ ಕಟಸೂತ್ರ ೨೯

ಶೃಂಗಾರಾರ್ಣವ ಸೇತುವ
ನಂಗಮತಂಗಜದ ಪೊನ್ನಬಳ್ಳಿ[2]ಗೆ[2] ಸಮೆದಾ
ನಂಗದ್ವಿಪಪತಿಗೆಣೆಯೆನೆ
ತುಂಗನಿತಂಬೆಗೆ ಬೆಡಂಗು ಕಾಂಚೀದಾಮಂ ೩೦

---

1 ಪ (ಇಲ್ಲ). 2 ಯ (ಇಲ್ಲ),

ಅಂಗನೆಯ ನಾಭಿಕೂಪದ
ಶೃಂಗಾರ ಜಲಕ್ಕೆ ಬಾಸೆ ನಿರ್ವರಿ ವೃತ್ತೋ
ತ್ತುಂಗಕುಚಂ ಮಾ[1]ನ[1]ಗೆ ಮದ
ನಂ ಗಡ ಯೌವನವನಕ್ಕೆ ತೋಂಟಿಗನಾದಂ ೩೧

ನೆಲೆ ನವಯೌವನಲಕ್ಷ್ಮಿಗೆ
ನೆಲೆ ಚಿತ್ತಭವಂಗೆ ನೃಪನ ಕಣ್ಗಂ ಮನಕಂ
ನೆಲೆ ತಾರಹಾರಶೋಭೆಗೆ
ನೆಲೆಯೆನೆ ನೆಲೆಮೊಲೆಗಳೆನಿಕುಮಬಲೆಯ ಮೊಲೆಗಳ್ ೩೨

ಇದು ಮದನಭವನತೋರಣ
ಮಿದು ವಂದನಮಾಲೆ ಮದನಸದನಕ್ಕೆನೆ ಚೆ
ಲ್ವೊದವಿ ಸೊಗಯಿಪುದು ಸುದತಿಯ
ಹೃದಯಂಗಮಮೆನಿಪ ವೃತ್ತಮೌಕ್ತಿಕಹಾರಂ ೩೩

ಹಾರಲತಾವಿದ್ಯುಲ್ಲತೆ
ಚಾರುಪಯೋಧರಸಮೀಪದೊಳ್ ಪೊಳೆಯೆ ಶುನಾ
ಸೀರಶರಾಸನರುಚಿರಾ
ಕಾರದಿನೆಸೆವುದು ತದೀಯಕಂಠಾಭರಣಂ ೩೪

ವನಜಲಕೇಳಿಗೆ ಯೌವನ
ವನಮಂ ಶೃಂಗಾರಜಲಮನೊಳಕೊಂಡಿರ್ದಾ
ವನಿತೆ ಮನಸಿಜನ ಜಂಗಮ
ವನಕ್ಕೆ ಜಂಗಮಸರೋವರಕ್ಕೆಣೆಯೆನಿಪಳ್ ೩೫

ಶೃಂಗಾರಜಳದೆ ಬಳೆದ ಲ
ತಾಂಗಿಯ ತನುಲತಿಕೆ ಪಾಣಿಪಲ್ಲವಮದಱೊಳ್
ಸಂಗಳಿಸೆ ಮಿಸುಪ ಕುಸುಮಚ
ಯಂಗಳನನುಕರಿಪುವೆಸೆವ ದಶನಚಯಂಗಳ್ ೩೬

ಚಿತ್ತಜನಿಕ್ಷುಚಾಪಲತೆಯುಂ ಗೆಲಿಸಂದುದು ಪುರ್ಬಿನೊಳ್ಪು ಕ
ಣ್ಗೆತ್ತ ಸರೋಜಪತ್ರರುಚಿಯುಂ ಗೆಲಿಸಂದುದು ಕಣ್ಮಲರ್ ಸರೋ

1 ನೆ (ಇಉಎ).

ನೃತ್ತಗಜೇಂದ್ರಮಂದಗತಿಯಂ ಗೆಲೆವಂದುದು ಬರ್ಪ ಲೀಲೆ ದಾ
ಹೋತ್ತರಮಪ್ಪ ಪೊನ್ನ ಪೊ[1]ಳೆ[1]ಪಂ ಗೆಲೆವಂದುದು ಕಾಂತಿ ಕಾಂತೆಯಾ ೩೭

ತರುಣಿಯ ಮುಖಚಂದ್ರಬಲಂ
ದೊರೆಕೊಳೆ ಪುರ್ವೆಂಬ ಕೆರಿಯ ಕರ್ಬಿನ ಬಿಲ್ಲಿಂ
ಮರಲೆ[2]ದೆ[2]ಗೆದತನು ಕಣ್ಣಿಂ
ಬರಲಂಬಿಂದೆಚ್ಚು ಜಗಮನಡಿಗೆಱಗಿಸುಗುಂ ೩೮

ಸುದತಿಯ ಮುಖೇಂದುವಂ ಪೂ
ರ್ಣದಿನದೊಳಂ ಪೋಲಲಿಂದು ನೆಱೆ[3]ಯದೆ ನಿರ್ವೇ
ಗದೆ ಪಕ್ಷಚರ್ಯೆಯೊಳ್ ಕೂ
ಡಿದ ಕಾಯಕ್ಲೇಶತಪ[3]ದೊಳೊದಗು[3]ವನಿನ್ನುಂ ೩೯

ಚಳವಿಸಾನಂ ಪದ್ಮಷಂಡಂ ತರಳಮಧುಕರಾಲಂಕೃತಂ ಪದ್ಮನಾಳಂ
ವಿಳಶೃಂಗೋದ್ಭಾಸಿ ಚಂದ್ರಂ ಸೊಗಯಿಸಿತೆನೆ ಲೋಲೇಕ್ಷಣಂ ಸಂಚಲತ್ಕಂ
ತಳಮುದ್ಭ್ರೂವಿಭ್ರಮಂ ಶೋಭಿಸೆ ತಿಳಿಗೊಳನಂ ಫುಲ್ಲಪಂಕೇಜಮಂ ನಿ
ರ್ಮಳತಾರಾಧೀಶನಂ ಪೋಲ್ತೆಸೆಯೆ ನಗೆಮೊಗಂ ಕಾಂತೆ ಕಣ್ಗೊಪ್ಪಿತೋರ್ಕುಂ ೪೦

ಲಳಿತಭ್ರೂನೃತ್ಯಮಾಸ್ಯಾಂಬುರುಹಪರಿಮಳಾಲೋಲಭೃಂಗಾಂಗನಾಮಂ
ಜುಳಗೀತಂ ರತ್ನಮಂಜೀರಕಮಣಿರಶನಾಕಿಂಕಿಣೀಜಾಳಕೋಳಾ
ಹಳವಾದ್ಯಂ ಕೂಡೆ ಚಿತ್ತೋದ್ಭವನಿನೆಸೆಯೆ ತೂರ್ಯತ್ರಿಕಂ ಹಾಸಪುಷ್ಪಾಂ
ಜಳಿಯಿಂ ತತ್ಕಾಂತೆ ದೇಹದ್ಯುತಿಜವನಿಕೆಯಿಂ ನಾಟ್ಯರಂಗಂಬೊಲಿರ್ಪಳ್ ೪೧

ದರಹಾಸಾನ್ಯೃತವಾರಿ ಮಜ್ಜನಜಲಂ ದೇಹಪ್ರಭಾಜಾಲಮಂ
ಬರಶೋಭಾಪಹಮಾ ನಿತಂಬಿನಿಯ ವಕ್ತ್ರಾಮೋದಮಾಲೇಪನಂ
ತರಳಾಪಾಂಗಮರೀಚಿ ಕಾಂತಕಮ[4]ನ[4]ಸ್ರಗ್ಮಾಳೆ ತದ್ವಿದ್ರುಮಾ
ಧರಲೀಲಾಲಕದಭ್ರದಂತರುಚಿರಶ್ರೀಮಂಡನಾಡಂಬರಂ ೪೨

ಕಚಭಾರಂ ಕೊರಲ್ಗಬಲೆಯ
ಕಚಕುಚಭರಮುಸಿಯ ನಡುಗೆ ಕಚಕುಚಜಘನೋ

---

1 ಳ (ಅಇಉಎ). 2 ತೆ (ಬ). 3 ದೊಳೆಸಗು (ಅಕ), ಮನೆಸಗು (ಬ). 4 ಳ (ಬ).

ಪಡ[1]ಯ[1] ಭರಂ ತೊಡೆಗ[2]ಳ್ಗ್[2]
ವಿಚಿತ್[3]ರಮಂ[3] ಮೆಟ್ಟಿ ತೋರ್ಪಳೋಜೆಯ ಪಿಡಿಯಂ ೪೩

ಲಲಿತಾಂಗಂ ಕನಕಾವದಾತನುಲರ್ಗಣ್ ನೀಲೋತ್ಪಲಚ್ಛಾಯೆಯು
ಜ್ಜ್ವಲದಂತಂ ಪರಿವೃತ್ತಮೌಕ್ತಿಕಸಮಂ ವೃತ್ತಾಧರಂ ವಿದ್ರುಮೋ
ಪಲಲೀಲಂ ತನುರೋಮರಾಜಿ ವಿಲಸದ್ದೂರ್ವಾಂಕುರಾಭಂ ಮನಂ
ಗೊಳೆ ಚಂಚನ್ನಿಜಸಂಚನರ್ಕೆ ಪಡೆಗುಂ ಚಿತ್ರಾಂಗನಾಶಂಕೆಯಂ ೪೪

ಎಸೆಗುಂ ಋಜ್ವಾಗತಂ ಕಣ್ಗೊಳಿಸುಗುಮಳವಟ್ಟಿರ್ದ ಋಜ್ವಾಗತಂ ರಂ
ಜಿಸುಗುಂ ಪಾರ್ಶ್ವಾಗತಂ ನೋಳ್ಪರನು[4]ಡುಗಿಸುಗುಂ[4] ಸಾಚಿ ತದ್ವಿವ್ರರಂ ನೆ
ಚ್ಚಿಸುಗುಂ[5]ದ್ವ್ಯರ್ಥಾ[5]ಕ್ಷಮೆಂಬಂತಿರೆ ಸೊಗಯಿಸುತಿರ್ಪಂಗನಾಭಂಗಿಯಂ ಚಿ
ತ್ರಿಸಿ ಚಿತ್ರಕ್ಕಾಯುವೊಯ್ದಂ ಮದನನೆನೆ ಮಹಾದೇವಿ ಕಣ್ಗೊಪ್ಪಿ ತೋರ್ಪಳ್ ೪೫

ಅದೆ ಕಂದರ್ಪಂಗೆ ದೋರ್ದರ್ಪದ ಮೊದಲದೆ ಪುಷ್ಪೇಷುಗೀ ಲೋಕಮಂ ಗೆ
ಲ್ವದಟೆಂದೆತ್ತಿರ್ಪ ಚೈತ್ರಧ್ವಜಮದೆ ಕುಸುಮಾಸ್ತ್ರಂಗೆ ಸೌಭಾಗ್ಯಭಾಗ್ಯಾ
ಭ್ಯುದಯಪ್ರಸ್ತಾವನಾನಾಟಕಗೃಹಮದೆ ಕಾಮಂಗೆ ಸಾಮ್ರಾಜ್ಯಲಕ್ಷ್ಮೀ
ಪದಮೆಂ[6]ದಂದೇನನೆಂಬೆಂ[6] ನೃಪವನಿತೆಯ ರೂಪಾರ್ಗಮಾಶ್ಚರ್ಯರೂಪಂ ೪೬

ಅಂತು ಪೊಗೞ್ತೆವಡೆದಾ ಮಹಾದೇವಿಯೊಳಾಮಹಾನುಭಾವನೇಕಭಾವ
ದೊಳನಂಗಸಾಮ್ರಾಜ್ಯಸುಖಮನನುಭವಿಸಿ,

ಸಮನಿಸ ಧರ್ಮಕ್ಕವಿರು
ದ್ಧಮರ್ಥಮರ್ಥಕ್ಕೆ ಕಾಮಮವಿರುದ್ಧಮನು
ಕ್ರಮದೊಳೆ ಕಾಮಕ್ಕಂ ಕಡೆ
ಯ ಮೋಕ್ಷಮವಿರುದ್ಧಮೆನೆ ಚತುರ್ವರ್ಗಫಲಂ ೪೭

ಅಂತು ಚತುರ್ವಿಧಪುರುಷಾರ್ಥಮಂ ವ್ಯರ್ಥಮಾಗಲೀಯದನು[7]ಭವಿ[7]

---

1 ದ (ಕ). 2 ಳ್ಗಿಸಿ (ಬ). 3 ರಿಂದಂ (ಅಕ). 4 ದಿಗಿಸಗುಂ (ಅಕ), ದಿಗಿನಿಸುಂ (ಇಋಉಎ). 5 ದ್ವ್ಯರ್ಥ (ಇಋಉಎ). 6 ದೆಂದೆನ್ನದೇನಂದಪೆ (ಇಋಉಎ)
7 ಸ್ಥ (ಬ).

ಸುತ್ತುಂ ಚತುರ್ವಿಧರಾಜವೃತ್ತಮನುದಾತ್ತಮಪ್ಪಂತಾಚರಿಸುತ್ತುಂ ವಿಜಿಗೀಷುವೃತ್ತಿ ಯನೆತ್ತಿಕೊಂಡು ವಿಕ್ರಮಾವಲಂಬಿಯಾಗಿ,

ನಾಗಮೆ ನಾಗದಂತಿರೆ ಪಡಲ್ಪಡೆ ವಾಹಮೆ ವಾರಿವಾಹದಂ
ತಾಗಿರೆ ನಾಯಮಾಗೆ ರಥಮನ್ಯಮನೋರಥದಂತೆ ಗೆಂಟುಗೆಂ
ಟಾಗೆ ವಿಪತ್ತಿಯಿಂ ಪಗೆ[1]ಯ[1] ಪತ್ತಿ ಬಲಂ ನಡುಗಿತ್ತು ಚಂಚಲಾರ
ಭೋಗತಜಂಪ್ರಮಂಡಲವವೊಲ್ ಜಿತಶತ್ರುಗೆ ಶತ್ರುಮಂಡಲಂ ೪೮

ಶತ್ರುಗಳುಮನಭ್ಯಂತರ
ಶತ್ರುಗಳಾಱುಮ[2]ನದಿರ್ಪಿ[2] ಗೆ[3]ಲ್ದು[3]ದಱಿಂದಂ
ಶತ್ರುಂತಪನೆನಿಸಿದ ಜಿತ
ಶತ್ರುಗೆ ಜಿತಶತ್ರುನಾಮಮಾಯ್ತನ್ವರ್ಥಂ ೪೯

ಆತನೇಕಾಂಗವೀರನುಮುಭಯಕುಲಶುದ್ಧನುಂ, ತ್ಯಾಗಾದಿಮಹಾಗುಣತ್ರಯ ಪವಿತ್ರನುಂ, ಚತುರ್ವರ್ಗಫಲೋಪಭೋಗಿಯುಂ, ಪಂಚಾಂಗಮಂತ್ರನಿರತನುಂ ಷಾಡ್ಗುಣ್ಯನಯಾಲಂಕೃತನುಂ, ಸಪ್ತಾಂಗರಾಜ್ಯಸಂಪನ್ನನುಮಷ್ಟದಿಕ್ಚಕ್ರವಿಜ ಯಿಯುಂ, ನವನಿಧಿಪರಿಪೂರ್ಣನುಂ, ದಶಕುಲಧರ್ಮನಿರ್ಮಲನುಂ, ಏಕಾದಶೋ ಪಾಸಕಸ್ಥಾನ[4]ವೇದಿ[4]ಯುಂ, ದ್ವಾದಶರಾಜಮಂಡಲ್[5]ನಿಯೋಜಿತ[5]ಪ್ರಧಾನವಿಜಿಗೀ ಷುವೃತ್ತನುಂ, ತ್ರಯೋದಶಮ[6]ತೋ[6]ಪಚಾರಪರಿಣತಪ್ರಕಟಿತತುಂಗಗಜಾಗಮಪರಿ ಜ್ಞಾನನುಂ, ಚತುರ್ದಶಮನುಮುನಿಚರಿತನುಂ, ಪಂಚದಶಕರ್ಮಭೂಮಿಸ್ಥಿತಿವಿ ಭಾಗಪ್ರಗಲ್ಭಮತಿಯುಂ, ಷೋಡಶತೀರ್ಥಕರಭಾವನೋಪಚಿತತೀರ್ಥಕರಜ[7]ನ್ಮೋ[7] ತ್ಪತ್ತಿಹೇತುಭೂತನುಮಾಗಿ ಸುಖದಿಸಿರಲ್-ಇತ್ತ ಜಂಬೂದ್ವೀಪದ ಪೂರ್ವವಿದೇ ಹದ ಸೀತಾನದಿಯ ತೆಂಕಣ ತಡಿಯ[8]ವತ್ಸಕಾವತೀ[8]ವಿಷಯದ ಸುಸೀಮಾನಗರಮ ನಾಳ್ವಂವಿಮಲವಾಹನನೆಂಬ[9]‑‑ರಸಂಪಲವುಕಾಲಮರಸುಗೆಯ್ಯುತ್ತಿ[10]ರ್ದೊಂ[10]ದು ದಿವಸಂ ರಾಜವಿದ್ಯಾವಿಲಾಸಿನೀವಿಲಾಸಮಣಿದರ್ಪಣಂ [11]ಪಳ[11]ನಾಳದರ್ಪಣತಳ ಪ್ರತಿದರ್ಪಣಬಿಂಬಿತ ವಿಮಲಕಪೋಲಮೂಲೋದ್ಗತಪಳಿತಾಂಕುರಾವಲೋಕನದೆ ಪರಮವೈರಾಗ್ಯಪರನಾಗಿ,

---

1 ಯ (ಅಇಉಎಬ). 2 ನಿದಿರ್ಚಿ (ಇಉಎ). 3 ಲ್ದ (ಇಉಎ). 4 ವಿಧಿ (ಇಉಎ). 5 ಸಂ ನಿಯೋಗಿ (ಅಇಉಎಕ). 6 ಮೊ (ಬ). 7 ನ್ಮ ನಾಮೋ (ಬ). 8 ವತ್ಸಕಾ (ಇಉಎ). 9 ನ (ಬ). 10 ರ್ದ ಬಂ. 11 ಫ (ಇಉಎ).

ಅರಯೆ ಮೂತ್ರಪುರೀಷಾ
ಗಾರಂ ಸಂಪ್ರಾಪ್ತಸಪ್ತಧಾತುವಿಕಾರಂ
ಚಾರುಗುಣದೂರಮತಿವಿಷ
ದಾರುಶರೀರಂ ದುರಂತದುಃಖಾಧಾರಂ ೫೦

ಅಗಲೊಳಗಿಕ್ಕಿದೊಳ್ಳಿಣಸಮೇಧ್ಯಮುಮೆಂಜಲುಮಪ್ಪುದಟ್ಟ [1]ಪು[1]
ಟ್ಟಿಗೆಗಳುಮಂತೆ ವ್ಯೈ[2]ಲ[2]ಗೆಗಳಪ್ಪುವು ಸೂಡಿದ ಮಾಲೆ ಕಂದು ನಾ
ಱುಗು[3]ಮೆಪಮೀಳೆಸಾಂಪು[3] ಮೊದಲಾಗಿರೆ ಪೂಸಿದ ಚಂದನಂಗಳುಂ
ಮಗಮಗಿಸುತ್ತುಮಿರ್ದು ಮಲಮಪ್ಪುವು ಸಂಗತಿಯಿಂ ಶರೀರದಾ ೫೧

ನೆನೆಯದೆ ಕಾಣದೆ ಕೇಳದೆ
ತನುವಿನ ಪೊಲ್ಲಮೆಯನಱಿದುಮಱಿಯದೆ ತೊಱೆಯಲ್
ಮನಮುಳ್ಳೊಡೆ ಜೀವಕ್ಕೀ
ತನುವಿರೆ ವೈರಾಗ್ಯಕಾರಣಂ ಪೆಱತುಂಟೇ ೫೨

ಕ್ರಿಮಿ ಮೇಣ್ ಭಸ್ಮಂ ಮೇಣ್ವಿ
ಷ್ಟಿ ಮೇಣ್ ಶರೀರಕ್ಕೆ ನಿಟ್ಟೆಯಿಾ ದೊರೆಯಿದಱೊಳ್
ಕನುನೀಯುವೊಂದುಮಿಲ್ಲ ಶು
ಚಿಮಲಾಧಿಷ್ಠಾನಮಿದುವೆ ನರಕಸ್ಥಾನಂ ೫೩

ಏಟಿಂಬ ನರಕಮಾವುದೊ
ಪೇಟಿಂಬ ದುರಂತದುಃಖದೊಳೆ ಕೇಳಿಸಿ ನಿಂ
ದೇಟುಂ ಶರೀರಧಾತುಗ
ಳೇಟುಂ ನರಕಂಗಳವಱೊಳೇಗುಂದದವೋಲ್ ೫೪

ತನಗಲ್ಲದೊಡಲ್ನೊಡಮೆಗೆ
ಮನಮಿಟ್ಟಪವರ್ಗಮಾರ್ಗಮಂ ಪೊರ್ದದೆ ತ
ನ್ನನೆ ತಾನೆ ನಂಬಿಸುವೊಡಾ
ತ್ಮಸಂತು ಪೇಱಾತ್ಮವಂಚಕರ್ ಪೆಱರೊಳರೇ ೫೫

1 ಪ (ಬ). 2 ಲಿ (ಇಉಎ). 3 ಮೊಡಸಂಡುಮಿಂತು (ಇಉಎ).

ಸಾರದೆ ಸಾರಮಪ್ಪ ಜಿನಧರ್ಮಮನಾತ್ಮನಸಾರಮಪ್ಪುದಂ
ಸಾರಮಿದೆಂದು ನಂಬಿ ತನಗಲ್ಲದು[1]ವಂ[1] ತನಗಪ್ಪುದೆಂದು ಕೇ
ದಾರವಿಹಾರಸೋದರಕೃಶೋದರಸುಂದರಪಾರದಾರಕೋ
ದಾರವಿಮೋಹದೊಳ್ ತೊಡರ್ದು ದಾರುಣದುಃಖಮನೆಯ್ದಿದಿರ್ಪವೋ ೫೬

ಮುನಿದುರ್ವ ಜವಂಗಂ ಮಾ
ಯೆನಲಮ್ಮುವರಿಲ್ಲ ಬಗೆಯೆ ನಿನಗಿನ್ನಾರ್ಮಂ
ಜಿನಧರ್ಮ[2]ಮೊಂ[2]ದೆ ಜೀವನೆ
ನೆನೆ ಗಡ ಲೋಕತ್ರಯ[3]ಕ್ಕೆ ದಿ[3]ನನಂ ಜಿನನಂ ೫೭

ಮಱೆಗೆಟ್ಟು ಜೀವಧರ್ಮಾ
ಮೃತಮಂ ಸೇವಿಸದಧರ್ಮಮಂ ಸೇವಿಸಿ ದು
ರ್ಗತಿಗಿೞಿ[4]ದಿ[4]ಜವನೆಂಬ[5]ಱಿ
ಸಿ ತಿಂ[5]ಬ ದೈವಕ್ಕೆ ಪೋಗಿ ಪಾಱಂಬಡುವೈ ೫೮

ತನು ತಾಳಲಾಱದನ್ನೆಗ
ಮನಸುಂ ನೀನದಱಿನೊಳಾತ್ಮಶಕ್ತಿಕ್ಷಯಮು
ಪ್ಪಿನೆಗಮಿರಲ್ಕಕ್ಕುಮೆ ಕೞಿ
ದ ನೀರ್ಗೆ ಬಂದಪ್ಪುದೆ ಬೞಿಕ ಜರೆಗಂ ತಿರ್ದಲ್ ೫೯

ಎನಿತೆನಿತು ಕೞಿದ ಭವಮುಂ
ನೆನೆದಪೆಯೆನಿತೆನಿತು ಭವದ ಬಂಧುಗಳಂ ನೀಂ
ನೆನೆದಪೆಯೆನಿತೆನಿತೊಡಲಂ
ನೆನೆದಪೆಯೆಲೆ ಜೀವ ನೀನೆ ಪೇೞ್ ಪವಣೊಳವೇ ೬೦

ಎನಿತಂ ಕು[6]ೞ್ಕು[6] ಬಿಗುದಿದಪ
ಯೆನಿತಂ [7]ಕಟ್ಕಿನೆಕ[7] ಬಿಲ್ದಪಯ್ ಜೀವನೆ ನೀ
ನೆನಿತಂ ಮಲ್ಮಲ ಮಱುಗುವಯ್
ಯೆನಿತಂ ಸಂಸಾರದೊಳಗೆ ತಿಱಿನೆ ತಿರಿವಯ್ ೬೧

ಱ

1 ದ (ಇಉಎಬ). 2 ದೊ (ಅಇಉಎ). 3 ಕ್ಕಮಿ (ಒ). 4 ಪಿ (ಬ). 5 ಬರ ಸಿಡಿಲ್ತಿ (ಇಉಎ). 6 ಕ್ಕು (ಅಇಉಎ). 7 ತಕ್ಕಳಗ (ಅಕ), ಕಕ್ಕಳನೆಗ (ಇಉಎ).

ಎನಿತಂ ಬೆದವೆದ ಬೆಂದಪಯ್ |
ಯೆನಿತಂ ಸುಡುಸುಡನೆ ಪುಗುವೆಯ್ ಜೀವನೆ ನೀ
ನೆನಿತಂ ಮಲ್ಮಲ ಮಱುಗುವಯ್
ಯೆನಿತಂ ಭವಗಹನದೊಳಗೆ ಬಟ್ಟನೆ ಬ[1]ರ್ಪಯ್[1] ೬೨

ಕಡೆಯಿಲ್ಲದ ಸಂಸಾರದ
ಕಡೆಗಾಣಲ್ಬಗೆವೆಯಪ್ಪೊಡೆನ್ನುಕ್ತಿಗೊಡಂ
ಬಡು ಜೀವ ನಿನ್ನ ಕಾಲಂ
ಪಿಡಿವೆಂ ಧರ್ಮಮನೆ ಮಗುೞ[3] ಬಲ್ಪಿಡಿವಿಡಿ[2]ಯೋ[2] ೬೩

ಪೊಲ್ಲಮೆ ಪರಮತದೊಳ್ ಫಲ
ಮಿಲ್ಲವಱಿಕೊಳ್ದೊಡರ್ಮ ಕಿಡದಿರ್ಪೆಲೆ ಜೀವನೆ ನೀ
ನಲ್ಲಿಯೆ ತೊಡರ್ವಯ್ ತಿಂಬರ
ನಲ್ಲದೆ ಕುಱಿ [3]ಮು[3]ಚ್ಚುದೆಂಬ ನುಡಿ ತಪ್ಪುಗುಮೇ ೬೪

ಹೇಯಮಿದೆಂದಱಿಯದುಪಾ
ದೇಯಮಿದೆಂದಱಿಯದಾತ್ಮವಸ್ತುಗಳೊಳೆ ಸ
ಮ್ಮೋ[4]ಯಿ[4]ಸುವುದು ಹೇಯೋಪಾ
ದೇಯಂಗಳ್ ಪಾಪಧರ್ಮಮಲ್ಲದೆ ಪೆಱತೇಂ ೬೫

ಜನನಮೃತದೇವನಾರಕ
ಮನುಷ್ಯತಿರ್ಯಗ್ವಿಕಲ್ಪಗತಿಗಳೊಳೆನಸುಂ
ನಿನಗೆ ಸುಖಮಿಲ್ಲ ನೆಟ್ಟನೆ
ಮನದೊಳ್ ಭಾವಿಪೊಡಸಾರಮೀಸಂಸಾರಂ ೬೬

ಪುಸಿ ಕೊಲೆ ಕಳವು ಪರಸ್ತ್ರೀ
ವ್ಯಸನಂ ಬಹುವಿಧಪರಿಗ್ರಹಂ ನರರಂ ಬಂ
ಧಿಸಲೆ ಭವಾಬ್ಧಿಯೊಳಗೆ
ದಿಸಲಾಕರ್ಣಂ ದ್ಯೂತಮದ್ಯಮಾಂಸವ್ಯಸನಂ ೬೭

---

1 ಪ್ಪ (ಅಇಉಎ). 2 ಯಾ (ಅಇಉಎ). 3 ಮೆ (ಇಉಎಬ).
4 ಒ (ಅಇಉಎಕ).

ಮಧುಮದ್ಯಮಾಂಸಸೇವನೆ
ವಧಾನುರಾಗಂ ಜಿನಾಗಮಾ[1]ರುಚಿ[1] ಕುಲಟಾ
ನಿಧುವನಮೆಂಬಿವು ಜನ್ಮಾಂ
ಬುಧಿಗರ್ತಾವರ್ತಪಾಪಹೇತುಗಳಲ್ತೇ ೭೮

ಜವನಟ್ಟೆ ಕೊಲ್ವ ಕೊಲೆಗಾ
ಜವಂಜವಸ್ಥಿತಿಗೆ ಮೆಯ್ಯ ನೀರ್ತೆಗೆವನ್ನಂ
ಜವಜವ[2]ಜವನಂ[2]ಜಿಸಿದುವು
ಜವನಾಳ್ಗಳ ತೆಱದಿನೆನ್ನ ಕೆನ್ನೆಯ ನರೆಗಳ್ ೭೯

ಬಡಿವ ಪಿಡಿದುಡಿವ ಕಟ್ಟುವ
ಕಡಿವ ಕರಂ ಜಡಿವ ಬಯ್ದು ನುಡಿವ ತೊಡರ್ಪಂ
ತೊಡರಿಸುವ ನರಕಗತಿಯೊಳ್
ತೊಡರ್ಪುದೆ ತೊಡರದೆ ಜಿನೇಂದ್ರಮತದೊಳ್ ಹಿತದೊಳ್ ೮೦

ಏಱುವ ಪೇಱುವ ಮೂಗಿನೊ
ಳೂಱುವ ಮಣಿಗಟ್ಟೆ ತೋಱುವೊಯ್ದಂಗಡಿಯೊಳ್
ಮಾಱುವ ತಿರ್ಯಗ್ಗತಿವುಗ
ಲಾಱದೆ ನರ[3]ಗತಿಗೆ[3] ಬಯಸುವೆಗ್ಗರುಮೊಳರೇ ೮೧

ಎಱೆಯಂಗೆ ಜೀಯ ದೇವಂ
ದೆಱಗುವುದಾಯುಃಪ್ರಮಾಣದಡಿಗಾಣಲೊಡಂ
ಮಱುಗುವುದಂಗಜಶರದಿಂ
ತುಱುಗುವುದೆನೆ ದೇವಗತಿಯೊಳೇಂ ಸುಖಮುಂಟೇ ೮೨

ಈನಾರಕತಿರ್ಯಗ್ಗತಿ
ಗೀನರಸುರಗತಿಗೆ ಪೇಸಿದೆಂ ದರ್ಶನದಿಂ
ಜ್ಞಾನದಿನೊಪ್ಪುವ ಪರಮ
ಸ್ಥಾನಮನಾಂ ಪಡೆ[4]ವ[4]ನಕ್ಕೆ ಪಂಚಮಗತಿಯಂ ೮೩

---

1 ರತಿ (ಬ). 2 ಮೊನಲಂ (ಇಉಎಬ). 3 ಕಕ್ಕೆ (ಇಉಎ). 4 ವೆ (ಇಉಎಬ).

ಶಿಷ್ಟಜ[1]ನೋಚ್ಛಿ[1]ಷ್ಟಂ ಬಹು
ಕಷ್ಟಂ ಬಹುದುಷ್ಟದುಷ್ಟಕರ್ಮಾಗ್ನಿಪರಿ
ಪುಷ್ಟಂ ಹಾ ಹಾ ಧಿಕ್ ಚಿಃ
ಕಷ್ಟಮವಶ್ಯಂ ನಿಕೃಷ್ಟಮಿಾ ಸಂಸಾರಂ ೭೪

ಅಂಗನೆಯರ್ಕಳ ಸವತಿ ಜ
ರಾಂಗನೆ ತಾನವ[2]ಳ[2] ಸವತಿ ಸಂದಿರ್ದ ನಿಯ
ತ್ಯಂಗನೆ[3]ಯಾ[3] ಸವತಿ[4]ಯುಮಂ[4]
ಪಿಂಗಿಸಿ ಪುದುವಾೞ್ವಿನಕ್ಕೆ ಮುಕ್ತ್ಯಂಗನೆಯೊಳ್ ೭೫

ಮೆಲು[5]ತಂ[5] ಸವಿಯಱಿಸುವ ಗಾ
ವಿಲ[6]ರಿರ್ಪ[6]ವರಿಪ್ಪೊಂಡಿ[7]ಕ್ಕೆ[7] ಮೆಳ್ಪಟ್ಟು ಜವಂ
ಕೊಲೆ ಕಾವರೊಳರೆ ಧರ್ಮಮೆ
ತಲೆಗಾ[8]ಯ್ಗುಂ[8] ಧರ್ಮಮಾರ್ಗಮುಭಯಭವಕ್ಕಂ ೭೬

ಮೇಲೆನಿಸುವ ಜಿನಧರ್ಮಂ
ಪೋಲದು ಪೆಱಪೆಱರ ಪೇೞ್ವ ಧರ್ಮದ ತೆಱನಂ
ಪಾಲೆಂ[9]ಬ ತೆಱ[9]ದೆ ಪಶುವಿನ
ಪಾಲಂ ಪೋ[10]ಲುವುದೆ[10] ನಾಯ ಕಳ್ಳಿಯ ಪಾಲ್ಗಳ್ ೭೭

ಜಸಮುಂ ಧರ್ಮಮುಮನ್ನುಪಾ
ರ್ಜಿಸುವೊಡೆ ಚದುರದುವೆ ನಿಟ್ಟೆ ನಿಮಗಕ್ಕಟ ಮಾ
ನಸವಾೞ್ಗೆ ಮಱುಗಿ ಸೋಲ್ತಪಿ
ರಿಸಗುವುದ[11]ರ್ತಿ[11]ಯೊ[12]ಳೆ[12] ಜಸಮುಮಂ ಧರ್ಮಮುಮಂ ೭೮

ದಿವಸ[13]ದೆ[13]ವಸಂಗಳಿಂ ಕುಂ
ದುವುದಲ್ಲದೆ ಬ[14]ಳಮುಮಾ[14]ಯುಮಂ ವಪುವುಂ ಪೆ

---

1 ನಾಶಿ (ಅಇಉಎಕ). 2 ರ (ಅಇಉಎಕ). 3 ತಾ (ಇಉಎ). 4 ಯುಮಪ್ಪೊಲ್ (ಅಇಉಎಕ). 5 ಕ (ಕ). 6 ರಪ್ಪ (ಒ). 7 ಕೆರ್ (ಕ). 8 ಗುಂ (ಇಉಎಒ). 9 ಬಾತಱಿ (ಒ). 10 ಲ್ವಪ್ಪವೆ (ಒ). ಲುವವೆ (ಇಉಎ). 11 ಱ್ತಿ (ಒಕ). 12 ಳು (ಅ). 13 ದ (ಅಕ). 14 ಳಿಪ್ಪಾ (ಅಇಉಎ), ಳಿಯುಪಾ (ಕ).

ಚರ್ಚುವವಲ್ಲವು ವಿಷಯಸುಖ
ಕ್ಕವಚ[1]ರ್ತೆಂ[1] ಪಡೆದುಕೊಳ್ವೆನಕ್ಷಯಸುಖಮಂ ೭೯

ಅಂಗಜನ ಸುಖದ ಸಾಮ್ರಾ
ಜ್ಯಂಗಳ್ ಶಾರೀರಮಾನಸಾಗಂತುಕದುಃ
ಖಂಗಳನೆ ಮಾಳ್ಪುವದಱಿಂ
ಪಿಂಗುವೆನಿನ್ನೆನಗೆ ಜಿನನ ಚರಣಂ ಶರಣಂ ೮೦

ಊಟದಿನಾಟದಿನೊಪ್ಪುವ
ಪಾಟದಿನಾ[2]ಱಿಸುವ ತೀಟ[2]ದಿಂ ಕಂಪಿನ ಕ
ಯ್ಗೂಟದಿನಪ್ಪ ಸುಖಂಗಳಿ
ಪಾಟಿಸಿದ ಸುಖಂಗಳಿಂದ್ರಿಯಂಗಳ ದೆಸೆ[3]ಯಿಂ[3] ೮೧

ನೆಱೆಯಱಿವ ನೆಱೆಯೆ ಕಾಣ್ಬೀ
ತೆಱದಿಂ ಸಮಸಂದು ಸಂದತೀಂದ್ರಿಯಸುಖದ
ತ್ತೆಱಗಿದೆನಿಂ ವಿಷಯಸುಖ
ಕ್ಕೆಱಗೆಂ ಪೞಿಕೆಯ್ದು ತೊ[4]ಟ್ತು[4]ನುೞಿವಂತುೞಿವೆಂ ೮೨

ಆಧಿಗಳುಮನೇಕವಿಧ
ವ್ಯಾಧಿಗಳುಂ ಬಾಧಿಸುತ್ತುಮಿರೆ ನರಜನ್ಮಾಂ
ಬೋಧಿಯೊಳಗ[5]ದ್ದು[5] ದುರಿತವಿ
ರೋಧಿಗಳಳ್ಕೇಱೆಕೊಳಳ್ಕೆಜೊಳ್ಳೆಯನಾದೆಂ ೮೩

ಕರಗುವ ಮುಗಿಲಂ ಕೆನ್ನೆಯ
ನರೆಯಂ ಕಂಡನಿತಱಿಂ ಕೆಲರ್ ಪರಮತಪೋ
ಭರದೊಳ್ ಭರದೊಳ್ ನೆಗ[6]ೞ್ಚಲ್[6]
ಗುರುಬಂಧುಪ್ರಿಯವಿಯೋಗಮುಂ ಕಂಡು ಕೆಲರ್ ೮೪

ನರರರೆಬರ್ ವೈರಾಗ್ಯಂ
ದೊರಕೊಂಡೊಡೆ ತೊಱೆವೆವೆಂಬರನ್ನೆವರಂ ಸ

---

1 ತ್ತೆಂ (ಅ), ತ್ತೇಂ (ಕ). 2 ಱಿಪ ತೀಪಟ(ಕ). 3 ಯಂ (ಕ). 4 ತ್ತ(ಅಇಉಎ). 5 ದ್ದು (ಒಕ). 6 ೞ್ಚರ್ (ಒ).

ಯ್ತಿರಲೀಯದಂತಕಂ ಗೋ
ಣ್ಮುರಿಗೊಂಡೆಟ[3][1]ದೊ[1]ಯ್ವೊಡದ್ದ[2]ಬ[2]ರ್ಪರುವೊಳರೆ ೮೫

ಕುಸುಮಾಸ್ತ್ರಗಜಂ ಬೆಂಕೊಳೆ
ಬಿಸುಟಂ ಕಡಿಕೆಯ್ಯ ತಪಮನೊಳಕೊಂಡಿರ್ದಿ
ರ್ದೆಸೆಯೊಳ್ಪಡಂಗದೆ ಬಸನದ
ಬಸದಿಂ ತಲೆದೋಱಿ[3] ತೋಱದಿರ್ಕುಮೆ ಕೊಲೆಯಂ ೮೬

ಮದನಮದೇಭಂ ಕಡಿಕೆ
ಯ್ಯದನ್ನೆಗಂ ಸಲ್ಗುಮಾರ ಬೀರಂಗಳುಮಂ
ತದು ಕಡುಪಿಂ ಪಂಚತೆಯಾ
ಗದೆ ಮಾಣ್ಗುಮೆ ವಶಗತಂಗೆ ಪಂಚೇಂದ್ರಿಯದಿಂ ೮೭

ಮನ[3]ದ[3] ಬಟಿವಟಿಯೊಳಾಡುಗು
ಮ[4]ನಿ[4]ತಿಂದ್ರಿಯಗುಣಮುಮನಿತುಮಂ ಗೆಲಲಾರ್ಕುಂ
ಮನಮಂ ಗೆ[5]ಲ್ವೊ[5]ಡೆ ನಾಯಕ
ನನೆ ಗೆ[5]ಲ್ವೊಡೆ[5] ಪಂಚತಂತ್ರಮಂ ಗೆಲಲರಿಪೆ ೮೮

ಜಿನವಂದನಸಮಯದೊಳೊಂ
ದಿನಿಸಾನುಂ ಬೇಗಮಿರಿಸ[6]ಲರಿದೊಂ[6]ದೆಡೆಯೊಳ್
ಮನಮನದೆ ಬಹುಪರಿಗ್ರಹ
ವಿನೋದದೊಳ್ ತೊಡರ್ದ* ಜಡರ್ಗೆ* ಸಯ್ತಿರ್ದಪುದೆ ೮೯

ನುಡಿಯದೆ ನೋಡದೆ ಕೇಳದೆ
ಮಿಡುಕದೆ ಸಮತೆಯೊಳೆ ಸಂಯಮಂ ಬೆರಸಿ[7]ರೆ ಬಂ
ದ[7]ಡಿಗಡಿಗೆ ಧರ್ಮಶುಕ್ಲ
ಕ್ಕೆಡೆಗುಡದೆಡೆವುಗುಗುಮಾರ್ತರೌದ್ರಧ್ಯಾನಂ ೯೦

ಒಡಲಂ ದಂಡಿಸಿ ತಪದೊಳ್
ನಡೆವ ತಪಸ್ವಿಗಳುಮೆಯ್ದೆ ಮನಮಂ [8]ತಗೆಯ[8]ಲ್

---

1 ಪು (ಕ). 2 ಪ (ಒ). 3 ವ (ಅಕ). 4 ಸ (ಅಇಉಎಕ). 5 ಲ್ವ (ಅ), ಲ್ವ (ಇಉಎ). 6 ಲರದೊಂ (ಅಕ), ನಿರಲೊಂ (ಇಉಎ). 7 ದಿರ್ದ (ಒ). 8 ತಗೆಲ(ಅ), ತೆಗೆಲ (ಇಉಎಕ).

ಪಡೆಯರೆನೆ ಚಪಳರಕ್ಕಟ
ಪಡೆದಪರೆ ಗೃಹಸ್ಥರೆಂ[1]ತೊ[1] ಸರ್ವಾವಸ್ಥರ್ ೯೧

ಭವಭವದೊಳ್ ಪೆರ್ಚಿದ [2]ಕೆ[2]
ಚರ್ಚವಿ[3]ರ್ದ[3] ಮಿಥ್ಯಾತ್ವದವರ್ಗೆ* ಜಿನಧರ್ಮಕಥಾ
ಶ್ರವಣಂ ಪೈತ್ತಿಕಮಾಗಿ
ರ್ದ[4]ವರ್ಗೆ[4] ಪಾಲ್ ಕಯ್ಪಿಯುಪ್ಪವೊಲ್ ಕಯ್ಪಿ[5]ಪ[5]ಲಂ ೯೨

ಆವರಿಸೆ ಕೂಸುತನಮು
[6]ಪ್ಪಾವಳಿಯುಂ ತನುಧನಂಗಳಿಂದಿನ್ನೆವರಂ[6]
ಮೂವಣ್ಣಂ ಬರೆ ರೂಪಪ
ರಾವರ್ತನವಿಧಿ[7]ಯಿ[7]ನವರ್ಗೆ* ವಿಧಿ ವಿಧಿಯಿಸುಗುಂ ೯೩

ಬಸನಂಗಳೆ ನಿನ್ನಂ ಬ
ರ್ದಿಸುತಿರ್ದಪುವವಱ ಬಸದೊಳೆಸಪುದಱಿಂ[8]ನಾ
ಣ್ಚೆಸುವೀ ನಾಣಿಲಿ ನಾಣಂ[8]
ಪಸುವಂ[9]ದೆ[9]ಲೆ ಜೀವ ನೀನದೆಲ್ಲಿಗೆವೋದೈ ೯೪

ಬಳೆ ಕಣ್ಬಿ[10]ರ್ದು[10]ವು ಕಣ್ಬಾ
ಯ್ಬಳಿ[11]ಯಾಯ್ತು ಬರ್ದಿಯುಳಿಪುವೆತ್ತುದ[ಟಿ][11]ವೋಪಿನೆಗಂ
ಬಳಸಿ ಬಲವಂದು ನೋಡು[12]ವ[12]
ಯೆಳವೆಂಡಿರನವರೊಳಜ್ಜ ನಿನ[13]ಗೇ[13]ಕಜ್ಜಂ ೯೫

ಕೆನ್ನೆಯ ನರೆಯಂ ಕದಪಿನೊ
ಳುನ್ನುನ್ನಂ ನೆಗೆದ ತೆರೆಯ [14]ನೊಡ್ಡಿದ[14] ಜರೆಯಂ

---

1 ಬ (ಬ). 2 ಕಿ (ಇಉಎ). 3 ಟ್ದ (ಬ). 4 ವಂಗೆ (ಅಇಉಎ). 5 ವೊ (ಅಕ). 6 ಜೌವನಮುಂ ಮುಪ್ಪುಮುಂತಱಿಂದಿನ್ನೆವರಂ (ಒ ಪಾಠಾಂತರ). 7 ಯು (ಬ). 8 ದಂ (ಪುಸಿಯೇಂ) ನಾಣಿಲಿ ನಾಣ (ಬ), ನಾಣ್ಚೆಸುವೀ ನಾಣ್ಚೆನಿಂ (ಇಉಎ). 9 ದ(ಅಇಉಎಕ). 10 ಬ್ಬ (ಬ). 11 ಯಿತ್ತಳಿಪುವೆತ್ತಮುಳಿ (ಅಇಉಎಕ). 12 ವೆ (ಅಇಉಎಕ). 13 (ಗೇಂ). 14 ನೋಡಿದ (ಅಇಉಎಕ).

ಕನ್ನಡಿಯ ನೋಡಿ [1]ತಱಿಸಲೆ[1]
ಕನ್ನಡಿಕುಂ ವೃದ್ಧ ನೋಡ ನಿನ್ನಯ ಮೊಗಮಂ ೯೬

ಚಪ್ಪರಿಸಿ ಬಂದು ನಿನ್ನಂ
ಮುಪ್ಪಡಿಸಿದುದಣಲೊಳಡಸಲಿರ್ದಂ ಜವನಿ
ನ್ನ[2]ಪ್ಪ[2]ಡಮುಱಿ ಬಸನಮು[3]ನಿ
ನ್ನಪ್ಪ[3]ಡಮಿಲ್ಲೆನಿಸಿ ಶಕ್ತಿಗೆಟ್ಟಂದುಱಿವೋ ೯೭

ಪೂಸಿದ ಕಱು[3]ಯಿವು ಗಡ್ಡದ
ಮಿಾಸೆ[4]ಯೆ[4] ಬೇರ್ಬೆಳ್ಳನಾಗೆ ಕಂಡೆಳವೆಂಡಿರ್
ಪೇಸೆ ಕುಲವೃದ್ಧವಿಟರುಂ
ಸಾಸಿಗರಾಕೆಗಳ ಬಱಿಯನುಱಿಯದೆ ಸುಱಿವರ್ ೯೮

ತಾನೊತ್ತೆ ಯಿಡಲ್ಪೋ[5]ದ[5]ಡೆ
ನೀನ್ನಿನ್ನೆಮಗೆಮ್ಮತಂದೆಯ್ಯೆಯೊತ್ತೆಗೆ ಕ
ಯ್ಯಾನೆಮೆನೆ ಮೆಚ್ಚಿ ಸುಱಿವಂ
ಮಾನಿನಿಯರನಜ್ಜನೊಟ್ಟಜಂ ಮುಚ್ಚಿದವೊಲ್ ೯೯

ಮುಸುಮೊಗಮಾಯ್ತು ಮೊಗಂ ಕಾ
ಲ [6]ಸುತ್ತು[6]ಗಂ ಪೋಯ್ತು ಪಲ್ಗಳಳ್ಳಾಡಿದುವೇ
ಡಿಸುವಂತಿರ್ದಪಿರಿನ್ನುಂ
ಬಿಸುಡಿರೆ ನೀವಜ್ಜ ನಿಮ್ಮ ನಿರ್ಲಜ್ಜಿಕೆಯಂ ೧೦೦

ತರುಣತೆ ಪೋಗಿ ಜಿನಾಗಮ
ಪರಿಣತೆ ನಿಮಗಾಗೆ ತಪದೊಳೆಸಗಲ್ಕೆ ವಯಃ
ಪರಿಣತಿ[7]ಗಿ[7]ನಿವಿರಿದಂಬಂ
ದೊರೆಯೆನಿಕುಂ ಯುವತಿಗುರುನಿತಂಬಂ ದೊರೆಯೆ ೧೦೧

ಎಮ್ಮಾನೆಯೆಮ್ಮ ಕುದುರೆಯಿ
ವೆಮ್ಮರಸಿಯರೆಮ್ಮ ಮಕ್ಕಳಿವರೆಂಬೀ ಮ

---

1 ತಿರೆಯುಂ (ಅಇಉಎಕ). 2 ಪ್ಪೊ (ಬ). 3 ಸಿನಿಸಪ್ಪೊ (ಬ). 4 ಯು (ಬ).
5 ದೊ (ಬಕ). 6 ಸತ್ತು (ಇಉಎಬ). 7 ಯಿ (ಬ).

ತ್ತನ್ಮನದೊಳ್ ಕಯ್ಗ[1]ಳಿಯೆ[1]ಗ
ಳುಮ್ಮನೆ ರಸೆಗಿೞಿದರೆನಿಬರಾನುಮಿಳೇಶರ್ ೧೦೨

ಪುಡುಕೆಯ ಪೊಂಗಳಾರೊಡನೆ ಭೂತಳವಾರೊಡನಂಗನಾಳಿಯಾ
ರೊಡನೆ[2]ಗಜಂಗಳಾ[2]ರೊಡನೆ ವಾಜಿಗಳಾರೊಡನಾಪ್ತತಂತ್ರಮಾ
ರೊಡನೆ ರಥಂಗಳಾರೊಡನೆ ಚಾಮರಮಾರೊಡನಾತಪತ್ರಮಾ
ರೊಡನೆ ವಿಭೂತಿಯಾರೊಡನೆ ಪೋದುವು ರಾಜ್ಯಮನೆಂ[3]ತೊ[3] ನಂಬುವರ್ ೧೦೩

ಕರಿ ಪೋಗವು ಹರಿ ಪೋಗವು
ಪರಿವಾರಂ ಪೋಗವೊಡನೆ ನಡೆಪಿದ ನಾಲ್ವರ್
ನೆರವಾಗಿ ಪೋಗರಂತಕ
ಪುರಕ್ಕೆ ಪೋಪೆಡೆಯೊಳರಸರೊರ್ವರೆ ಪೋಪರ್ ೧೦೪

ಇತ್ತ ನಿಷೇಕಮಾಗೆ ಗುರುಗತ್ತಭಿಷೇಕವಿಭೂತಿಗೊಂದುಗುಂ
ತತ್ತನಯರ್ಕಳೊಳ್ ಮೃತಕತೂರ್ಯಮೆ ಮಂಗಳತೂರ್ಯಮಕ್ಕುಮಾ
ಸತ್ತವರೆತ್ತ ನೀರಿೞಿವರೆತ್ತ ಜನಂ [4]ನೆರೆ[4]ದಿಂಡೆಯಾಡಿ ಪಾ
ಡುತ್ತೆ ಸೆದಿ[5]ರ್ಪ[5]ರಿಂತು ಮೃತರಾಜವಿಡಂಬಮನೇಕೆ ಕಾಣ್ಬಿರೇ ೧೦೫

ಮುನ್ನಿನ ಭವದೊಳ್ ಪುಣ್ಯಮ
ನಾನ್ನೆರಪಿದೆನದಱ ಫಲಮನುಂಡಪೆನದಱಿಂ
ದಿನ್ನಪ್ಪ ಭವಕೆ ನೆರಪುವೆ
ನೆನ್ನದ ನರಪತಿಗೆ ನರಕಪತನಂ ಪಿರಿದೇ ೧೦೬

ಪೆಱರ ಮಡಗೂ[6]ಟ[6] ರಾಜ್ಯ
ಕ್ಕೆಱಗಿರ್ದುದು ತಮಗೆ ನಿಟ್ಟೆ[7]ಯೆಂಬಂತೆ[7]ಜನಂ
ಮಱೆ[8]ದಿರೆ[8] ಸಪ್ತವ್ಯಸನ
ಕ್ಕೆಱಗಿರೆ ರಾಜ್ಯಾಂತಮಾಗದಿರ್ಕುಮೆ ನರಕಂ ೧೦೭

ಜಲಬುದ್ಬುದಚಲವಿದ್ಯು
ದ್ವಿಲಸನ ಬಳರಿಪುಶರಾಸನಂಗಳ್ನಿರುತಂ

---

1 ಯ (ಕ). 2 ಪದಾತಿಯಾ (ಇಉಎ). 3 ತು (ಇಉಎ). 4 ಗೆರೆ (ಇಉಎ)
5 ಪ್ಪ (ಇಉಎ). 6 ಟಿ[3] (ಅಇಉಎಕ), 7 ಯಲ್ತೆಂದ (ಬ), 8 ಯದೆ (ಬ)

[1]ಬ[1]ಲವಿಭವರೂಪಯೌವನ
ವಿಲಾಸವಿಲಯಕ್ಕಿವಲ್ತೆ ದೃಷ್ಟಾಂತಗಳ್ ೧೦೮

ಆಗಳೆ ತಂಬುಲಮರಿಸಿನ
ಮಾಗಳೆ ದಿವ್ಯಾಂಬರಂಗಳಾ[2]ಗಳೆ ಕೆಲರಂ
ತಾ[2]ಗಳೆ ಮಱೆವರ್ ಸ್ವಾಮಿಯ
ನಾಗಳೆ ಪೆಱರ್ಗೆಱಗಿ ಜೀಯ ದೇವೆನುತಿರ್ಪರ್ ೧೦೯

ಕೃತಪೂರ್ವಮೆಂದು ತಂದೆಯ
ಮತಂಗಜಂ ವಾಜಿ ಪಟ್ಟಬಾಹ್ಯಂ ತತ್ಸಂ
[3]ತ[3]ತಿಗಪ್ಪೊಡೆ ರಾಜ್ಯಶ್ರೀ
ಸತಿಗೆ [4]ಪತದ್ಗ್ರಹಣೆ[4]ಯಪ್ಪ ಕಾರಣಮೇನೋ। ೧೧೦

ಎನಿಸಿದವಸ್ಥೆಗಳಂ ನೀ
[5]ನ[5]ನಿತುಮನೆಯ್ದಿ ದುರ್ಮನಾತ್ಮ ನಾಣ್ಚುವೆಯಲ್ಲೈ
ಮನದೊಳಣಂ ಸಿಗ್ಗಾಗೈ
ನೆನೆಯೈ ನೀಂ ನಿನ್ನ ಬಂದ ಬಾರದ ಭವಮಂ ೧೧೧

ಹಾಸಕರಂ ಬುಧರ್ಗೆ ಸುಖಾ
ಭಾಸಕರಂ ವಿಷಯಿಗಳ್ಗೆ ಕಾಯಂಕವಿಗಾ
[6]ಯಾಸಕರಂ[6] ಪ್ರಾಣಿಗೆ ಸಂ
ತ್ರಾಸಕರಂ ಭೋಗಿಭೋಗದಂತುಟೆ ಭೋಗಂ ೧೧೨

ಎಂದಱಿದೀ ನಶ್ವರ ಶರೀರಾನಿತ್ಯತೆಯುಮನತಿಜಡಾತ್ಮಕಾತ್ಮಸ್ವಭಾವಮುಮ ನನಿತ್ಯಾಸಾರಸಂಸಾರಸ್ವಭಾವಮುಮ[7]+ನತ್ಯಧಿಕನವ್ಯಾಬಾಧೆಯುಮನತಿಪ್ರಾಜ್ಯ

---

1 ಚ (ಅಕ). 2 ಗೆ ಕೆಲರ್ ತಾವಾ (ಇಉಎ). 3 ಗ (ಅಇಉಎಕ). 4 ಪತಗ್ಗ್ರಹಣೆ (ಅಕ), ಪೃಥಗ್ಗ್ರಹಣನೆ (ಇಉಎ). 5 ನೆ (ಒಕ). 6 ಯೋಸಕಳಂ (ಅಇಉಎಕ). 7 ನತಿನಿರ್ಮಳಧರ್ಮಮಾಹಾತ್ಮ್ಯಮುಮನತಿವಿಷಮವಿಷಯವಿಜೃಂಭಿತಮುಮ (ಇಉಎಒ).

ರಾಜ್ಯದೂಷಣಮುಮನತ್ಯಗಣ್ಯತಾರುಣ್ಯವೈಗುಣ್ಯಮುಮನತ್ಯುದ್ದಾಮ ಭೋಗ ಭಂಗುರತೆಯುಮನಂತೆ ನಿಜಾಂತರಂಗದೊಳ್ ಭಾವಿಸಿ ಬಾರದ ಭವಂ ಬಂದ ಜೀವನ ನೆಗೞ್ತೆಯಂ ಪ್ರತ್ಯಕ್ಷಮಾಗಿ ನುಡಿದುದ[1]ರ್ಕೆ[1] ಕೊಕ್ಕರಿಸಿ

ಸಿರಿಯ ಸಿರಿಯಂ ಜಿನಾಗಮ
ಪರಿಣತಮತಿ ಕೊ[2]ಳೆದ[2]ಪುಲ್ಲ ದ[3]ಕ್ಕಂ[3] ಬಗೆವಂ
ತಿರೆ ಬಗೆದು ಬಿಸು[4]ಡ[4]ಬಗೆದಂ
ಶರೀರಸಂಸಾರಭೋಗನಿರ್ವೇಗಪರಂ ೧೧೩

ಸೆರಗಂ ಪಾರ್ವು[5]ದೆ[5] ಗಂಡಂ
ಶರೀರಸಂಸಾರಭೋಗನಿರ್ವೇಗಂಗಳ್
ದೊರೆಕೊಳುತೆ ಪರಿಗ್ರಹಮಂ
ಪರಿಹರಿಪುದು ಕಲಿಯ ದಂಡೆಯಂ [6]ನೂಂ[6]ಕುವವೋಲ್ ೧೧೪

ಎಂದು ತಱಿಸಂದಾಗಳ್

ನರಲೋಕ ಶ್ರೀಕಾಂತಾ
ವಿರಕ್ತಮಾದತ್ತು ಪರಮನಿರ್ವೇಗಪರಂ
ಪರೆ ನೆಗೞ್ದೆ ಮುಕ್ತಿ [2]ಕಾಂತಾ
ನುರಕ್ತಮಾದತ್ತು ವಿಮಲವಾಹನನ ಮನಂ ೧೧೫

ಅಂತು ವಿಮಲವಾಹನಂ ವಿರಕ್ತ ಚಿತ್ತನಾಗಿಯುಂ ಮುಕ್ತಿಕಾಂತಾನುರಕ್ತ ಚಿತ್ತನಾಗಿ

ಬರವೇೞ್ದಾತ್ಮೀಯ ಮಂತ್ರಿಪ್ರಮುಖರನವರೊಳ್ ನಿಶ್ಚಯಂಗೆಯ್ದು ಧಾತ್ರೀ
ಭರಮಂ ಕೊಟ್ಟಾತ್ಮಜನ್ಮಂಗಧಿಕವಿಭವದಿಂ ಪಟ್ಟಮಂ ಕಟ್ಟಿ ದೀಕ್ಷಾ

---

1 ಕ್ಕೆ (ಅಇಉಎ). 2 ಳಪ (ಇಉಎ). 3 ಕ್ಕರ್ಗಂ (ಬ). 4 ಜೆ (ಬ). 5 ಗೆ (ಅಇಉ ಎಕ). 6 ತೂ (ಇಉ), ಮೂ (ಎ), ಕೂಂ (ಬ).

ಭರಮಂ ಕಯ್ಕೊಂಡು ಗೆಲ್ಲಂಗೊಳಲಿ ಬಗೆದನುತ್ಸಾಹದಿಂ ಜೈನ
ಧರ್ಮೋ
ದ್ಧರಣಂ ಭವ್ಯಾಬ್ಜಮಿತ್ರಂ ವಿನಯನಿಧಿ ಸುಹೃದ್ವತ್ಸಲಂ ವತ್ಸ
ನಾಭಂ ೧೧೬

ಇದು ಸಕಲ ಮುನೀಂದ್ರ ವೃಂದ ವೃಂದಾರಕ ಶ್ರೀಮದಜಿತಸೇನ ಭಟ್ಟಾರಕ

ಶ್ರೀಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ

ಶ್ರೀಮದಭಿನವಕವಿಚಕ್ರವರ್ತಿ

ಕವಿರತ್ನ ನಿರ್ಮಿತ

ಶ್ರೀ ದಾನಚಿಂತಾಮಣಿ ನಿರ್ಮಾಪಿತ

ಶ್ರೀಮದಜಿತತೀರ್ಥಕರ ಪುರಾಣತಿಲಕದೊಳ್

-ಅನಿತ್ಯವರ್ಣನಂ ದ್ವಿತೀಯಾಶ್ವಾಸಂ-

ತೃತೀಯಾಶ್ವಾಸಂ

ಶ್ರೀಮದ್ಗುಣಮಣಿಜಲಧಿಸು
ಸೀಮಾನಗರಾಧಿನಾಯಕಂ ನಿಜಗುಣಚೂ
ಡಾಮಣಿ ಬಿಸುಟಂ ರಾಜ್ಯ
[1]ವಾ[1]್ಯಮೋಹಮನಚಲಚರಿತನಪಗತದುರಿತಂ ೧

ಅಂತು ತನಗೆ ಕಾಲಲಬ್ಧಿಯುಂ ಕರಣಲಬ್ಧಿಯುಮುಪಶಮಲಬ್ಧಿಯುಮೆಂಬ ಲಬ್ಧಿತ್ರಯಂ ದೊರಕೊಳೆ ಸಾಮ್ರಾಜ್ಯದೀಕ್ಷಿತಂ ದೀಕ್ಷಾಭಿಮುಖನುಂ ಸಂಸಾರ ಪರಾಙ್ಮುಖ[2]ನುಮಾ[2]ಗಿ ಪಲ[3] + ಬರರಸುಮಕ್ಕಳ್ವೆರಸುಮೋಕ್ಷಮಾರ್ಗರೂಪಮಂ ಕೈಕೊಂಡು ಮೂಲಗುಣಂಗಳೊಳಮುತ್ಕೃಷ್ಟಚಾರಿತ್ರದೊಳಮುತ್ತರೋತ್ತರಂ ನೆಗ ೞುತ್ತುಂ ಏಕವಿಹಾರಿಯುಂ ದ್ವಿವಿಧಸಂಯಮಧಾರಿಯುಂ ತ್ರಿಗುಪ್ತಿಗುಪ್ತನುಂ ಚತುಷ್ಕಷಾಯದರ್ಪದಳನನುಂ ಪಂಚಸಮಿತಿನಿಯತನುಂ ಷಡ್ಜೀವದಯಾನಿರ ತನುಂ ಸಪ್ತರ್ಧಿಸಂಪನ್ನನುಂ ಅಷ್ಟಮಲವ್ಯಪೇತನುಂ ನವವಿಧಬ್ರಹ್ಮಚ[4]ರ್ಯೋಪೇ ತ[4]ನುಂ ದಶಕುಶಲಧರ್ಮನಿಪುಣನುಂ ಏಕಾದಶಾಂಗಧಾರನುಂ ದ್ವಾದಶವಿಧತಪೋ ನುಷ್ಠಾನನಿಷ್ಠಿತನುಂ ತ್ರಯೋದಶವಿಧಕ್ರಿಯಾತತ್ಪರನುಂ ಚತುರ್ದಶಪೂರ್ವವೇ ದಿಯುಂ ಪಂಚದಶಪ್ರ[5]ಮಾ[5]ದಪರಿವರ್ಜಿತನುಮಾಗಿ ಕೇವಲಜ್ಞಾನೋಪಲಕ್ಷಿತಜೀ ವದ್ರವ್ಯಸಹಕಾರಿಕಾರಣಬಂಧುರಪ್ರಾರಂಭಮುಮನುಪಮಾನಂತ್ಯಪ್ರಾಭವಮುಮ ಚಿಂತ್ಯಾಶೇಷಕಾರಣಮುಂ ತ್ರೈಲೋಕ್ಯವಿಜಯಹೇತುಭೂತಮುಂ ತೀರ್ಥಕರನಾ ಮಗೋತ್ರಕರ್ಮಕಾರಣಮುಮಪ್ಪ ಷೋಡಶತೀರ್ಥಕರಭಾವನೆಯುಮಂ ಭಾವಿ ಸಲ್ ಬಗೆದು

ತನು ತನುವಾಗೆ ನೋಂತು ಪರಮಾಗಮಭಾವನೆಯೊಳ್ ನಿರಂತರಂ
ಮನಮಿರೆ ತನ್ನ ನಾಲಗೆ ಜಿನೇಂದ್ರಗುಣಸ್ತುತಿಗೆಯ್ಯೆ ತನ್ನೊಳಿಂ
ಬೆನೆ ಕರಣತ್ರಯಪ್ರಕೃತಿಶುದ್ಧಿ ನೆಗೞ್ದಿರೆ ಮುನ್ನಿನ ರಾಜ್ಯಲೀಲೆಯಂ
ನೆನೆಯದೆ ತಾಳ್ದಿದಂ ವಿಮಲವಾಹನಯೋಗಿ ತಪೋನಿಯೋಗಮಂ ೨

---

1 ಮಹಾ (ಇಉಎ). 2 ಸಾ (ಇಉಎ). 3 ೦ (ಕ). 4 ರ್ಯಧರ (ಇಉಎ).
5 ಮ (ಅಕ).

ಅಂತು ತಾಳ್ದಿ “ದರ್ಶನವಿಶುದ್ಧಿರ್ವಿನಯಸಂಪನ್ನತಾಶೀಲವ್ರತೇಷ್ವನತಿಚಾರೋಽಭೀಕ್ಷ್ಣಜ್ಞಾನೋಪಯೋಗಸಂವೇಗೌ ಶಕ್ತಿತಸ್ತ್ಯಾಗತಪಸೀ ಸಾಧುಸಮಾಧಿರ್ವೈಯಾವೃತ್ಯಕರಣಮರ್ಹದಾಚಾರ್ಯಬಹುಶ್ರುತಪ್ರವಚನಭಕ್ತಿರಾವಶ್ಯಕಾಪರಿಹಾಣಿರ್ಮಾರ್ಗಪ್ರಭಾವನಾಪ್ರವಚನವತ್ಸಲತ್ವಮಿತಿ ತೀರ್ಥಕರತ್ವಸ್ಯ ಎಂದಾದ ತತ್ವಾರ್ಥಸೂತ್ರದೊಳ್ ಪೇಳ್ದ ಷೋಡಶತೀರ್ಥಕರಭಾವನೆಗಳಂ ಭಾವಿಸಿ ಸಕಲಜಗತ್ರಯಕ್ಷೋಭಕಾರಿಯಪ್ಪ ತೀರ್ಥಕರಪುಣ್ಯಮಂ ಕಟ್ಟಿ ಕಾಲಾಂತರದೊಳ್ ಚತುರ್ವಿಧಾರಾಧನಪುರಸ್ಸರಂ ಸಮಾಧಿಮರಣದಿಂ ಶರೀರಪರಿತ್ಯಾಗಂಗೆಯ್ದು ಪಂಚಾಣುತ್ತರೆಗಳೊಳಗಣ ವಿಜಯದೊಳಹಮಿಂದ್ರನಾಗಿ ಪುಟ್ಟಿ ಸಮಚತುರಸ್ರಸಂಸ್ಥಾನನುಂ ಶರತ್ಸಮಯಸಮುದಿತಶಶಾಂಕಸಂಕಾಶ ವಿಶದವರ್ಣನುಂ ಸರ್ವಾಂಗೋಪಾಂಗಸುಂದರಶುಭಲಕ್ಷಣೋಪಲಕ್ಷಿತೈಕರತ್ನಿಪ್ರಮಾಣವೈಕ್ರಿಯಕಶರೀರನುಂ [1]ತ್ರಾ[1]ಯಸ್ತ್ರಿಂಶತ್ಸಾಗರೋಪಮಪ್ರಮಿತ ಜೀವಿತನುಂ ಪ್ರಶಸ್ತವರ್ಣರಸಗಂಧಸ್ಪರ್ಶನುಂ ಅಣಿಮಾದ್ಯಷ್ಟಗುಣಮಣಿವಿಭೂ[2]ಷಣ[2]ನುಂ ಶುಕ್ಲತರಲೇಶ್ಯಾಪರಿಣಾಮನುಂ ಸಾರ್ಧಷೋಡಶಮಾಸನಿರ್ಯತ್ಸುರಭಿನಿಶ್ವಾಸನುಂ ತ್ರಿಸಹಸ್ರೋತ್ತರತ್ರಿಂಶತ್ಸಹಸ್ರವತ್ಸರ ಸಂಕಲ್ಪಿತಾಮೃತಾಹಾರನುಂ ಸಪ್ರವಿಚಾರಸುಖಾನಂತಗುಣನಿಷ್ಪ್ರವಿಚಾರಸುಖನುಂ ಲೋಕನಾಳಿಕಾಭ್ಯಂತರಗತಾವಧಿಜ್ಞಾನನುಂ ನಿಜಾವಧಿಬೋಧಕ್ಷೇತ್ರಮಾತ್ರಪೂರಣಸಮರ್ಥಮೂಲಶರೀರವಿಕ್ರಿಯಾಬಲನುಂ ಪಂಚವಿಧಾಂತರಾಯಕರ್ಮಕ್ಷಯೋಪಶಮಸಮುದ್ಭವಪಂಚೇಂದ್ರಿಯನತೃ[3]ಪ್ತಿ[3]ಸಂಪಾದಿತಸ್ವಾತ್ಮಸುಖಂ ಸಾತಶುಭಪಂಚಸುಖಾನುಭವನಿರತನುಮಾಗಿ ವಿಮಲವಾಹನನಹಮಿಂದ್ರಂ ಸಾಗರೋಪಮಂಗ[4]ಳೆಲ್ಲ[4]ಮಂ ನೆರಪಿ ಭರತಕ್ಷೇತ್ರದೊಳೆರಡನೆಯ ತೀರ್ಥಕರಪರಮದೇವನಾಗಲೆಂದು ಬರಲಿರ್ಪನ್ನೆಗಂ

ಜಿನಭಾನು ಬಂದು ಭರತಾ
ವನಿಯೊಳ್ ಭವ್ಯಾಬ್ಜಬಂಧುವುದಯಿಸಿದಪ್ಪೊಂ
ನೆನೆದ[5]ಱಿಗೆಂ[5]ಬಂತೆ ನಿಳಿಂ
ಪನಾಯಕಂಗಾದುದಾಗಳಾಸನಕಂಪಂ ೩

ಅಂತು ತನಗಾಸನಕಂಪಮಾಗೆ

ನೆಗಳ್ದ* ಜಿತಶತ್ರು ನೃಪತಿಗೆ
ಮಗನಾದಪನಜಿತನಾಥನೆಂದಱಿದು ಮನ

1 ತ್ರ (ಕ). 2 ಷಿತ (ಕ). 3 ಪ್ತಿ (ಇಉಎ). 4 ಳಲೆಕ್ಕ (ಕ). 5 ಗೆ (ಕ).

ಕ್ಕೊಗೆದವಧಿಬೋಧದಿಂ ವಿಬು
ಧಗಣಾಗ್ರಣಿ ಬರಿಸಿ ಬೆಸಸಿದಂ ಧನಪತಿಯಂ ೪

ಬೆಸಸಿದೊಡೆ ಮೂಱು ಪೊೞ್ತುಂ
ವಸುಧಾರೆಯನೊಸೆದು ಮೂಱುಕೋಟಿಯ್ಯುಮರೆಯಂ
ವಸು[1]ಪ[1]ತಿ ಕರೆದಂ ರಾಜಾ
[2]ವಸಥ[2]ದೊಳೇಂ ಪಿರಿದೊ ಜಿನನ ಪುಣ್ಯಾತಿಶಯಂ ೫

ಅಂತು ಮುನ್ನಮಱುದಿಂಗಳುಂಟಿನೆ ವಸುಮಯಮನಯೋಧ್ಯೆಯೊಳ್ ಧನದಂ ಕಱೆ[3]ಯೆ ಕ[3]ಱೆ[3]ಯುತಿರ್ಪಿ[3]ನಂ [4]ಪ್ರ[4]ಸಾದವರ್ಧನ ಜಾತವರ್ಧನ ಧೈರ್ಯ ವರ್ಧನ ಮನೋವರ್ಧನ ಸೌಭಾಗ್ಯವರ್ಧನಹೇತುಭೂತೆಯರಂ ಪದ್ಮಾದಿಸರೋವರನಿವಾಸಿನಿಯರಂ ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿಲಕ್ಷ್ಮಿಗಳೆಂಬಱುವರುಂ ದೇವಿಯರುಮಂ ಅನೇಕಕೂಟಕೋಟಿರುಚಿರಮಪ್ಪ ರುಚಕಾಚಲದ ಪೂರ್ವದಿಗ್ಭಾಗದ ವೈಡೂ[5]ರ್ಯಾದಿ[5]ಗಳಪ್ಪೆಂಟುಕೂಟಂಗಳೊಳಿ[6]ರ್ಪ[6] ವಿಜಯಾದಿದೇವಿಗಳಪ್ಪೆಣ್ಬರುಂ ದಿಗ್ದೇವಿಯರುಮಂ, ಅಕ್ಷೋ[7]ಣೀ[7]ಧರದ ದಕ್ಷಿಣದಿಗ್ಭಾಗದ ಮೋ[8]ಘಾ[8]ದಿಗಳಪ್ಪೆಂಟುಂ ಕೂಟಂಗಳೊಳಿ[9]ರ್ಪ[9] ಸುಪ್ರದೀಪಾದಿಗಳಪ್ಪೆಣ್ಬರುಂ ದಿಗ್ವನಿತೆಯರುಮಂ ಆ ಪರ್ವತದ ಪಶ್ಚಿಮದಿಗ್ಭಾಗದ ರೋಹಿತಾಕ್ಷಾದಿಗಳಪ್ಪೆಂಟುಂ ಕೂಟಂಗಳೊ[10]ಳಿರ್ಪ[10]ಳಾದೇವತಾದಿಗಳಪ್ಪೆಣ್ಬರುಂ ದಿಗಂಗನೆಯರುಮಂ ಆ ಮಹೀಧರದುತ್ತರದಿಗ್ಭಾಗದ ಸ್ಫಟಿಕಾದಿಗಳಪ್ಪೆಂಟುಂ ಕೂಟಂಗಳೊಳಿರ್ಪ ಲಂಬೂಷಾದಿಗಳಪ್ಪೆಣ್ಬರುಂ ದಿಕ್ಕಾಂತೆಯರುಮಂ ಮತ್ತಮಾ ನಗದ ಮೂಡಣ ದೆಸೆಯ ವಿಮಳಾದಿಗಳಪ್ಪೀ ನಾಲ್ಕುಂ ಕೂಟಂಗಳೊಳಿರ್ಪ ಚಿತ್ರಾದಿಗಳಪ್ಪ ನಾಲ್ವರ್ ವಿದ್ಯುತ್ಕುಮಾರಿಯರುಮಂ ಮತ್ತಮಾ ಶೈಲದ ಪಶ್ಚಿಮದಿಗ್ಭಾಗದ ವಿಕಟಕೂಟಂಗಳೊಳಿರ್ಪ ರುಚಕಾದಿಗಳಪ್ಪೆಣ್ಬರುಂ ಕುಮಾರಿಕಾಮಹತ್ತರಿಕೆಯರುಮಂ ಆ ಗಿರೀಂದ್ರಕೃತಕಕೂಟಂಗಳೊಳಿರ್ಪ ವಿದ್ಯುತ್ಕುಮಾರಿಕಾಪುರಂಧ್ರಿಯರುಮಂ ಮತ್ತಮಿತರನಿವಾಸಿನಿಯರಪ್ಪ ಪೆಱಪೆಱರುಮೆನಿಬರಾನುಂ ದೇವಿಯರುಮಂ ದೇವರಾಜಂ ವಿಜಯಸೇನಾದೇವಿಯ ಸಂಶೋಧನಾವಿಧಿವಧೂರಹಸ್ಯವ್ಯಾಪಾರ[11]ಪರಾಯಣ[11]ರುಂ ಪರಿಚಾರಿಕೆಯುರುಮಾಗಿ ನೆಗೞ್ವಂತು ನಿಯಮಿಸೆ ನಿಯಮನಿಷ್ಠಿತೆಯರಾಗಿ

---

1 ಮ (ಅಕ). 2 ವಾಸ (ಇಉಎ). 3 ಱೆ[3] ಉತ್ತಿರ್ಪ್ಪಿ (ಅ), ಱಿ ಉತ್ತಿಪ್ಪಿ (ಇಉಎ). 4 ಪ್ರಾ (ಅ). 5 ರ್ಯನಿಧಿ (ಅಕ). 6 ಪ್ಪ (ಅಇಉಎ). 7 ಣ್ಯೌಧಿ (ಇಉಎ). 8 ದಾ (ಇಉಎ). 9 ಪ್ಪ (ಅ). 10 ರ್ಪ (ಅಇಉಎ). 11 ಪಾರಣೆಯ (ಇಉಎ).

ರಸಭಾವಂಗಳೊಳಾಡಿ ಪಾಡಿ ಮಧುರಪ್ರಧ್ವಾನದಿಂ ದಿವ್ಯವ
ಸ್ತುಸುಗಂಧೇಂದ್ರತರುಪ್ರಸೂನಫಲಸಂತಾನಂಗಳಂ ತಂದು ಮೆ
ಚ್ಚಿಸಿ ಕೈಗೈಯೊಳೆ ಮಜ್ಜನಂ[1]ಬು[1]ಗಿಸಿಯುಂ ಮುಂಪಿಂಚದೋರೊರ್ವರೊಳ್
ಬೆಸವೇಟ್ಟಲ್ಲಿಗ[2]ಮೆ[2]ಲ್ಲಿಗಂ ವಿಜಯಸೇನಾದೇವಿಗಾದೇವಿಯರ್ ೬

ಅಡಿಗಡಿಗೆ ಸತಿಗೆ ಸಿರಿ[3]ಕೆ[3]
ನ್ನಡಿದೋಱುವ ಚಂದ್ರಕವಳದಿಂದಂ ಮೊಗಮಂ
ತೊಡೆವ ನವಲಕ್ತರಸದಿಂ
ದಡಿಯೂಡುವ ಬೆಸನೆ ದಿವಿಜವನಿತೆಯರ್ಗೆ ಬೆಸಂ ೭

ಭರತಮನೋದುವ ಸಪ್ತ
ಸ್ವರಮಂ ಗುಣಿಯಿಸುವ ಬೀಣೆವಾಜಿಪ ವಿದ್ಧಂ
ಬರೆವ ಪರಚಕ್ರಮಿಕ್ಕುವ
ಪರಿಹಾಸದೊಳ್[4]ಪ[4]ಬಿನದಮವರ್ಗಳ ಬಿನದಂ ೮

ಲೀಳಾವನದೊಳೆ ವಿಹರಿಪ
ಲೀಳಾಸರದೊಳಗೆ ಮೂಡಿ ಮು[5]ಬ್ಬು[5]ವ ಲೀಲಾಂ
ದೋಳಮನೇಱುವ ಲೀಲಾ
ಕೇಳಿಗಳೆ ವಿಲಾಸಕೇಳಿಗಳ್ ನೃಪಸತಿಯಾ ೯

ಕರತಳಪಲ್ಲವೆ ಬಹುಲೋ
ತ್ಕರಮಧುಕರನಿಕರೆ ಪುಷ್ಪವತಿಯಾಗಿಯುಮೇಂ
ಪರಮಪವಿತ್ರಜನಕ್ಕನು
ಕರಿಸಿದಳಂದಾ ಲತಾಂಗಿ ಜಂಗಮಲತೆಯಂ ೧೦

ಬರೆ ಮನೆಗಭ್ಯಾಗತರಾ
ದರದಿಂ ಗೃಹಶುದ್ಧಿಮಾಡುವಂತಜಿತಜಿನಂ
ಬರಲಿರೆ ಮಾಡಿದರಮರೇ
ಶ್ವರಸತಿಯರ್ ನೆರೆದು ಗರ್ಭಸಂಶೋಧನಮಂ ೧೧

---

1 ಜೊ (ಅ). 2 ಮ (ಕ). 3 ಗ (ಕ). 4 ಪ್ಪ (ಅಇಉಎ). 5 ಬಾಗು (ಇಉಎ).

ಅಂತಮರಾಂಗನೆಯರ್ ತಮತಮಗೆ ಗರ್ಭಶೋಧನಾವಿಧಿಯಂ ಮಾಡಿ ವಿವಿಧವಿನೋದಂಗಳಂ ಮೆಱೆಯುತಿರ್ಪನ್ನೆಗಂ ಜ್ಯೇಷ್ಠಮಾಸದಮಾವಾಸ್ಯೆಯೊಳ್ ರೋಹಿಣೀನಕ್ಷತ್ರದೊಳ್ ಬೆಳಗಪ್ಪಜಾವ[1]ದಾಗಳ್[1] ಗೋಮೇಧಿಕಾಧಿಷ್ಠಾನದಿಂ ಶುದ್ಧಸ್ಫಟಿಕಭಿತ್ತಿಯಿಂ ಶಾತಕುಂಭಸ್ತಂಭದಿಂ ಪದ್ಮರಾಗಮಯದ್ವಾರದಿಂ ಮಾಣಿಕ್ಯದ ಕಳಶದಿಂ ಮರಕತದ ತೋರಣದಿಂ ಚಂದ್ರಕಾಂತದ ಮತ್ತವಾರಣದಿಂ ಹರಿನೀಲಗವಾಕ್ಷಜಾಲದಿಂ ವಿಚಿತ್ರವಸ್ತ್ರವಿತಾನದಿಂ ಯಕ್ಷಕರ್ದಮದ ಸಾರವಣೆಯಿಂ ಬಿಡುಮುತ್ತಿನ ರಂಗವಲಿಯಿಂ ಸುರತರುಕುಸುಮದ ಪೂವಲಿಯಿಂ ಱೊಬ್ಬಿನ ಸೊಡರ್ಗುಡಿಯಿಂ ಕಾಳಾಗರುವಿನ ಧೂಪದ ಕರ್ಬೊಗೆಯಿನೆಸೆವ ದಿವ್ಯಶಯನಗೃಹದ ವೈಡೂರ್ಯಪರ್ಯಂಕದೊಳ್ ಪವಡಿಸಿರ್ದು ಬೆಳಗಪ್ಪ ಜಾವ[2]ದಾಗಳ್[2]

ಕರಿವೃಷಭಮೃಗೇಂದ್ರ ಶ್ರೀವಧೂಪುಷ್ಪಮಾಲಾ
ಹರಿಣಧರವಿವಸ್ವನ್ಮೀನಕುಂಭದ್ವಯಾಬ್ಜಾ
ಕರಜಲಧಿಗಜದ್ವಿಟ್ಪೀಠಚಕ್ರಾಹಿಗೇಹ
ಸ್ಫುರಿತಮಣಿಸಮೂಹಜ್ವಾಳೆಯಂ ಕಾಂತೆ ಕಂಡಳ್ ೧೨

ಅಂತು ಷೋಡಶಶುಭಸ್ವಪ್ನ ದರ್ಶನಾನಂತರಂ ತನ್ನ ವದನಾರವಿಂದಮಂ ಗಜರಾಜಂ ಬಂದು ಪುಗುವುದುಮಂ ಕನಸುಗಂಡು ಮಂಗಳಪಾಠಕರ ಪುಣ್ಯರವಂಗಳೊಳಮಂತಃಪುರಪುರಂಧ್ರಿಯರ ಧವಳಮಂಗಳಗೇಯಂಗಳೊಳಮುನ್ನಿದ್ರೆಯಾಗಿ ಮಜ್ಜನಮಂಡನಾದಿನಿತ್ಯನಿಯಮವ್ಯಾಪಾರಮಂ ನಿರ್ವರ್ತಿಸಿ ತನ್ನ ಕಂಡ ಕನಸುಗಳಂ ನಿಜಮನೋವಲ್ಲಭಂಗಱಿಪಲೆಂದು

ಮಸೆದ ಮದನಬಾಣಾಟೋಪಮಂ ಕಣ್ಣ ಬೆಳ್ಪೇ
ಱಿಸಿದ ಮದನಚಾಪಾಟೋಪಮಂ ಪುರ್ಬುಗಳ್ ಪೋ
ಲ್ತೆಸೆಯೆ ವಿಜಯ[3]ಚಿಹ್ನಂ[3] ಚಿತ್ತಜಂಗೆಂಬಿನಂ ರಂ
ಜಿಸುವ ವಿಜಯಸೇನಾದೇವಿ ಕಣ್ಗೊಪ್ಪಿ ಬಂದಳ್ ೧೩

ಅಂತಾ ಮಹಾದೇವಿ ಧವಳಮಂಗಳಪ್ರಸಾಧನಾಲಂಕೃತಶರೀರೆಯುಮಮರಾಂಗನಾಜನವೀಜ್ಯಮಾನಧವಳಚಾಮರಕಳಾಪೆಯುಂ ಧವಳಕಂಚುಕಾವಚ್ಛನ್ನವೃದ್ಧಕಂಚುಕೀಜನಪರಿವೃತೆಯುಮಾಗಿ ಬಂದವನತೋತ್ತಮಾಂಗೆಯಾಗಿ ಸಿಂಹಾಸನಾರ್ಧೈಕದೇಶಮನಲಂಕರಿಸಿ ಸೋಂಕಿ ಕುಳ್ಳಿರ್ದು ತನ್ನ ಕಂಡ ಕನಸು

1 ದೊಳು (ಇಉಎ). 2 ದೊಳು (ಇಉಎ). 3 ಸಿಂಹಂ (ಇಉಎ).

ಗಳೆಲ್ಲಮನನುಕ್ರಮದಿಂ ಪೞೞಪೆ ದೇಶಾವಧಿಬೋಧಸಂಪತ್ಸಂಪನ್ನನಪ್ಪ ಜಿತಶತ್ರು ಮಹಾರಾಜಂ ತದೀಯಶುಭಸ್ವಪ್ನಫಲಮನಱಿದು ತನ್ನಂ ಸಫಲೀಕೃತಜನ್ಮನಾಗೆ ಬಗೆದು

ಕುಳತಿಳಕಂ ಜಗತೀತಳ
ತಿಳಕಂ ತಾಂ ನಮಗೆ ತನಯನಾಗಲ್ ಬಗೆದಂ
ಬೆಳಗುಗುಮಾತಂ ನಮ್ಮಯ
ಕುಳಮುಂ ಶ್ರೀಜೈನಧರ್ಮಮುಂ ಪ್ರಿಯದಯಿತೇ ೧೪

ಅದೆಂತೆಂದೊಡೆ —ಭದ್ರಗಜದಿಂ ಭದ್ರಾಕಾರನುಂ ಗಜಲಾಂಛನನುಂ, ಧವಳವೃಷಭದಿಂ ನಿಜಕುಲಧವಳನುಂ ಧರ್ಮಧುರಂಧರನುಂ, ಸಿಂಹದಿಂ ದುರಿತ ಗಜಘಟಾವಿಘಟನನುಂ ಸ್ಯಾದ್ವಾದಾಚಲಶಿಖರಿಶೇಖರನುಂ, ಲಕ್ಷ್ಮೀಕಾಂತೆಯಿಂ ಸಾಮ್ರಾಜ್ಯಲಕ್ಷ್ಮೀಕಾಂತನುಂ ಮೋಕ್ಷಲಕ್ಷ್ಮೀವಲ್ಲಭನುಂ, ಕುಸುಮದಾಮದಿನು ದ್ದಾಮಕೀರ್ತಿಯುಂ ಭವ್ಯಮಧುಕರ[1]ನಿಷೇ[1]ವ್ಯನುಂ, ಚಂದ್ರನಿನಿಕ್ಷ್ವಾಕುಕುಲವಿ ಯತ್ತಳಚಂದ್ರನುಂ ಕುಮುದಾನಂದಕರನುಂ, ಮಾರ್ತಂಡನಿಂ ಸಕಲಭವ್ಯಪುಂಡ ರೀಕಪ್ರಬೋಧಕರನುಮುದ್ಭಾಸಿವಿಮಳಕೇವಳಜ್ಞಾನನುಂ, ಮೀನಯುಗ್ಮದಿಂ ವಿನಿ ರ್ಜಿತಮೀನಕೇತನುಮನಿಮಿಷಾಭ್ಯರ್ಚಿತನುಂ, ಪೂರ್ಣಕುಂಭದಿಂ ಸಂಪೂರ್ಣ ಪುಣ್ಯೋದಯನುಂ ಕನಕಕಳಶಶಾಲಿಲೀಲಾಭಿಷೇಕಯೋಗ್ಯನುಂ, ಕಮಳಾಕರದಿಂ ಕಮಳಾ[2]ಕಾ[2]ರನುಮತಿಸ್ವಚ್ಛಸ್ವಭಾವನುಂ, ಅಂಭೋಧಿಯಿಂ ಚತುರಶೀತಿಲಕ್ಷ ಲಕ್ಷಣಗುಣರತ್ನಾಂಭೋಧಿಯುಂ ಸಮುದ್ರಸಮಗಾಂಭೀರ್ಯನುಂ, ಸಿಂಹಪೀಠದಿಂ ಸ್ನಾನಪೀಠೀಕೃತಮಂದರಾಚಲನುಂ ಸಿಂಹಾಸನಾರೋಹಣೋಚಿತಾಷ್ಟೋತ್ತರ ಶತಶುಭಲಕ್ಷಣೋಪಲಕ್ಷಿತಾಂಗೋಪಾಂಗನುಂ, ಸುರವಿಮಾನದಿಂ ವಿಜಯವಿಮಾ ನಾವತೀರ್ಣನುಂ ವೈಮಾನಿಕವೃಂದವಂದ್ಯಮಾನಚಾರುಚರಣಾರವಿಂದನುಂ, ನಾ- ಗಭವನದಿನುದಾತ್ತಭೋಗಿಯುಂ ತ್ರಿಭುವನೈಕಚೂಡಾಮಣಿಯುಂ, ರತ್ನರಾಶಿ ಯಿಂದಷ್ಟಾದಶಸಹಸ್ರಶೀಲರತ್ನರಾಶಿಯುಂ ಪರಾರ್ಥ್ಯಗುಣಮಣಿವಿಭೂಷಣನುಂ, ಅಗ್ನಿಯಿಂ ದುರಿತವನದಾವಾಗ್ನಿಯುಂ ವಿಶುದ್ಧಧ್ಯಾನಾನಲನಿರ್ದಗ್ಧಕರ್ಮೇಂಧ- ನನುಮೆನಿಸಿ ನಿಜವದನಾಬ್ಜಪ್ರವೇಶಿ ಗಜರಾಜನಂ ಕಂಡುದಱಿಂ ರಾಜಕುಂಜರಂ ನಿನಗೆ ತನಯನಾದಪನೆಂದು ಷೋಡಶಶುಭಸ್ವಪ್ನಫಲಮನಱಿಪೆ

ಧರಣೀಶ್ವರವಚನಾಮೃತ
ಪರಿಷೇಕದೆ ಗರ್ಭಭೂಮಿಯೊಳ್ ತೀರ್ಥಕರಾಂ

1 ಸೇ (ಅ.ಉ.ಬ). 2 ಕ (ಅ.ಉ.ಬ).

ಕುರಮುದಯಿಸಿದಂತಾಗಿರೆ
ಪರಮೇಶ್ವರಿ ಮಗನನಂದು ಪೆತ್ತಂತೊಸೆದಳ್ ೧೫

ಅನ್ನೆಗಂ ಸಮಯಾವಳಿಕ್ರಮಸಮಾಗತಸಂಖ್ಯೆಗಳಿಂ ವ್ಯವಹಾರಪಲ್ಯಾಧಾರಪಲ್ಯಮುದ್ಧಾರಪಲ್ಯಮೆಂದು ಪಲ್ಯಂಗಳ್ ಮೂಱು ತೆಱನಕ್ಕುಂ. ಈ ಪೇೞ್ದ ಪಲ್ಯಂಗಳಂ ಪತ್ತುಕೋಟಿಕೋಟಿಗೊಂ[1]ಡೊ[1]ಡವು ವ್ಯವಹಾರೋದ್ಧಾರಾಧಾರಸಾಗರೋಪಮಂಗಳೆಂಬುವು. ಅವಱೊಳುದ್ಧಾರಸಾಗರೋಪಮಂಗಳ್ ಪತ್ತು ಕೋಟಿಕೋಟಿಗೊಂಡೊಡವಸರ್ಪಿಣಿಕಾಲಮಕ್ಕುಂ. ಉತ್ಸರ್ಪಿಣಿ ಕಾಲಮುಂ ತತ್ಪ್ರಮಾಣದೇಹೋತ್ಸೇಧಾಯುರ್ಭೋಗಂಗಳ ಹಾನಿವೃದ್ಧಿಗಳೇ ಭರತಕ್ಷೇತ್ರದೊಳ್[2]ಮಾರ್ಗಮ[2]ಪ್ಪುದಱಿಂದಮವರ್ಕುತ್ಸರ್ಪಿಣಿಯು ಮವಸರ್ಪಿಣಿಯುಮೆಂಬ ಪೆಸರ್ಗಳಾದುವು. ಅವೆರಡುಂ ಕೂಡಿದೊಡೆ ಕಲ್ಪಮೆಂಬುದಕ್ಕುಂ. ಅವಱೊಳವಸರ್ಪಿಣಿಯ ಕಾಲಂ ಸುಷಮಸುಷಮೆಯುಂ ಸುಷಮದುಷ್ಷಮೆಯಂ ದುಷ್ಷಮಸುಷಮೆಯುಂ ದುಷ್ಷಮದುಷ್ಷಮೆಯುಂ ದುಷ್ಷಮೆಯುಮತಿದುಷ್ಷಮೆಯುಮೆಂದುಷಡ್ವಿಧಮಕ್ಕುಂ. ಉತ್ಸರ್ಪಿಣಿಯ ಕಾಲಮುಮತಿದುಷ್ಷಮೆಯುಂ ದುಷ್ಷಮೆಯುಂ ದುಷ್ಷಮಸುಷಮೆಯುಂ ಸುಷಮದುಷ್ಷಮೆಯುಂ ಸುಷಮೆಯುಂ ಸುಷಮಸುಷಮೆಯುಮೆಂದು ಷಟ್ಪ್ರಕಾರಮಕ್ಕುಂ. ಅಲ್ಲಿ ಸುಷಮದುಷ್ಷಮೆಯೆಂಬ ಮೂಱನೆಯ ಕಾಲಂ ಮೂಱುವರ್ಷಮುಮೆಂಟುತಿಂಗಳುಂ ಪದಿನೈದು ದಿವಸಮುಂ ಪೋದಿಂಬೞಿಯಂ ನಾಲ್ಪತಿಚ್ಛಾರ್ಸಿರ ವರ್ಷಂಗುಂದಿದೊಂದು ಕೋಟಿಕೋಟಿಸಾಗರೋಪಮಸ್ಥಿತಿಯನುಳ್ಳ ದುಷ್ಷಮಸುಷಮೆಯೆಂಬ ನಾಲ್ಕನೆಯ ಕಾಲದೊಳ್ ಶ್ರುತತೀರ್ಥಪ್ರಭಾವನೆಯಿಂ ಪ್ರಥಮತೀರ್ಥೇಶ್ವರನತಿತೀರ್ಥಸಂತಾನಕಾಲಂ ಪಂಚಾಶಲ್ಲಕ್ಷಕೋಟಿಸಾಗರೋಪಮಿತಮತಿಕ್ರಾಂತಮಾಗೆ ತತ್ಕಾಲದೊಳ್ ಜ್ಯೇಷ್ಠಮಾಸದಮಾವಾಸ್ಯೆಯೊಳ್ ರೋಹಿಣೀನಕ್ಷತ್ರಮಾಗೆ ಬೆಳಗಪ್ಪಜಾವದೊಳ್ ವಿಜಯವಿಮಾನದಿಂ ವಿಜಯಸೇನಾದೇವಿಯ ಗರ್ಭಕ್ಕೆ ವಿಮಲವಾಹನಚ[3]ರಾ[3]ಹಮಿಂದ್ರಂ ಸೌಧರ್ಮೇಂದ್ರ ಸಂಪಾದಿತಸ್ವರ್ಗಾವತರಣ ಮಹಾಕಲ್ಯಾಣಪೂಜಾಪೂರ್ವಕಮವತರಿಸಿ ಗರ್ಭಾಂಬುಜಾ[4]ಕರ[4]ದೊಳಮೃತಕಿರಣಂ ನೆಲಸುವಂತೆ ಗರ್ಭಸರೋರುಹದೊಳ್ ಷಟ್ಚರಣಂ ನೆಲಸುವಂತೆ ನೆಲಸಿ ಮಹೋತ್ಸವದಿಂ ಪ್ರತಿದಿನಂ ಪ್ರವರ್ಧಮಾನಮಾಗೆ

---

1 ಡ (ಅಇಉಎ). 2 ಮೊಗ್ಗಾವದೊಳವಾಟ್ಟುವ (ಇಉಎ). 3 ರನ (ಇಉಎ). 4 ತ (ಕ).

ಲಲಿತವಳಿತ್ರಯಂ ಕಿಡದೆ ಬೆಳ್ಪು ಮುಖಾಂಬುಜದೊಳ್ಪೊಣರ್ದು ಪ
ಜ್ಜಳಿಸದೆ ತೆಳ್ಪಸಿಱು ಬಳೆದು ಬೀಗದೆ ಕ[1]ರ್ಪು[1] ಕುಚಾಗ್ರದೊಳ್ ಮನಂ
ಗೊಳಿಸದೆ ಮುನ್ನಿನಂತೆಸೆಯೆ ಭಾವಿಸಿ ನೋಟ್ಪ ಜನಕ್ಕೆ ವಿಸ್ಮಯಂ
ಬಳೆದಿರೆ ಗರ್ಭದೊಳ್ ಬಳೆದನರ್ಭಕನುತ್ಪಲಪತ್ರನೇತ್ರೆಯಾ ೧೭

ವದನಸರೋಜಸೌರಭದೆ ಸುಂದರರೂಪದೆ ಮಂಜುಕಂಠನಾ
ದದೆ ದಶನಚ್ಛದಾಮೃತದೆ ಪುಟ್ಟುವಿಸಂ ಚತುರಿಂದ್ರಿಯಕ್ಕೆ ಸ
ಮ್ಮದಮುಱಿದಂತೆ ಮಾಣ್ದು ಜಿತಶತ್ರು[2] ನೃಪಂ[2] ನಿಜಕಾಂತೆಗುಂಟುಮಾ
ಡದೆ ಗುರುಗರ್ಭಪೀಡೆಯನದೇನವಱಿಂದಮೆ ತೃಪ್ತನಾದನೋ ೧೮

ಅಂತಾ ನರೇಂದ್ರನಹಮಿಂದ್ರನಂತಪಗತಸಪ್ರವಿಚಾರಸುಖನಾಗೆ,

ಪರಮೇಶ್ವರನಂ ತ್ರಿಜಗ
ದ್ಗುರುವಂ ನೆಗೞ್ದಜಿತನಾಥನಂ ತನ್ನ ತನೂ
ದರದೊಳ್ ತಾಳ್ದಿದ ಪೆಂಪ
ಚ್ಚರಿಯೆನಿಸಿದುದಾ ಸುರಾಂಗನಾಭ್ಯರ್ಚಿತೆಯಾ ೧೯

ಆ ಸತಿಯ ಶುದ್ಧಗರ್ಭಾ
ವಾಸದೊಳುತ್ತಪ್ತಕನಕರುಚಿ ಸೊಗಯಿಸಿದಂ
ಭಾಸುರಶುದ್ಧಸ್ಫಟಿಕಾ
ಭಾಸದೊಳುಜ್ಜ್ವಲಿಸಿ ಬೆಳೆವ ಮಣಿದೀಪದವೋಲ್ ೧೯

ಉದರದೊಳಿರ್ದ ತನೂಜನ
ವದನೇಂದುದ್ಯುತಿಯೆ ಮಾಡೆ ಲಾವಣ್ಯಸಮು
ದ್ರದ ಪೆರ್ಚನರಸಿ ಲಾವ
ಣ್ಯದ ಪುಣ್ಯದ ಪರಮಪದಮನೇಸೆಯ್ದಿದಳೊ ೨೦

ಆ ಧವಳೇಕ್ಷಣೆಗೆನಸುಂ
ಬಾಧೆಯನಾಗಿ[3]ಪನೆ[3] ನೆಲಸಿ ಗರ್ಭದೊಳವ್ಯಾ
ಬಾಧಂ ಮತಿಶ್ರುತಾವಧಿ
ಬೋಧಂ ತನ್ನೊಡನೆ ಪುಟ್ಟಿ ಪುಟ್ಟಿದ ದೇವಂ ೨೧

ಆಗಳಾ ಪರಮೇಶ್ವರಂಗೆ ಜಿನಸ್ನಾನಪವಿತ್ರೀಕೃತೋತ್ತಮಾಂಗಿಗೆ ಜಿನೋ
ಕ್ತಮಸ್ತವನದೊಳಮಾ ಗುಣಮಂಕಕಾರ್ತಿಗೆ ಗುಣವ್ರತಶಿಕ್ಷಾವ್ರತಂಗಳೊಳಮಾ ಮ

---

1 ಪ್ಪು (ಬ೨ಉ). 2 ನಮಾ (ಕ). 3 ಸ (ಬ೨ಉ).

ಹಾಪತಿವ್ರತೆಗೆ ಪಂಚಾಣುವ್ರತಂಗಳೊಳಮಾ ದಾನಚಿಂತಾಮಣಿಗಾಹಾರಾಭಯ ಭೈಷಜ್ಯಶಾಸ್ತ್ರದಾನದೊಳಮಾ ಶೀಲಾಲಂಕಾರೆಗೆ ವಿಶಾಲಶೀಲಲಕ್ಷಣದೊಳಮಾ [1]ಕವಿಚಕ್ರವರ್ತಿ[1]ಪೂಜಿತೆಗೈಂದ್ರಧ್ವಜಕಲ್ಪವೃಕ್ಷಾದಿಜಿನಮಹಾಪೂಜೆಗಳೊಳಮಾ ಭ-ದ್ರ ಮನೋವೃ[2]ತ್ತಿ[2]ಗೆ ಸರ್ವತೋಭದ್ರಸಿಂಹವಿಕ್ರೀಡಿತಾದಿಮಹೋಪವಾಸಂಗಳೊ-ಳಮಾ ಕವಿವರಕಾಮಧೇನುಗೆ ನಿರಂತರದ್ರವ್ಯವಿತರಣದೊಳಮಾ ಭವ್ಯಮನೋ-ರಥ ಜನ್ಮಭೂಮಿಗೆ ಸರ್ವಭವ್ಯಜನವಾತ್ಸಲ್ಯದೊಳಮಾ ಬುಧಜನಾಧಾರಭೂತೆಗಸಿ ಧಾರಾವ್ರತದೊಳಮಾ ದರ್ಶನವಿಶುದ್ಧೆಗೆ ಪರಮಮುನಿಜನಶ್ರೀಪಾದದರ್ಶನದೊಳ-ಮಾ ಮಹಾಸತಿಗೆ ಮಹಾಭಿಷೇಕದೊಳಮಾ ಜಿನಧರ್ಮಧ್ವ[3]ಜನೀಳಾಯ[3]ಮಾನಿಗೆ ಮಹಾಧ್ವಜೋದ್ಧರಣದೊಳಮಾ ಸತ್ಯಶೌಚಾಚಾರಕುಲವಸತಿಗೆ ಜಿನವಸತಿಕರಣ ದೊಳಮಾ ರತ್ನತ್ರಯಾಲಂಕೃತೆಗೆ ಅಪ್ರತಿಮರತ್ನಪ್ರತಿಮಾನಿರ್ಮಾಪಣದೊಳಮಾ ಮಹಾನುಭಾವೆಗೆ ದಶ[4]ಗುಣ[4]ಧರ್ಮಪ್ರಭಾವನೆಯೊಳಮಾ ಧರ್ಮನಂದನಕಲ್ಪಲ ತಿಕೆಗೆ ಧರ್ಮಕಥಾಶ್ರವಣದೊಳಮಾ ಚಂಚಚ್ಚಂಪಕದಾಮಾಭಿರಾಮವರ್ಣೆಗೆ ಚಾ-ತುರ್ವರ್ಣವೈಯ್ಯಾ[5]ವೃ[5]ತ್ಯಕರಣದೊಳಮಾ ಸಮ್ಯಕ್ತ್ವಧವಳೇಕ್ಷಣೆಗೆ ಜಿನಧವಳ ಮಂಗಳಗೇಯಂಗಳೊಳಮಾ ಜಗತ್ಪವಿತ್ರಚಾರಿತ್ರಭೂಷಣೆಗಭಯಘೋಷಣೆಯೊ ಳಮಾ ತೀರ್ಥಕರಜನನಿಗೆ ತೀರ್ಥಾವಲೋಕನಕುತೂಹಲದೊಳಂ ಗರ್ಭದೋಹಳಂ ನೆಗಟ್ಟೆ;

ಕೃತಭವ್ಯೋತ್ಸವಮಾಘಶುದ್ಧದಶಮೀಪುಣ್ಯಾಹಯುಕ್ತಂ [6]ಪ್ರಜಾ
ಪ[6]ತಿಯೋಗಂ [7]ಬೆ[7]ರೆದಂದು ರೋಹಿಣಿಯೊಳಿಂದ್ರಾನಂದತೂರ್ಯಂ ಸರಿ
ತ್ಪತಿಘೋಷಕ್ಕೆಣೆಯಾಗೆ ಭೋರ್ಗರೆಯೆ ಸಂದಿಕ್ಷ್ವಾಕುವಂಶೋದಯೋ
ನ್ನತಶೈಲಾಗ್ರದೊಳಾದುದಂದಜಿತತೀರ್ಥೇಶಾಬ್ಜಮಿತ್ರೋದಯಂ ೨೨

ಇದು ಸಕಲ ಮುನೀಂದ್ರ ವೃಂದ ವೃಂದಾರಕ ಶ್ರೀಮದಜಿತಸೇನ ಭಟ್ಟಾರಕ
ಶ್ರೀಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ
ಶ್ರೀಮದಭಿನವಕವಿಚಕ್ರವರ್ತಿ
ಕವಿರತ್ನ ನಿರ್ಮಿತ
ಶ್ರೀ ದಾನಚಿಂತಾಮಣಿ ನಿರ್ಮಾಪಿತ
ಶ್ರೀಮದಜಿತತೀರ್ಥಕರ ಪುರಾಣತಿಲಕದೊಳ್
-ಕುಮಾರೋದಯವರ್ಣನಂ ತೃತೀಯಾಶ್ವಾಸಂ-

1 ಚಕ್ರವರ್ತಿ (ಅಕ). 2 ತ್ತಿ (ಇಉಎ). 3 ಜಾಯ (ಕ). 4 ಕುಶಲ (ಅಕ). 5 ಪ್ರ (ಕ). 6 ಪ್ರತಿಪ್ರ (ಎಉಇ). 7 ಬ (ಅಇಉಎ).

ಚತುರ್ಥಾಶ್ವಾಸಂ

———

ಶ್ರೀಕಾಂತೆಗಮಪವರ್ಗ
ಶ್ರೀಕಾಂತೆಗಮಧಿಪನಾಗಲುದಯಿಸಿದಂ ಭ
ದ್ರಾಕಾರಂ ಜಿನಧರ್ಮ
ಪ್ರಾಕಾರಂ ಪುಣ್ಯಚರಿತನಪಗತದುರಿತಂ ೧

ಭಾಸುರಸುವರ್ಣವರ್ಣಂ
ದ್ವಾಸಪ್ತತಿಲಕ್ಷವರ್ಷಪರಮಾಯುವಷ್ಟ
ತ್ರಾಸಪಟು ನವಶತಾರ್ಧಶ
ರಾಸನಮಿತದೇಹನಜಿತನಪಗತ[1]ಮೋಹಂ[1] ೨

ಪುಟ್ಟೆ ಭ[2]ಯ[2]ಮುಪವಿರೋಧಿಗೆ
ಪುಟ್ಟೆ ಜನಾನಂದಮಜಿತನಾಥಂ ದೇವಂ
ಪುಟ್ಟಲೊಡಮೊಡನೆ ಬಂದೊಡ
ವುಟ್ಟಿದುವು ಮತಿಶ್ರುತಾವಧಿಜ್ಞಾನಂಗಳ್ ೩

ಅಂಬುಜಸಖವರ[3]ಕರ[3]ಕನ
ಕಾಂಬುಜಮಂ ಪ್ರಥಮದಿಕ್ಸಮಾಪಾಹಿಮಕ್ಕ
ದ್ಬಿಂಬಮನಂದನುಕರಿಸಿ ನಿ
ಜಾಂಬಿಕೆಯಭ್ಯರ್ಣದೊಳ್ ಜಿನಾರ್ಭಕನೆಸೆದಂ ೪

ಪರಮೇಶ್ವರಿ [4]ನಿಜ[4]ಸುತಮುಖ
ನಿರೀಕ್ಷಣದೊಳೊಡನೊಗೆದ[ಗೆ]ಪುಳಕಂಗಳಿನೇಂ
ಕರಮೆಸೆದಳೊ ಸುಗ್ಗಿಯೊಳಂ
ಕುರಿಸಿದುದೊಂದಭಿನವಾಮ್ರಲತಿಕಾಕೃತಿಪೋಲ್ ೫

---

1 ಮಾರಿತಂ (ಬ ಉ ಖ). 2 ಪ (ಇ ಉ ಎ). 3 ತಾ (ಅ). 4 ಜಿನ (ಬ ಉ ಖ).

ಬಡವನದೊಂದಕ್ಷಯನಿಧಿ
ವಡೆದಂತಾನಂದಹೇತುವಂ ನಂದನನಂ
ಪಡೆದು ನೃಪಂ ನೊಸಲೊಳ್ ಕ
ಣ್ಬಡೆದಂತಮರೇಂದ್ರಪದವಿವಡೆದಂತಿರ್ದಂ ೬

ಲಲಿತ ರಗಳೆ

ಆ ಕುಮಾರೋದಯದೊಳಾಗಳಾನಂದದಿ
ಲೋಕವೋದಿದುದು ನಾನಾವಿಧಚ್ಛಂದದಿಂ
ಪಱಿ[3] ಪಲವುವೊಸೆದುವೆಂಟುಂ ದಿಗಂತಂಬರಂ
ತುಱುಗಿ ಕಟ್ಟಿದ ಗುಡಿಗಳಿಂದೆಸೆದುದಂಬರಂ
ರಾಜಭವನದೊಳೆಸೆವ ಮಣಿತೋರಣಂಗಳಿಂ
ರಾಜಿಸು[1]ವುವೆ[1]ತ್ತಿದಾತಪವಾರಣಂಗಳಿಂ
ಬೀದಿಬೀದಿಯೊಳೆಲ್ಲಮೋಕುಳಿಯ ಗಿಂಡಿಯುಂ
[2]ಅ[2]ದವೊಪ್ಪಿದುದು ಪಲತೆಱದ ಪಾಷಂಡಿಯುಂ
ವಾರನಾರೀಜನದ ಸೊಗಯಿಸುವ ನೃತ್ಯದಿಂ
ಚಾರಣಗಣಂಗಳೋದುವ ಕಂದವೃತ್ತದಿಂ
ರಂಗವ[3]ಲ್ಲಿ[3]ಗಳೆ ಬಿಡುಮುತ್ತುಗಳಿನಿಂಬಾಗೆ
ಮಂಗಳರವಂ ಪರೆದು ದಿಗ್ವಳಯಮುಂ ತಾಗೆ
ಶುದ್ಧಾಂತಕಾಂತೆಯರ್ ನೆರೆದೊಸಗೆಯಿಂ ಮಾಡೆ
ವೃದ್ಧಕಂಚುಕಿಗಳಂದವರೊಡನೆ ನಲಿದಾಡೆ
ಸಂತಸದೆ ಮೈಮಱೆದು ಕೂಡೆ ಕುಣಿವಜ್ಜರಿಂ
ಅಂತವರ ಕಾಲೆಡೆಗಳೊಳ್ ನುಗುಳ್ವ ಗುಜ್ಜರಿಂ
ಆನೆಯಂ ಕುದುರೆಯಂ ಕುಡೆ ಪಡೆವ ವಂದಿಯಿಂ
ಭೂನಾಯಕಂ ಬಿಡಿಸೆ ಬಿಟ್ಟ ಬಹುಬಂದಿಯಿಂ
ಪಲವಗ್ರಹಾರಮುಂ ಕುಡೆ ಪಡೆವ ಪಾರ್ವರಿಂ
ಪಲತೆಱದ ವಸ್ತುವಂ ನೃಪನೀಯೆ ಪಾರ್ವರಿಂ
ಬೀಸೆ ಚಂಚತ್ಕನಕಚಾಮರಶ್ರೇಣಿಗಳ್
ಸೂಸೆ ಸೇಸೆಗಳನಬಲೆಯರಮೃತಪಾಣಿಗಳ್

---

1 ತ್ರಿ (ಇಉಎ). 2 ವಾ (ಇಉಎ). 3 ಲಿಗೆ (ಇಉಎ).

ಕಳಸದಿಂ ಕನ್ನಡಿಯಿನೆಸೆವ ಭೃಂಗಾರದಿಂ
ಫಲಕುಸುಮಹಸ್ತೆಯರ ಮಿಗುವ ಶೃಂಗಾರದಿಂ
ಕಿಱುದೊಡೆಯ ಕಡುನುಣ್ಪು ಕಣ್ಗಳೊಳ್ನೆರೆ ಪೊಳೆಯೆ
ಕಿಱುವೊಲೆಯ ಚೆಲ್ಪು ಪೊಂಗೊಡದ ಚೆಲ್ವಂ ತಳೆಯೆ
ನಡು ನಡುಗೆ ಬಿಗಿದೊಗೆದ ಪೆರ್ವೊಲೆಯ ಬಿಣ್ಪಿನಿಂ
ಕಡೆದು ಮಾಡಿದುವೆನಿಪ ಪೊಱವಾಱ ದಿಣ್ಪಿಣಿಂ
ಕಟ್ಟೆಱಪೆಯೋಳಿಯಂತೆಸೆವಸಿಯ ಬಾಸೆಯಿಂ
ದಿಟ್ಟಿಗೆ ನಯಂಬಡೆದ ಪೊಚ್ಚ ಪೊಸದೇಸೆಯಿಂ
ನಳಿತೋಳ ನಗೆಮೊಗದ ಬೆಳರ್*ವಾಯ ಸುಲಿಪಲ್ಲ
ಪೊಳೆವ ಕಣ್ಗಳ ಮಿಳಿರ್*ವ ಕುರುಳ ಕರ್ಬಿನ ಬಿಲ್ಲ
ದೊರೆಯೆನಿಪ ಪುರ್ವಿನಿಂ ನಗೆಮೊಗದ ಚೆಲ್ವೆಸೆಯೆ
ಕರಮೆಸೆವರಬಲೆಯರ್ ನೋಟಕರ ಮನಮೊಸೆಯೆ
ಮುಡಿಬಿಟ್ಟು ಸೋಗೆನವಿಲಂತೆ ಸೊಗಯಿಸಿ ತೋಱೆ
ಕಡೆಗಣ್ಣ ಬೆಳ್ಪು ನೋಟಕರ್ಗೆ* ಚೆಲ್ವಂ ಬೀಱೆ
ತೆಲ್ಲಂಟಿದರ್ಪ ಸಾಮಂತಸಂದೋಹದಿಂ
ದಲ್ಲಿಗಲ್ಲಿಗೆ ನೆಗಱುತಿರ್ಪ ಪುಣ್ಯಾಹದಿಂ
ಪರಸುವ ಧರಾಮರರ ಪಱಕೆಯ ರವಂಗಳಿಂ
ನೆರೆದ ಬೂತುಗಳ ಕೋಳಾಹಳರವಂಗಳಿಂ
ನೆರೆದೊಡನೆ ಮಂಗಳಂಬಾಡೆ ಗಾಯಕಗಣಂ
ಕರಮೆ ಕಣ್ಗೆಸೆದುದು ನರೇಂದ್ರಭವನಾಂಗಣಂ ೭

ಅನ್ನೆಗಂ ದ್ವಿತೀಯತೀರ್ಥಕರದಿನಕರೋದಯನಿವೇದಕಮಪ್ಪ ಸಿಂಹಾಸನಕಂಪದಿಂ ಸಮುತ್ಪನ್ನಾವಧಿಬೋಧವಿಲೋಚನಂ ಸಹಸ್ರಲೋಚನನಱಿದು ಶಂಖನಾದದಿಂ ಭವನವಾಸಿಗರುಂ, ಭೇರೀರವದಿಂ ವಾನವ್ಯಂತರಿಗರುಂ, ಸಿಂಹನಿಸ್ವನದಿಂ ಜ್ಯೋತಿಷ್ಕರುಂ, ಘಂಟಾಟಂಕಾರದಿಂ ಕಲ್ಪಾಮರರುಮಱಿದು ತಂತಮ್ಮಾಸನಂಗಳಿಂ[1] ಇಳಿದು ತೀರ್ಥಕರಂಗೆ ಕರಂಗಳಂ ಮುಗಿದು ಸೌಧರ್ಮೇಂದ್ರ ಈಶಾನೇಂದ್ರ ಸನತ್ಕುಮಾರ ಮಾಹೇಂದ್ರ ಬ್ರಹ್ಮಬ್ರಹ್ಮೋತ್ತರ ಲಾಂತವ ಕಾಪಿಷ್ಠ ಶುಕ್ರ ಮಹಾ

1 ದಿಂ (ಇಉಎ).

ಶುಕ್ರ ಶತಾರ ಸಹಸ್ರಾರ ಆನತ ಪ್ರಾಣತ ಆರಣಾಚ್ಯುತರೆಂಬ ಕಲ್ಪೇಂದ್ರರುಂ, ಸಾಮಾನಿಕತ್ರಾಯಸ್ತ್ರಿಂಶಪಾರಿಷದಾತ್ಮರಕ್ಷಲೋಕಪಾಲಾನೀಕಪ್ರಕೀರ್ಣಕಾಭಿ - ಯೋಗ್ಯ ಕಿಲ್ಬಿಷಿಕಪರಿವಾರವೃತ್ತರುಂ, ಗಜವೃಷಭಾಶ್ವರಥಗಂಧರ್ವನರ್ತಕಿಪದಾತಿ ಲಕ್ಷಣಸಪ್ತಾನೀಕಸಮನ್ವಿತನುಮಾಗಿ ಚಮರವೈರೋಚನರೆಂಬರಸುಕುಮಾರರುಂ ಧರಣೇಂದ್ರನುಂ ಭೂತಾನಂದನುಮೆಂಬ ನಾಗಕುಮಾರರುಂ ವೇಣುದೇವನುಂ ವೇಣುಧಾರಿಯುಮೆಂಬ ಸುಪರ್ಣ ಕುಮಾರರುಂ ಪೂರ್ಣನುಂ ವಸಿಷ್ಠನುಮೆಂಬ ದ್ವೀಪಕುಮಾರರುಂ ಜಲಪ್ರಭಂಜನನುಂ ಜಲಕಾಂತನುಮೆಂಬುದಧಿಕುಮಾರರುಂ ಘೋಷನುಂ ಮಹಾಘೋಷನುಮೆಂಬ ಸ್ತನಿತಕುಮಾರರುಂ ಹರಿಷೇಣನುಂ ಹರಿ [1]ತಕುಮಾರನು[1]ಮೆಂಬ ವಿದ್ಯುತ್ಕುಮಾರರುಮಮಿತಗತಿಯುಮಮಿತವಾಹನುಮೆಂಬ ದಿಕ್ಕುಮಾರರುಂ ಅಗ್ನಿಶಿಖನುಮಗ್ನಿವಾಹನನುಮೆಂಬಗ್ನಿಕುಮಾರರುಂ ವೈಳಂಬ-ನುಂ ಪ್ರಭಂಜನನುಮೆಂಬ ವಾತಕುಮಾರರುಂ ಕಿನ್ನರನುಂ ಕಿಂಪುರುಷನು ಮೆಂಬ ಕಿನ್ನರರಾಜನುಂ ಸತ್ಪುರುಷನುಂ ಮಹಾಪುರುಷನುಮೆಂಬ ಕಿಂಪುರುಷ ಪತಿಗಳುಂ ಕಾಳನುಂ ಮಹಾಕಾಳನುಮೆಂಬ ಗರುಡಪರಿವೃಢರುಂ, [2]ಗೀ[2]ತರತಿಯುಂ ಗೀ[3]ತಯಶನುಮೆಂಬ ಗಂಧರ್ವಾಧೀಶರುಂ, ಮಣಿಭದ್ರನುಂ ಪೂರ್ಣಭದ್ರನು ಮೆಂಬ ಯಕ್ಷಾಗ್ರಣಿಗಳುಂ ಭೀಮನುಂ ಮಹಾಭೀಮನುಮೆಂಬರಾಕ್ಷಸನಾಯ ಕರುಂ [3]ಸು[3]ರೂಪನುಂ ಪ್ರತಿರೂಪನುಮೆಂಬ ಭೂತನಾಥರುಂ ಕಾಳನುಂ ಮಹಾ ಕಾಳನುಮೆಂಬ ಪಿಶಾಚಪ್ರಭುಗಳುಂ ಚಂದ್ರಾದಿತ್ಯಗ್ರಹನಕ್ಷತ್ರ ಪ್ರಕೀರ್ಣಕತಾರಕೆ ಗಳೆಂಬ ಬಹುವಿಧಜ್ಯೋತಿರ್ವಾಸಿಗಳುಂ ವಿಜಯಾರ್ಧಪರ್ವತದ ದಕ್ಷಿಣೋತ್ತರ ಶ್ರೇಣಿಗಳನಾಳ್ವುಭಯ ವಿದ್ಯಾಧರೇಂದ್ರರುಂ ಬೆರಸು ಭಗವದಜಿತಜಿನಜನ್ಮಾಭಿ ಷೇಕ ಕಲ್ಯಾಣಪೂಜೆಯಂ ಮಾಡಲೆಂದಿಂದ್ರಾಣೀಸಮೇತಂ ಐರಾವಣಮಹಾವಾರ ಣಂಸ್ಕಂಧಾರೂಢನಂದು ಚತುರ್ನಿಕಾಯಾಮರಪ್ರಮುಖನಯೋಧ್ಯಾಭಿಮುಖ ನಾಗಿ

ದಿವಿಜೇಂದ್ರಾನಲಕಾಲನೈಋತಿಸರಿನ್ನಾಥಾನಿಲಾರ್ಥೇಶ್ವರೇ
ಶವಿರಿಂಚರ್ ನಿಜವಾಹನಾಯುಧವಧೂನಾನಾಪ್ರಪಂಚಾಶರೀ
ರವಿಳಾಸೋಜ್ಜ್ವಲಮೂರ್ತಿಗಳ್ ತಳರ್ವು*ದುಂ ತಂತಮ್ಮ ದಿಗ್ಭಾಗದಿಂ
ನವಖಂಡಂ ಬರೆವಂತುಟಾದುದು ವಿಯಚ್ಚಕ್ರಂ ಮರುಚ್ಚಕ್ರದಿಂ ೮

ಆ ತ್ರಿದಶಪತಿಯ ದಶಶತ
ನೇತ್ರಂಗಳೊಳೆಸೆವ ಧವಳನೀಳಾರುಣವ

---

1 ಕಾಂತನು (ಅಕ). 2 ಪ (ಕ). 3 ಸ (ಇಉಎ).

ರ್ಣತ್ರಯರುಚಿಗಳ್ ಪಸರಿಸಿ
ಚಿತ್ರಿಸಿದಂತಾಯ್ತು ಗಗನಮಂಡಲಮೆಲ್ಲಂ ೯

ಅಂತು ಗಗನಮಂಡಲಮನಾಖಂಡಲನಲಂಕರಿಸೆ,

ಸ್ಫುರಿತಧವಳಾತಪತ್ರೋ
ತ್ಕರಸಿತಚಮರೀರುಹೋತ್ಕರಂಗಳ ಪೊಳೆಪಿಂ
ಕರಮೆಸದುದು [1]ಸುರವಾಹಿನಿ[1]
ಸುರವಾಹಿನಿಯಂತೆ ಬರುತುಮಂಬರತಲದೊಳ್ ೧೦

ಸುರಲೋಕಮುಮಹಿಲೋಕಮು
ಮೆರಡುಂ ಪಾಱೂಗಿ ಬಂದುವೆನೆ ದಿವಿಜಫಣಾ
ಧರಲೋಕದೆ ತೊಟ್ಟನೆ ಕೊಳೆ
ನರಲೋಕಂ ತೀ[2]ವೆ[2] ಬಂದನಂದಮರೇಂದ್ರಂ ೧೧

ತ್ರಿದಶಸ್ತ್ರೀಜನನೃತ್ಯಮುಂ ದಿವಿಜತೂರ್ಯಾರಾವಮುಂ ಕಿನ್ನರೀ
ಮೃದುಗೀತಧ್ವನಿಯುಂ ಮನಂಗೊಳಿಸೆ ಬಂದಾನಮ್ರನಾಗಿರ್ಪುದುಂ
ಪದಪದ್ಮಕ್ಕಜಿತಂಗುಪಾದ್ಯಜಿನತೀರ್ಥೇಶಂಗೆ ಪಾದ್ಯಂಬೊಲೊ
ಪ್ಪಿದುದಾದ್ಯಾಮರರಾಜಮೌಳಿಮಣಿಗುಚ್ಛಾಚ್ಛೋಚ್ಛರೋಚಿರ್ಜಲಂ ೧೨

ಅಂತೆಱಗಿ ಪೊಡೆವಟ್ಟನೇಕಭವದುರುಭಗವದರ್ಹದವಲೋಕನ ಸಮಯ ಸಮುದಂಚದ್ರೋಮಾಂಚಕಂಚುಕಿತಗಾತ್ರನುಮನವರತವಿಗಳದಾನಂದಾಶ್ರುಜಲ ಧಾರಾಪೂರಪರಿಪ್ಲಾವಿತನೇತ್ರನುಮಾಗಿ ಸಹಸ್ರನೇತ್ರಂ ತೀರ್ಥಕರಗುರುಗಳಂ ತ್ರಿಃ ಪ್ರದಕ್ಷಿಣಂಗೆಯ್ದು ಪೊಡಮಟ್ಟವರ್ಗೆ ಮಾಯಾನಿದ್ರೆಯಂ ಮಾಡಿ ಮಾಯಾಶಿಶುವಂ ಜಿನಜನನಿಯ ಮುಂದಿಕ್ಕಿ ದೇವನಂ ತರ್ಪುದೆನೆ ಶಚೀಮಹಾದೇವಿ ಸೂತಿಕಾ ಗೃಹಮಂ ಪೊಕ್ಕು ಮಾಯಾಶಿಶುವಂ ಮುಂದಿಕ್ಕಿ,

ಸುರುಚಿರವಕ್ತ್ರಚಂದ್ರರುಚಿಯಿಂ ಶುಭಲಕ್ಷಣಲಕ್ಷಿತಾಂಗಮುಂ
ದರತೆಯಿನೊಪ್ಪೆ ಕಣ್ಣ [3]ಪಸಪ್ಪೋ[3]ಡುವಿನಂ ನಡೆನೋಡಿ ಪಲ್ಲವ
ಸ್ಫುರಿತಸಮುಲ್ಲಸತ್ಕರತಳಂಗಳಿನ[4]ಱ್ತಿ[4] ಯೊಳೆತ್ತಿ ತಂದಳಾ
ಪರಿದೆ ಪುಲೋಮಪುತ್ರಿ ಪರಮೇಶ್ವರನಂ ಜಿತಶತ್ರುಪುತ್ರನುಂ

---

1 ಸುಗೆ ಚೆಲ್ವಂ (ಅಉಎ). 2 ವಿ (ಅಉಎ). 3 ಪಸನೋ (ಅಉಎ).
4 ೩೯ (ಅಆಉಎ).

ಅಂತಷ್ಟಮಂಗಳಧಾರಿಣಿಯರಪ್ಪ ದೇವಾಂಗನೆಯರ್ಕಳ್ವೆರಸು ತಂದಿಂದ್ರಾಣಿ ಸೌಧರ್ಮೇಂದ್ರನ ಕಯ್ಯೊಳ್ ಸಕಲಜಗದಮೂಲ್ಯರತ್ನಮಂ ಕಯ್ಯೆಡೆಗುಡುವಂತೆ ಕುಡುವುದುಂ ಮತ್ತಮೆಱಗಿ ಪೊಡೆವಟ್ಟು ಪುನಃಪುನರಾಳೋಕನಂಗೆಯ್ದು

ಎತ್ತಿ ಜಿನಶಿಶುವನಾಗಳ್
ನೆತ್ತಿಯ ಮೇಲಿಟ್ಟು ನೊಸಲ ಮೇಲಿಟ್ಟು ಸುರೇಂ
ದ್ರೋತ್ತಮನಿದಿರೊಳ್ ತಂದಿ
ಟ್ಟಿತ್ತಂ ಮನದಿಂದಗಲ್ಚಲಾಱದೆ[1] ಬೞಯಂ ೧೪

ಅನಿಮಿಷನಯನದೆ ನೋೞ್ಪುದು
ಮನಿಮಿಷಪತಿ ಲೀಲೆಯಿಂದರಲ್ಚಿದುದಾಗಳ್
ಜಿನಪತಿವಕ್ತ್ರೇಂದು ಸಹ
ಸ್ರನೇತ್ರಲೋಚನಸಹಸ್ರಕುವಲಯವನಮಂ ೧೫

ಅಂತು ಕಣ್ಣಾಱೆ ನೋಡಿ ಮನಮಾಱೆ ಪೊಗೞ

ಸಂದಮರಲೋಕಸುಖಮುದ
ಱೊಂದು ಶತಾಂಶಕ್ಕೆ ವಾರದೆಂಬಿನೆಗಂ ಸಂ
ಕ್ರಂದನನ ಮನಕ್ಕಧಿಕಾ
ನಂದಮನಿತ್ತುದು ಜಿನಾಂಗಸಂಸ್ಪರ್ಶಸುಖಂ ೧೬

ಅಂತು ಸಹಸ್ರನಯನಂ ಸುಖರಸನಿಮೀಲಿತನಯನನಾಗೆ

ಪೌಲೋಮೀವಲ್ಲಭನ ವಿ
ಶಾಲೋರಸ್ಸ್ಥಳಮಹೋದಯಾಚಲದೊಳ್ ತೇ
ಜೋಲಂಕೃತತನುಬಿಂಬಂ
ಬಾಲಾರ್ಕನ ಲೀಲೆಯಿಂದೆ ಮುಂದೆಸೆದಿರ್ದಂ ೧೭

ಆಗಳ್

ಜಿನಮುಖಕಮಳವಿಲೋಕನ
ಜನಿತೋತ್ಸವದಿವಿಜಮುಖಗುಹಾಮುಖದಿಂ ಮಾ

---

1 ಸಿ (೩೮೬ಎ).

ದರ್ನಿಯಿನೆ ಪೊಱಮಟ್ಟುವು ನಂ
ದಸಂದಜಯುಜಯರವಂಗಳತಿಮಧುರಂಗಳ್ ೧೮

ಜಿನನೃಷಭಂ ನುಗಂ ನೃಷಭನಂತವರ್ಗಾ*ದನೆನಿಪ್ಪ ಪುಣ್ಯಭಾ
ಜನರವರಲ್ತೆ ನಾಭಿನೃಪನುಂ ಮರುದೇವಿಯುಮಾನತಾಮರೇಂ
ದ್ರನನಜಿತೇಂದ್ರನಂ ತನಯನಂ ಪಡೆದಿರ್ದವರಲ್ತೆ ಸಂದ ಪೆಂ
ಪಿನ ಜಿತಶತ್ರುವುಂ ವಿಜಯಸೇನೆಯುಮಿರ್ವರೆ ಪುಣ್ಯಭಾಜನರ್ ೧೯

ಎಂದು ದಿವಿಜರೆಲ್ಲಂ ಪೊಗೞೆ ದಿವಿಜೇಂದ್ರನಜಿತೇಂದ್ರನಂ ನಿಜಗ-
ಜೇಂದ್ರಬಂಧುರಸ್ಕಂಧಾರೂಢಂಮಾಡಿಯಮರೇಂದ್ರಗಿರೀಂದ್ರಕ್ಕಭಿಮುಖನಾಗೆ,

ನವಕನಕಮುಂಡನಾಯೋ
ಗವಿರಾಜಿತಮಿೞಿಸೆ ಮಣಿಗಣಾಲಂಕೃತಮಾ
ದಿವಿಜಗಜಮಚಿರರುಚಿಯುತ
ಧವಳಾಭ್ರಮುಮಧುಪರೀತರಶ್ಮಿದ್ಯುತಿಯಿಂ ೨೦

ಅಂತಪಹಸಿತಕೈಲಾಸಶೈಲಭಾಸುರಲೀಲಾವಿ[1]ಲಾಸ[1]ನನುಂ ಶೇಷೋರಗ ನಿರ್ವಿಶೇಷವೃತ್ತಾಯತಕರನುಂ ಪುಷ್ಕರಾನುಕಾರಿಪುಷ್ಕರನುಂ ಮೃದುಮೃಣಾಲ ಕೋಮಲಪಾಟಳದೀರ್ಘಾಂಗುಳಿಯುಂ ಅತ್ಯಂತಕಾಂತಸುಜಾಯುತಸುದಂತನು ಮುನ್ನತಾವನತಕುಂಭನುಂ ರಕ್ತಾಪಾಂಗಮಧುಪಿಂಗಳವಿಲೋಚನನುಂ ಸ್ನಿಗ್ಧ ಬಹಳದೀರ್ಘಕೇಶಸಮುಸದ್ಗತವ್ಯೂಢಮಸ್ತಕಪಿಂಡನುಂ ಚಂಚಚ್ಚಂಪಕಮಾಲಾಪಿತೋಳುವು (?) ಮತ್ಯುಗ್ರನುಂ ಸಮುಗ್ರೋಗ್ರಪಲ್ಲವನುಂ ಪೃಥುಬಾಹಿಸ್ತಸಸಗದ-ಪೀನಮಾಂಸಸ್ಸೃಕ್ಕೋ[2]ಪಾ[2]ಲಂಕೃತನುಂ ವಿಸ್ತೀರ್ಣನುಂ ಪರಿಪೂರ್ಣಗ್ರೀವನು-ಮತಿವಿಶಾಲೋರಸ್ಸ್ಥಳನುಂ ಧನುರ್ವಂಶನುಂ ವಿಪುಲೋಪಚಿತಾಂಸನುಂ ಸಮಪಾರ್ಶ್ವನುಂ ಮಾಂಸಕಲಾಭೋಗನುಂ ಪೀನೋಪಚಿತಮಾಂಸವಿಕ್ಷೋಭನುಮಜಕುಕ್ಷಿಯುಂ ವರಾಹಜಘನನುಂ ಸುವಿಭಕ್ತಗಾತ್ರಾಪರನುಮಸಂ[3]ಕ್ಷಿ[3]ಪ್ತವಾಯುಪ್ರವೇಶನುಂ ಪರಿಪೂರ್ಣದಿಕ್ಕೋಶನುಂ ಸಹಕಾರಪಲ್ಲವಾನುಕಾರಿಪೀನಮೋಹನನು-ಮದೀರ್ಘಸ್ನಿಗ್ಧಕೃಷ್ಟವಾಳಾನುಪೂರ್ವಸಕುಳಿಕಾಪರ್ಯಂತವಾಲಧಿಯುಮರ್ಧಚಂ-ದ್ರಾಕಾರವಿಂಶತಿನಖನುಂ ಸುಪ್ರತಿಷ್ಠಿತತಳನುಂ ಸುಚ್ಛಾಯನುಂ ಸುರೂಪನುಂ ಶುಭಲಕ್ಷಣನುಂ ತ್ರಿಪ್ರಮಾಣಸಮಕಾಯನುಮತಿವಿಶುದ್ಧಭದ್ರಜಾತಿಯುಂ ಜಾ-

---

1 ಲಸ (ಇಉಎ). 2 ಪಲಾ (ಇಉಎ). 3 ಚಿ (ಇಉಎ).

ತ್ಯಮಣಿಕನಕಮಂಡನಾಯೋಗಮಂಡಿತನುಂ ವಿಚಿತ್ರನಕ್ಷತ್ರಮಾಲಾಲಂಕೃತನುಂ ಸಮುದ್ರಘೋಷಗಂಭೀರಜಲಚರಧ್ವಾನವೀರದುಂದುಭಿಧ್ವನಿಮಧುರಮಹೋರ್ಜಿತಕಂಠಗರ್ಜಿತನುಂ ಪ್ರಲಂಬಕರ್ಣಚಾಮರನುಂ ಘಂಟಾಟಂಕಾರಬಧಿರಿತಭುವನಾಂತರಾಳನುಂ ಕರಕರಟಕರ್ಣಚೂಚುಕವಿಲೋಚನತಾಲುರೋಮಕೂಪಕೋಪಪ್ರದೇಶಗಳಿತಬಹಳಸಪ್ತಚ್ಛದೈಳಾಸಹಕಾರಕರ್ಪೂರಮಳಯಜಸುರಭಿಪರಿಮಳ-ಮದಜಲಪರಿಮಳಮಿಳಿತಾಂಗಮಂಗಂಮಾಯಾಮಾನಸಮದಮಧುಕರನಿಕರಝುಂಕಾರರವಮುಖರಿತಾಖಿಲದಿಙ್ಮುಖನುಮೆನಿಸಿ

ಸುರಕರಿಗೆ ಮೊಗಂ ಮೂವ
ತ್ತಿರಡಾಮವೆ ಬೇಱೆವೇಱೆ ಮೊಗದೊಳ್[1]ವೆ[1]ಂಟೆಂ
ಟು ರದನಮೊಪ್ಪುಗುಮೊಂದೊಂ
ದು ರದನದೊಳದೊಂದೆ ವಿಮಲಕಮಲವನಂಗಳ್ ೨೧

ಸರಸಿಜದಲರ್ಗಳ್ ಮೂವ
ತ್ತಿರಡೆಸವುವು ಬೇಱೆವೇಱೆ ಕೊಳದೊಳ್ ಮೂವ
ತ್ತಿರಡಲರ್*ಗಳೊಳಂ ಮೂವ
ತ್ತಿರಡಲರ್*ಗಳ್ ಬೇಱೆ ವೇಱೆ ಸೊಗಯಿಸಿ ತೋರ್ಕುಂ ೨೨

ಒಂದೊಂದೆಸಟ್ಟ*ಳ ಮೇಲೆ ಪು
ರಂದರಸೌಂದರಿಯರಲ್ಲಿ ಮೂವತ್ತಿರ್ವರ್
ಬಂದಾಡುವರೆಂದೊಡದೇ
ನೆಂದು ಸುರದ್ವಿಪದ ಲೀಲೆಯಂ ಬಣ್ಣಿಪುದೊ ೨೩

ಅಂತು ವಿಕ್ರಿಯಾಬಲದೆ ಗೀರ್ವಾಣವಾರಣಂ ವಿಗುರ್ವಿಸೆ

ಎರಡನೆಯ ಕಲ್ಪದಮರೇ
ಶ್ವರನಜಿತಜಿನೇಶ್ವರಂಗೆ ಕೊಡೆವಿಡಿದಂ ಚಾ
ಮರಮಂ ತೃತೀಯಕಲ್ಪೇ
ಶ್ವರಮಾಹೇಂದ್ರೇಶ್ವರರ್ಕಳಿಕ್ಕಿದರಾಗಳ್ ೨೪

ಅಜಿತೇಂದ್ರನನಿತರರ್ ಕ
ಲ್ಪಜೇಂದ್ರರಿಕ್ಕೆಲದೊಳೆಸೆದು ವೇಷ್ಟಿಸಿ ಬರೆ ಕ

1 ಗೆ (ಅಕ).

ಲ್ಪಜರೋಳಿಯೆ ಪಾಱಿ ಮಹಾ
ಧ್ವಜಂಗಳಂ ಪಿಡಿದು ಮುಂದಮುಂದನೆ ನಡೆವರ್ ೨೫

ಅಂತು ನಡೆಯೆ,

ನೆಗಟ್ದ*ಮರನಗೇಂದ್ರಮನಾ
ದಿಗಿಭೇಂದ್ರಂ ಪೊರ್ದಿದಲ್ಲಿ ಸುರತೂರ್ಯರವಂ
ನೆಗಱ್ವ*ನೆಗಂ ಕನಕಾದ್ರಿಗೆ
ಖಗಾದ್ರಿ ಸಂತಸದೆ ಬಿರ್ದುವಂದಂತಿರ್ದುಂ ೨೬

ಬಗೆಗೊಳ್ವ ಭದ್ರಶಾಲಂ
ಸೊಗೆಯಿಪ ನಂದನವ ಮಿಸುಪ ಸೌಮನಸದ ಮೇ
ಗೊಗೆದುಜ್ಜ್ವಲಪಾಂಡುಕವನ
ದ ಗಾಡಿಯಿಂ ಕನಕನಗಮುದೇನೊಪ್ಪಿದುದೊ ೨೭

ಚಂದನನಂದನಾವಳಿಗಳೊಳ್ ಸಹಕಾರವನಂಗಳೊಳ್ ಕೃತಾ
ನಂದನರಾಗಿ ಕಂದರದರೀಗೃಹದೊಳ್ ಸುೞಿದಚ್ಛವಾರಿನಿ
ಷ್ಯಂದನಪುಷ್ಪವಾರಿಕಜದೊಳ್ ಪೊರೆದಿರ್ದ ಸುರೇಂದ್ರಸುಂದರೀ
ವೃಂದಮನಾಗಳಾಱಿಸಿತು ಸುಂದರಮಂದರಮಂದಮಾರುತಂ ೨೮

ವನದಂತಿಧ್ವನಿಯಿಂ ಕನನ್ಮಣಿಹಟತ್ಕೂಟಂಗಳಂದಗ್ರಭಾ
ಗನದೀನಿರ್ಝರಪೂರದಿಂದೆ ಸಮುದಪ್ರಸ್ಥಾನಲೀಲಂ ನವಂ
ದನಮಾಲಂ ಸಪತಾಕಮೆಂಬಿನಮುದೇಂ ಚೆಲ್ವಾಯ್ತೊ ತೀರ್ಥಾಧಿನಾ
ಥನ ಬರ್ಪಲ್ಲಿಯೆ ಮಾಡುವಂತೊಸಗೆಯಂ ಶಾತಸ್ವರಾದ್ರೀಶ್ವರಂ ೨೯

ಎಂದುಂ ನಕ್ಷತ್ರಗಣಂ
ಕುಂದದೆ ಬಲವ[1]ರ್ಪ[1] ಮೇರುಗಿರಿಯಂ ಪರಮಾ
ನಂದದೊಳೆ ಮೂಱುಸೂೞ್ ಬಲ
ವಂದುದು ಜಿನಸವನಪೀಠಮೆಂದಮರಗಣಂ ೩೦

ತ್ರಿಗುಣಿಸಿ ಬಲವರ್ಪ ನಿಳಿಂ
ಪಗಣಂ ಮಂದರಕುಭೃನ್ನಿತಂಬಸ್ಥಲದೊಳ್

---

1 ಪ್ಪ (ಅಇಉಎ).

ಸೊಗಯಿಸಿತು ಕನಕರುಚಿಯಿಂ
ತ್ರಿಗುಣಕನತ್ಕನಕಘಟಿತಕಟಿಸೂತ್ರದವೋಲ್ ೩೧

ಅಂತು ಬಲವಂದು ಬಲಾಂತಕನಘಬಲಾಂತಕಂಬೆರಸು ಬಳಾಹಕನಿರ್ಮಿತತ್ರಿವಿಧಸೋಪಾನದಿಕ್ಕೆಲದೊಳಂ ದೇವನಿಕಾಯಂ ಬರೆ ಬಂದು ಸೋಪಾನಮನೇಱುವಲ್ಲಿ,

ಉದಿರ್*ದ ಸುರದ್ರುಮಕುಸುಮಂ
ಪುದಿದಿರೆ ಸೋಪಾನಮಾರ್ಗದೊಳೆ ಮಿಡುಕಲ್ಕಾ
ಱದೆ ಕುಸುಮದೆಸಟ್*ಗಿಳಿಂ[1]ದೇ[1]
ಱಿದುದೈರಾವತಗಜಂ ತ್ರಿವೇಣೀಕ್ರಮಮಂ ೩೨

ವಿಪುಳೇಂದ್ರನೀಳಸೋಪಾ
ನಪಙ್ಕ್ತಿಯೊಳ್ ನಿಜಗಜಾಧಿರೂಢನಿಳಿಂಪಾ
ಧಿಪತನುರುಚಿ ಪ್ಪೋಲ್ತುದು ವಿಯ
ದುಪಪುರಧವಳಾಭ್ರಶಿಖರವಿದ್ಯುದ್ರುಚಿಯಂ ೩೩

ಅಂತು ಬರೆ ಪಾಂಡುಕವನದ ಪೂರ್ವದಕ್ಷಿಣದಿಗ್ಭಾಗದ ರಜತವರ್ಣದ ಪಾಂಡುಕಮುಂ ಪಶ್ಚಿಮೋತ್ತರದಿಗ್ಭಾಗದ ವಿದ್ರುಮವರ್ಣದ ಪಾಂಡುಕಮುಂ [ಪಶ್ಚಿಮ ದಕ್ಷಿಣದಿಗ್ಭಾಗದ] ರತ್ನಕಂಬಳವರ್ಣದ ಪಾಂಡುಕಮುಂ ಪೂರ್ವೋತ್ತರದಿಗ್ಭಾಗದ ಜಾಂಬೂನದವರ್ಣದತಿರಕ್ತಕಂಬಳಮುಮೆಂಬ ನಾಲ್ಕುಂ ಶಿಲಾತಲಂಗಳೊಳರ್ಧಚಂದ್ರಾಕಾರಂಗಳಾಗಿ ಭರತದ ಪರವಿದೇಹದ್ಯೈರಾವತದ ಪೂರ್ವವಿದೇಹದ ತೀರ್ಥಕರಜನ್ಮಾಭಿಷೇಕಕ್ಕೆ ಯೋಗ್ಯಂಗಳಾಗಿರ್ದುವು. ಅವಱೊಳ್ ಪೂರ್ವದಕ್ಷಿಣದಿಗ್ವಳಯಮನಳಂಕರಿಸಿ

ಶತಯೋಜನವಿಷ್ಕಂಭಂ
ಶತಾರ್ಧಯೋಜನಸಮಸ್ತವಿಸ್ತಾರಸಮ
ನ್ವಿತಮಷ್ಟಯೋಜನಪ್ರೋ
ಚ್ಛಿತಮೆನೆ ಪಾಂಡುಕಶಿಲಾತಳಂ ಸೊಗಯಿಸುಗಂ ೩೪

1 ಐ (ಇಱುಎ).

ಬಳ್ವಳನೆ ಬಳೆದ ನಿಜರುಚಿ
ಗಳ್ವೆರಸುಜ್ಜ್ವಲಶಿಲಾತಳಂ ಮನಮಂ ಬೆಂ
ಕೊಳ್ವಘಮನರ್ಘಚಂದ್ರಂ
ಗೊಳ್ವಂತೆಸೆದಿರ್ದುದರ್ಧಚಂದ್ರಾಕೃತಿಯಿಂ ೩೫

ಪಾಂಡುಕೆಮಪ್ಪ ಪಾಂಡುಕಶಿಲಾತಲದೊಳ್ ಕನಕಾಭಭಾಸಿಗಳ್
ದಂಡಿಗೆಗಳ್ ಮನಂಗೊಳಿಸೆ ಮುತ್ತಿನ ಲಂಬಣಮೊಪ್ಪೆ ಚೆಲ್ವನೀ
ಟಿಕ್ಕೊಂಡು ಮಣಿಪ್ರತಾನದ ವಿತಾನಮೊಡಂಬಡೆ ತೀರ್ಥಕರ್ತುಗಾ
ಖಂಡಲನಿಂ ಜಗತ್ತ್ರಿತಯಮಂಡನಮಾಯ್ತಭಿಷೇಕಮಂಡಪಂ ೩೬

ಆ ಮಂಡಪದ ನಡುವಣ ಮಹೋತ್ತುಂಗಸಿಂಹಾಸನದ ಮೇಲೆ ಜಿನಾರ್ಭಕನಂ ಪೂರ್ವಾಭಿಮುಖನಾಗಿರಿಸಿ,

ನೆಲಸಿರೆ ಸಿಂಹಾಸನದಿ
ರ್ಕೆಲದೊಳ್ ಪ್ರಥಮದ್ವಿತೀಯಕಲ್ಪೇಶ್ವರರಾ
ಲಲಿತಮಹೀಧ್ರದ ಪೀಠದ
ಕೆಲದೊಳ್ ಬಂದಿರ್ದರೆಣ್ಬರುಂ ದಿಕ್ಪಾಲರ್ ೩೭

ಉಚಿತಸ್ಥಾನಕದೊಳ್ ತ
ಮ್ಮುಚಿತಸ್ಥಾನಕದೊಳಿ[1]ತ್ತರದೆ ದೇವರ್ಕಳ್[1]
ರುಚಿಮತ್ಕಿರೀಟಮಣಿಗಣ
ರುಚಿಗಳ್ ಬಂದಿರ್ದರಜಿತಸೇವನರುಚಿಗಳ್ ೩೮

ಆವುವು ಕುಚಕಳಶಂ ಪೇ
ಳಾವುವು ಕಳಧೌತಕಳಶಮೆನೆ ಸಂದ ಶಚೀ
ದೇವಿಯುಮಲಂಕ್ರಿಯೋಚಿತೆ
ದೇವನನೋಲಗಿಸಲೆಂದು ಬಂದೊಸೆದಿರ್ದಳ್ ೩೯

ನೆಲೆವಡಲಿಗೆಗಳ ಜಾಗದ
ಕೆಲದೊಳ್ ನೊಸಜಿಣ್ಕೆ ಪತ್ತಿ ಸಂಗಡಮೆಸೆಗುಂ

---

1 ತರದೇವೇಂದ್ರರ್ಕಳ್ (ಅಕ).

ಫಲಮಕ್ಷತ[1]ಕಮಲಾಕ್ಷತ[1]
ಮಲರಚ್ಚ್ಯಂಗ[2]ಙು[2]ಕೆ ಮಂಗಳದ್ರವ್ಯಂಗಳ್ ೪೦

ಧ್ವಜದರ್ಪಣಚಂಚಚ್ಚ್ವಮ
ರಜ ಮಣಿ ಭೃಂಗಾರ ಸುಪ್ರತಿಷ್ಠಿತತಾಳ
ವ್ಯಜನ ಕಳಶಾತಪತ್ರಂ
ತ್ರಿಜಗತ್ಪತಿಗಷ್ಟಮಂಗಳಂ ಸೊಗಯಿಸುಗುಂ ೪೧

ಜಲಗಂಧಾಕ್ಷತೆ ಕುಸುಮೋ
ದ್ವಿಲಸಿತ ಚರು ದೀಪ ಧೂಪ ಫಲನಿವಹಂಗಳ್
ಪಲವೆಡೆಯೊಳಮತ್ಯುತ್ತಮ
ಫಲದಾಯಿಗಳೆಸೆದುವಷ್ಟವಿಧದರ್ಚನೆಗಳ್ ೪೨

ಆಗಳ್

ಸ್ಫುರಿತಕನಕಪ್ರಭಂ ಪಾಂ
ಡುರದೊಳ್ ಪಾಂಡುಕಶಿಲಾತಳಾಪಟ್ಟಕದೊಳ್
ಪರಮನತಿಸ್ವಚ್ಛಸರೋ
ವರದೊಳಗಣ ಕನಕಕಮಳಮಿರ್ಪಂತಿರ್ದಂ ೪೩

ಆಗಳ್ ಶಚೀಪ್ರೇಯಸಂ ಜನ್ಮಾಭಿಷೇಕಮಂಗಳೋಪಕರಣನಾಗಿ,

ಪರಮಜಿನನೆಂಬ ಧರ್ಮಾಂ
ಕುರಕ್ಕೆ ನೀರ್ವೊಯ್ದು ಪುಣ್ಯಫಲಮಂ ಪಡೆಯಲ್
ಸುರಪತಿ ವನಪಾಲಕನೊಳ್
ದೊರೆಯೆನೆ ಜನ್ಮಾಭಿಷೇಕವಿಧಿಗೊಡರಿಸಿದಂ ೪೪

ಅಂತೊಡರಿಸಿ

ಪರಮಜಿನಾಭಿಷೇಕವಿಧಿ ಕ್ಷೀರದ ಕೂಪಜಲಂಗಳಿಂ ಸರೋ
ವರಜಲದಿಂ ಸರಿಜ್ಜಲದಿನಿಲ್ಲಿಗೆ ವೇಟ್ಟುದಗಾಧಮುಗ್ಧಸಾ

1 ಸಿತ ತಿಲಕಂ (ಇಉಎ). 2 ಙು (ಅಇಉಎ).

ಗರಜಲಮೆಂದು ನಾಕಪತಿ ಪೇೞೆ ಸುರಾಚಲದಿಂ ಸು[1]ರಾ[1]ರ್ಣವಂ
ಬರಸುಮರಾದ್ರಿ ನೀಳ್ದು ಗೆಲೆವಂದುದು ಜಂಗಮಸೇತುಬಂಧಮಂ ೪೫

ಕನಕಾಚಲದಿಂದಮರರ್
ಕನಕಾಂಗರ್ ಕನಕಕಲಶಹಸ್ತರ್ ದುಗ್ಧಾಂ
ಬುನಿಧಿವರಮೋಳಿಗಟ್ಟೆ
ರ್ದನುಕರಿಸಿದರಮರಪತಿಯ ನೀಡಿದ ತೋಳಂ ೪೬

ಕನಕಮಯರತ್ನಮಯಭಾ
ಜನಂಗಳೆಸೆದಿರೆ ಭುಜಂಗಳೊಳ್ ಕಳಶ ಮರು
ಜ್ಜನಮೆಸೆದಿರ್ದುದು [ಸಲೆ] ಭಾ
ಜನಾಂಗತರುತತಿಯಿನಬ್ಧಿಯಿಂದದ್ರಿವರಂ ೪೭

ಅಮರೇಂದ್ರಾಚಳದಿಂ ಪಂ
ಚಮಾಬ್ಧಿವರಮೋಳಿಗಟ್ಟಿ ದಿವಿಜರ್ ಮೊಗೆದೀ
ವಮೃತಜಲಭರಿತಕಾಂಚನ
ಸಮುದಗ್ರಘಟಾಳಿಯೆಸೆದುವಿಂದ್ರನ ತೋಳೊಳ್ ೪೮

ತುಂಗತೆಯಿಂ ಕನಕಾಂಶುಪಿ
ಶಂಗತೆಯಿಂದಱಿಯಲಾದುದಿಲ್ಲಖಿಳ ಮರು
ತ್ಪುಂಗವನ ನೆಗೆದ ಭುಜಶಿಖ
ರಂಗಳುಮಂ ಮೇರುಶಿಖರಿಶಿಖರಂಗಳುಮಂ ೪೯

ಪರಿಕಲಿಸಿರೆ ತೋಳೆ ಕೊಂಬಂ
ಕರಜಂಗಳೆ ಪೂಗಳಂ ತಳಂ ತಳಿರಂ ಪೋ
ಲ್ತಿರೆ ಪಿಡಿದ ಕನಕಕಲಶಂ
ಬೆರಸಿಂದ್ರಸುದಾತ್ತಕಲ್ಪತರುವನೆ ಪೋಲ್ತಂ ೫೦

ಆಗಳ್ ಸಕಲಜಗನ್ಮಂಗಳಗಂಗಾದಿಪುಣ್ಯಸರಿತ್ಸರೋವರಾನ್ವಿತಸ್ರೋತಶೀತಜಲಂಗಳಿಂ ಭೂಮಿಶೋಧನಂಗೆಯ್ದು ಪವಿತ್ರದರ್ಭಾಂಕುರಂಗಳಿಂದಗ್ನಿಪ್ರಜ್ವ

1 ಧಾ (ಅಕ).

ಲನಂಗೆಯ್ದಮೃತಾಂಜುಳಿಯಿಂ ಸಕಲಸರ್ಪಪಗಣತರ್ಪಣಂಗೆಯ್ದು ಪೂರ್ವದಿಗ್ಭಾಗದೊಳ್ ದರ್ಭನಿಕ್ಷೇಪಂ ಸಫಲಿಶುಚಿಭೂತಗಾತ್ರನುಂ ಧೌತಧವಳಾಂಬರಪರಿಧಾನನುಂ ಪೂತಯಜ್ಞೋಪವೀತಪವಿತ್ರನುಂ ಮುದ್ರಾಕಂಕಣಶೇಖರಾಲಂಕೃತನುಮಾಗಿ ಸುಂದರಚಂದನಚರ್ಚಿತಂಗಳುಂ ನವಪಲ್ಲವೋಲ್ಲಸಿತಂಗಳುಂ ಪವಿತ್ರಧವಳಸೂತ್ರಪರಿವೇಷ್ಟಿತಂಗಳುಮಗಣ್ಯಪುಣ್ಯಾಂಬುಪೂರ್ಣಂಗಳುಮಪ್ಪ ಚತುಃಕೋಣಕಳಶಂಗಳನಿಟ್ಟು ಪುಷ್ಪಾಕ್ಷತವಿಕ್ಷೇಪಣಂಗೆಯ್ದು ವಿವಿಧಾರ್ಚನೆಗಳಿಂ ಪೀಠಮನರ್ಚಿಸಿ ಚಾತುರ್ವರ್ಣಾಶ್ರಮಗುರುವಂ ಶ್ರೀವರ್ಣದೊಳಿರಿಸಿ ಗೋಮಯಪಿಂಡಾವತರಣದಿಂ ಭೂತನೀರಾಜನವಿಧಾನನಾಗಿ ಪರಿಜನವಧೂಜನಮಹತ್ತರವಾಹನಾಯುಧಾದಿಗಳ್ವೆರಸಷ್ಟದಿಕ್ಪಾಲರನಾಹ್ವಾನಂಗೆಯ್ದು ಮಂತ್ರಪೂರ್ವಕಮರ್ಘ್ಯಾರ್ಚರಣಂಗೆಯ್ದು ಪೂಜಿಸಿ,

ಜಗದಾಹ್ಲಾದವಿನೋದಕಾರಿಗಳನತ್ಯಾಶ್ಚರ್ಯಸಂತಾಪಹಾ
ರಿಗಳಂ ವಾರಿಗಳಂ ಸುವರ್ಣಕಲಶಾನೀಕಂಗಳಿಂ ತೀವಿ ನಾ
ಕಗಣ್ಯೈಕಾಗ್ರಣಿ ತೂರ್ಯಗೀತಮಧುರಧ್ವಾನಂ ದಿಗಂತಂಗಳೊಳ್
ನೆಗಳ್ವಿನ್ನಂ ಸುರಿದಂ ಜಿನೇಂದ್ರಶಿರದೊಳ್ ಸೌಧರ್ಮಕಲ್ಪೇಶ್ವರಂ ೫೧

ಸುರಿಯೆ ಸುರವೃಂದಮುತ್ಸವ
ಪರವಶಮುಂ ಮೊದಲೆ ಮುಸಗಿ ಬೊಬ್ಬಿಱಿಯೆ ದಿಗಂ
ತರಮಂ ತೀವಿದುವು ನಿರಂ
ತರನಿಸ್ಸೃತಸಿಬಿಡಕುಸುಮಪರಮಾಣುಗಳಂ ೫೨

ಆಗಳ್ ತೀರ್ಥಕರಕಲ್ಯಾಣಾಭಿಷೇಕಕ್ರಿಯೆಗೆ ಕಲ್ಯಾಣಕಳಶಮನೆತ್ತಿ ಮೃದುಮೃಣಾಳನಾಳಲೀಲಾಕೋಮಲಶರೀರಂಗೆ ನಾಳಿಕೇರರಸದೊಳಮಿಕ್ಷ್ವಾಕುವಂಶೋತ್ತಂಸಂಗಿಕ್ಷುರಸದೊಳಂ ಭವ್ಯಕೋಕಿಳಕುಳಸಹಕಾರಂಗೆ ಸಹಕಾರರಸದೊಳಂ ತೀರ್ಥಕರತಿಲಕಂಗೆ ತೀರ್ಥಜಲಂಗಳೊಳಮಭಿಷೇಕಂಗೆಯ್ದು ಘೃತದಧಿಮಹೋದಧಿಗಳ್ಗಮಟ್ಟೆತರಿಸಿ,

ಮಾರಾರಿಗಭಿಷವಂ ಜಂ
ಭಾರಿಯಿನಾದತ್ತು ಘೃತಸಮುದ್ರದ ಘೃತದಿಂ
ಕ್ಷೀರಸಮುದ್ರದ ವಿಮಲ
ಕ್ಷೀರದಿನತಿಕಠಿನದಧಿಸಮುದ್ರದ ದಧಿಯಿಂ ೫೩

ಆಗಳ್ ಸಹಸ್ರಾಕ್ಷನಮೃತಜಲಧಿಯಿಂದಮರಸಹಸ್ರಂ ತೀವಿ ತಂದಷ್ಟಯೋಜನಾವಗಾಹಮುಮೇಕಯೋಜನಮುಖವಿಸ್ತಾರಮುಮಷ್ಟೋತ್ತರಸಹಸ್ರಶಾ-

ತಕುಂಭಕುಂಭಂಗಳಿನನಿತೆ ಭುಜಸಹಸ್ರಂಗಳಿಂ ವಿಕ್ರಿಯಾಗುಣದಿಂ ವಿಗುರ್ವಿಸಿ,

ದಿವಿಜೇಂದ್ರಂ ಶಾತಕುಂಭೋಜ್ವಲವಿಗಳಿತಕುಂಭಂಗಳಂ ತಂದು ದುಗ್ಧಾ
ರ್ಣವಸಾರಕ್ಷೀರದಿಂದಂ ಮಿಸಿಸೆ ಭವದವಜ್ವಾಳನಂ ಬಾಳನಂ ಕೂ
ಟವಿಟಂಕಸ್ಥಾನದೊಳ್ ಸಿಲ್ಕಿರದೆ ಪರಿದು ಚಂಚಲ್ಲಸಚ್ಚಂದ್ರರೋಚಿ
ರ್ಧವಳಂ ಮಾಡಿತ್ತು ತನ್ಮಂದರಮಹಿಧರಮಂ ಕ್ಷೀರಧಾರಾಪ್ರವಾಹಂ ೫೪

ಸುರಿವುತ್ತುಂ ತೀವುತ್ತುಂ
ಪರಮಜಿನಸ್ನಾನಕನಕಕಲಶಂಗಳ[1]ನಂ
ದರಘಟ್ಟ[1]ಘಟೀಯಂತ್ರದ
ದೊರೆಯಾಯ್ತು ಸಹಸ್ರನೇತ್ರಬಾಹುಸಹಸ್ರಂ ೫೫

ಕಳಧೌತಕಳಶಮುಖನಿ
ರ್ಗಳಿದಮೃತಾಂಭಃಕಣೌಘಮಾಯತವಕ್ಷ
ಸ್ಸ್ಥಳವಲ್ಲಿ ಕಂಠಿಕಾಶ್ರೀ
ವಿಳಾಸದಿಂದೆಸೆದುದಜಿತತೀರ್ಥೇಶ್ವರನಾ ೫೬

ಕವಿದತ್ತೊರ್ಮೆಯೆ ಬಂದ ಪಾಲ ಪೊನಲೆವಿಶ್ವಾಲೋಕಮಂ ತಾರಕಾ
ನಿವಹಂ ತೇಂಕಿಪುದಿಂದು ಮೂಡಿ ಮುಳುಗುತ್ತಿರ್ದಪ್ಪನರ್ದಿರ್ದಪೊಂ
ರವಿಯೆಂಬಾಕುಳಚಿತ್ತದಿಂ ಗ್ರಹಕುಳಂ ಬೆಂಬಿರ್ದ ದೇವರ್ ನಿದಂ
ದಿವಿಜಾಧೀಶ್ವರನೆಂಬಿನಂ ಪ್ರಕಟಮಾಯ್ತುಂಭಃಪ್ರವಾಹಪ್ಲವಂ ೫೭

ಜಿನಮಜ್ಜನಾವಸರದೊಳ್
ವಿನಮಜ್ಜನಮುಕುಟದುಗ್ಧದುಗ್ಧಾಂಬುಕಣಂ
ಕನಕಮುಕುಟಂಗಳಂ [2]ಮು[2]
ತ್ತಿನ ಮುಕುಟಮಿದೆನಿಸಲಾರ್ತುದತಿಬಹಳತೆಯಿಂ ೫೮

ದೆಸೆಯಾನೆಗಳಾನನದೊಳ್
ಪಸರಿಸಿ ದುಗ್ಧೋದಬಿಂದು ಚಿಬ್ಬಂಬೊಯ್ದಂ
ತೆಸೆದಿರ್ದುವು [3]ಮೆಯ್ಯೊಳ್ಬೆ[3]
ಳ್ಪಸದನದಂತಿರ್ದುವಜಿತಸವನೋತ್ಸವದೊಳ್ ೫೯

---

1. ನಚ್ಚರಿವಟ್ಟ (ಇಉಎ). 2. ಪೊ (ಇಉಎ). 3. ದೇಸೆಯೊಳೊ (ಅಕ).

ಉರದೊಳ್ ಹಾರಶ್ರೀಯಿಂ
ಕೊರಲೊಳಮೇಕಾವಳೀವಿಳಾಸದಿನಾಗಳ್
ಕರಮೆಸೆದಿರ್ದುವು ದಿಕ್ಸಿಂ
ದರೀಗಣಂಗಳ್ಗೆ ದುಗ್ಧವಾರಿಕಣಂಗಳ್ ೬೦

ಪ್ಲವಗಪ್ಲುತದಿಂ ಚಾರಣ
ನಿವಹಂ ಚಾರಣಗಣಂಗಳಂತಾಗೆ ಪಯಃ
ಪ್ಲವದೊಳಗೆ ಮುೞ್ಕಿ ಪಾರಿ
ಪ್ಲವನೇತ್ರೆಯರಮರಕಾಂತೆಯರ್ ಸೊಗಯಿಸಿದರ್ ೬೧

ಜಿನಮಜ್ಜನಾಂಬು ಪಾಂಡುಕ
ವನದಿಂ ಸೌಮನಸವನಕೆ ತದ್ವನದಿಂ ನಂ
ದನವನಕೆ ಪರಿದುದಾ ನಂ
ದನವನದಿಂ ಭದ್ರಶಾಲವನಕೆ ವಿಶಾಲಂ ೬೨

ಪಾಲ ಪೊನಲ್ ಪೊದೞ್ದುದವಿ ಸೌಂದರಮಂದರಕಂದರಂಗಳಂ
ಶೈಲದರೀಗೃಹಂಗಳುಮನೊರ್ವೆಯೆ ತೆಕ್ಕನೆ ತೀವಿ ತತ್ಸ್ಥಳ
ಸ್ಥೂಲಭುಜಂಗವಿಶ್ವಸಿತವಾ ನಗದಿಂ ಪೊಱಪೊಣ್ಮಿ ಲೋಲಕ
ಲ್ಲೋಲಪರಂಪರಾಪರಿಗತಂ ಪರಿದತ್ತು ನಗೋಪಕಂಠದೊಳ್ ೬೩

ಆ ಸುರಗಿರಿಯೊಳ್ ದುಗ್ಧಮ
ಹಾಸಿಂಧುಕ್ಷೀರವರ್ಷಮುಂ ಮಾಡುತ್ತುಂ
ವಾಸವನೆ " ಗಿರೌ ವರ್ಷತಿ
ವಾಸವ " ಎಂಬೊಂದು ವಾಕ್ಯಮುಂ ಪ್ರಕಟಿಸಿದಂ ೬೪

ಬಾಳನ ನಾಸಾಪುಟದೊಳ್
ಮೇಳಿಸೆ ದುಗ್ಧೋದಬಿಂದುಸಂದೋಹಂಗಳ್
ಲೀಳೆಯಿ[1]ನಾ[1]ಂತುಸಿರ್ದೊಡೆ ಕಡು
ಗಾಳಿಯ ತೞಿಗೆಲೆಗಳಂತೆ ಪಾಱಿದರಮರರ್ ೬೫

ಸ್ಫುರಿತಕಳಧೌತಕಳಶ
ಕ್ಷರದಮಲಕ್ಷೀರವಾರಿಧಾರೆಗಳಿಂ ಪಾಂ

---

1. ನ (ಇಉಎ).

ಡುರಿತಂಗಳಾಗಿ ಮಂದರ
ದರೀಗೃಹಂಗಳ್ ಸುಧಾಗೃಹಂಗಳಿವೆನಿಕುಂ ೬೬

ಕವಿ[1]ತಂ[1]ದು ಕೂಡೆ ದುಗ್ಧ
ಪ್ರವಾಹವಾಶ್ಚರ್ಯ[2]ಮಾಗೆ[2] ಮಾಡಿದುದಾಗಳ್
ಲವಣಾರ್ಣವಮಂ ಕ್ಷೀರಾ
ರ್ಣವದೊಳ್ ಸಮನಾಗೆ ಸವನದೊಳ್ ಜಿನಪತಿಯಾ ೬೭

ಅಂತು ಮಂದರಾಚಲದಕೃತ್ರಿಮಚೈತ್ಯಾಲಯಂಗಳೆಲ್ಲಂ ಸೌಧಾಲಯಂಗಳೆನಿಸೆಯುಂ, ದರೀಗೃಹಂಗಳೆಲ್ಲಂ ಸೌಧಗೃಹಂಗಳೆನಿಸೆಯುಂ, ಕನಕಕೂಟಂಗಳೆಲ್ಲಂ ರಜತಕೂಟಂಗಳೆನಿಸೆಯುಂ, ಮರಂಗಳೆಲ್ಲಂ ಪಾಲ್ಮರಂಗಳೆನಿಸೆಯುಂ, ಬಳ್ಳಿಗಳೆಲ್ಲಮಮೃತವಳ್ಳಿಗಳೆನಿಸೆಯುಂ, ಮೃಗಂಗಳೆಲ್ಲಂ ಬೆಳ್ಮಿಗಂಗಳೆನಿಸೆಯುಂ, ಕರಿಗಳೆಲ್ಲಮಮರಕರಿಗಳೆನಿಸೆಯುಂ, ಹರಿಗಳೆಲ್ಲಮಮರಹರಿಗಳೆನಿಸೆಯುಂ, ಧೇನುಗಳೆಲ್ಲಂ ಸುರಧೇನುಗಳೆನಿಸೆಯುಂ, ವೃಷಭಂಗಳೆಲ್ಲಂ ಹರವೃಷಭಂಗಳೆನಿಸೆಯುಂ, ಮಾನಸರೆಲ್ಲಂ ನೀರ್ಮಾನಸರೆನಿಸೆಯುಂ, ತೊಱೆ[3]ಗಳೆಲ್ಲಂ [3]ಪಾಲ್ದೊ[3]ಱೆ[3]ಯೆನಿಸೆಯುಂ, ಶಿಲಾತಳಂಗಳೆಲ್ಲಂ ಸ್ಫಟಿಕಶಿಲಾತಳಂಗಳೆನಿಸೆಯುಂ, ಕೂಪಂಗಳೆಲ್ಲಮಮೃತಕೂಪಂಗಳೆನಿಸೆಯುಂ, ಗಿರಿಗಳೆಲ್ಲಂ ರಜತಗಿರಿಗಳೆನಿಸೆಯುಂ, ಇಕ್ಷುವಾಟಂಗಳೆಲ್ಲಂ ಪುಂಡ್ರೇಕ್ಷುವಾಟಂಗಳೆನಿಸೆಯುಂ, ಜಂಬೂದ್ವೀಪಮೆಲ್ಲಂ ಶ್ವೇತದ್ವೀಪಮೆನಿಸೆಯುಂ, ಲವಣಾರ್ಣವಮೆಲ್ಲಂ ಕ್ಷೀರಾರ್ಣವಮೆನಿಸೆಯುಂ, ದಿಗ್ದೇವಿಯರೆಲ್ಲಂ ಜಲದೇವಿಯರೆನಿಸೆಯುಂ, ದುಗ್ಧಾರ್ಣವಮೇಕಾರ್ಣವಮಾಗೆ,

ಕನಕಾದ್ರೀಂದ್ರಂ ಕನತ್ಕಾಂಚನರುಚಿರುಚಿರಂ ಮುನ್ನಮಾಗಳ್ ನಗಂ ತೊ
ಟ್ಟನೆ ಚಂಚಚ್ಚಂದ್ರರೋಚಿರ್ಧವಳಮೆನಿಸಿ ರೌಪ್ಯಾದ್ರಿಯಂತಿರ್ದುದಾ ಕಾಂ
ಚನಶೈಲಾಧೀಶನೋ ಹೈಮವತಮಹಿಧರಾಧೀಶನೋ ಪೇಱಿಮೆಂ[4]ತೆಂ
ಬಿ[4]ನೆಗಂ ಸಂದಿಗ್ಧಮಾಗಿರ್ದುದು ಜಿನಸವನಸ್ನಿಗ್ಧದುಗ್ಧೋಪದಿಗ್ಧಂ ೬೮

ಅಂತು ಧರ್ಮತೀರ್ಥಪ್ರವರ್ತನಂಗೆ ಸುಗಂಧಶುಷ್ಕಚೂರ್ಣಪಿಷ್ಟದಿನುದ್ವರ್ತನವಿಧಿಯಂ ನಿರ್ವರ್ತಿಸಿ ವರ್ಣಪೂರದಿನುತ್ತಪ್ತಸುವರ್ಣಜಿನರಾಜಕುಂಜರಂಗೆ ನೀರಾಜನವಿಧಿಯಂ ಮಾಡಿ

---

1. ದ (ಇಉಎ). 2. ಮುಮನೆ (ಇಉಎ). 3. ಬಾನ್ದೊ (ಅಕ). 4. ಬೆಂತಿ (ಇಉಎ).

ನೆಗೞ್ದಿರ್ದು ಪಾಲ್ಮರಂಗಳ
ತಿಗುಳ್ಗಳಿಕ್ಕಿದ ಕಷಾಯಜಳದಿಂದಿಂದ್ರಂ
ವಿಗತಕಷಾಯಂಗಜಿತಂ
ಗಗಣ್ಯಪುಣ್ಯಂಗೆ ಮಾಡಿದಂ ಮಜ್ಜನಮಂ ೬೯

ಆಗಳ್,

ಪರಮೇಶ್ವರನುಂ ಕಾರ್ತ
ಸ್ವರವ ಚತುಷ್ಕೋಣಕಲಶಮುಂ ಪೋ[1]ಲ್ತು[1]ವೆ ಮಂ
ದರಶಿಖರಪಂಚಶಿಖಿಯುಂ
ಪರಿಮಳಮಿಳಿತಾಳಿಪಟಳರುಚಿಜಟಿಳತೆಯುಂ ೭೦

ಅಂತು ಕಷಾಯಚತುಷ್ಟಯಮುಂ ಕರ್ಚಿ ಕಳೆವಂತಾನುಮನಂತಚತುಷ್ಟಯಪ್ರಾಪ್ತಿಗೆ ರಾಜ್ಯಾಭಿಷೇಕಂಗೆಯ್ವಂತಾನುಂ ಚತುಃಕೋಣಕಳಶಭರಿತತೋಯದಿನಭಿಷೇಕಂಗೆಯ್ದು ಕಾಳಾಗರು ಕರ್ಕೋಳ ಜಾತೀಫಲ ಜಾತೀಪತ್ರ ಗೋಶೀರ್ಷ ಚಂದನ ಲವಂಗ ಕುಂದುರುಷ್ಕಾದಿ ಸುಗಂಧದ್ರವ್ಯಸಹಿತನಾಗಿ,

ಮಳಯೋರ್ವೀರುಹ ಕುಂಕುಮದ್ರವಯುತಂ ಕರ್ಪೂರಮಿಶ್ರಂ ಮನಂ
ಗೊಳೆ ಮತ್ತಾಳಿಕುಳಪ್ರಣಾಳಿಮಧುರಂ ಗಂಧೋದಕಂ ಸ್ವರ್ಣಮಂ
ಗಳಕುಂಭಂಗಳೊಳೊಂದುಮಾಡಿ ಪಲವುಂ ತೀರ್ಥಾಂಬುವಂ ತೀರ್ಥಕೃ
ತ್ತಿಳಕಂಗ[2]ಲ್ತಿ[2]ಯೆ ಮಾಡಿದಂ ಮಘವನಾ ಗಂಧೋದಕಸ್ನಾನಮಂ ೭೧

ಪವಿಯುಂ ರಕ್ಷಿಸುವುದಱಿಂ
ಪವಿತ್ರನಾದನೆ ಸುರೇಂದ್ರನಜಿತನ ವಿನಮ
ದ್ಭುವನನ ಗಂಧೋದಕದಿಂ
ಪವಿತ್ರನಾದಂ ಪವಿತ್ರಗಾತ್ರನುಮಾದಂ ೭೨

ಮೋದಕರಂ ಖಳಕರ್ಮ
ಚ್ಛೇದಕರಂ ಸುಖದಶುಭದಕರಮಮರಜನಾ
ಹ್ಲಾದಕರಮೆನಿಪ ಜಿನಗಂ
ಧೋದಕದಿಂ ಕುಲಿಶಿಗಾದುದವಭೃತಸವನಂ ೭೩

ಅನಿಮಿಷಪತಿಯುಂ ತ್ರಿಜಗ
ಜ್ಜನಪತಿಯುಂ ಪೊತ್ತು ಪಥಪರಿಶ್ರಮಮೊದವಿ

1. ಲ್ತ (ಅಕ). 2. ತ್ತಿರ್ (ಆಇಉಎ).

ತ್ತಿನೆ ಪಾಲ ಮೊಸಱ ತುಪ್ಪದ
ಪೊನಲೊಳಗವಗಾಹವಿರ್ದುದಮರಗಜೇಂದ್ರಂ ೭೪

ದಿವಿಜಾಧೀಶ್ವರನೊರ್ವನೆ
ಪವಿತ್ರನಾದನೆ ಪವಿತ್ರಮಾಯ್ತಮರನಗಂ
ಭುವನಂ ಪವಿತ್ರಮಾದುದು
ಸವನೋದಕದಿಂ ದ್ವಿತೀಯತೀರ್ಥೇಶ್ವರನಾ ೭೫

ವೃಷಕೃತಜಿನೇಂದ್ರಜನ್ಮಾ
ಭಿಷವಂ ನಂದೀಶ್ವರತ್ರಯಂಗಳೊಳಮ್ಮಮಾ
ನುಷಮಾಗಿರೆ ಮಾಳ್ಪ ಮಹಾ
ಭಿಷೇಕದಂತಾಯ್ತು ದಾನಚಿಂತಾಮಣಿಯಾ ೭೬

ಅಮೃತಜಲದಿಂದಮನಿಬರು
ಮಮರೇಂದ್ರರ್ ಮಿಸಿಸೆ ತನ್ನನನಿಬರುಮಂ ತಾ
ನಮೃತಮಯದೃಷ್ಟಿಯಿಂ ನೋ
ಡೆ ಮಿಂದರಮರೇಂದ್ರರಜಿತನಯನಾಮೃತದಿಂ ೭೭

ಅಂತು ಜನ್ಮಾರಾತಿಗಪುರ್ಜನ್ಮಲಕ್ಷ್ಮೀವಲ್ಲಭಂಗೆ ಪುಣ್ಯಜನ್ಮನೆನಿಸಿದ ದಿವಿಜರಾಜಂ ಜನ್ಮಾಭಿಷೇಕಕ್ರಿಯೆಯಂ ನಿರ್ವರ್ತಿಸಿ,

ಸುರಸಿಂಧೂದಕಯಕ್ಷಕರ್ದಮ ಲಸನ್ಮುಕ್ತಾಕ್ಷತಾಮೋದಬಂ
ಧುರಮಂದಾರಸುಧಾರಸಾನ್ನ ಮಣಿಮಾಲಾದೀಪ್ರದೀಪಾಸಿತಾ
ಗರುಧೂಪ ತ್ರಿದಶಾವನೀಜಫಲದಿಂ ಸೌಧರ್ಮಕಲ್ಪೇಂದ್ರನಾ
ದರದಿಂದರ್ಚಿಸಿದಂ ದ್ವಿತೀಯಜಿನತೀರ್ಥೇಶಾಂಘ್ರಿಪದ್ಮಂಗಳಂ ೭೮

ಮಂಗಳನಿಳಯನ ಪದಪ
ದ್ಮಂಗಳನರ್ಚಿಸಿದರಷ್ಟವಿಧದರ್ಚನೆಯಿಂ
ಮಂಗಳಧಾರಿಣಿಯರ್ ಶ
ಕ್ರಾಂಗನೆಯುಂ ನೆಗಟ್ದ ನಾಗದೇವಾಂಗನೆಯುಂ ೭೯

ಅಂತುತ್ಕೃಷ್ಟಾಷ್ಟವಿಧಾರ್ಚನೆಗಳಿಂ ಪೀಠಮನರ್ಚಿಸಿ ಸಿದ್ಧಭಕ್ತಿ[1]ಪುರಸ್ಸರಂ[1] ಪೂಜಾವಂದನೆ[2]ಗೆಯ್ದು[2],

---

1. ಪೂರ್ವಕಂ (ಇಉಎ). 2. ಯಂ ಮಾಡಿ (ಇಉಎ)

ಓಂ ಜಯಜಯ ಜಗತ್ತ್ರಯಪತಿಕಿರೀಟಕೂಟಕೋಟಿಕಿರೀಟಮಣಿಮಸೃಣ ಚಾರುಚಂಚನ್ನಖಮಯೂಖೋ[1]ದ[1]ಂತಮಯೂಖಮಂಡಲಮಂಡಲೀಭೂತ ಸಕಲದಿಕ್ಪಾಲಮಾಲಾಮೌಳಿಮಣಿಕಿರಣಜಾಲಬಾಲಾತಪಚ್ಛಾಯಾರುಣಿತತರುಣಪಾರಿಜಾತಪಲ್ಲವಾಯಮಾನಪಾದಪಲ್ಲವ, ಪಲ್ಲವಿತಕುಸುಮಿತಾನಲ್ಪಕಲ್ಪಲತಾಯಮಾನಕಲ್ಪೇಶ್ವರಪ್ರಾಣೇಶ್ವರೀಸಮುಲ್ಲಸಿತಕರತಳಪಲ್ಲವನಖಮಯೂಖರುಚಿರಪ್ರಚುರಕಾಶ್ಮೀರಾಂಗರಾಗದ್ವಿಗುಣೀಕೃತಕನಕಕಮನೀಯಕಾಯಕಾಂತಿಭ್ರಮದ್ಭ್ರಮರಕುಲವಿನೀಲಕುಟಿಲಸಂಚಲತ್ಕುಂತಳಕಳಾಪಲಗ್ನದುಗ್ಧೋದಬಿಂದುಸಂದೋಹಸಂದಿಗ್ಧಮೂರ್ಧನ್ಯಭೂಷಣವ್ಯಕ್ತಮುಕ್ತಾಜಾಲಪ್ರಕರಕರಕಮಲಮುಕುಳಾಲಂಕೃತರುಂದ್ರಲಲಾಟಪಟ್ಟ, ದ್ವಾತ್ರಿಂಶದಿಂದ್ರಮಣಿಮಯಕಿರೀಟಕೋಟಿಘಟಿತಪಾದಪೀಠ, ಪೀಠೀಕೃತಮಂದರಾಚಲಶಿಖರ, ಶಿಖರೀಭೂತತಿಲಕಾಯಮಾನಮಹನೀಯಮಹಿಮೋದಯ, ಮಹಿಮೋದಯೋದ್ಭಾಸಿಭಗವಜ್ಜಿನೇಂದ್ರವೃಂದವೃಂದಾರಕ, ಶ್ರೀಮದಜಿತಭಟ್ಟಾರಕ, ಜಿನ, ನಮಸ್ತೇ ನಮಸ್ತೇ ನಮಸ್ತೇ.

ಎಂದು ಸೌಧರ್ಮಕಲ್ಪಾಧಿಪತಿ ಜಿನಾಧಿಪತಿಯನನೇಕಸ್ತುತಿಸಹಸ್ರಂಗಳಿನಭಿಷ್ಟುತಿಗೆಯ್ಯೆ,

ಉರಗಾಧೀಶ್ವರನಿರ್ಚ್ಛಾ
ಸಿರ ನಾಲಗೆಯಿಂದೆ ಪೊಗೞ್ದು ತಣಿಯನೆ ಪರಮೇ
ಶ್ವರನಂ ಸುರೇಶ್ವರಂ ಸಾ
ಸಿರ ಕಣ್ಗಳೊಳೆಯ್ದೆ ನೋಡಿ ತಣಿಯನೆ ಸಭೆಯೊಳ್ ೮೦

ದಿವಿಜೇಂದ್ರನುಮುರಗೇಂದ್ರನು
ಮವರಿರ್ವರುಮಾರ್ತರಿಲ್ಲ ಜಿನನಂ ಪೊಗೞಲ್
ಕವಿಚಕ್ರವರ್ತಿಯೆನಿಸಿದ
ಕವಿರತ್ನಂ ನೆಱೆಯನುೞಿದರೇಂ ನೆಱೆದಪರೇ ೮೧

ಪ್ರತ್ನಕವಿಪ್ರವರರ್ ಮೇಣ್
ನೂತ್ನಕವಿಪ್ರವರರಕ್ಕೆ ಜಿನನಭಿಷವಮಂ
ಯತ್ನ[2]ದೆ[2] ಪೇ[3]ೞ್ದ[3]ಡಮೋಂ ಕವಿ
ರತ್ನನ ಜನ್ಮಾಭಿಷೇಕಮಂ ಪೋಲ್ತ[4]ಪುವೆ[4] ೮೨

---

1. ದ್ಗ (ಇಉಊ). 2. ದಿ (ಅಇಉಎ). 3. ೞ್ದ (ಅಇಉಎ). 4. ಪರೆ (ಇಉಎ).

ಕನಕೋರ್ವೀಧರಮೇಱ ಮಾವ ಮಣೆ ದುಗ್ಧೋದಂ ಜಲಂ ವಜ್ರಿ ಮ
ಜ್ಜನವಳ್ಳಂ ಪರಿಚಾರಕರ್ಕಳಮರರ್ ಗಂಧರ್ವರಂತಲ್ಲಿ ಗಾ
ಯನರಿಂದ್ರಾಂಗನೆಯರ್ಕಳಲ್ಲಿ ಕುಣಿವರ್ ತಾವೆಂದೊಡೇನೆಂದುಮ
ಜ್ಜನಮಂ ಬಣ್ಣಿಸುವೆಂ ದ್ವಿತೀಯಜಿನತೀರ್ಥೋದರ್ಕಬಾಲಾರ್ಕನಾ ೮೩

ಇದು ಸಕಲ ಮುನೀಂದ್ರ ವೃಂದ ವೃಂದಾರಕ ಶ್ರೀಮದಜಿತಸೇನ ಭಟ್ಟಾರಕ

ಶ್ರೀಪಾದಪದ್ಮಪ್ರಸಾದಾಸಾದಿತ ರತ್ನತ್ರಯಾಲಂಕೃತ

ಶ್ರೀಮದಭಿನವ ಕವಿಚಕ್ರವರ್ತಿ

ಕವಿರತ್ನನಿರ್ಮಿತ

ಶ್ರೀ ದಾನಚಿಂತಾಮಣಿ ನಿರ್ಮಾಪಿತ

ಶ್ರೀಮದಜಿತತೀರ್ಥಕರ ಪುರಾಣತಿಲಕದೊಳ್

- ಜನ್ಮಾಭಿಷೇಕ ಕಲ್ಯಾಣವರ್ಣನಂ ಚತುರ್ಥಾಶ್ವಾಸಂ -

ಪಂಚಮಾಶ್ವಾಸಂ

ಶ್ರೀಮಜ್ಜಿನಮಜ್ಜನದ ಮ
ಹಾಮಹಿಮಾತಿಶಯಮಸದಳಂ ಪೊಗೞಲ್ ಪೌ
ಲೋಮೀಪತಿಗಲ್ಲದೆ ಪೆಱ
*
ಗೇಮಾತದು ಪುಣ್ಯ[1]ಭ[1]ರಿತಮುಪಗತದುರಿತಂ ೧

ಅಂತೆನಿಸಿದ ದ್ವಿತೀಯತೀರ್ಥಕರಪರಮದೇವದ್ವಿತೀಯಕಲ್ಯಾಣಾವಸರದೊ[2]ಳ್[2],

ಪರಮದ್ವಿತೀಯಭಕ್ತಿಯ
ಭರದಿಂ ಬಂದೆಱಗಿದಂ ಪದದ್ವಿತಯದೊಳಾ
ದರದಿಂ ದ್ವಿತೀಯಕಲ್ಪಾ
ಮರಪರಿವೃತನಾದ್ವಿತೀಯತೀರ್ಥೇಶ್ವರ[3]ನಾ[3] ೨

ಆಗಳಾ ದ್ವಿತೀಯತೀರ್ಥಕರಕುಮಾರಂಗೆ ಸನತ್ಕುಮಾರಾದಿಗಳಪ್ಪದೇವೇಂದ್ರರೆಲ್ಲಮೆಱಗೆ

ದ್ವೈತೀಯಕಜಿನಪಂಗ
ದ್ವೈತಂಗಜಿತಂಗೆ ಭುವನದಯಿತಂಗಾಗಳ್
ದೈತೇಂದ್ರರೆಲ್ಲಮೆಱಗಿದ
ರಾತತಪುಣ್ಯಂಗೆ ಜಗದೊಳೆಱಗದರೊಳರೆ ೩

ಎರಡನೆಯ ತೀರ್ಥಕರನಂ
ಪರಮೇಶ್ವರನಂ ತ್ರಿಲೋಕಚೂಡಾಮಣಿಯಂ
ಸುರರೆಲ್ಲಂ ಚೂಡಾಮಣಿ
ಕಿರಣದಿನವನತಕಿರೀಟರಭ್ಯರ್ಚಿಸಿದರ್ ೪

---

1 ಚ (ಇಉಎ). 2 ಳು (ಇಉಎ). 3 ನಂ (ಅಕ).

ಸಂಗತಮಣಿರುಚಿಯಂ ಜಿನ
ಪುಂಗವನಡಿಗೆಱಗುವೆಡೆಯೊಳಿನಿಸಿನಿಸಱಿಯಲ್
ಪಾಂಗಾದುದು ಸುರಗಿರಿಕೂ
ಟಂಗಳುಮಂ ಪ್ರಣತಸುರಕಿರೀಟಂಗಳುಮಂ ೫

ಕುಳದೀಪಕನಂ ತ್ರಿಜಗ
ತ್ತಿಳಕನಿಕ್ಷ್ವಾಕುವಂಶಚೂಡಾಮಣಿಯಂ
ಕುಳಿಶಧರಂ ಪೊಗೞ್ದ* ಮನಂ
ಗೊಳೆ ಮಾಡಿದನೈಂದ್ರಮೆಂಬ ನಾಟಕವಿಧಿಯಂ ೬

ತ್ರಿದಶಾಚಲಶಿಖರದೊಳಜಿ
ತದೇವಜನ್ಮಾಭಿಷೇಕಮಂಗಳಸಮಯಾಂ
ಬುದಸಮಯಂ ಸಮನಿಸೆ ಮಾ
ಡಿದುದಾಖಂಡಲಶಿಖಂಡಿ ತಾಂಡವವಿಧಿಯಂ ೭

ಕರಚರಣಸಮಾಯೋಗದೆ
ಕರಣಂ ನೂರೆಂಟು ತದ್ಭವಂಗಳ್ ಮೂವ
ತ್ತೆರಡಂಗಹಾರ[1]ವೆ[1]ಸೆದುವು
ಸರೋಚಕಂಗಳ್ [2]ಸು[2]ಚಾರಿಗಳ್ ಸುರಪತಿಯಾ ೮

ಪ್ರಕಟಾಂಗಿಕವಾಚಿಕಸಾ
ತ್ವಿ[3]ಕಮಾಹಾರ್ಯಂಗಳೆಂ[3]ಬ ನಾಲ್ಕಭಿನಯಮುಂ
ಸಕಲಪರೀಷಹವೆನೆ ರಂ
ಜಕಮಾದುವು ರಂಗಮಧ್ಯದೊಳ್ ಕೌಶಿಕನಾ ೯

ಸಾಮಾನಿಕಜನತತಿಚೇ
ತೋಮಂ ಪ್ರಾಸಾದಿಕಾಂತರಾಕ್ಷೇಪಕ ವಿನಿ
ಷ್ಕ್ರಾಮ ಪ್ರವೇಶ ಗಾನರ
ಸಾಮೃತಮೆಸೆಗುಂ ಧ್ರುವಪ್ರಯೋಗಾನುಗತಂ ೧೦

ಅಕಬಳಮನವ್ಯವಸ್ಥಿತ
ಮಕಾಕಿಸಂದಿಷ್ಟತುಂಬಕೀರಹಿತಂ ಗಾ

---

1. ವೆ (ಅಕ). 2. ಸ (ಅಕ). 3. ಕಂಗಳಾಹಾರ್ಯವೆಂ (ಅಇಉಎ).

ಯಕೆಗಣಕಂಠರವಂ ಶ್ರಾ
ವಕಮಧುರಸ್ನಿಗ್ಧಮೆಸೆದುದಾಸ್ಥಾಯಿಕೆಯೊಳ್ ೧೧

ಯತಿಯೊಳ್ ಗೋಪುಚ್ಛೆ ತನ್ನೊಳ್ [1]ನೆಲಸಿ[1] ನೆಗ*ಟ್ವಿಸಂ ಮಾರ್ಗದೊಳ್
[2]ಚತ್ರಕೀಯಂ[2]
ಕೃತಕೂಚಾಡಂಬರಂ ರಂಜಿಸುವಿನಮೆಸೆಗುಂ ದಕ್ಷಿಣಾವೃತ್ತವೃತ್ತ
ತ್ರಿತಯಾಂತರ್ವರ್ತಿ ತಾನೆಂಬಿನಮನುಗತ ತತ್ತ್ವೌಘದೊಳ್ ತತ್ತ್ವದಿಂದ
ನ್ವಿತಮಂ ವಿಸಾರಮತ್ಯಪ್ರಕಟಿತಮನದಿಂ ಮೆಚ್ಚಿದಂ ದೇವರಾಜಂ ೧೨

ಜನಿಯಿಸೆ ವೀಣಾ[3]ಕ್ವಣ[3]ಮುರ
ಜನಿನದ ತಾಳಪ್ರಣಾದ ವಂಶಧ್ವನಿಗಳ್
ಜನಮನೊರಲ್ಚಿದುವು ತತಾ
ವನದ್ಧಘನಸುಷಿರವಾದ್ಯಭೇದತರಂಗಳ್ ೧೩

ಪದವಿನ್ಯಾಸಕ್ಕದೆ ನೆಲೆ
ಯದೆ ಕರವಿನ್ಯಾಸಮೆಸೆದುದೆಂಟುಂ ದೆಸೆಯೊಳ್
ವದನನ್ಯಾಸಂ ಸುರಲೋ
ಕ[4]ದಿನತ್ತೆ[4]ನೆ ನಾಟ್ಯಮುದ್ಭಟಂ ಶತಮುಖನಾ ೧೪

ವಾಸವನಪೂರ್ವನಾಟ್ಯವಿ
ಳಾಸದೆ ತಾಂ ಭ್ರಮರಿಗುಡುವುದುಂ ನೇತ್ರಸಹ
ಸ್ರಾಸಿತರುಚಿ ಕರ್ನೆಯ್ದಿಲ
ಬಾಸಿಗಮಂ ಬೀಸಿದಂತುಟಾದುದು ಸಭೆಯೊಳ್ ೧೫

ಈ ನಾಟ್ಯದ ಕೆಲದೊಳ್‌ನಾ
ಮೇನಂ ರಂಜಿಸುವೆವೆಂದು ನೆಗ*ಟ್ದುರ್ವಶಿಯುಂ
ಮೇನಕೆಯುಂ ರಂಭೆಯುಮಿನಿ
ಸಾನತಮುಖಿಯರ್ಕಳಾಗಿ ಬೆಱಗಾಗಿರ್ದರ್ ೧೬

ಪೊಳೆವಲ*ರ್ಗಣ್ಣ ಬೆಳ್ಪುಗಳ ಪುರ್ವಿನ ಜರ್ವಿನ ಚೆಲ್ವುಗಳ್ ಮನಂ
ಗೊಳೆ ಸುರಕಾಂತೆಯರ್ ದಿವಿಜರಾಜನ ತೋಳ್ಗಳ ಮೇಲೆ ನಿಂದು ಗೊಂ

---

1. ಮಿಗೆ (ಇಉಎ). 2. ಚಕ್ರಿಚಕ್ರಿ (ಇಉಎ). 3. ಸ್ವನ (ಅಕ), 4. ದೆ ನರ್ತ (ಇಉಎ).

ದಳದೆ ವಿಚಿತ್ರನರ್ತನವಿಳಾಸಮನಾಡೆ ಮರುದ್ವಿಲಾಸಿನೀ
ವಿಳಸಿತಲಾಸ್ಯಮುಂ ಮಘವತಾಂಡವಮೇಂ ರಮಣೀಯಮಾದುದೋ ೧೭

ಧರೆಯೊಳ್ ತೋರ್ಪಂತಾ ಕಕು
ಭರಂಗದೊಳ್ ತೋರ್ಪನನಿಲಪಥದೊಳ್ ತೋರ್ಪಂ
ಪರಿಣತಿವೃತ್ತಮನೆನೆ ಬಿ
ತ್ತರಿಸಿದನಂದಿಂದ್ರನಿಂದ್ರಜಾಲಿಗತನಮಂ ೧೮

ಅನಿಮೇಷಾಧಿಪತಿ ಸಹ
ಸ್ರನೇತ್ರನಾಗಳ್ ಸಹಸ್ರಕರನಾದಂ ನ
ರ್ತನದೊಳ್ ಸಹಸ್ರಪದನಾ
ದನೆನೆ ವಿರಾಜಿಸಿತು ಹಸ್ತಪದವಿನ್ಯಾಸಂ ೧೯

ಕುಲಿಶಿಯ ತೋಳ್ಗಳೊಳ್[1]ಮುರ[1]
ಸ್ಥಲದೊಳ್ ಕರತಲದೊಳೆಸೆವ ಮಣಿಬಂಧದೊಳಂ
ಗುಲಿಯೊಳ್ ನಖದೊಳ್ ನರ್ತನ
ವಿಲಾಸನಂ ಮೆಱೆದರಿಂದ್ರಸೌಂದರಿಯರ್ಕಳ್ ೨೦

ಜನಮೆಲ್ಲಂ ನುಡಿವುದು ದಂ
ಡನೃತ್ಯಮುಂಟೆಂದು ಕಾಣಲಾ[2]ಟಂ[2]ದುದು ಶ
ಕ್ರನ ಬಾಹುದಂಡದೊಳ್ ಚಿ
ತ್ರನರ್ತನಂ ನೆಗಱೆ ನೆಗಟ್ಟಿ ಸುರಕಾಂತೆಯರಿಂ ೨೧

ನಾಡಾಡಿಗಳಿದರೂಪುಂ
ಗಾಡಿಯುಮೆಸೆದೊಪ್ಪೆ ದೇಸೆ ಕಣ್ಗಂ ಮನಕಂ
ತೋಡೆನಿಸಿ ತೋಳೊಳಿರ್ದರ
ನಾಡಿಸಿ ನೋಡುತ್ತುಮಿರ್ಪುದೊಂದರಸಲ್ತೇ ೨೨

ಅಂತು ನಿಸ್ಸಂಗನಂ ಸಂಗೀತಪ್ರಸಂಗದೊಳಮರಪುಂಗವನೋಲಗಿಸಿ ಮುನ್ನ ಮಾದಿದೇವಂಗೆ ಮಾಡಿದಂದದೊಳೆ ಮಂದರಾಚಲದೊಳಜಿತದೇವಂಗೆ ಜನ್ಮಾಭಿ-

---

1. ಸಂ (ಅಕ). 2. ಯ್ತ್ರ (ಇಉಎ).

ಷೇಕಕಲ್ಯಾಣಮಂ ಮಾಡಿ ಬಾಹ್ಯಾಭ್ಯಂತರಶತ್ರುಗಳ್ಗಜಿತನಪ್ಪುದಱಿಂದಜಿತನಾಥ ನೆಂದು ಪೆಸರನಿಟ್ಟು ಸಹಜಚ್ಛಿದ್ರಕರ್ಣಂಗಳೊಳ್ ಕರ್ಣಕುಂಡಲಯುಗಳಂಗಳ ನಿಟ್ಟು ಮಣಿಮಯಾಲಂಕಾರಾಲಂಕೃತಂ ಮಾಡೆ,

ಪರಮನ [1]ಚ[1]ರಮೌದಾರಿಕ
ಶರೀರಮುಜ್ವಳಸುವರ್ಣವರ್ಣಂ ರತ್ನಾ
ಭರಣದೆ ರಂಜಿಸಿದುದು ಮಂ
ದರಾದ್ರಿ ತಾರಾಗಣಂಗಳಿಂ ರಂಜಿ[2]ಪ[2]ವೋಲ್ ೨೩

*ಸುರಶೈಲೋತ್ಸಂಗದೊಳಂ
ಸುರೇಂದ್ರರದನೀಂದ್ರ ಸುಂದರೋತ್ಸಂಗದೊಳಂ
ಸುರಪೂಜಿತನೆನಿಸಿರ್ದನ
ಚ್ಚರಿ ಮಿಗೆ ತಾನಜಿತನಂದು ಸಂಗತನಾದಂ ೨೪

*ಬಳೆದೊಗೆದ ಮೇರುಕೂಟ
ಸ್ಥಳಂಬರಂ ದ್ರೋಹಸ್ಸರ್ಪಿತದಿ ನೆರೆ ನಿರಾ
ಕುಳತೆಯಿನಿಳಿವಲ್ಲಿ ಮನಂ
ಗೊಳಿಸಿದುದಷ್ಟಿ ವೆಸರ್ಪಿತಂ ಸುರಗಜದಿಂ ೨೫

ಕನಕಾದ್ರಿಯ ಸಪ್ತಚ್ಛದ
ವನದೇಲಾವನದ ಚೂತವನದೆಡೆಗಳೊಳಂ
ದನಿತಱ ಗಂಧಂಗಳುಮಂ
ತನುಮದಗಂಧದೊಳೆ ಗೆಲ್ವುದಿಂದ್ರಗಜೇಂದ್ರಂ ೨೬

ಜಂಬೂನದಗಿರಿರಾಜನ
ನಿಂಬಿನೊಳಿೞಿವಲ್ಲಿ ನೆರೆದು ನೋಡಿದರಮರ
ಸ್ತಂಬೇರಮುಮಂ ಮುತ್ತಿನ
ಲಂಬಣಮೆಂದಮರರಮರನಾಯಕಯುತಮಂ ೨೭

ಆಗಳ್,

ಸುರತೂರ್ಯಾರಾವಮೆಂಟುಂ ದೆಸೆಯೊಳಮೆಸೆ[3]ಯು[3]ತ್ತಿರ್ಪಿನಂ ಧರ್ಮತೀರ್ಥೇ ಶ್ವರನಂ ಸೌಧರ್ಮಕಲ್ಪೇಶ್ವರನಮರನಗೇಂದ್ರಾಗ್ರದಿಂ ತಂದಯೋಧ್ಯಾ

---

1. ಪ (ಇಉಎ). 2. ಸು (ಇಉಎ). 3. ವು (ಇಉಎ). * ಇವು (ಅಕ) ಗಳಲ್ಲಿಲ್ಲ.

ಪುರಿಗಾನಮ್ರೋತ್ತಮಾಂಗಂ ಜಿನಜನನಿಯ ಮುಂದಿಟ್ಟು ದಿವ್ಯಾಂಬರಾಲಂ
ಕರಣಸ್ರಗ್ರಾಜಿಯಿಂ ಪೂಜಿಸಿ ಗುರುಜನಮಂ ರಾಗದಿಂ ದೇವರಾಜಂ ೨೮

ಆಗಳಾ ತೀರ್ಥಕರಗುರುಗಳ್ಗೆ ಜನ್ಮಾಭಿಷೇಕಕಲ್ಯಾಣಮುಮಂ ಶ್ರೀಮದಜಿತನಾಮಕರಣಮುಮನಱಿಪಿ ಜಿತಶತ್ರುಮಹಾರಾಜನಾರಾಜಮಂದಿರದ ಮುಂದಣ ಲಕ್ಷ್ಮೀಮಂಟಪದ ನಡುವಣ ಮಣಿಮಯೋತ್ತುಂಗಸಿಂಹಾಸನದ ಮೇಲೆ ಬಾಲಾರ್ಕನುದಯಂಗೆಯ್ದಂತಿರ್ದ ಬಾಲಾರ್ಕಸನ್ನಿಭನಂ ಪೂರ್ವಾಭಿಮುಖನಾಗಿರಿಸಿ [1]ಪರಮೋತ್ಸವಂಮಾಡಿ[1],

ದಿವಿಜಮನುಜವಾದ್ಯಂ ದೇವಮಾನುಷ್ಯಗೀತಾ
ರವಮುಮರಮನುಷ್ಯಪ್ರೇಯಸೀನೃತ್ಯಮೆತ್ತಂ
ಸವನಿಸೆ ಜಿತಶತ್ರುಕ್ಷತ್ರಿಯಾವಾಸದೊಳ್ ವಾ
ಸವನಿನೆಸೆದುದಾಗಳ್ ಮತ್ತಮಾನಂದನೃತ್ಯಂ ೨೯

ಅಮರೇಂದ್ರಂ ಸಂತಾನಕ
ನಮೇರು ಮಂದಾರ ಪಾರಿಜಾತಾದಿ ಸುರ
ದ್ರುಮಪುಷ್ಪಪ್ರಕರದೆ ರಂ
ಗಮಧ್ಯದೊಳ್ ಮಾಡಿ ಮುಂದೆ ಪುಷ್ಪಾಂಜಳಿಯಂ ೩೦

ಆಗಳ್ ನಾಟ್ಯವಿಧಿಯಂ ನಿರ್ವರ್ತಿಸಿ ಶೃಂಗಾರಾದಿಗಳಪ್ಪೊಂಬತ್ತುಂ ರಸಂಗಳುಮನೆಂಟುಂ ಸ್ಥಾಯೀಭಾವಕಂಗಳುಮಂ ಮೂವತ್ತುಮೂಱು ಸಂಚಾರಿಕೆಗಳುಮಂ ಎಂಟು ಸಾತ್ವಿಕಭಾವಂಗಳುಮನಾಂಗಿಕ ಸಾತ್ವಿಕ ವಾಚಿಕಾಹಾರ್ಯಕಮೆಂಬ ನಾಲ್ಕಭಿನಯಮುಮಂ ಲೋಕಧರ್ಮಿ ನಾಟ್ಯಧರ್ಮಿಯೆಂಬೆರಡುಂ ಧರ್ಮಿಯುಮಂ ಭಾರತಿಯುಂ ಸಾತ್ವತಿಯುಂ ಕೈಶಿಕಿಯುಮಾರಭಟಿಯುಮೆಂಬ ನಾಲ್ಕುಂ ವೃತ್ತಿಯುಮಂ [2]ಮ[2]ನಾವತಿಯುಂ ದಾಕ್ಷಿಣಾತ್ಯೆಯುಂ ಪಾಂಚಾಲಿಯುಂ [3]ಮಾ[3]ದ್ರಮಾಗಧಿಯುಮೆಂಬ ನಾಲ್ಕುಂ ವೃತ್ತಿಯುಮಂ ದೇವಸಿದ್ಧಿ ಮಾನುಷಸಿದ್ಧಿಯೆಂಬೆರಡುಂ ಸಿದ್ಧಿಯುಮಂ ಷಡ್ಜವೃಷಭಗಾಂಧಾರಮಧ್ಯಮಪಂಚಮಧೈವತನಿಷಾದಂಗಳೆಂಬ ಸಪ್ತಸ್ವರಮುಮನಂತು ಸಂಗ್ರಹವಾಕ್ಯದೊಳ್ ಪೇೞ್ದ ಪನ್ನೊಂದಧಿಕಾರದೊಳ್ ನೆರೆದ ನಾಟಕಮುಂ ಪ್ರಕರಣಮುಂ ಚಾರಣಮುಂ ಬಾಣಮುಂ ಸಮವತಾರಣಮುಂ [4]ಡಿಮ[4]ಮುಂ ಈಹಾಮೃಗಮುಂ ವ್ಯಾಯೋಗಮುಂ ಸಪ

———

1. (ಇಉಎ) ಗಳಲ್ಲಿಲ್ಲ. 2. ಆ (ಇಉಎ). 3. ಮೊ (ಇಉಎ). 4. ಅಮುಂ ಡಿಕ (ಅಇಉಎ).

ಹಸನಮುಂ [1]ವೀಥಿ[1]ಯುಮೆಂಬ ದಶರೂಪಲಕ್ಷಣಮುಮಂ ಪಾತ್ರಸಂಕ್ರಮಣದೊಳ್ ನೆಱೆಯೆ ತೋಱಿ ಭರತದ ಸಾರಸರ್ವಸ್ವಮುಮಂ ನಾಟ್ಯಧರ್ಮದೊಳ್ ಸೌಧರ್ಮಕಲ್ಪೇಶ್ವರಂ ಪ್ರತ್ಯಕ್ಷಂ ಮಾಡಿದಾಗಳ್

ಸ್ವರತತಿ[2] ವಾದ್ಯದೊಳ್ ನೆಗೞೆ ಸನ್ನಿನಿವಂತತಿಘೇರಿಘೇರಿಮಾ
ಯ್ಗರಿಗಮಮಂ ಮಧೂರುಗಮಕ್ರೆಂಕಟಕ್ರೆಂಪಮಪತ್ರಕುತ್ರರುಃ
ಸರಿಪಮತಂಬಿತಂತತಿವಿಕುದ್ರಕಕುದ್ರಕಮೆಂಬ ಭೇದದೊಳ್
ಪರಿಣತಿ ರಂಜಿಸುತ್ತುಮಿರೆ [3]ನರ್ತಿ[3]ಸಿದರ್ ಪೊಸದೇಸೆಕಾರ್ತಿಯರ್ ೩೧

ಪಳವದ ತಿವಳಯ ಜುಂಕದ
ಮೊಳಸಿನ ಜೇಕಿರದ ಸಿವಿಱಿ ಸಿ[4]ಪ್ಪಿ[4]ನ [5]ಲ್[5]ಯದಿಂ
ದೆಳಲ್[6]ದೆ[6] ಕುಣಿದರ್ ಕೆಲಬರ್
ಕಳರುತಿಗಳೆ ತಾಳಮಾಗೆ ಕುಣಿದರ್ ಕೆಲಬರ್ ೩೨

ಅಂತು ವಾದಕನುಪವಾದನಿನೆಸೆವ ಹೃದ್ಯವಾದ್ಯವಿಶೇಷಂಗಳೊಳ್ ನೆಗೞ್ವ ಸಮಪಾಣಿಯುಮಧಃಪಾಣಿಯುಮುಪರಿಪಾಣಿಯುಮೆಂಬ ಪಾಣಿತ್ರಯದೊಳಂ ದ್ರುತವಿಲಂಬಿತಮಧ್ಯಮಮೆಂಬ ಲಯತ್ರಯದೊಳಂ ಸಮಯಶ್ರೋತಾವಹೆಯುಂ ಗೋಪುಚ್ಛೆಯುಮೆಂಬ ತ್ರಿತಯದೊಳಂ ಚಿತ್ರೆದಕ್ಷಿಣೆಕಾರ್ತಿಕೆಯೆಂಬ ವೃತ್ತಿತ್ರಯದೊಳಂ ಗುರುಸಂಚಯ ಲಘುಸಂಚಯ ಗುರುಲಘುಸಂಚಯಮೆಂಬ ಸಂಚಯತ್ರಯದೊಳಂ ಸಮಪ್ರಹಾರ ವಿಷಮಪ್ರಹಾರ ಸಮವಿಷಮಪ್ರಹಾರಮೆಂಬ ಪ್ರಹಾರತ್ರಯದೊಳಂ ಮತ್ತಂ,

ಅಕ್ಷರಸಮಮಂಗಸಮಂ ತಾಳಸಮಂ ಯತಿಸಮಂ ಲಯಸಮಂ ಚ
ನ್ಯಾಸಸಮಂ ಪಾದಸಮಂ ಪಾಣಿಸಮಂ ವಾದ್ಯಮಷ್ಟವಿಧಂ

ಎಂಬ ವಾದ್ಯಕ್ಕುಪಗತಮಾಗೆ ಮೂವತ್ತಾಱು ದೃಷ್ಟಿವಿಕಲ್ಪದೊಳಂ ಪದಿಮೂಱು ಶಿರೋವಿನ್ಯಾಸದೊಳಂ ಏೞು ಭ್ರೂರೇಚಿತದೊಳಂ ಮೂಱುಂ ಗುಣಾನಿಯೊಳಂ ಮೂಱುಂ ನಾಸಿಕಾಸ್ಫುರಿತದೊಳಂ ಮೂಱುಮಧರಸ್ಪಂದದೊಳಂ ಮೂೞು ಚುಬುಕವಿಕಾರದೊಳವೊಂಬತ್ತು ಗ್ರೀವಾಭಂಗಿಯೊಳಮಱುವತ್ತುನಾಲ್ಕು ಮಸ್ತಕಕ್ರಿಯೆಯೊಳಮಯ್ದು ಪಾರ್ಶ್ವವಿಧಿಯೊಳಂ ಮೂಱುಮುದರಕರ್ಮ

---

1. ಬೀದಿ (ಅಇಉಎ). 2. ಸರಸದ (ಅಕ). 3. ರಂಜಿಸಿ (ಅಕ). 4. ಲ್ಪಿ (ಇಉಎ).
5. ನ (ಇಉಎ) 6. ತೆ (ಇಉಎ).

ರ್ಮದೊಳವೈದು ಕಟೀವಿಧಾನದೊಳವೈದುಮೂರುವಿಲಸಿತದೊಳವೈದು ಪದ
ಸಂಚಾರದೊಳ್ ನೆಱೆದು

ಪೊಸತೆನಿಪ ಸುರಗೆವೆಕ್ಕಣ
ಮೆಸೆದಿರೆ ಕಡುಪೊಸತು ಬಣ್ಣರಸಮೆಸೆದಿರೆ ನಿ
ಪ್ಪೊಸತೆನಿಪ ದೇಸೆ ಮಾಸಱ
ಮೆಸೆದಿರೆ ಸಭೆ ಮೆಚ್ಚೆ ಪೊಚ್ಚ ಪೊಸತಾಯ್ತು ರಸಂ ೩೩

ನೊಡುವನಜಿತಜಿನೇಶ್ವರ
ನಾಡುವನಮರೇಂದ್ರನಮರವಾದ್ಯಂ ಲಯಮಂ
ಕೂಡುವುದಮರರ ಗಾಣರ್
ಪಾಡುವರೆನೆ ಸುಪಥಮಕ್ಕುಮಕ್ಕುಮೆ ಕುಪಥಂ ೩೪

ಕಡುಚೆಲ್ವೆಯರೆರ್ದಾಡಿದ
ರೊಡನಾಡುವರ ಕೇರಿಯಾದುದುವೆಂಬೀ
ನುಡಿ ದಿಟಕೆ ನಾಟ್ಯದೋಜೆಗೆ
ಬಿಡೌಜನಾಡಿದೊಡೆ ದಿವಿಜೆಯರ್ ಮಾಣ್ಬಪರೆ ೩೫

ವಿವಿಧಮಣಿಕಿಂಕಿಣೀಗಣ
ರವಮೆಸೆವಿನಮುಮರರಾಜನೊಡನೊಡನೆ ಮಹೋ
ತ್ಸವದಿಂ ತಾಳಲಯಕ್ರಮು
ಕೆ ವಿಚಿತ್ರಂ ಮೆಟ್ಟಿಸುತ್ತುಮಮರಗಜೇಂದ್ರಂ ೩೬

ಎವೆಯಿಕ್ಕದ ಸುರವಧುವರ
ನೆವೆಯಿಕ್ಕದೆ ನೋಡಿ ತಮಗಮನಿತುಂ ಭಾವಂ
ಸಮನಿನಿದಂತಿರ್ದುದು ನೃಪ
ಸಮಿತಿ ಜಗತ್ತ್ರಿತಯತಿಲಕನಾಸ್ಥಾಯಿಕೆಯೊಳ್ ೩೭

ಅವನಿಪರುಂ ಕೌತುಕದಿಂ
ದವನೀಶಾನೇಂದ್ರನೆನಿಸಿ ಸೌಧರ್ಮೇಂದ್ರಂ
ದಿವಿಜೇಂದ್ರರವರ್ಗಳಿಂದಂ
ದವಲೋಕಿಸುವರ್ ಸುರೇಂದ್ರವೃಂದಾರಕರಂ ೩೮

ಚಂದ್ರನನಸಿನನನವಂ ಧರ
ಣೇಂದ್ರನವಂ ಸಕಲಲೋಕಪಾಲರವರ್ ದೈ

ತ್ತೈಂದ್ರರವರೆಂದು ಸಭೆಗೆ ನ
ರೇಂದ್ರರ್ಕಳ್ [1]ಸುಟ್ಟಿ[1] ತೋಱಿದರ್ ಪೆಸರ್ವೆ*ಸರೊಳ್ ೩೯

ರಸಮೊಸರ್ವೆ*ನ್ನೆಗಂ ಮಿಱುಗು ಕಿತ್ತು ಪೊಗರ್ ಗಮಕಂ ಕೊದಳ್ ಪೊದ
ಳ್ದಿಸೆವ ನಯಂ ಬೆಡಂಗು ಬಿಗಿಪೊಟ್ಟಜೆ ಕೊಂಕು ಪವಣ್ ಪ್ರಯೋಗಮೇ
ನೆಸೆದುವೊ ಪೇೞ್ವೆಂಬಿನೆಗಮಿಂಗೊರಲೊಳ್ಕೊಳೆ ಪಾಡಿಯಾಡಿ ರಂ
ಜಿಸಿತೊ ಸಭಾಜನಂಗಳ ಮನಂಗಳನಾ ದಿವಿಜಾಂಗನಾಜನಂ ೪೦

ತಡದಡವಾರದೆ ಗತಿಯೊಳ್
ತೊಡರದೆ ರಂಜಿಸಿದರಮರಲಂಜಿಕೆಯರ್ ಜಾ
ಣ್ಗಿಡದಾಡಿ ಮೊದಲ ತಾಣದೊ
ಳಿಡೆಯೊತ್ತಿನೊಳೆಸೆವ ಕಡೆಯ ತಾಳದ ಯತಿಯೊಳ್ ೪೧

ರಂಜಿಸುವ ಹಂಸರವಮುಂ
ರಂಜಿಸದಿನ್ನಿದಱ ಕೆಲದೊಳೆಂಬಿನೆಗಮದೇಂ
ಲಂಜಿಕೆಯರ ಗುಂಜನ್ಮಣಿ
ಮಂಜೀರಕಮಂಜುಸಿಂಜಿತಂ ರಂಜಿಸಿತೊ ೪೨

ಲಳಿತವಳಿತಮುಗ್ಧಸ್ನಿಗ್ಧಲೋಲಾಕ್ಷಿ ನೀಲೋ
ತ್ಪಳದ ಪೊಳೆಪು ಗೆಲ್ದತ್ತೆಂಬಿನಂ ಪುಷ್ಪಬಾಣಾ
ವಳಿಯ ಪೊಳೆಪನಿಂದ್ರಸ್ತ್ರೀಯರಾನಂದದಿಂ ಗೊಂ
ದಳದೆ ಕುಣಿದು ಲೀಲಾನೃತ್ಯದಿಂ ಕಣ್ಗೆ ವಂದರ್ ೪೩

ಆಟಂ ಮನಸಿಜನಂಬೆ
[2]ದಾ[2]ಟಂ ನಡೆನೋಟ್ಪ ಜನದ ಮನದಳ್ಕಾಟಂ
ಪಾಟಂ ಕಾಮುಕ[3]ಗಣಮೃಗ[3]
ಕೋಟಿಗೆ ಮನಸಿಜನ ಗೋರಿಗಾಡುವ ಪಾಟಂ ೪೪

ಕಡುಚಲ್ವು ಗಡಂ ಜವ್ವನೆ
ಗಡಮಾಡಲ್ ಪಾಡಲವಳೆ ಬಲ್ಲಳ್ ಗಡ ಮಾ

---

1. ಮುಟ್ಟಿ (ಇಉಎ). 2. ದೊರ್ (ಇಉಎ). 3. ಮೃಗಗಣ (ಇಉಎ).

ರ್ಪಡೆದವರೊ ಕಣ್ಣುಂಗತಿಯುಂ
ಬಡೆದವಳಂ ಸ್ತ್ರೀಯರೊಳಗವಳ್ ಸ್ತ್ರೀರತ್ನಂ ೪೫

ನೇತ್ರೋನ್ಮೀಲನನಿಮೀಲನ
ಮಾತ್ರದೆ ನರಸುರವಿಭೇದಮಾಯ್ತಲ್ಲದೊಡಾ
ಪಾತ್ರಂಗಳಱಿಯಲಾಗೆನೆ
ಸುತ್ರಾಮನೆ ಸೂತ್ರಧಾರನಾಗಾಡಿಸಿದಂ ೪೬

ಅಂತು ಮಾರ್ಗದೇಸೆಯೆಂಬಿರ್ತೆಱದೊಳಂ ತಾಂಡವಲಾಸ್ಯಮೆಂಬೆರಡುಂ ವಿಕಲ್ಪದೊಳಂ ತಾನಾಡುತ್ತುಮಾಡಿಸುತ್ತುಂ ರಂಜಿಸೆ,

ಮನಮೊಸೆದು ಗೀತವಾದಿತ
ಮನಂತಫಲಮೆಂದುಮಾಡಿ ಸಂಗೀತಕಮಂ
ಜಿನಪತಿಯ ಮುಂದೆ ಮೆಱೆದಂ
ಜನಕ್ಕೆ ಧರ್ಮಾನುರಾಗಮಂ ಸೌಧರ್ಮಂ ೪೭

ಅಮರಪತಿ ಪಂಚಕಲ್ಯಾ
ಣಮಹಿಮೆಯಂ ಚಿತ್ತಶುದ್ಧಿ[1]ಯಿಂ[1] ಮಾಡಿ ಜಿನೋ
ತ್ತಮರ್ಗೆ* ಲಘುಕರ್ಮನಾದಪೊ
ನಮಳಿನ ಧರ್ಮಾನುರಾಗಿಗಾಗದುದುಂಟೆ ೪೮

ಅದು ಕಾರಣಂ,

ಹರಿ ತನ್ನ ದಕ್ಷಿಣೇಂದ್ರ
ರ್ವೆರಸು ಶಚೀದೇವಿವೆರಸು ಲೋಕೇಶಜನಂ
ಬೆರಸು ದಿವದಿಂದಮಿಲ್ಲಿಗೆ
ವರಲೊಡಮಾಭವದೊ[2]ಳಂತೆ[2] ಮುಕ್ತಿಗೆ ಸಲ್ವರ್ ೪೯

ಎರಡೆ ವಲಂ ಮುನ್ನಂ ಸಾ
ಸಿರ ಕಣ್ಗಳ್ ಬೞಿಕಮಾದುದಿಂದ್ರಂಗಾಕ
ಣ್ಣೆರಡರೊಳೆ ನೋಡಿ ತಣಿಯದೆ
ಪರಮನ ರೂಪಂ ಸಹಸ್ರಲೋಚನನಾದಂ ೫೦

---

1 ಯಂ (ಅ) 2 ಳಂದು (ಇಉಎ), ಳಲ್ತೆ (ಕ)

ನೆಱೆಯೆ ಪೊಗೞಲ್ಕೆ ವಾಕ್ಪತಿ
ನೆಱೆಯಂ ಸುರಪತಿಯ ನೃತ್ಯಮಂ ಪೇೞಲಾವಂ
ನೆಱೆವನೆನೆ ರಂಗಮಧ್ಯದೊ
ಳಱಿಪಿದನಾ ನಾಟ್ಯಧರ್ಮಮಂ ಸೌಧರ್ಮಂ ೫೧

ಸುರಪತಿಯಾಟಮನೆಱಗುವ
ಸುರಕೋಟಿಯನ್ನೈದೆ ನೋಡಿ ನೋಡಿದನಾತ
ನ್ನೆರಡುಂ [1]ಮುಯ್ಪಂಗ[1]ಳನೀ
ದೊರೆಯ ಮಗಂಬಡೆದೆನೆಂದು ಜಿತಶತ್ರುನೃಪಂ ೫೨

ಜಾತಪ್ರಿಯನಾತಂ ತನು
ಜಾತನೆ ತಾನಾಗೆ ತನ್ನ ಕಣ್ಗಂ ಮನಕಂ
ಜಾತಕುತೂಹಲನಾ[2]ನಾ
ದ್ಯೋ[2]ತಿಶಯಮನರಸನಚಲದಂತಿರೆ ನೋೞ್ಕುಂ ೫೩

ಎಮೆ ಮಱೆಯಾದಪುದಿಕ್ಕುವ
ಚಮರರುಹಂ ತನ್ನ ಕಣ್ಗೆ ಮಱೆಯಾದಪು[3]ದೆ[3]ಂ
ದೆಮೆಯಿಕ್ಕದೆ ಚಾಮರವಿ
ಕ್ಕೆ ಮಾಣ್ಬು[4]ದ[4]ಂ ಪಾರ್ದುವಾರ್ದು ಮಗನನೆ ನೋೞ್ಕುಂ ೫೪

ಉಂಗುಟಮನೆಳವಿ ಕರಚರ
ಣಂಗಳನಿನಿಸೆಳವಿ ಮೆಲ್ಲಮೆಲ್ಲನೆ ಲೀಲಾ
ಪಾಂಗದೊಳೆ ನೋಡಿದಳ್ ರಾ
ಜಾಂಗನೆ ನೃಪಸುತನ ವದನಚಂದ್ರಾಕೃತಿಯಂ ೫೫

ಸುತ್ತಣ ಸಭೆ ಕಣ್ಣೆಱಕಮೆ
ಗೆತ್ತು ಪಲರ್ ನೆಱೆದು ನೋಡೆ ನೃಪಸತಿ ಮನದೊಳ್
[5]ಕೂರ್ತುಃ [ಪಿರಿಯಲ್][5] ಬಗೆದು ಜಿ
ನೋತ್ತಮನೆಂದಂಜಿ ಪ್ರಾಣ್ದೊಳಾಸ್ಥಾಯಿಕೆಯೊಳ್ ೫೬

---

1 ಮುಂಗೈಯ್ಗ (ಕ). 2 ತೇಜೋ (ಕ). 3 ವೆ (ಅ). 4 ದು (ಇಉ). 5 ಳ್ತೂ ಪತ್ಕರಿಸಲ್ಕೆ (ಅ), ಸತ್ಕರಿಸಲ್ಕೆ...(ಕ), ಕೂರ್ತುತೂಪರಿಸಲ್ಕೆ (ಇ), ಕೂರ್ತು ತೂಪತ್ಕರಿಸಲ್ಕೆ (ಉಎ).

ತೊಱೆದ ಕುಚಕಲಶದಿಂದಂ
ಬಿಱಿವಿಟ್ಟೊಗೆತಪ್ಪ ಪಾಲ ಧಾರೆಯಿನಾಗಳ್
ಪರಮೇಶ್ವರಂಗೆ ಮತ್ತಂ
ಪರಮೇಶ್ವರಿ ಮಾಡುವಂತುಟಾಯ್ತಭಿಷವಮಂ ೫೭

ಆಗಳ್ ಸೌಧರ್ಮೇ[1]ನು[1]ಪಸಂಹೃತನಾಟ್ಯಾವಸರನಾಗಿ,

ಬಗೆ[2]ಯು[2]ಂಪೊಗೞಲ್ ಪರಮನ
ನಗಲ್ದು ಪೋಗಲ್ಕಮಾಱನಂತಂತೆ ಮನ
ಕ್ಕಗಿಬಗಿಯಾಗಿರೆ ಪೊಗೞಲ್
ಬಗೆದು ಮನಂ ಮಗುಳ್ದು ಮಗುಳೆ ನೋಡಿದನಿಂದ್ರಂ ೫೮

ಅಂತು ನೋಡಿ,

ಪರಮನ ಸೇವಾಸುಖದೊಳ್
ದೊರೆಗೆ ವರಲ್ ನೆಱೆಯದಮರಲೋಕದ ಸುಖಮಿ
ನ್ನಿರುಳುಂ ಪಗಲುಂ ದೇವನ
ಚರಣಮನೋಲಗಿಸುತಿರ್ಪನೆನಗಿದುವೆ ಸುಖಂ ೫೯

ಎಂಬಿನೆಗಂ,

ಸುರಮಂತ್ರಿಗಳದನಱಿದೀ
ಪರಮನ ಕಲ್ಯಾಣಮಿನ್ನುಮಿರ್ದುವು ಮತ್ತಂ
ಬರವೇೞ್ಪುದು ನಡೆಯೆನೆ ಹೃ
ತ್ಸರೋಜದೊಳ್ ತಾಳ್ದಿ ನಿಂದನಜಿತನನಿಂದ್ರಂ ೬೦

ಅಂತು ಚತುರ್ನಿಕಾಯಾಮರಜನಂ ಬೆರಸುಮಮರರಾಜನಮರನಗರಿಗೆ ಪೋದಂ. ಇತ್ತಲ್,

ಕುಲಿಶಿ ಜಿನಮಧ್ಯಮಾಂಗುಲಿ
ಯೊಳಮೃತಸಂಕ್ರಮಣಮಾಗೆ ಮಾಡಿದೊಡೆ ನಿಜಾಂ
ಗುಳಿಯನೆ ಸೇವಿಸಬಗೆದಂ
ಗಳ[ಮಾ]ಜಿತಶತ್ರುಭವನದೊಳ್ ನತಭುವನಂ ೬೧

---

1 ನ (ಅಇಉಎ). 2 ವ (ಅಕ)

ಅರಳೆಲೆ ಪೊಂಗುನೂಲ್ ಪುಲಿಯುಗುರ್ ಮಣಿಕಿಂಕಿಣಿಗೆಜ್ಜೆ ರಕ್ಕೆ ಕುಂ
ಡಲಯುಗ ಮುತ್ತು ಕಾಲ್ಗಡಗಮುಂದುಗೆ ಕಂಕಣ ಕಿಂಕಿಣೀಗಣಂ
ಕಲಮಣಿನೂಪುರಂ ತನಗೊಡಂಬಡೆ ಗಾಡಿಗೆ ಲೋಳಿವಾಯ್ ಮನಂ
ಗೊಳೆ ಭುವನೈಕಮಂಡನನೊಳೇನೆಸೆದಿರ್ದುದೊ ಬಾಲಮಂಡನಂ ೬೨

[1]ಜಿನತನುಶೋಭೆ ಗಡ ನಿರಂ
ಜನನೊಳ್ ತಾ ರಕ್ಕೆ ಗಡ ಜಗದ್ರಕ್ಷಕನೊಳ್
ಘನತರ ಕೆಂಜೆಡೆ ಗಡ ಜೀ
ವನೊಳ್ಮಣಿರುಚಿ ಗಡ ತೀರ್ಥಚಿಂತಾಮಣಿಯೊಳ್[1] ೬೩

ಇದು ಧರ್ಮಾಂಕುರಮೆಂಬಿನಂ ವದನಪದ್ಮಾವಾಸ[2]ವಾ[2]ದೇವಿಗಿಂ
ತಿದು ಪುಣ್ಯಾಂಕುರಮೆಂಬಿನಂ ವದನದೊಳ್ ದಂತಾಂಕುರಂ ರೂಪುದೋ
ಱದುವವ್ಯಕ್ತ[3]ಪ[3]ದಸ್ವಭಾವಮಧುರಂ ಮೇಣ್ ತೋರ್ಪು[4]ದು[4]ಂ ತನ್ನ ದೋ
ಷದೊಳಂ ತೋಱಿವೆ ತನ್ನ ದೋಷಮನದೇಂ ದೇವಂ ವಿಶುದ್ಧಾತ್ಮನೋ ೬೪

ನೆಗಱ್ದ* ರ್ಥ ಮಾಗಧೀಯುಂ
ನೆಗಱ್ದ* ಜ[5]ತ[5]ನನದೊಳಾಗಳಸ್ಫುಟವಚನಂ
ನೆಗಱ್ದ* ತ್ತವ್ಯಕ್ತಾಕ್ಷರ
ನಿಗೂಢಪರಿಜಪನವಿಧಿಗದೇಂ ಚೆಲ್ವಾಯ್ತೋ ೬೫

ಲಲಿತಾಂಗುಲಿಭಾಸುರಭ
ದ್ರಲಕ್ಷಣಾಲಂಕೃತಂ ಚತುರ್ದಂತಮದೇಂ
ಗೆಲೆವಂದುದೊ ವಾಸವಗಜ
ವಿಲಾಸಮಂ ಬಾಲಕಾಲದಜಿತವಿಲಾಸಂ ೬೬

---

1 ಜನನುತ ಶೋಭೆ ಗಡ ನಿರಂ
ಜನನೊಳ್ ರಕ್ಕೆ ಗಡ ಜಗದ್ರಕ್ಷಕನೊಳ್ ಕೆಂ
ಜೆಡೆ ಗಡ ಜಿನನೊಳ್ ಮಣಿಮುಂ
ಜೀರಕರುಚಿಗಡ ಸುತೀರ್ಥಚಿಂತಾಮಣಿಯೊಳ್ 1 ೬೩

2 ದಾ (ಅಇಉಎ). 3 ಪ (ಕ). 4 ದ (ಇಉಎ). 5 ನಾ (ಇಉಎ).

ಇದು ಚೋದ್ಯಮೆನಗೆ ಪೇಳ್ದಿಪೆ
ನದೆಂತು ಪೇಟಿ[3]ಂಬ ಸಕಲವಿದ್ಯೆಗಳುಮನೋ
ದದೆ ಕಲ್ತಂ ಜಗಮುಂ ನೋ
ಡದೆ ಕಾಣ್ಬಂ ಬಗೆಯದಜೀವನೆಲ್ಲಮನಜಿತಂ ೬೭

ದಿನಕರನುದಯಿಸಲೊಡಮೇಂ
ದಿನದೀಪ್ತಿಗಳೊಡನೆ [1]ಬ[1]ಂದು ನೆಲಸುವವೊಲ್ ಪ್ರಾ
ಕ್ತನಜನ್ಮವಿದ್ಯೆಗಳ್ ಬಂ
ದನಿತುಂ ನೆಲಸಿದವು [2]ಸಕಲ[2]ವಿದ್ಯಾನಿಧಿಯೊಳ್ ೬೮

ಅವಧಿಮತಿಶ್ರುತಬೋಧಂ
ಗವಗತತತ್ವಂಗೆ ಗುರುಗೆ ವಿದ್ಯಾಗುರು ಸಂ
ಭವಿಸಂ ದೀಕ್ಷಾಗುರು ಸಂ
ಭವಿಸನುಮೆನೆ ತನಗೆ ತಾನೆ ಗುರುವಾಗಿರ್ಪಂ ೬೯

ಜೀವಾದಿಪದಾರ್ಥಂಗಳೊ
ಳಾವುದು ಸಂದಿಗ್ಧಮಾದೊಡಂ ಬಲಗೊಳೆ ಭ
ವ್ಯಾವಳಿಗೆ ವಿದಳಮಕ್ಕುಂ
ದೇವನನೀತೀರ್ಥಕೆರನ ಪುಣ್ಯಮಗಣ್ಯಂ ೭೦

ಜಿನವೃಂದಾರಕನಿಂದ್ರವಂದಿತಪದಾಂಭೋಜದ್ವಯೋದ್ಭಾಸಿ ಮ
ಜ್ಜನಪೀಠೀಕೃತಮಂದರಾಚಲನಯೋಧ್ಯಾಮಂಡನಂ ಧರ್ಮನಂ
ದನಕಲ್ಪದ್ರುಮನಂಗಜನ್ಮಮದವನ್ಮಾತಂಗಸಿಂಹಂ ಜಗ
ಜ್ಜನಕಂ ಬಂಧುಜನಕ್ಕಮಾದನಜಿತಂ ಸಂಪೂರ್ಣಪುಣ್ಯಾವಹಂ ೭೧

ದಾರಕ[3]ರೂಪ[3]ದೆ ಜಿನವೃಂ
ದಾರಕನೊಡನೊಡನೆ ಬಾಲಕೇಳಿಗಳಂ ವೃಂ
ದಾರಕರೆ ಮಾಡಿ ದುರಿತವಿ
ದಾರಕನ ಮನಕ್ಕೆ ಮಾಡಿದರ್ ಸಂತಸಮಂ ೭೨

ಮಣಿನೂಪುರಯುಗಮಣಿಕಿಂ
ಕಿಣೀರವಂ ನೆಗಟಿ[3] ಸಕಲಲೋಕೈಕಶಿಖಾ

---

1 ವ (ಇಉಎ). 2 ಕಳೆ ಸು (ಇಉಎ). 3 ಪೂರ (ಅಕ).

ಮಣಿಯೆನಿಸಿದಜಿತನಾಥಂ
ಮಣಿಕುಟ್ಟಿಮಭೂಮಿಯೊಳ್ ಮನಂಗೊಳೆ ನಡೆದಂ ೭೩

ಕೊಡೆವಿಡಿದಿರ್ಪಿದಿರೊಳೆ ಕ
ನ್ನಡಿವಿಡಿದಿರ್ಪಜಿತತೀರ್ಥಕರ್ತುಗೆ ಕುಂಚಂ
ಬಿಡಿದಿರ್ಪ ಕೆಲದೊಳಡಪಂ
ಜಡಿದಿರ್ಪ ಸುರೇಂದ್ರದಾರಕರ್ ಸೊಗಯಿಸಿದರ್ ೭೪

ಆ ದಿವದಿಂದಮನಾರತ
ಮಾದಿವಿಜಾಧಿಪನೆ ಬೆಸಸೆ ಪೂವಂ ದೇವಂ
ಗಾದರದಿನಡಕಿ ತಲೆ ತರ
ಟಾಮವು ಶತಧಾರಿಯಾಗೆ ಬರೆ ಸುರವಟುಕರ್ ೭೫

[1]ಉಸುರೆ[1] ದಿವಿಜೇಶ್ವ[2]ರಂ[2] ಪರಿ
ವೆಸದಮರರ್ ದಾದಿಕಾಱವೆಸದಮರರದೇಂ
ಬೆಸಗಲಿಗಳ್ ಬರ್ಪರೊ ಮಾ
ನಸವೇಗರ್ ಪವನವೇಗರಿರುಳುಂ ಪಗಲುಂ ೭೬

ಸುರಪತಿಯೆಱ[3]ವೆಸನರ್ಹ
ತ್ಪರಮೇಶ್ವರಪಾದಸೇವೆ ಪಾಲ್[3]ಱ[3]ಮುದಾರ್
ಪಿರಿದು [4]ಗಡಿ[4]ದೆನಿಸಿ ತಂದರ್
ಸುರವಟುಕರ್ ಪುಲ್ಲವಟುಕರಂತಿರೆ ಪೂವಂ ೭೭

ಇವು ಜಿತಶತ್ರುಗೆ ಜಿನಗುರು
ಗಿವು ಜಿನಜನನಿಗೆ ಜಿನಂಗಿವೆಂದಂದತ್ಯು
ತ್ಸವದಿಂ ಕಲ್ಪೇಂದ್ರರ್ ಕ
ಲ್ಪವೃಕ್ಷಸಂಭವಫಲಪ್ರಸೂನಾಂಬರಮಂ ೭೮

ತರವೇಟ್ ಮಂದಾರಸಂತಾನಕಸುರತರುದಾಮಂಗಳಂ ಪಣ್ಗಳಂ ಪೋ
ತರವೇಟ್ ದಿವ್ಯಾಂಬರಾಲೇಪನಮೃಗಮದಗಂಧಗಳಂ ಧೂಪಮಂ ನೀಂ
ತರವೇಟ್ ಕೇಯೂರಹಾರಪ್ರಗುಣಮಣಿವಿಭೂಷಾವಿಶೇಷಂಗಳಂ ಚಿ
ಚ್ಚರಮೆಂದಟ್ಟುತ್ತುಮಿರ್ಪಳ್ ತರಿಸಿ ಶಚಿ ಮಹಾದೇವಿ ದೇವಂಗೆ ನಿಚ್ಚಂ ೭೯

---

1 ಅಸುರ (ಅಕ). 2 ರ್ (ಕ). 3 ಗ (ಇಉಎ). 4 ಡವೆಗಡೆ (ಅ).

ತ್ರಿದಶಕುಮಾರರ್ ನೆತ್ತದ
ಚದುರಂಗದ ಮುಟ್ಟನಟ್ಟಿಯಿಂ ಮು[1]ರ[1]ವಟ್ಟ[2]ಂ[2]
ಪದಪೊದವೆ ಸಗ್ಗದಿಂ ತಂ
ದು ತಂದು ಕೆಲಗೆಲದೊಳಾಡುವರ್ ಜಿನಪತಿಯಾ ೮೦

ಕರಿಮಹಿಷಮೇಷಮಲ್ಲ
ಸ್ವರೂಪದಿಂ ತಮಗೆ ತಾಮೆ ಪೋಱೆ[3] ಸುರರ್ಕಳ್
ಪರಮನ ಮನಕ್ಕವೊಂದುಂ
ಬರಲಾಱವೆ ವೀತರಾಗನಪ್ಪುದಱಿಂದಂ ೮೧

ಅಱಿಯಿಂ ಸೌಧರ್ಮೇಂದ್ರನ
ತೆಱನನದೇನೆನ್ನ ದಾನಚಿಂತಾಮಣಿಯಂ
ಮಱಸಿದನೋಲಗಿಪುದೆ ತನ
ಗಱದೊಳ್ ನೆಗಳ್ದುದೆ ವಿನೋದಮಿದನೇವ್ರೊಗಳ್ವೆಂ* ೮೨

ಬವಣಿಗೆ ಜಿನೇಂದ್ರಪೂಜೋ
ತ್ಸವದೊಳಮೊಡ್ಡೋಲಗಂ ಜಿನಾಸ್ಥಾನದೊಳಾ
ದಿವಿಜೇಂದ್ರಂಗಾದುದು ಗೀ
ತವಾದ್ಯನೃತ್ಯಪ್ರಸಂಗಮಜಿತನ ಕೆಲದೊಳ್ ೮೩

ಎಂತೆಂಬ ದೇವಭಕ್ತಿಯ
ದೆಂತೆಂಬಧಿಗಮದ ತೇಜಮೆಂತೆಂಬ ವಿನೋ
ದಾಂತರ[3]ಮೆನೆ ದೇವನನೆ ನಿ
ರಂತರಮು[3]ಮರಾಧಿರಾಜನಾರಾಧಿಸುವಂ ೮೪

ಏನೆಂಬ ಜಿನನ ಸೇವನ
ಮೇನೆಂಬನುರಾಗಮೇನದೇನೇನ್ಕೆಂಬ ಜಿ
ನಾನುಷ್ಠಾನುಕ್ರಮಮುಮ
ಮೇನೇನಂ ಬಣ್ಣಿಪೆಂ ಸುಧರ್ಮಾಧಿಪನಂ ೮೫

---

1 ದ (ಇಉಎ). 2 ಲ್ (ಇಉಎ). 3 ಜೊಳೊಯ್ಯನೊಲಿದೋರಂತಿರದ (ಇಉಎ).

ನಿನಗಿಂದ್ರಾದಿಗಳಟ್ಟಿದರ್ ತುಡಲುಡಲ್ ಪೂಸಲ್ ಪುಗಲ್ವೇಡ ಮ
ಜ್ಜನಮಾರೋಗಿಸವೇಡ ಕೆಂದ ಪಸಿದೈ ಬಾ ಎಂದು ತಾಯ್ತಂದೆ ಬಂ
[1]ದನಿ[1]ವಂ ಗೆಯ್ಯೆ ಗುರೂಪರೋಧವಶದಿಂ ಸ್ನಾನಾನ್ನಪಾನಂ ವಿಲೇ
ಪನಮಾಲ್ಯಾದಿಗೆ ತಾನೊಡಂಬಡುವನೇಂ ದೇವಂ ನಿರಾಪೇಕ್ಷನೋ ೮೬

ಪೆಱರಂ ಪೆಱರ್ಗೆ*ಯೊಲಿದಾ
ನೆಱಗುವೆನಾನೆನ್ನ[2]ನ[2]ಣಮೆ ಮುನಿಯುಂ ದ್ರವ್ಯ
ಕ್ಕೆಱಗನೆಡೆಗುಡನೆ ನಾಲ್ಕುಂ
ತೆಱದ ಕಷಾಯಕ್ಕೆ ಮಂದಮಂದಕಷಾಯಂ ೮೭

ಆ ರಾಜಸುತಂ ಪಸಿದಂ
ನೀರಡಸಿದೆನೆನಗಿವಲ್ತುದಲ್ತಲ್ತೆನ್ನಂ
ಪಾರ್ದೈಸಂ ಪಲವಂ ವಿಗೆ
ಕೋರ್ದೈಸಂ ಕೊರಗನೞಲನೆೞಲಂ ಬೞಲಂ ೮೮

[3]ಜ[3]ಂಕರಿಸಂ ಕಾತರಿಸಂ
ಮೂಂಕರಿಸಂ ಬೆಕ್ಕಸಂಬಡಂ ಬೆಕ್ಕರಿಸಂ
ಹೂಂಕರಿಸಂ ನಿರ್ವಿನಿಸಂ
ಜೀಂಕರಿಸಂ ಜಿನುಗನವನಿಸಂ ಕೊಕ್ಕರಿಸಂ ೮೯

ಅಳವಳಿಸಂ ಬೆಬ್ಬಳಿಸಂ
ಕಳವಳಿಸಂ ಕನಲನೊನಲನಟ್ಟಿಂ ಬಳ್ಕಂ
ಚಳವಳಿಸಂ ಚಪ್ಪರಿಸಂ
ತಳವಳಿಸಂ ಬೇಸಱ[3][4]ಯ್ದಿ[4] ಬೆಳ್ಮೊಗದಿನಿರಂ ೯೦

ಒಸೆಯಂ ಮುನಿ[5]ಯ[5]ಂ ಕಿನಿ[5]ಯು[5]ಂ
ಕಿಸುಗಣ್ಣಂ ಮಿಳ್ಕಿಗೊಳ್ಳ[6]ನಾಯ[6]ಸದಿಂ ಚಿಂ
ತಿಸನಲಸನಜನಿಸಂ ಭ್ರಾಂ
ತಿಸನಂತಹಮಿಂದ್ರನಿರ್ಪ ತೆಱದಿಂದಿರ್ಪಂ ೯೧

---

1 ಧನ (ಕ). 2 ವ (ಇ)? 3 ಓ (ಅಕ). 4 ಯ್ದೆ (ಇಉಎ). 5 ಸ (ಅಕ). 6 ನೇವ (ಇಉಎ).

ನಗಿಸಲ್ ನುಡಿಸಲುಮಜಿತನ
ಸಗೆಗಣ್ಗಳ ಚೆಲ್ವನೊಸೆದು ನೋಡಲ್ ಪಡೆಯಲ್
ನಗೆಮೊಗದ ಸೀರೆಯರ್[1][ನಗು][1]
ಮೊಗದಿಂದಂ ಪಕ್ಕುಗಾಣದಗಲಗಲಿರ್ಪರ್ ೯೨

ಎಡೆಮಡಗದೆ ಸಂದಿಸಿ ವಿಾ
ಪುಡುವ ತುಱುಂಬುವ ಜಲಾಂಬರಪ್ರಕ್ತತಿಯಿಂ
ನಡೆದರ್ ಮಜ್ಜನವಳ್ಳರ
ಮುಡಿವಳ್ಳರ ಮಾಲೆಗಾಱರಂದದೆ ದಿವಿಜರ್ ೯೩

ಅಂತು ನಿಸ್ವೇದತ್ವಮುಂ ನಿರ್ಮಲತ್ವಮುಂ ಕ್ಷೀರಗೌರತ್ವಮುಂ ವಜ್ರವೃಷಭನಾರಾಚಸಂಹನನಮುಂ ಸಮಚತುರಸ್ರಸಂಸ್ಥಾನಮುಂ ಸುರೂಪತೆಯುಂ ಸುರಭಿಗಂಧತ್ವಮುಂ ಸ್ವಸ್ತಿಕಾಂಕುಶಧ್ವಜತೋರಣಾದ್ಯಷ್ಟೋತ್ತರಲಕ್ಷಣಸಹಸ್ರಮುಮಪ್ರತಿಮವೀರ್ಯತ್ವಮುಂ ಪ್ರಿಯಹಿತವಾದಿತ್ವಮುಮೆಂಬ ದಶವಿಧಸ್ವಭಾವಾತಿಶಯಸಂಪನ್ನನುಂ ಶಸ್ತ್ರಪಾಷಾಣಾಯುಧಾದಿವರ್ಷವಿಷಾಗ್ನಿಕಾಳುಕಾದಿಪರಘಾತಮುಂ ವಾತಪಿತ್ತಶ್ಲೇಷ್ಮಸಂನಿಪಾತಸಂಭವಾಮಯನೋಪಕರ್ಮೋಪದಯೋಪಘಾತಮುಂ ಪ್ರಿಯಹಿತವಾದಿತ್ವಮುಮಲ್ಲದೆ ಜರಾವಿಭೇದಂ ದಂತಮಳಾದಿವಿರಹಿತನುಂ ಸನಿರತಿಶಯೇಂದ್ರಿಯಾರ್ಥಸಮನುಗತಾಭ್ಯುದಯನಿಶ್ರೇಯಸಪರಮಸುಖಸಾಧನಮುಮಪ್ಪ ಪರಮಔದಾರಿಕ ಚರಮದೇಹಮುಂ ತಾಳ್ದಿ ಸುರಕುಮಾರರಾಜಕುಮಾರಪರಿವೃತನುಮಾಗಿ ಬಳೆವ ತೀರ್ಥಕರಕುಮಾರಂಗೆ ಅಷ್ಟಾದಶಲಕ್ಷಪೂರ್ವಂ ಕುಮಾರಕಾಲಂ ಪೋಗೆ,

ವನಿತಾನೇತ್ರೋತ್ಪಲಾನನ್ದನವಿಶದಶರಚ್ಚಂದ್ರಬಿಂಬೋಪಮಾನಾ
ನನನುರ್ವೀರಾಜ್ಯಭಾರಕ್ಷಮದಿಮಿಭಕರಾಕಾರಶುಂಭತ್ಕರಂ ಯೌ
ವನಲಕ್ಷ್ಮೀಕೇಳಿಶೈಲೋಪಮಭುಜಶಿಖರಂ ಶ್ರೀವಧೂಚಂಚನತ್ಕಾಂ
ಚನಲೀಲಾಮಂದಿರಶ್ರೀನಿಲಯಪೃಥುಲವಕ್ಷಸ್ಥಲಂ ತೀರ್ಥನಾಥಂ ೯೪

ಅಂತೆನಿಸಿದಾಧರ್ಮನಂದನಕಲ್ಪಪಾದಪಬಾಲಾಶೋಕಪಾದಪಲ್ಲವಮೆನಿಪ ಮೃದುಮಧುರಪದಪಲ್ಲವಮುಮಾಮಣಿಗಣವಿಭೂಷಣಪದ್ಮರಾಗಮಣಿರುಚಿರನಖ-ಮಣಿರುಚಿಯುಮಾಕನತ್ಕನಕದಂಡಮೆನಿಪ ಮಸೃಣಜಂಘಾಕಾಂಡಮುಮಾಭುವನವಿಜಯಲಕ್ಷ್ಮೀಕರೇಣುಕಾಲಾನಮಾನಸ್ತಂಭವೃತ್ತೋರುಸ್ತಂಭಮುಮಾ ದುರಿತಗಜಘಟಾಸಿಂಹಾಸನಾರೋಹಣೋಚಿತಮೆನಿಪ ಸಿಂಹಕಟೀತಟಮುಮಾಧರ್ಮ

---

1 ಮಿಗೆ (ಇಉಎ).

ತೀರ್ಥಪ್ರವರ್ತನಸಮುದ್ರಾವರ್ತಮೆನಿಪ ದಕ್ಷಿಣಾವರ್ತಗಂಭೀರನಾಭಿಯುಮಾ–ಕೃಶೀಕೃತಕರ್ಮಬಂಧನಮೃಗೇಂದ್ರಮಧ್ಯಮೆನಿಪ ಕೃಶಮಧ್ಯಮುಮಾಮಜ್ಜನಪೀ-ಠೀಕೃತಮಂದರಾಚಳಶಿಲಾತಳವಿಶಾಲಮೆನಿಪ ವಿಪುಲವಕ್ಷಸ್ಸ್ಥಳಮುಮಾಗಜ–ಲಾಂಛನದಿಗ್ಗಜಕರಾನುಕಾರಿಯೆನಿಸುವ ಜಾನುವಿಲಂಬಮಾನಶುಂಭತ್ಕರಮುಮಾ ತ್ರಿಲೋಕಶಿಖರಿಶೇಖರನಮೇರುಮೇರುಶಿಖರಮೆನಿಪ ಗುರುಭುಜಶಿಖರಮುಮಾ – ರತ್ನತ್ರಯಾಲಂಕೃತನೆನಿಪ ಕಮನೀಯಕಂಬುಬಂಧುರಕುಬ್ಜಕಂಧರಮುಮಾಸಕಲ ಸುರಾಸುರಸಭಾಸಮಭ್ಯರ್ಚಿತನ ಪಾದಪದ್ಮರಾಗರುಚಿಯೆನಿಪ ವೃತ್ತಾರುಣೋದಾರ ರುಚಿಯುಮಾಭುವನ[1]ಸಂಕ್ರಂದ[1]ನನ ವಿಮಲಮುಕ್ತಾಫಲಪಙ್ಕ್ತ್ಯನುಕಾರಿಯೆನಿಪ ಪರಿಸ್ಫುರದ್ದಶನಕಾಂತಿಯುಮಾಚಂಚಚ್ಚಂಪಕದಾಮಾಭಿರಾಮಹೇಮಪ್ರಭನ ಚಂಪಕಮುಕುಲಕಲಾಪಮೆನಿಪ ಸಮುತ್ತುಂಗನಾಸಿಕಾವಿಲಾಸಮುಮಾಮತಿಶ್ರುತಾವಧಿ–ಜ್ಞಾನನೇತ್ರತ್ರಯನ ಶತಪತ್ರಪತ್ರಾನುಕಾರಿಯೆನಿಪ ಕರ್ಣಾಂತವಿಶ್ರಾಂತವಿಶಾಲ ನೇತ್ರದ್ವಯಮುಮಾಸಹಜಚ್ಛಿದ್ರಕರ್ಣನ ಕರ್ಣಾಭರಣ[2]ಕಿರಣ[2]ಮಣಿಯುಮೆನಿಪ ನಿಜಾಂಸಸ್ಥಲಪ್ರಲಂಬಕರ್ಣಯುಗಳಮುಮಾನಿರವದ್ಯವಿದ್ಯಾವಿಲಾಸಿನೀಮಣಿ – ದರ್ಪಣನ [3]ದರ್ಪಣ[3]ತಳಮೆನಿಪ ವಿಮಲಕಪೋಲತಳಮುಮಾನವಶತಾರ್ಥಚಾ–ಪೋತ್ಸೇಧನ ಮದನಚಾಪಮೆನಿಪ ವಿಭ್ರಮಭ್ರೂಯುಗಳಮುಮಾವಿನೇಯವಿ – ಲೋಚನೋತ್ಪಲಾನಂದಕರಚಂದ್ರನ ಸಕಲಚಂದ್ರಾಕಾರಮೆನಿಪ ಸಾಮ್ರಾಜ್ಯ ಪಟ್ಟಬಂಧೋಚಿತ[4]ವಿಸ್ತೀರ್ಣ[4]ಲಲಾಟಪಟ್ಟಮುಮಾಭವ್ಯಮಧುಕರನಿಷೇವ್ಯಚರ–ಣಾರವಿಂದನ ಮಧುಕರಕಲಾಪಮೆನಿಪ ಸಮುಪ್ರಸಿದ್ಧಮೃದುಕುಟಿಲಕುಂತಳಕಲಾ ಪಮುಮಾಶ್ಚರ್ಯಸೌಂದರ್ಯಮುದ್ರಾಂಕಿತಮಾಗೆ,

ಪರಮೌದಾರಿಕದೇವಸೌಂದರತೆಯಿಂ ಹೇಮಪ್ರಭಾಭಾರಭಾ
ಸುರತೇಜಃಪ್ರಭೆಯಿಂ ವಿಲೋಲಧವಳಾಪಾಂಗೇಕ್ಷಣಚ್ಛಾಯೆಯಿಂ
ದರಹಾಸಾಮೃತದಿಂ ಸಲೀಲಪದವಿನ್ಯಾಸಂಗಳಿಂ ಮಂಜುಳ
ಸ್ವರಗಾಂಭೀರ್ಯದಿ[5]ನೀಟ್ದು[5]ಕೊಂಡನಜಿತಂ ಕಾಂತಾಜನಸ್ವಾಂತಮಂ ೯೫

ಅಂತನಂಗಾವತಾರಮೆನಿಸಿದ ತಾರುಣ್ಯಾವತಾರದೊಳಭಿನವಯೌವನಲಕ್ಷ್ಮೀ ಸಮಾಲಿಂಗಿತಾಂಗನುಂ ಸರ್ವಾಂಗೋಪಾಂಗ ಸೌಂದರ್ಯನುಮಾದ ನಿಜತನೂಜಂಗೆ ವಿವಾಹೋತ್ಸವಮಂ ಮಾಡಲೆಂದು ಮನದೊಳೆ ಮಂತಣಮಿರ್ದು ಪರಮೇಶ್ವರನು ಮೊಡಂಬಡುಗುಮೊಡಂಬಡನೆಂದು ತನ್ನ ಬಲ್ಲಂದದೊಳೆಲ್ಲಂ ನುಡಿದೊಡಂಬಡಿಸ

---

1 ಸಾಕನ್ದ (ಅ), ಸಾಕಂಥನ್ವ (ಇಎ), ಸಾಕಂಧನ್ವ (ಉ). 2. ಪರಮ (ಕ).
3 (ಇಉಎ). ಗಳಿಲ್ಲ. 4 ವಿಚಿತ್ರ (ಕ). 5 ನಿರ್ದು (ಇಉಎ).

ಲೆಂದು ಕೆಲಕ್ಕೆ [1]ಬ[1]ಂದು ಕೆಯ್ಯನೊತ್ತಿಯುಂ ಕಾಲನೊತ್ತಿಯುಂ ತ[2]ತ್ತ[2]ಪಣಂ ಗೆಯ್ದು,

ಆ ಪುಣ್ಯಮುಕ್ಕೆ ಲೋಕ
ವ್ಯಾಪಾರಂ ನಡೆದ ಬಟ್ಟೆಯೊಳ್ ನಡೆವುದು ಮು
ನ್ನಾ ಪುರುಪರಮೇಶ್ವರನೆಂ
ತಾಪಾಂಗಿಸೆ ಕಂದ ನೆಗ*ೞ್ದಾಡಾವುದು ದೋಷಂ ೯೬

ಭರತನ ದೊರೆಯುನನುರ್ವೀ
ಭಗಸಹನಂ ಮಗನೆ ಪಡೆಯವೇೞ್ಪುದು ಮಗನಂ
ದೊರೆಕೊಳ್ಗೆ ಧರ್ಮಪತ್ನಿಯ
ಪರಿಗ್ರಹಂ ನಿಮಿರ಼್ ಪುತ್ರಸಂತತಿ ನಿನ್ನೊಳ್ ೯೭

ಮನವೊಸೆದಂದು ಪೆತ್ತಮಗೆ ಸಂತಸವಾಗೆ ವಿವಾಹಮಂಗಳಂ
ನಿನಗಮವೇೞ್ಪವೇ [3]ಸುತೆ[3]ಯರಂ ಕುಡಲರ್ತಿಗರಾಪಪರ್ ಮಹಾ
ವನಿಪತಿಗಳ್ ವೆಱಂ ಮಗನೆ ನೋೞ್ಪವೆ ಪೇೞೆನೆ ತನ್ನ ಸಸ್ಮಿತಾ
ನನದೊಳೆ ಮಾೞ್ಪುದೆಂದಱಿಪಿದಂ ಜಿತಶತ್ರುಗೆ ಜೈತ್ರಶಾತ್ರವಂ ೯೮

ಅಂತು ತನ್ನ ನುಡಿಗೊಡಂಬಟ್ಟುದಕ್ಕೆ ಸಂತಸಂಬಟ್ಟು ಗುಡಿಯಂ ಕಟ್ಟಿ ಬದ್ದವಣಂ ಬಾಜಿಸಲ್ವೇೞ್ದು ಜಿತಶತ್ರುಮಹಾರಾಜನಿಕ್ಷ್ವಾಕುವಂಶೋತ್ತಂಸಂಗೆ ನಾ[4]ಥ[4]ವಂಶಮಹೀನಾಥನಂದನೆಯರುಮನುಗ್ರವಂಶನೃಪಾಗ್ರೇಸರತನೂಜೆಯರುಮಂ ಹರಿವಂಶಕ್ಷತ್ರಪುತ್ರಿಯರುಮಂ ಕುರುವಂಶಪಾರ್ಥಿವಪ್ರಭೂತೆಯರುಮಂ ಭೋಜವಂಶತನೂಜೆಯರುಮಂ ಚೆನ್ನೆಯರುಮಂ ತಂದು ಸೂರ್ಯವಂಶದ ನರೇಂದ್ರಸುತೆಯರುಮಂ ಸೋಮವಂಶದ ನರಪಾಲಸುತೆಯರುಮಂ ಕದಂಬವಂಶಮಹೀಧರಾತ್ಮಜೆಯರುಮಂ ಪಾಂಡ್ಯವಂಶಧರಣೀಧರಸುತೆಯರುಮಂ ಕೇರಳವಂಶಭೂಪಾಲಾಪತ್ಯೆಯರುಮಂ ಮತ್ತಮನೇಕಮೂರ್ಧಾಭಿಷಿಕ್ತಕ್ಷತ್ರಿಯಕುಲಸಮುತ್ಪನ್ನೆಯರುಮಂ ನಿರತಿಶಯರೂಪಲಾವಣ್ಯಸೌಭಾಗ್ಯಹಾವಭಾವವಿಲಾಸವಿಭ್ರಮಸೌಂದರ್ಯಸಂಪನ್ನೆಯರುಮಪ್ಪ ಸಾಸಿರ್ವರ್ ಕನ್ನೆಯರುಮಂ ಚೆನ್ನೆಯರುಮಂ ತಂದು ಮಹೋತ್ಸಾಹದಿಂ ಶುಭದಿನಪ್ರಶಸ್ತವಾರಮಂಗಳಕಲ್ಯಾಣಮುಹೂರ್ತದೊಳ್ ಪಾಣಿಗ್ರಹಣಂಗೆಯ್ಸಿ ವಿವಾಹಕಲ್ಯಾಣಮಂ ಮಾಡಿದಾಗಳ್

---

1 ವ (ಇಉಎ). 2 ತ್ತು (ಇಉಎ). 3 ನೀ ಱೆ[3] (ಅಇಉಎ). 4 ಗ (ಇಉಎ).

ಕಡುಗಾಡಿಯ ಕಡುಚೆಲ್ವಿನ
ಬೆಡಂಗುವೆತ್ತವರ ನಡುವೆ ಕಣ್ಗೊಪ್ಪಿ ಬೆಡಂ
ಗಿಡಿದಿರ್ದ ಕಲ್ಪಲತೆಗಳ
ನಡುವಣ ಕಲ್ಪಾವನೀಜಮಂ ವಿಭು ಪೋಲ್ತಂ ೯೯

ಅಂತು ಸಹಸ್ರಾಂಗನಾವಲ್ಲಭನಾದಜಿತವಲ್ಲಭನಂ ಸಾಮ್ರಾಜ್ಯಲಕ್ಷ್ಮೀವಲ್ಲಭನಂ ಮಾಡಲೆಂದು ಜಿತಶತ್ರುಮಹಾರಾಜಂ ಗಣಕರಣನಿರೂಪಿತಪ್ರಶಸ್ತಲಗ್ನೋದಯದೊಳಗಣ್ಯಪುಣ್ಯಾಂಬುಪೂರ್ಣಸ್ವರ್ಣಕಳಶಂಗಳಿಂ ಸೌಧರ್ಮೇಂದ್ರಂ ಮಾಡಿದ ಜನ್ಮಾಭಿಷೇಕಮಂ ಪೋಲೆ ರಾಜ್ಯಾಭಿಷೇಕಮಂಮಾಡಿ ಮಣಿಮಯೋತ್ತುಂಗಸಿಂಹಾಸನಮನೇಱಸಿ,

ಧವಳಚ್ಛತ್ರತ್ರಯಂ ಶ್ರೀಧವಳಚಮರಜಶ್ರೇಣಿಗಳ್ ವಾರನಾರೀ
ಧವಳಾಪಾಂಗಂಗಳೆತ್ತಂ ಧವಳಿಸೆ ದಶದಿಗ್ಭಿತ್ತಿಯಂ ಚಂದ್ರರೋಚಿ
ರ್ಧವಳಂ ಲೋಕಕ್ಕೆ ಕೀರ್ತಿಪ್ರಸರಮೆಸೆವಿನಂ ಮಾಡಿದಂ ಪಟ್ಟಬಂಧೋ
ತ್ಸವಮಂ ಸಮ್ಯಕ್ತ್ವಲಕ್ಷ್ಮೀಧವಳನಜಿತನಾಥಂಗಯೋಧ್ಯಾಧಿನಾಥಂ ೧೦೦

ಇದು ಸಕಲ ಮುನೀಂದ್ರ ವೃಂದ ವೃಂದಾರಕ ಶ್ರೀಮದಜಿತಸೇನ ಭಟ್ಟಾರಕ
ಶ್ರೀ ಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ
ಶ್ರೀಮದಭಿನವ ಕವಿಚಕ್ರವರ್ತಿ
ಕವಿರತ್ನ ನಿರ್ಮಿತ
ಶ್ರೀ ದಾನಚಿಂತಾಮಣಿ ನಿರ್ಮಾಪಿತ
ಶ್ರೀಮದಜಿತತೀರ್ಥಕರ ಪುರಾಣತಿಲಕದೊಳ್
- ಪಟ್ಟಬಂಧೋತ್ಸವವರ್ಣನಂ ಪಂಚಮಾಶ್ವಾಸಂ -

———

ಷಷ್ಠಾಶ್ವಾಸಂ

———

ಶ್ರೀಮದ್ದ್ವಿತೀಯತೀರ್ಥ
ಸ್ವಾಮಿ ಜಗತ್ತ್ರಿತಯಶೇಖರಂ ಭಾಸುರತೇ
ಜೋಮೂರ್ತಿ ಭವ್ಯಜನಚಿಂ
ತಾಮಣಿ ನಿರವದ್ಯಚರಿತನಪಗತದುರಿತಂ ೧

ಅಂತು ಸಕಲಜಗತ್ಸಾಮ್ರಾಜ್ಯಪಟ್ಟಬಂಧಸಮುಲ್ಲಸಿತಲಲಾಟಪಟ್ಟನಾ – ಗೆ ಪರಮೇಶ್ವರನ ವಿವಾಹಕ್ಕಂ ತೆಲ್ಲಂಟೆದಪ್ಪಂತೆ ದೇವರಾಜಂ ದೇವಲೋಕದೊಳಗ್ಗಳಮಪ್ಪ ದಿವ್ಯಾಂಬರಮಣಿಮಯಾಲಂಕಾರಸುಗಂಧಕುಸುಮದಾಮಂಗಳ್ವೆರಸು

ಕಳಗೀತಂ ಕಳವಾದ್ಯದೊಳ್ ನೆಗಟ್ದು*ದೆಂಬೀನರ್ತನಂಗಳ್ ಮನಂ
ಗೊಳೆ ಸಂಗೀತಕಮುಂ ನೆಗಟ್ಚೆ ನೆಗಟ್ದೀ*ಶಾನಾದಿದೇವೇಂದ್ರರಾ
ಗಳೆ ಬಂದಿಂದ್ರನಿವಾಸದಿಂದೆರಗಿರ್ದಂ ಲೀಲಾಚಲತ್ಕರ್ಣಕುಂ
ಡಳನಾಖಂಡಳನಾದ್ವಿತೀಯಜಿನತೀರ್ಥೇಶಾಂಘ್ರಿಪದ್ಮಂಗಳೊಳ್ ೨

ಅಂತೆಱಗಿ ಪೊಡೆವಟ್ಟು ಭುವನೈಕಪೂಜ್ಯನಂ ಪೂಜಿಸಿ ದಿವಿಜರಾಜಂ ಜಿತಶತ್ರುಮಹಾರಾಜನ ಮೊಗಮಂ ನೋಡಿ

ಗುರುವಿಭವಂ ವರ್ಣಾಶ್ರಮ
ಗುರುವೆನಿಸಿದ ತೀರ್ಥಕರ್ತೃಗಜಿತಂಗೆ ಜಗ
ದ್ಗುರುಗೆ ಗುರುವೆನೆ ಗುರೋರಪಿ
ಗುರುವೆನಿಸಿದ ನೀನೆ ಧನ್ಯನೈ ಜಿತಶತ್ರೂ ೩

ದೇವನವತರಿಸಿದಂ ಗ
ರ್ಭಾವಾಸಕ್ಕಜಿತನಾಥನೆನೆ ಸಕಲಜಗ
ತ್ಪಾವನೆಗೆ ವಿಜಯಸೇನಾ
ದೇವಿಗೆ ಸಮರೊಳರೆ ಪುತ್ರವತಿಯರ್ ಸತಿಯರ್ ೪

ಎಂದು ತೀರ್ಥಕರಗುರುಗಳಂ ಪೊಗೞ್ದು ಪೂಜಿಸಿ ಸಂಗೀತಪ್ರಸಂಗದೊಳಮರಪುಂಗವನಜಿತನಾಥನನೋಲ[1]ಗಿ[1]ಸುತ್ತುಮಿರೆ

ಪರನೃಪರೋಲಗಿಸಿದ ಪ
ದ್ಮರಾಗಮಣಿಯಿಂ ನರೇಂದ್ರಪದನಖಮಣಿಯಿಂ
ದೆರಡೊಳಿಯೆ ಮಣಿದೀಪದ
ಸರಮೊಪ್ಪಿದು[2]ವಂ[2]ದು ಪಾದಪೀಠದ ಮೊದಲೊಳ್ ೫

ಭೂಪಲ್ಲಭನಾಸ್ಥಾನಸ
ರೋವರದೊ[3]ಳ್[3] ಕಮಲಲತೆಯನಡರ್ದೇಱಿದ ಹಂ
ಸಾವಳಿಗಳನಿೞ್ಕುಂ[4]ನವ
ಯೌವನೆಯರ[4]ಕೆಯ್ಯ ಧವಳಚಮರರುಹಂಗಳ್ ೬

ವೀರರಸಂ ಭಟರೊಳ್ ಶೃಂ
ಗಾರರಸಂ ಪೆಂಡವಾಸದೊಳ್ ಶಾಂತರಸಂ
ಸಾರಿರ್ದ ನಿಯೋಗಿಗಳೊಳ್
ಚಾರಣಗಣದೊಳ್ ನಿರಂತರಂ ಹಾಸ್ಯರಸಂ ೭

[5]ಘುರದೊಳ್[5] ಭೀಭತ್ಸರಸಂ
ಕರುಣಭಯಾನಕರಸಂ ಪದಾನತರೊಳ್ ರೌ
ದ್ರರಸಂ ದಾಯಿಗರೊಳ್ ಪುದಿ
ದಿರೆ ನೆಗೞ್ದದ್ಭುತರಸಂ ಕಥಾಗೋಷ್ಠಿಗಳೊಳ್ ೮

ಅಂತೊಡ್ಡೋಲಗಂಗೊಟ್ಟಿರ್ಪಾಗಳ್

ಉತ್ಸವಮುಂ ಜಗಜ್ಜನಕೆ ಮಾಡೆ ಸಹಸ್ರನಿತಂಬಿನೀವಿವಾ
ಹೋತ್ಸವಮುತ್ಸವಂ ನೆಗೞೆ[3] ರಾಜಸಹಸ್ರದೊಳಾಯ್ತು ಪಟ್ಟಬ

---

1 ಯಿ (ಇಉಎ). 2 ವ (ಇಉಎ). 3 ಳು (ಅಇಉಎ). 4 ಬಿಡದಾವಧುಗಳ (ಇಉಎ). 5 ಚರರೊಳ್ (ಇಉಎ).

ಜ್ಯೋತ್ಸ್ನವನಂಪನಂ ಜನಮನೋಹರಮಾಗಿಪೆನೆಂಬವೋಲ್ ವಸಂ
ತೋತ್ಸವಮಾದುದುತ್ಸವಪರಂಪರೆಗಳ್ ನೆಗಱುತ್ತುಮಿರ್ಪಿನಂ ೯

ಅಂತು ದೇವಾಗಮನಮುಂ ವಸಂತಾಗಮನಮುಮೊಡನೊಡನೆ ನೆಗೞೆ[3];

ಸಕಲಜಗಜ್ಜನಮುಂ ಮಕ
ರಕೇತು ಗೆಲೆ ಮದನ [1]ನೃಪನ[1] ನಾಟಕವಿಜಯಾ
ನಕರವದಂತೆಸೆಗುಂ [2]ಕ್ಷೀ
ಬ[2]ಕೀರಮತ್ತಾಳಿಪರಭೃತಪ್ರಭವರವಂ ೧೦

ನವಸಹಕಾರದಂಕುರದಿನಂಕುರಿಸಿತ್ತು ಪೊದಱ್ದು ನೀಳ್ದ ಪ
ಲ್ಲವತತಿಯಿಂದೆ ಪಲ್ಲವಿಸಿತುನ್ಮದಭೃಂಗಕುಳಕ್ಕೆ ಕಂಪುವೀ
ಱುವ ಕುಸುಮಂಗಳಿಂ ಕುಸುಮಿಸಿತ್ತು ಶುಕವ್ರಜಮುತ್ಸುಕತ್ವದಿಂ
ಸವಿವ ಫಲಂಗಳಿಂ ಫಲಿತಮಾಯ್ತು ಮನೋಜಮನೋರಥದ್ರುಮಂ ೧೧

ಅವಿರಳ ತಮಾಳಭೂರುಹ
ನಿವಹದ ಮೇಲೋಳಿವಟ್ಟು ಪಾಱುವ ಗಿಳಿ ಪೋ
ಲ್ತುವು ಕಱಿಯ ಮುಗಿಲ ಮೇಲೊ
ಪ್ಪುವ ರುಂದ್ರಸುರೇಂದ್ರಚಾಪರುಚಿರಶ್ರೀಯಂ ೧೨

ನಂದನವನದೊಳಗೇನೇಂ
ಬಂದವೊ ಮರನೆಂದು ಕಂತು ಬೆಸಗೊಳೆ ಮಾವಿಂ
ಬಂದಿರ್ದುವೆಂದು ಬಿನ್ನವಿ
ಪಂದದೆ ಕೋಗಿಲೆಗಳುಲಿದುವಾವ್ರುದ್ರುಮದೊಳ್ ೧೩

ಬಂದಿರೆ ಮಾಮರಂಗಳಿರ ಮಲ್ಲಿಗೆ ಬಂದಿರೆ ಕೋಕಿಲಾಳಿನೀ
ವೃಂದಮೆ ಬನ್ನಿಮಿತ್ತ ಶುಕ ನೀಂ ಸೊಕಮೇ ರಜನೀಂದ್ರಚಂದ್ರ ಸೈ
ಪಿಂಪಮೆ ಬಂದಿರೇ ಕುಶಲಮೇ ನಿಮಗೆಂದು ಮಧುಪ್ರವೇಶದೊಳ್
ಬಂದು ಮನೋಜನೇನನಿತುಮಂ ಪೆಸ*ರ್ಗೊಂಡನೊ ಕೂಡಿಕೊಂಡನೋ ೧೪

---

1 ಜಯನ (ಅಕ). 2 ರಾಜ (ಇಉಎ).

*ಅಳಿಭರದಿಂ ಶುಕಕೋಕಿಳ
ಕುಳಭರದಿಂ ಕೋರಕಾಂಕುರೋತ್ತರಭರದಿಂ
ಫಳಭರದಿಂದತಿಭರವಾ
ಯ್ತೆಳಮಾವಿಂಗೆನಿಸೆ ನೇಲ್ದ ಕೊಂಬುಗಳೆಸೆಗುಂ ೧೫

ಉರಿಯಂ ಕೆಂದಳಿರ್ಗಳ್* ಧೂ
ಮರಾಜಿಯಂ ಭೃಂಗರಾಜಿ ಕಿಡಿಯಂ ಪಣ್ ಪೋ
ಲ್ತಿರೆ ಕಾಮಿಗೆ ಕಾಮಾಗ್ನಿಯು
ಪರವರಿಯೆನಿಸಿದುವು ಬಂದ ಮಾವಿನ ಮರಗಳ್ ೧೬

ಬಳೆದಗ್ರಪಲ್ಲವಂ ಭೂ
ತಳಚುಂಬಿಕಪೋಲಮತಿವಿಶಾಲಸ್ಕಂಧಂ
ವಿಳಸಚ್ಛಾಯಂ ಪೋಲ್ತ
ತ್ತಳಿಮಳಿನಮನಂಗನಾಗಮಂ ಪುನ್ನಾಗಂ ೧೭

ಪೆಱಗಣ ಮುಂತಣ ಋತುಗಳ
ತೆಱೆಯಂ ನಿಶ್ಚಯಿಸಿ ಮಧುಕರಂ ಮಧುಕರಮಂ
ತೆಱಲಾಱದೆ ಮಲ್ಲಿಗೆಯೊಳ್
ಸೆಱೆಗೆಯ್ದಂತಿರ್ದುದೊಂದು ಪರಿಮಳಫಲಮಂ ೧೮

---

*೧೪ ನೆಯ ಪದ್ಯವಾದಮೇಲೆ ಒಂದು ಅಶುದ್ಧ ಪದ್ಯ ದೊರೆತಿದೆ:-

ಮರಗತ್ತಲೆಯೊರೆಯೊಳ್ ಬಲು
ಮುಗುಳವಲುತಾರಗೆಗಳೆನಿಸಿ ಕೊಸಗತಿರ್ದ್ದನಿಬಿಡ
ಮಾದಂಕುರರಜಸ್ವರೂಪದಿಂ
ಲಲಿತವನಲತಾಮಂಡಪದೊಳ್ (ಅ),

ಮರಗತ್ತಲೆಯೊಳ್ ಬಲು
ಮುರುಳ್ವತಾರಗೆಗಳೆನಿಸಿ ಕೊಸಗಿರ್ದುದು
....
.... ಪದಿಂ ಲಲಿತವನ ಲತಾಮಂಟಪದೊಳ್
-(ಇಉಎ).

ಮತ್ತೆ ಮನಂ ಮಲ್ಲಿಗೆಯೊಳ್
ಪತ್ತುವಿಡಲ್ಕಾಱದದನೆ ಸೇವಿಸಿ ತನಗಾ
ಯತ್ತಮೆನಿಸಿರ್ದ ಮಧುಕರ
ವೃತ್ತಿಗೆ ಪಾಯ್ವಂತೆ ಪಾಯ್ದುವಳಿ ಪೆಱವಲರೊಳ್ ೧೯

ಪುಗಲೆಂಬ ಪಿಕಸ್ವರಕೆ*ರ್ದೆ
[1]ಯುಗಿವ[1] ಸರಕ್ಕೆಯ್ದೆ ಬೆರ್ಚಿ ಕಣ್ಗಂ ಮನಕಂ
ಸೊಗಯಿಪ ಸರದೊಳಗೆ ಶರ
ಣ್ಬುಗುವಂತಿರೆ ಪೊಕ್ಕುವಂದು ವಿರಹಿಜನಂಗಳ್ ೨೦

ಪಪ್ಪಲದಲರ್ಗ*ಳ್ ಸಂಬಳ
ಮಪ್ಪಿನಮುಪವನಕೆ ನಿಚ್ಚವಯಣಂ ಬರುತುಂ
ಪಪ್ಪಕಮಾಗಿರೆ ಪಱಿಮೆಗ
ಳುಪ್ಪಯಣಂಗೆಯ್ದುವಂದು ಪೊಸಮಲ್ಲಿಗೆಯೊಳ್ ೨೧

ಅಳಿಸಾತ್ತ್ವತಕುಸುಮಂ ಕೋ
ಕಿಳಸಾತ್ತ್ವತಕೋರಕಾಂಕುರಂ ರಾಜಶುಕಾ
ವಳಿಸಾತ್ತ್ವತಕೋಮಲಫಲ
ಮಿಱಿಸಿರ್ದುದು ದೊರೆಗೆ ಚೂತತರು ಸುರತರುವಂ ೨೨

ಎಳ[2]ವೆಱ[3] ಪಾಡ[2] ಕೆಂದಳಿರೆ ನಾಲಗೆ ಮಾಮರಸಳ್ಳಿಗೊಂಬಿನೊಳ್
ಮಿಳಿರ್ವೆ*ಳವಳ್ಳಿ ಬಾಲ[3]ಮಲಗೊ*ರ್ಂ[3]ಚಲೆ ಕೇಸರಮೆಂಬಿನಂ ಮನಂ
ಗೊಳೆ ಮಧುಮಾಸಕೇಸರಿ ವಿಯೋಗಿಗಳೆಂಬ ಮೃಗಂಗಳಂ ಭಯಂ
ಗೊಳಿಸಿದುದುತ್ಕಕೀರಮದಕೋಕಿಲಗರ್ಜಿತತರ್ಜಿತಂಗಳಿಂ ೨೩

ನವಕಳಿಕಾಂಕುರಪ್ರಕರಮಂ ನವಕೋಕಿಲಕುಟ್ಮಲಂಗಳಂ
ನವಫಲಕಂಗಳಂ ಮಿಳಿ*ರ್ವ ಕೊಂಬುಗಳೆಂಬ ಕರಂಗಳಿಂ ಮಧೂ
ತ್ಸವದೊಳಿವೆಸ್ಮ ತಂದೊಡಮೆಯೆಂದಿದಿರೊಳ್ ಪಿಡಿದಂಗಜಂಗೆ[4]ಲೆ
ಕ್ಕ[4]ವಣಿಗೆ ದೋಱುವಂತೆಸೆದು ತೋಱಿದುವಂದಿನ ಬಂದಮಾವುಗಳ್ ೨೪

---

1 ಪುಗುವ (ಅಇಉಎ). 2 ಪಳಿಪಾರ್ಡೆ (ಇಉಎ). 3 ಪೊಳಗೊಂ (ಕ).
4 ತಕ್ಖ (ಇಉಎ).

ಪಡೆಪಥಿರಾಜನಾದೆನಗೆ ಮಾಮರನಂ ಯುವರಾಜನಾಗೆ ಮಾ
ೞ್ಪುದು ಪದನೆಂದು ಮನ್ಮಥನೃಪಂ ಸಹಕಾರಮಹೀರುಹಕ್ಕೆ ಕ
ಟ್ಟಿದ ಯುವರಾಜಕಂಠಿಕೆವೊಲಾಯ್ತೆಡೆಗೊಟ್ಟೆಡೆಗೊಟ್ಟು ನಿಂದ ಷ
ಟ್ಪದಗುಣಮುಂ ಪ್ರಸೂನಭರಮುಂ ಮಕರಂದಗುಣಾಭಿಶೋಭಿತಂ ೩೫

ಸ್ಮರಶರಮೇವುವೆಂಬ ಶಿಶಿರಾಂಶುವ ತಣ್ಗದಿರೇವುವೆಂಬ ತೆಂ
ಬೆರಲರಲೇವುವೆಂಬ ಕಳಕಂಠಿಯ ಒಗ್ಗಣೆಯೇವುವೆಂಬ ಗಾ
ವರಿಪಳಿಯೇವುವೆಂಬ ಮಧುಮಾಸದ ಗೋಸಣೆಯೇವುವೆಂಬ ಬ
ದ್ದವರನಱಿಯಟ್ಟಿ ಸಂತಮಿರಲೀಯದೆ ಬಾಳಬಸಂತವಾರಣಂ ೩೬

ವಿಲಸದಶೋಕಪಲ್ಲವತಲಂ ವಿಕಚಾಬ್ಜದಳಾಕ್ಷಿ ಮತ್ತಕೋ
ಕಿಲಕಲನಿಸ್ವನಂ ಸಕಲಚಂದ್ರವಿಲಾಸಮುಖಂ ಸಸೌರಭಾ
ನಿಲರಮಣೀಯನಿಶ್ವಸಿತಮುಸ್ಥಿರಭೃಂಗಚಲಾಲಕಂ ಮನಂ
ಗೊಳೆ ಪರಿಪೂರ್ಣಮಾಯ್ತು ನವಯೌವನಲಕ್ಷ್ಮಿ ವಸಂತಲಕ್ಷ್ಮಿಯಾ ೩೭

ನನೆಯಂಬಂ ಪಿಡಿಗಿತ್ತು ಕುತ್ತುವಡೆದಾ ಕಾಮಾರ್ತನಂ ತನ್ನ [1]ಕ
ಬ್ಬಿ[1]ನ ಬಾಳಿಂ ಮುಳಿದಟ್ಟಿ ವೋದನೆ ಗಡಂ ನಿರ್ವಂದದಿಂ ಬಂದ ಮಾ
ವಿನ ಬಾಟಿಜ್ಜೊಂಪದೊಳೊಯ್ದು ರುಳ್ಚನೆ ಗಡಂ ತಂಗಾಳಿಯುಂ ತಿಂಗಳುಂ
ಬನಮುಂ ಬೆಂಬಲಮಾಗಿ ತೀರ್ಚವೆ ಗಡಂ ಕೊಂಡುಗ್ಗಿಯಂ ಸುಗ್ಗಿಯೊಳ್ ೩೮

ಅಂತು ಬಂದ ವಸಂತಸಮಯದೊಳ್ ಸಹಕಾರಭೂರುಹದೊಳಂಕುರಂ ಪುಟ್ಟುವಂತೆ, ಮಲ್ಲಿಕಾಕುಸುಮದೊಳ್ ಪರಿಮಳಂ ಪುಟ್ಟುವಂತೆ, ನಾಗಾಚಲದೊಳ್ ಸಿರಿಕಂಡಂ ಪುಟ್ಟುವಂತೆ, ಪೂರ್ವಾಚಲದೊಳ್ ಚಂದ್ರಂ ಪುಟ್ಟುವಂತೆ, ಕೋಗಿಲೆಗೆ ಕಳರವಂ ಪುಟ್ಟುವಂತೆ, ಅಶೋಕದ್ರುಮಕ್ಕೆ ಬಾಲಪ್ರವಾಲಂ ಪುಟ್ಟು-ವಂತೆ, ಬಂಧುಜನಶೋಕಾಪನೋದನಾಗಿ,

ಸಂಪಾದಿತ ಶಕ್ರಾಸನ
ಕಂಪಂಗಜಿತಂಗೆ ಸಕಲಭವ್ಯಶರಣ್ಯಂ
ಸಂಪೂರ್ಣಪುಣ್ಯನೆನಿಸಿ ಮ
ಗಂ ಪುಟ್ಟಿದನಜಿತಸೇನನೆಂ[2]ಬೊಪ್ಪೆಸರಿಂ[2] ೩೯

---

1 ನಚ್ಚಿ (ಅಕ). 2 ಬಂ ಪೆಸರಿಂ (ಅಕ).

ಆಗಳ್ ಸೌಧರ್ಮಕಲ್ಪೇಶ್ವರಂ ಪರಮೇಶ್ವರನ ವಿವಾಹೋತ್ಸವಕ್ಕಂ ಪಟ್ಟಬದ್ಧೋತ್ಸವ ಪುತ್ರಜನ್ಮೋತ್ಸವಂಗಳಂ ಮನ್ನಿಸಿ ಮನಂಗೊಂಡು ಬೀೞ್ಕೊಂಡು ಪೋದನಿತ್ತಲ್

ವಿಜಯವಿಮಾನದಿಂದಿೞಿದನೀ ಧರೆಗಾ ಜಿತಶತ್ರು ತಂಪೆ ತಾ
ನಜಿತನೆನೆಂಮು ತಾಯ್ ವಿಜಯಸೇನೆ ವಿನಿರ್ಜಿತಶತ್ರುವಾದನಾ
ತ್ಮಜನಭಿಧಾನದಿಂದಜಿತಸೇನನೆನಲ್ಕಜಿತಂ ಜಿತೇಂದ್ರಿಯಂ
ವಿಜಯಪರಂಪರಾಪರಿಗತಂ ಜಿತವಿದ್ವಿಷನಾಗದಿರ್ಕುಮೇ ೩೦

ಮಗನಜಿತನಜಿತಸೇನಂ
ಮಗನ ಮಗಂ ಮಗನೆ ಮಗನೆ ಜಿತಶತ್ರು ನೆಗ
ೞ್ತಿಗೆ ನೋಂತೆಯೆಂದು ಭುವನಂ
ಪೊಗ*ೞ್ದುದು ಜಿತಶತ್ರುನೃಪನ ಪುಣ್ಯೋದಯಮಂ ೩೧

ಜಿತಮುರಿತನಜಿತನಾಥಂ
ಜಿತೇಂದ್ರಿಯಂ ಪಿತೃ ಪಿತಾಮಹಂ ಜಿತಶತ್ರು
ಕ್ಷಿತಿಪನೆನಿಪಜಿತಸೇನನೆ
ಕೃತಾರ್ಥನಾತನೆ ಸಮರ್ಥನುರ್ವೀಭರತಂ ೩೨

ಅಂತು ಕವಚಹರನಾದ ಜಿತಸೇನಕುಮಾರಂಗೆ ಯುವರಾಜಪದವಿಯಂ ಗೆಯ್ಯೆ;

ಜಿತಶತ್ರುವೃದ್ಧರಾಜ್ಯೋ
ನ್ನತಿಯಿಂದಜಿತೇಂದ್ರನಾದಿರಾಜ್ಯೋನ್ನತಿಯಿಂ
ಸುತನೆಸೆದನಜಿತಸೇನಂ
ಜಿತಸಕಲಾರಾತಿ ಯೌವರಾಜ್ಯೋನ್ನತಿಯಿಂ ೩೩

ಅಂತಾ ರಾಜರತ್ನತ್ರಯಂ ರತ್ನತ್ರಯದಂತೆ ಭುವನತ್ರಯಪವಿತ್ರನಾಗೆ,

ನೆಗ*ೞ್ದತ್ಯುದ್ಧತಪೋಗ್ನಿಯಿಂ ಸುಡದಿರಂ ದೇವಂ ಬೞಿಕ್ಕೆನ್ನನ
ನ್ನೆಗಮೀ ತನ್ನಿಯರೊತ್ತಿನೊಳ್ [1]ಪ[1]ಡಸುಡಂಗೆಯ್ದು ಪೆರ್ಜಿಸೆಂಪೊಯ್ಯಗೊ

1 ಸು (೩೮೭).

ಯ್ಯಗೆ ಸಾರ್ವಂಗಜನೊಯ್ಯಗೊಯ್ಯಗೊಳಸಾರ್ದಿರ್ದಳ್ಕಿದಂತುಳ್ಕಿದಂ
ತಗಿದಂತಾಜಿನೆ ವೀತರಾಗನ ಮನಕ್ಕಾಸಕ್ತಿಯಂ ಪುಟ್ಟಿಸಲ್ ೩೪

ಗುರುಗಳ್ ಬಂದುಪರೋಧಿಸೆ
ಗುರುವಚನಮಲಂಘನೀಯಮೆಂದೆಡೆಗೊಂಡಂ
ಪರಿಣಯನಮನಂತೆ ವಧೂ
ಪರಿಗ್ರಹಾಗ್ರಹಮದುಂಟೆ ಪರಮನ ಮನದೊಳ್ ೩೫

ಕಾಂತೆಯರೊಳ್ ರಾಜ್ಯಶ್ರೀ
ಕಾಂತೆಯೊಳಾದಮೆ ಜಿತಾತ್ಮನಗ್ಗಲಿಸುವನ
ಲ್ಲೆಂತೆಂದೊಡೆ ಮುಕ್ತಿಶ್ರೀ
ಕಾಂತೆಯೊಳಗ್ಗಲಿಪನೆಡೆಯೊಳಗ್ಗಲಿಸುಗುಮೇ ೩೬

ಅಂತಾ ಪರಮೇಶ್ವರಂ ಸ್ವಭಾವಮಾರ್ದವಾರ್ಜವೋಪೇತನುಂ ವೀತರಾಗನು-
ಮಪ್ಪುದಱಿಂ ಸಂಸಾರಶರೀರ ಭೋಗವೈರಾಗ್ಯಭಾವನೆಗಳಂ ಭಾವಿಸುತ್ತಿರ್ಪನ್ನೆಗಂ,

ಉದಯಾಸ್ತಮುಂಟು ಸಂಸಾ
ರದ ಜೀವಗಣಕ್ಕದಕ್ಕುದಾಹರಣಮಿದೆಂ
ಬುದನೆನಿಸಿ ಪೂರ್ವಶೈಲದೊ
ಳುದಯಿಸಿ ಬಂದಪರಶೈಲಮಂ ರವಿ ಸಾರ್ದಂ ೩೭

ಒಂದಿದಳಿನಿನದದಿಂದಭಿ
ವಂದಿಸುತುಮುಗಲ್ಕೆಯೊಳ್ ಪುನರ್ದರ್ಶನಮ
ಕ್ಕೆಂದು ದಿನಪಂಗೆ ಕೆಯ್ಮುಗಿ
ವಂದದೆ ಮುಗಿದಿರ್ದುವಲರ್ದ ತಾವರೆಯರಲ್ಗಳ್ ೩೮

ಹರಿದಿಗ್ವದನಂ ಸಂಧ್ಯಾ
ಸ್ಫುರಿತಾಧರಮಧುರತಾರಕಾವಸನಂ ಭಾ
ಸುರಚಂದ್ರಿಕಾತಿಲಕಮುಡು
ವರಕಾಂತಿಯುತಂ ಬೆಡಂಗುವೆತ್ತತ್ತಾಗಳ್ ೩೯

ಮುಗಿಯೆ ಖಳಾನನಾಂಬುಜಮುಮಂಬುಜಮುಂ ತಮದೊಡ್ಡುಗೆಟ್ಟು ತಾ
ನುಗಿಯೆ ಕರಂಗಳಂ ಸ್ಮರಕರಂಗಳೆಗೆತ್ತು ವಿಯೋಗಿಸಂಕುಲಂ

ಸುಗಿಯೆ ನಿಜೋದಯಾಚಲದೊಳಾಯ್ತುದಯಂ ಸಕಳೋದಯೋತ್ಸವಂ
ದ್ವಿಗುಣಿತತಾರಕಾತರಳದೀಧಿತಿ ತಾರಕಚಕ್ರವರ್ತಿಯಾ ೪೦

ದಿಗ್ನಾರೀಮಣಿಮುಕುರಂ
ದಿಗ್ನಾಗಕರಾಗ್ರಕಳಿತಶಶಿಮಣಿಕಳಶಂ
ದಿಗ್ನಾಯಕಚೂಡಾಮಣಿ
ಲಗ್ನೋದಯಶಿಖರನೊಪ್ಪಿದಂ ತುಹಿನಕರಂ ೪೧

ಜಗದಾಲೋಕನದರ್ಪಣಂ ಪ್ರಥಮದಿಕ್ಕಾಂತಾನನಂ ಕಂತುರಾ
ಜಗಜೋದ್ದೀಪನಪಿಂಡಮಂಬರಸರಸ್ಯುತ್ತಂಸಹಂಸಂ ವಿಯೋ
ಗಿಗಣಾಕೂತಕುರಂಗಪೋತಭಯಕೃತ್ಕಂಠೀರವಂ ಚೆಲ್ವುವೆ
ತ್ತೊಗೆದತ್ತರ್ಣವವೀಚಿನರ್ತನನಟಂ ಬಿಂಬಂ ಸುಧಾಸೂತಿಯಾ ೪೨

ಇರುಳೆಂಬ ಕಂಭದಿಂ ಹಿಮ
ಕರನಾದಂ ಕರಿಯ ತೆಱದಿ ತಟತ್ತೊಗೆಯೆ ಸುಧಾ
ಕಿರಣಮದವುಣ್ಮೆ ಪರಿದುದು
ವಿರಹಾಕುಳರೆಂಬ ಬೀರರಂ ಪೆಣಱುತ್ತುಂ ೪೩

ಕೊಳನಂ ಗಗನಂ ನೀರ್ವೂ
ಗಳನುಡುತತಿ ನೀರನಚ್ಚವೆಳ್ದಿಂಗಳ ಬೆ
ಳ್ಪಿಟಿಸೆ ಹರಿಣಾಂಕಮಂಡಲ
ವಿಟಿಸಿದುದಳಿ ಪಾಯ್ದ ಬಿಳಿಯ ತಾವರೆಯರಲಂ ೪೪

ಬೆಲಗಸೆತೀವಿಕೊಂಡು ಕುಡಿಯಲ್ ಮೊಗೆಯಲ್ ಕೊಡಗೊಂಡು ತಿರ್ದ[1] ಬ
ಚ್ಚಲನೆಲೆದೋಂಟದೊಳ್ ಪರಿಯಿಸಲ್ ಪಱಗೋಲ್ಗಳನಿಕ್ಕಿ ಪಾಯಿಸಲ್[1]
ನೆಲೆಯನಿಸೆಂದು ನೋಡಲೊಳಪೊಕ್ಕು ಧುಡುಮ್ಮಿಱದಾಡಲೀಸಲ
ಗ್ಗಲಿಸದಲಂಪಿನಿಂ ಬಗೆದುದಂದು ಜನಂ ಘನಚಂದ್ರಿಕಾಂಬುವಂ ೪೫

ಅಂತೊಪ್ಪುವ ಚಂದ್ರಿಕಾಶ್ರೀವಿಲಾಸದೊ[2]ಳ್[2] ನಿರವದ್ಯವಿದ್ಯಾಧರನಜಿತ ನಾಥಂ ವಿದ್ಯಾಧರರೋಲಗಂಗೊಟ್ಟಿರ್ದ್ದು ದಿಗವಲೋಕನಂಗೆಯ್ದು ಸನ್ನೆಗಂ,

---

1. ಬಾಳ್ಚಲಪರಿನೀರಿನೊಳ್ ಪರಿಯಲೋಳಿಯಿಸಲ್ ಪಱಗೋಲನಿಕ್ಕಿಪಾಯ್ಸಲುಂ ಅಇಉಎ). 2. ೪ು (ಅಇಉಎ).

ಬೀೞುವಿನಂ ಕಣ್ಣುಳ್ಕೆ ನಿ
ರಾಳಂಬನಮಾಗೆ ಮನದ ಮೋಹಸ್ತಂಭಂ
ಬೀೞ್[3] ವಿಷಯಾನುರಾಗಂ
ತೇೞ್[3] ನಭಸ್ಥಲದೊಳಾದುದುಳ್ಕಾಪಾತಂ ೪೬

ಅದಂ ಕಂಡು ಅಸುಂಗೊಂಡು,

ಭಂಗುರಮುಳ್ಕುವಂತೆ ನರಜನ್ಮಮದಂ ಬಗೆದಂ ವಿವಾಹಕಾ
ರ್ಯಂಗಳ ಕಾಮಸೇನೆಗಳ ಬಂಧುಜನಂಗಳ ರಾಜ್ಯಪಟ್ಟಬಂ
ಧಂಗಳ ಪುತ್ರಸಂತತಿಗಳಾದರದೊಳ್ ಮನಮಂ ತೊಡರ್ಚಿ ನಾ
ಣ್ಗೆಂಗೆಡೆಯಾಗಿ ಪೂಣ್ಬುದು ಪುರುಳ್ತನಮುಳ್ತೆಮುಗಲ್ತೆ ಬೆಳ್ತನಂ ೪೭

ಎಂದು ಬಗೆಯೆವಗೆಯೆ,

ಆದರದೆ ವಿಮಲವಾಹನ
ನಾದಂದಿನ ಭವದೊಳಾದ ನಿರ್ವೇಗಂಗಳ್
ಪೋದುವೆ ಪುಟ್ಟೆ ಪುನರ್ಭವ
ಮಾದುವೆ ಪಲ್ಲವಿಸುವನ್ನಮಾದುವೆ ಮನದೊಳ್ ೪೮

ಧಾತ್ರಿಗೆ ನೆಗಟ್ದ ವಿದೇಹ
ಕ್ಷೇತ್ರದೊಳ್[1]ಹರ್ತ್ಸಭಿದಾನ[1]ಯಪ್ಪಂದಿನ ರ
ತ್ನತ್ರಯಮುಂದಿನ ನಿರ್ವೇ
ಗತ್ರಯಮೊಡನೊಡನೆ ಬಂಪವಾಗ[2]ಡೆ[2] ಜಿನನಾ ೪೯

ಅಂತು ನಿರ್ವೇಗತ್ರಯಮುಂ ಭಾವಿಸಿ;

ಜಲದಾಟೋಪೋಪಮಂ ಬುದ್ಬುದನಿವಹನಿಭಂ ಫೇನಪಿಂಡಾಯಮಾನಂ
ಜಲರೇಖಾಕಾರಮಾಖಂಡಲಲಲಿತಧನುರ್ಲೀಲಮಾಕಾಳಿಕೇಸಂ
ಚಲಮೀಸೌಂದರ್ಯಮಿಂತೀನವರಸಚಯಮೀದೇಹಮೀ ಭೋಗಮೀಭೂ
ತಲರಾಜ್ಯಾಭೋಗಮೀಜೀವಿತಮಿದನಱಿಯುತ್ತಿರ್ದು ಮತ್ತೆಂತು ಮಾಣ್ಬೆಂ

ಕರುಣಿಸದೆ ಕೃತಾಂತಂ ಗೋ
[3]ಣ್ಮ್[3]ರಿಗೊಂಡೆೞ್[3]ದೊಯ್ವು ಪದದೊಳೆಳಸುವರೊಳರೋ

---

1. ಹರ್ತ್ಸದಾಭಿ (ಕ), ಕ್ಷೇರ್ತ್ಸದಾಭಿದಾನ (ಅ). 2 ಳೆ (ಇಉಎ). 3 ಳ್ಮ್ರ ಅಇಉಎ).

ಶರಣಪ್ಪರೊಳರೊ[1]ವೇಣ್[1] ಕಾ
ವರೊಳರೊ ಕರುಣಿಸುವರೊಳರೊ ಧರ್ಮಮೆ ಕಾ[2]ಗುಂ[2]

ಒರ್ವನೆ ಸುರಗತಿಯೊಳ್ ಸುಖಿ
ದೊರ್ವನೆ ನರಗತಿಯೊಳಿರ್ದು ತಿರ್ಯಗ್ಗತಿ[3]ಯೊ
ಳೊ[3]ರ್ವನೆ ನಾರಕಗತಿ[4]ವೊ
ಕ್ಕೊ[4]ರ್ವನೆ ದೇಹಿಗೆ ಸಹಾಯರೊರ್ವರುಮೊಳರೇ ೫೨

ಇವರಾರಾನಾ[5]ರ್ಗೆ[5]ನಗೀ
ಭವಮಲ್ಲದೆ ಕಳಿದ ಭವದ ತಾಯ್ ತಂದೆ ತನೂ
ಭವರೆಲ್ಲರುಮೆಲ್ಲಿದರೆಂ
ದವಧರಿಸದಿದೇಂ ಜಡಸ್ವಭಾವನೊ ಜೀವಂ ೫೩

ಸಿಂಬುಳು ಕೀವು ಕೆರಂಕ ಸ್ರ
ಗಂಬು ಮಲಂ ಮೂತ್ರಮಾ ಪುರೀಷಂ ಜೀವಂ
ಬೆಂಬಿಡದೀ ಪಂದೊವಲ ಪ
ಸುಂಬೆಯೊಳೀಯೊಡಲೊಳಾವ ಸುಖಕಿರ್ದಪುದೋ ೫೪

ಸಕಲ ಸ್ವ[6]ರ್ಗಾ[6]ದಿಚತು
ರ್ವಿಕಲ್ಪಗತಿಭೇದಭಿನ್ನಮಂತದೆ ಪಂಚಾ
ತ್ಮಕಮುಕ್ಕುಂ ದ್ರವ್ಯಕ್ಷೇ
ತ್ರಕಾಲಭವಭೇದದಿಂದಮಿಾ ಸಂಸಾರಂ ೫೫

ನಿಮಿ*ರ್ದ ಚತುರ್ದಶರಜ್ಜು
ಪ್ರಮಾಣಮಿರ್ದಪುದು ಸಯ್ತಧೋಲೋಕಂ ಮ
ಧ್ಯಮಲೋಕಮೂರ್ಧ್ವಲೋಕಂ
ಕ್ರಮದಿಂ ತ್ರಸನಾಳಮೇಕರಜ್ಜುಪ್ರಮಿತಂ ೫೬

ಪರಮತರುಚಿಯಿಂ ವಿಷಯಾ
ನುರಾಗದಿಂ ಖಳಕಷಾಯವರ್ತನದಿಂದಂ

---

1 ಪೇಳ್ (ಅ). 2 ಯ್ಯಾಗಂ (ಅ). 3 ಪೆತ್ರೊ (ಅಕ). 4 ನೆತ್ರೊ (ಕ).
5 ರಿ (ಕ). 6 ಭ್ರಾ (ಇಉವ).

ಪರಿಪಾಲಿತಶೀಲವ್ರತ
ವಿರಮಣದಿಂದಶುಭಕರ್ಮದಾಸ್ರವಮಕ್ಕುಂ ೫೭

ಕೃ[1]ತ್ರ[1] ಜೀವದಯಾವೃತ ಸಂ
ಯತಭಾವಂ ಕ್ರಮದಿನೈದುಮೂಱ[3]ೀೞಾಱುಂ
ವ್ರತಸಮಿತಿ ಗುಪ್ತಿಯೊಳ್ ಸಂ
ಯುತನೆನಿಸಿದ ಸುವ್ರತಂ ಸುಸಂ[2]ವೃ[2]ತನಕ್ಕುಂ ೫೮

ಉಪವಾಸದಿಂದಜೀರ್ಣಮ
ನುಪಶಮಿಸುವ ವೈದ್ಯನಂತೆ ಸಂಯಮದಿಂದಂ
ತಪದಿಂದಮುಪಜಿತಾಘಮ
ನುಪಶಮಿಸುವ ಪರಮಮುನಿಯೆ ಸಂಯಮಿಯಕ್ಕುಂ ೫೯

ಅಱಿಯಲರಿದರಿದು ದೀಕ್ಷೆಗೆ
ತಱಿಸಲಲದೆರಡುಮಾಗಿ ತಪದೊಳ್ ತನುವಂ
ನಿಱಿಸಲರಿದೆನಿಸುವಱಿತಮೆ
ಪೆಱತಲ್ಲದುಮಲ್ತೆ ತಾನೆ ಬೋಧಿ[3]ಯುಮ[3]ಕ್ಕುಂ ೬೦

ಪಾವನಚಾರಿತ್ರೌಷಧೆ
ಸೇವೆಯೆ ದೋಷತ್ರಯಂಗಳಂ ಕಿಡಿಸೆ ತಪೋ
ಭಾವನೆಯೊಳೆಸೆವನಾಮಯ
ನಾವನುಮಾಮುನಿಯೆ ಪರಮಧರ್ಮಕ್ಕಾರ್ಮಂ ೬೧

ಎಂದಿಂತಧ್ರುವಮಶರಣಮೇಕತ್ವಮನ್ಯತ್ವಮಶುಚಿತ್ವಂ, ಸಂಸಾರಂ, ಲೋಕಮಾಸ್ರವಂ ಸಂವರೆ, ನಿರ್ಜರೆ, ಬೋಧಿದುರ್ಲಭ, ಧರ್ಮಸ್ವಾಖ್ಯಾತಮೆಂಬುವ ಪನ್ನೆರಡುಮನುಪ್ರೇಕ್ಷೆಯಂ ಕ್ರಮದಿನನುಸ್ಮರಿಸುತ್ತು ಮಿರ್ಪನ್ನೆಗಂ ;

ತಿಳಿದಿರ್ದ ಕೊಳದ ಜಲದೊ[4]ಳ್[4]
ಪಳಚ್ಚನೆಸೆದಿರ್ದ ತನ್ನ ನೆೞಲಂ ತನ್ನೋ
ಪಳೆಗೆತ್ತು ಮುಱುಗಿ ಕಾಣದೆ
ತಳವೆಳಗಾಗಿರ್ದುವಿರುಳ ವಿರಹವಿಹಂಗಂ ೬೨

1 ತಿ (ಅಕ). 2 ಯು (ಕ). 3 ಮೆಯು (ಕ). 4 ಳು (ಅಇಉಎ).

ಮದನಸದನೋದ್ಯೋಗಸ್ಥಾನಂಗಳೊಳ್ ಸುಱಿದಂಗನಾ
ವದನಮದಿರಾಮೋದಸ್ವೇದಾಂಬುವಂ ತವೆ ಪೀರ್ದು ಕೌ
ಮುದಿಯೊಳಲರ್ದಿ*ಪ್ದುದ್ಯನ್ನೀಲೋತ್ಪಲಂಗಳ ಕಂಪಿನೊಳ್
ಪುದಿಮ ಪುರದೊಳ್ ತೀವಿತ್ತೆತ್ತಂ ಪ್ರಭಾತಸಮೀರಣಂ ೬೩

ವಿಲಸಿತಪುಂಡರೀಕಚರಣಂ ಕುಮುದೇಕ್ಷಣಕಾಂತಮಂಜನಾ
ಕುಲಿತವಿಲೋಚನಂ ಸ್ವಗತವಾಮನಮನ್ವಿತಸುಪ್ರತೀಕಮು
ಜ್ಜ್ವಲತರಪುಷ್ಪದಂತಮಮರೇಭಗತಂ ಗೃಹಸಾರ್ವಭೌಮಮು
ಗ್ಗಲಮೆಸೆದತ್ತು ದಿಗ್ವಲಯದಂತೆ ನಿಶಾಂತದೊಳಂಗನಾಜನಂ ೬೪

ನಸು ಬಿರಿವ ಕಮಲಮುಕುಳದ
ನಸುಬಿರಿವುತ್ಪಲದ ಮುಗ್ಧಪರಿಮಳಗಂಧಂ
ಪೊಸವೇಟದ ಪಱಿವೇಟದ
ಸುಸಿಲಿ[1]ನಿ[1]ದಂ ಪಡೆದುದಳಿಗೆ ಬೆಳಗಪ್ಪಾಗಳ್ ೬೫

ಪೊಸತಲರ್ದ*ಂಭೋರುಹದೊಳ್
ಮುಸುಂಬು ಮುಱುಗುವಿನಮೆಱಗೆ ಗಂಧಮನಾಘ್ರಾ
ಣಿಸುತುಮುಳವಳಿಸುವಳಿಗಳ
ಪಸವೋಡಿದುದಿಲ್ಲ ರಜನಿಸಮ[2]ಯಾತ್ಯಯ[2]ದೊಳ್ ೬೬

ಕುಶಲಮೆ ನಿಮಗೆಂಬಂತಿರೆ
ಕುಶೇಶಯಂಗಳ್ಗೆ ನೀಡೆ ಕರಮಂ ಮಿತ್ರಂ
ಕುಶಲಮೆಮಗೀಗಳೆಂಬಂ
ತೆ ಶೋಭಿಸಿತ್ತಳಿರವಂಗಳಿಂ ಕಮಳವನಂ ೬೭

ಶರಣೋಪಗತರೆಮಗಿಂ
ಕರುಣಿಪುದೆಂ[3]ದಜ ಲಗ್ನದಿದಿ[3]ನಕರಪಾದ
ಕ್ಕಿರದೆಱಪ ತಮದ ಮಱಿಗಳ
ಮೊರೆಯಾಡುವು ಕಮಲವನಕೆ ಮೊರೆದೆಱಪಳಿಗಳ್ ೬೮

---

1 ಪ ([illegible]). 2 ಯಾಂತ್ಯವ ([illegible]). 3 ದಂಜಿಲಗ್ನದಿ ([illegible]).

ಕೇಳ್ವನಜಾನನೇ ಶಫರಲೋಚನೆ ಪದ್ಮಿನಿ ಪದ್ಮಬಾಂಧವಂ
ಬಳ್ವಳ ನೀಡಿದಂ ಕರಸಹಸ್ರಮನೆಂದು ಕಳಸ್ವನಂ ಮನಂ
ಗೊಳ್ವಿನೆಗಂ [1]ಕಳಕ್ಕಳಿಸಿ[1] ಸಂತಸವಾತಿನ ಪೂರ್ಣಪಾತ್ರಮಂ
ಕೊಳ್ವವೊಲೀಟ್ಟುಕೊಂಡುವಳಿಗಳ್ ಸುಮನೋಮಕರಂದಗಂಧಮಂ ೧೯

ವಾಸ್ತವದಿಕ್ತಟಂ ಸಮೆದ ಮೂಷೆ ತಮಂ ಸುರಿದಿರ್ದಲಬ್ಜಸಂ
ವಾಸಿ ಸಮೀರನೇರಣಿಗನಾಗೆ ನಿದಾಘದ ದೀ[2]ಪ್ತಿ[2]ವರ್ತಿಯೊಳ್
ಕಾಸೆ ತೆರಳ್ದ ಪಿಂಜರಿಯವೋಲ್ ಕಿಸುಸಂಜೆ ತೆರಳ್ವಿನಂ ಪಟಂ
ಗಾಸಿನ ಪೊನ್ನ ಗಠಿಯವೊಲೊಪ್ಪಿದುದುದ್ಗತಭಾನುಮಂಡಲಂ ೨೦

ಅಂತು ಸಕಲಕಮಲಾಕರಪ್ರಬೋಧಕರ ದಿವಸಕರನುದಯಶಿಖರಿಶೇಖರನಾಗೆ ತೀರ್ಥಕರಪರಮದೇವನಂ ಪ್ರಬೋಧಿಸುವಭಿಪ್ರಾಯದಿಂ ಬ್ರಹ್ಮಕಲ್ಪಾಂತರವಾಸಿಗಳಪ್ಪ ಸಾರಸ್ವತನುಮಾದಿತ್ಯನುಂ ವಹ್ನಿಯುಂ ವರುಣನುಂ ಗರ್ದತೋಯನುಂ ತುಷಿತ ತೋಯನುಮವ್ಯಾಬಾಧನುಂ ಅರಿಷ್ಟನುಮೆಂಬೆಣ್ಬರುಂ ಲೋಕಾಂತಿಕದೇವರಜಿತ ದೇವಾಂತಿಕಕ್ಕೆ ಬಂದು,

ಭಗವತ್ಪಾದಪಯೋರುಹಕ್ಕೆ ವಿನಯಂ ಕೈಗಣ್ಮೆ ಗಂಧಾಕ್ಷತಾ
ದಿಗಳಿಂದರ್ಚಿಸಿ ದೇವ ತೀರ್ಥಕರನೈ ಮೋಕ್ಷಕ್ಕೆ ಕೊಂಡೊಯ್ವ ದೀ
ಕ್ಷೆಗೆ ವೈಗೊಳ್ಳದನಿತ್ಯಮೆಂದೆನಿಸುವೀ ಸಾಮ್ರಾಜ್ಯಮೋಹಕ್ಕೆ ದಂ
ದುಗದಿಂ ಪ್ರಾಕೃತಮರ್ತ್ಯನಿರ್ಪ ತೆಱದಿಂ ನೀನಿಂತಿರಲ್ ತಕ್ಕುದೇ ೨೧

ನೀಂ ಚರಮದೇಹಧರನೈ
ಪಂಚೇಷುವನಿಕ್ಕಿ ಗೆಲ್ದು ಪಂಚೇಂದ್ರಿಯಮಂ
ಪಂಚಮಹಾಕಲ್ಯಾಣಮ
ನಿಂ ಚೆಚ್ಚರಮೆಯ್ದಿ ಪಡೆಯ ಪಂಚಮಗತಿಯಂ ೨೨

ಕಷ್ಟತರಮಂ ಕಷಾಯಜ
ತುಷ್ಟಯದೆಡೆಗಿಡಿಸಿ ಪೇವ ಕಿಡಿಸಿಯೆ ಭವಚಾ
ತುಷ್ಟಯಮನಿನ್ನನಂತಜ
ತುಷ್ಟಯಮಂ ಪೊರ್ದು ಪೊರ್ದದಿರು ಸಂಸೃತಿಯಂ ೨೩

---

1 ತಳತ್ತಳಿಸಿ (ಅ). 2 ಪ (ಕ).

ಪ್ರಿಯತಮನೆನಾಗು ರತ್ನ
ತ್ರಯದೊಳೆ ನಿನ್ನಡಿಗೆ ತಡೆಯದೆಱಗಿಸು ಭುವನ
ತ್ರಯಮಂ ನೆಲಸುಗೆ ಕಾಲ
ತ್ರಯಮುಮನೊಡನಱಿವ ದಿವ್ಯಬೋಧಂ ನಿನ್ನೊಳ್ ೭೪

ತೊಱೆ ಸಕಲಪರಿಗ್ರಹಮಂ
ಕಱೆ ಧರ್ಮಾಮೃತಮನಱಿಯೆ ಲೋಕದೊಳಱಿವಂ
ಮೆಱೆ ನಿನ್ನ ನಾಲ್ಕು ಗುಣ[1]ದಿಂ[1]
ನೆಱೆ ನಿನಗಂ ದೇವ ಬುದ್ಧಿಗಲಿಸುವರೊಳರೇ ೭೫

ಭವಜಲಧಿಯನೀಸು ಮನೋ
ಭವನಂ ಕಡಿಕೆಯ್ದು ಕಾದಿ ಗೆಲ್ ಧರ್ಮಕ್ಕು
ದ್ಭವಮಕ್ಕೆ ತಡೆಯದಪುನ
ರ್ಭವಲಕ್ಷ್ಮೀಪತಿಯೆಯಾಗು ಭುವನಾಧಿಪತೀ ೭೬

ರಾಜ್ಯಮನುೞಿ ಪರಮತಪೋ
ರಾಜ್ಯದೊಳೆಸಗಜಿತ ವಿಜಿತಕಿಲ್ಬಿಷ ನಿನಗಿಂ
ತ್ಯಾಜ್ಯಂ ಪರಿಗ್ರಹಂ ದಲ್
ಪ್ರಾಜ್ಯಂ ತಪಮದುವೆ ಪಾಲ್ಯಮಾ ಕೈವಲ್ಯಂ ೭೭

ಕೊಳ್ ತಪಮಂ ತಡೆಯದೆ ಬೆಂ
ಕೊಳ್ ತೀವ್ರಕಷಾಯಭಟರನಕ್ಷಯಸುಖದೊಳ್
ತಳ್ತಿರು ನೀಂ ಸುರುಳ್ದಿ*ರ್ದ ಮ
ರುಳ್ತನಮಿನ್ನೇಕೆ ದೇವ ಜನ್ಮಾಟವಿಯೊಳ್ ೭೮

ಸಂಗತಜಿನಧರ್ಮ[2]ಮತಿಗೆ
ನಾಂಗಳ್[2] ನಿನಗಱಿಯೆ ತೆಱೆಯೆ ಬಣ್ಣಿಸೆನಾದಿ
ತ್ಯಂಗೆ ಸೊಡರೆತ್ತುವೀ ಗಾಂ
ಪಿಂಗಾಗರಮಾಗಿ ತೊಱೆಗೆ ನೀರಡುಕುವವೋಲ್ ೭೯

ಶತಸಪ್ತತಂತುಗಮರಾ
ಪತಿಯಂ ಫಣಿಪತಿಗೆ ನೆಗೞ್ದ* ಭೋಗಾವತಿಯಂ

1 ಪಾಂ (ಇಳುವ). 2 ಪಸಾ ಮಿಂಗಿಪ (ಇಳುವ).

ಮತಿಗೆಟ್ಟು ಜಡರ್ ಬಣ್ಣಿಸು
ವ ತೆಱ[1]ದಿ[1] ಬಣ್ಣಿಪೆಮೆ ನಿನಗೆ ಮುಕ್ತಿಯ ಸುಖಮಂ ೮೦

ಅಂತು,

ಸುರತರುಗೇಂ ಸುರಿಯರೆ ಪಂ
ಚರತ್ನಮಂ ಜಿನರ ಮುಂದೆ ಜೈನಾಗಮಮಂ
ಪರಿವಿಡಿಗೆ[2]ಯ್ಯ[2]ರೆ ಚಂದನ
[3]ದರಸದಿ[3] ಚಂದನದ ದೇವರಂ ಪೂಜಿ[4]ಸ[4]ರೇ ೮೧

ಶ್ರೀಮದ್ವೃಷಭಜಿನಂ ಧ
ರ್ಮಾಮೃತಮಂ ಕಱೆದು ಪೋದನಾ ಸಂತತಿಯೊಳ್
ನೀಮಿರ್ದಿರೆ ಕಱೆವುದು ಧ
ರ್ಮಾಮೃತಮಂ ಭವ್ಯಸಸ್ಯಸಮಿತಿಗೆ ದೇವರ್ ೮೨

ಪುರುದೇವಂ ಮೊದಲೊಳು ನೀ
ನೆರಡನೆಯೊಳು ನಡೆಯೆ ಸೊಪ್ಪುಸೊಪ್ಪಾದ ಪದಾಂ
ತರದೊಳು ನಡೆದಿಪ್ಪತ್ತಿ
ರ್ವರುಮಿನ್ನಾ ಶಂಭವಾದಿಗಳ್ ತೀರ್ಥಕರರ್ ೮೩

ಘಾತಿಗಳಂ ಪರಿವಿಡಿಯಿನ
ಘಾತಿಗಳಂ ಜೈನಶಾಸ್ತ್ರಶಸ್ತ್ರಹತಿಯಿಂ
ಘಾತಿಸಿ ಪುರುದೇವನ ಸಂ
ಘಾತದೊಳಿರು ದೇವ ನೆರೆದು ಮುಕ್ತ್ಯಂಗನೆಯೊಳ್ ೮೪

ಎಂದವರ್ ತನ್ನಂ ಪ್ರತಿಬೋಧಿಸಿ ಮೂದಲಿಸಿ ನುಡಿಯಲೊಡಂ—

ಹೃದಯಂಗಮಮಪ್ಪಿನೆಗಂ
ತದೀಯವಚನಾಮೃತಂಗಳಮೃತ[5]ವಧೂಗಾ[5]
ಸ್ಪದಮಂ ಪೊರ್ದುವ ಬಗೆಯಿಂ
ತದಸ್ತುಪೆಂದಂ ಜೀನೇಂದ್ರಚಂದ್ರನತಂದ್ರಂ ೮೫

1 ದೆ (ಇಉಎ). 2 ಯ್ವ (ಕ). 3 ಸರದಿಂ (ಕ). 4 ಪ (ಕ). 5 ವದು ಸಂಖಾ (ಅ).

ಬೆಳಗಿದ ಮಣಿದರ್ಪಣಮುಂ
ತಿಳಿದ ಸರೋವರಮನಿಱಿ[1]ಸಿ ನಿರ್ಮಳಮದೆ ನಿ[1]
ರ್ಮಳಿನತರಮಾಯ್ತು ಜಗತೀ
ತಿಳಕನ ನೆಗೞ್ದ* ಜಿತಜಿನನ ಚಿತ್ತಮುದಾತ್ತಂ ೮೬

ಅಂತು ಶುದ್ಧ ಚಿತ್ತನಾಗಿ,

ಗುರುಗಳ್ಗೆಲ್ಲಂ ತ್ರಿಲೋಕೀಗುರು ನಿಜವಿಜಯೋದ್ಯೋಗಮಂ ಪೇೞ್ದು ಕಲ್ಪಾ
ಮರಸೈನ್ಯಂ ಭಾಪು ಭಾಪೆಂಬಿನೆಗಮಜಿತಸೇನಂಗೆ ರಾಜ್ಯಾಭಿಷೇಕಂ
ಬೆರಸಾಗಳ್ ಪಟ್ಟಬದ್ಧೋತ್ಸವಮನತಿಶಯಂ ಮಾಡಿ ಸಾಮ್ರಾಜ್ಯದೀಕ್ಷಾ
ಗುರು ತಾಳಲ್ ದೀಕ್ಷೆಯಂ ಭೋಂಕೆನೆ ತಳರ್ದ*ನಯೋಧ್ಯಾಪುರೀಮಧ್ಯದಿಂದಂ ೮೭

ಅಂತು ಸೌಧರ್ಮೇಂದ್ರಸಂಪಾದಿತಪರಿನಿಷ್ಕ್ರಮಣಕಲ್ಯಾಣಪೂಜಾಪರಿಕರನನೇಕಮೂರ್ಧಾಭಿಷಿಕ್ತಭೂಭೃಚ್ಚಕ್ರಂಬೆರಸು ಸಕಲಕುಲಾಚಲಚಕ್ರಂಬೆರಸು ಮೇರುಮಹೀಧರಮೆ ತಳರ್ವಂತೆ ತಳರ್ವಾಗಳು ಮುಂದೆ ಬಂದು ಅನರ್ಘ್ಯರತ್ನಮಯಶಿಬಿಕಾಲಂಕೃತಸ್ಕಂಧರಾಗಿ,

ನಡಪುತು[2]ಮೊ[2]ಯ್ದರೇೞಡಿವರಂ ಧರಣೀಶ್ವರ[3]ರೊ[3]ಯ್ದರಾಗಳೇ
ೞಡಿವರಮತ್ತಲಂಬರಚರರ್ ಬೞಿಕೇೞಡಿಯಂ ಸುರಾಸುರರ್
ತಡೆದಿರ[4]ದೊ[4]ಯ್ದರತ್ತಲಮರೇಶ್ವರರಾ ಪರಮೇಶ್ವರಂಗೆ ಬಂ
ದಡಿಗೆ ವಿನಮ್ರರಾಗಿಯೆ ಸಹೇತುವನಂಬರಮುಯ್ದರೀಶನಂ ೮೮

ಅಂತು ಸಕಲದಿಗ್ವಲಯಮುಂ ನಿಜಪ್ರಭೆಯಿನಲಂಕರಿಸುವ ಸುಪ್ರಭೆಯೆಂಬ ಸಿವಿಗೆಯನೇಱಿ ರಾಗಹೇತು[5]ಕಂ ತಾ[5]ನಾಗಿಯುಂ ತನಗೆ ವಿರಾಗಹೇತುವಾದ ಸಹೇತುಕವನಕ್ಕೆ ಸಕಲಭುವನಭವನಪಾವನಮಪ್ಪ ಪರಮೇಶ್ವರಂ ಬರೆ;

ಸುತಮೋಹದೆ ಪಿತೃಮೋಹದೆ
ಪಿತೃಸುತರೊಡನಂದರಶ್ರುಪೂರಿತನಯನರ್
ಜಿತಶತ್ರುನೃಪತಿಯುಂ [6][ಮಾ] ವಿ
ಜಿತಸೇನೆ [ಯುಮ][6] ಜಿತಸೇನನುಂ ಬೞಿವೞಿಯಂ ೮೯

---

1 ಸಿದಂ ಮಹಿಮೆಯಿ (ಇಉಎ). 2 ಮು (ಕ). 3 ರು (ಕ). 4 ದು (ಕ). 5 ವಂತ (ಇಉಎ). 6 ಯುಂ ವಿಜಯಸೇನೆ ತಾನ (ಅಕ), ಯುಂ ವಿಜಿತ ಸೇನಾನ (ಇಉಎ).

ಜಿನಪಿತೃಗಳು ಜಿನತನಯಂ
ಜಿನೇಂದ್ರತಪರೆಲ್ಲಮೊಡನೆ ತಳರಲೊಡಂ ಬಿ
ಮ್ಮನೆಯಾಗಿ ಮದುವೆಗಳುಪಿದ
ಮನೆಯಂದದಿನಿರ್ದುದಂದಯೋಧ್ಯಾನಗರಂ ೯೦

ದಿನಕರನಿಲ್ಲದಂಬರ[1]ಮನಾ[1]ಮ್ರಮಹೀರುಹಮಿಲ್ಲದೊಂದು ಕಾ
ನನ[2]ಮನ[2]ರಲ್ದ ಪಂಕರುಹಮಿಲ್ಲದ ಪೂಗೊಳನಂ ವನೇಭಮಂ
ಡನನೆನೆ ಸಂಘ ಯೂಥಪತಿಯಿಲ್ಲದರಣ್ಯ[3]ಮದೇಂ[3]ತ್ರಿಲೋಕಮಂ
ಡನನೆನೆ ಪೆಂಪುವೆತ್ತಜಿತನಿಲ್ಲದಯೋಧ್ಯೆಯುಮೊಪ್ಪಲಾರ್ಕುಮೋ ೯೧

ಇಂಪಿಲ್ಲದ ಕೇದಗೆಯುಂ
ಕಂಪಿಲ್ಲದ ಪೂ ಸುಪುತ್ರನಿಲ್ಲದ ಭವನಂ
ಪೆಂಪಿಲ್ಲದ ಕುಲವಧು ಗೃಹ
ಸಂಪತ್ತಿಲ್ಲದ ವಿಳಾಸಮೇನೊಪ್ಪುಗುಮೋ ೯೨

ರಸಮಿಲ್ಲದ ಕೃತಿ ದಾನ
ವ್ಯಸನಂ ತನಗಿಲ್ಲದರಸನಜನಿಲ್ಲದ....
...............ಕೆಡುದಪ್ಪ
ದೆಸಕಂ ಘೃತಮಿಲ್ಲದೂಟಮೇನೊಪ್ಪುಗುಮೋ ೯೩

ನಾಯಕ[4]ಮಿ[4]ಲ್ಲದ ತೊಡವಿನ
ನಾಯಕನಿಲ್ಲದ ದಿನಾವಸಾನಂ ಪುಣ್ಯ
ಶ್ರೀಯಿಲ್ಲದ ಪೆರ್ಮೆ ಮದ
ಶ್ರೀಯಿಲ್ಲದ ಗಜಮದೇಂ ಮನಂಗೊಳಿಸುಗುಮೋ ೯೪

ಚಲಮಿಲ್ಲದ ಗಂಡಂ ತಂ
ಬುಲವಿಲ್ಲದ ವದನಮಾ[5]ಯು[5]ಮಿಲ್ಲದ ತುಟಿಲಾಳ್
ಫಲಮಿಲ್ಲದ ತರು ಶೀತಲ
ಜಲಮಿಲ್ಲದ ಪೂಗೊಳಂ ಮನಂಗೊಳಿಸುಗುಮೋ ೯೫

ಕಡುಗೂರ್ಪಿಲ್ಲದ ಕರವಾಳ್
ಕಡುಪಿಲ್ಲದ ಕುಮರ್ಧೆ ಗಾಡಿಯಿಲ್ಲದ ಬೆಲೆನಣ್

---

1 ಮುಮಾ (ಕ). 2 ಮುಮ (ಕ). 3 ಮುಮೇಂ (ಕ). 4 ನಿ (ಇಉಎ). 5 ಯು (ಅಕ).

ನಡೆಯಿಲ್ಲದ ಕ[1]ರ್ತ[1] ಮನ
[2]ಕ್ಕೆ[2]ಡಂಬಡಂ ನಾೞ್ಕುಮರ್ತಿಯುಂ ಮಾಡುಗುಮೇ ೯೬

ದೊಣೆಯಿಲ್ಲದ ಬಿಲ್ಲಾಳ್ ಬಿ
ನ್ನಣಮಿಲ್ಲದ ಕಿ[3]ಱು[3]ಪು ಮಂತ್ರಿಯಿಲ್ಲದರಸು [4]ಮ
ನ್ನಣೆಯಿ[4]ಲ್ಲದ ನೃಪನೋಲಗ
ಮೆಣೆಯಿಲ್ಲದ ಜಕ್ಕವಕ್ಕಿ ಸೊಗಯಿಸಿದಪುದೇ ೯೭

ಮಲ್ಲಿಲ್ಲದ ಬಳಮುಂ ಮೂ
ಗಿಲ್ಲದ ಮೊಗಮಾನೆಯಿಲ್ಲದರಮನೆ ಸಂಪ
ತ್ತಿಲ್ಲದ ಮಾನಸವಾಳ್ ದಯೆ
ಯಿಲ್ಲದ ಧರ್ಮಂ ಮನಂಗೊಳಲ್ ನೆಱಿ[3]ದಪುದೇ ೯೮

ಎಂಬಂತೆ ಬಿನ್ನನಾದ ಪೊೞಲಂ ಪರಮೇಶ್ವರನ ಬೞಿವೞಿಗೊಂಡು ಪೋಪ ಪುರಜನಂಗಳುಮಂ ಕಂಡು ಅಂತಃಪುರದೊಳಿರ್ದ ಸಹಸ್ರಾಂಗನೆಯರಾಕುಳ-ವ್ಯಾಕುಳೆಯರಾಗಿ,

ದೇವನನಾ ಲೋಕಾಂತಿಕ
ದೇವರ್ ಪಂದೇನನಪ್ಪೊಡಂ ಗಳಪಿ ತಪೋ
ಭಾವನೆಗೆಱಗಿಸಿದರ್ ನಮ
ಗಾವುದು ಸೂೞಿಕ್ಕ ಪೇೞಿಮಿನ್ನೇಗೆ[5]ಯ್ವೊಂ[5] ೯೯

ಎಲ್ಲಿಲ್ಲದ ಸುರಗಣಿಕೆಯ
ರೆಲ್ಲಿಲ್ಲದ ದೇವಿಯರ್ಕಳಗಲರುಪಿ[6]ರ್ಪ[6]
ತ್ತಿಲ್ಲ ನಮಗವರೆ ಜಗತೀ
ವಲ್ಲಭನಂ ಪಚ್ಚಿವಚ್ಚಿ ಮೆಚ್ಚಿಸಿಕೊಂಡರ್ ೧೦೧

ತಲೆ[7]ತ[7]ರಟಪ್ಪಿನಮಡಕಿದ
ರಲಸದೆ ದೇವಂಗೆ ದೇವಿಯರ್ ಪುಷ್ಪಫಲಾ
ವಳಿಯುಂ ದಿವ್ಯಾಂಬರಮುಂ
ವಿಲೇಪನಂಗಳನವಕ್ಕೆ ಮೆಚ್ಚದರೊಳರೆ ೧೦೧

---

1 ರ್ತ (ಇಉಎಕ). 2 ಕ್ಕೊ (ಕ). 3 ಱಃ (ಇಉಎ). 4 ನುಂತಣವಿ (ಅಕ). 5 ಯ್ವಂ (ಅಇಉಎ). 6 ಪೆರ್ (ಇಉಎ). 7 ದ (ಅ).

ಮನಮನದೊಳ್ ದೇವಂ ನ
ನ್ನಿಮನಿಬರೊಳಂ ನುಡಿವುದಲ್ಲದಗ್ಗಲಿಸುವುದಿ
ಲ್ಲೆನಸುಂ ತ್ರಿಭುವನತಿಲಕನ
ಮನಸಮಂ ದಿವಿಜೆಯರೆ ನೆರೆದು ಗೆಂಟಾಗಿಸಿದರ್ ೧೦೨

ಅನಿತಕ್ಕತರ್ಕ್ಯಮಲ್ಲದೆ
ಜನಪತಿ ನಮಗಕ್ಕೆ ಪೇೞ್ದು ಪೋದನೆ ಪೇೞಿಂ
ಮುನಿಯದೆ ಮುನ್ನಣಮಿಲ್ಲದ
ಮುನಿಸೆಲ್ಲಂ ಬಂದದಾಯ್ತಿದೇಂ ಕಾರಣಮೋ ? ೧೦೩

ಅಂತು ಕೆಲರಲ್ಲಿ ವಿವೇಕವಿಕಳೆಯರಾಗಿ ನುಡಿಯೆ ವಿವೇಕಿಗಳಂ ಬರಿಸಿ,

ಸುರಲೋಕಸುಖಮನೊಲ್ಲದೆ
ನರಲೋಕಕ್ಕಿರದೆ ಬಂದು ಮುಕ್ತಿಶ್ರೀಯೋಳ್
ನೆರೆಯಲ್ ಪೋದಪನಱಿಯಿರೆ
ಸುರವಧುವರನಂತು ಬಗೆದು [1]ಪುಟ್ಟನೆ[1]ದೇವಂ ೧೦೪

[2]ಆವೀ[2]ನೆರಪಿದ ದುಷ್ಕೃತ
ಮಾವುದು ಗಡ! ನಡೆಯಿವೊಡನಸುಂಗಳೆದಪಮಾ
ದೇವಂ ಬಲ್ಲಿದನೆಮಗೆ ಮ
ನೋವಲ್ಲಭನಿಂತುಟೆಂದು ಬಗೆವೇೞ್ದಪನೆ ೧೦೫

ಕಳೆ ಸಿರಿಗನ್ನಡಿಯಂ ಮುಂ
ಗಳವಸದನಮೇವುದಕ್ಕ ಕಾಲಲತೆಗೆಯಂ
ಕಳೆ ತೊಡೆದು ಕಣ್ಗೆ ಕಜ್ಜಲ
ವಿಳಾಸವಿನ್ನೇವು[3]ದೆಮಗವೇ[3]ಗೆಯ್ವುದುವೋ ೧೦೬

ಕಳೆ ಸೀಗುರಿಯಂ ಡವಕೆಯು
ನೊಳಗಿಡು ಚಾಮರಮನಿಕ್ಕದಿರು ಸಕಳಜಗ
ತ್ತಿಳಕನುೞಿದಿ[4]ರ್ದ[4] ಮೆಯ್ಮೆಯ
ವಿಳಾಸಮೆಮಗಾತನಿಲ್ಲದೆಂತೊಪ್ಪುಗುಮೋ ೧೦೭

---

1 ಪಟ್ಟತಪತನು (ಇಉಎ). 2 ಆ ವಿಧಿ (ಇಉಎ). 3 ಪಕ್ಕಮೋ (ಇಉಎ).
4 ದರ್ (ಇಉಎ).

ಬಿಡಿಮಿಂದೀ ವ[1]ರ[1]ರಾಜಹಂಸೆಗಳನಿನ್ನೀ ರಾಜಕೀರಂಗಳಂ
ಬಿಡಿಮಿಂತೀ ಮೃಗಪೋತಕಂಗಳನಿವಂ ಕೊಂಡೊಯ್ದು ಕಾಂತಾರದೊಳ್
ಬಿಡಿಮೀ ಬಾಜಿಪ ಬೀಣೆಯಂ ತಿಸ[2]ರಿಯಂ[2] ಕೊಳ್ಳೆಂದು ಬಲ್ಲಂಗಿವಂ
ಕುಡಿಮೇಗೆಯ್ದಪೆಮಾಮಿವಕ್ಕೆಮಗಿರ್ದಿನ್ನೆಲ್ಲಮೇಗೆಯ್ವುದೋ ೧೦೮

ಎಂದು ಪರಿಚಾರಕಗಣಕ್ಕಪ್ಪಯಿಸಿ,

ನಿಮಗೆಂದಪ್ಪಡಮಾಮಱ
ಯೆ ಮನಃಕ್ಷತಮಾಗಿಯಱಿಯದೆಮ್ಮಿಂದಮಿದಂ
ಸಮವಾಯಂ ಮಾಡಿದೊಡಂ
ಕ್ಷಮಿಯಿಪುದೆಂದೆರೆದರಜ್ಜರುಂ ಗುಜ್ಜರುಮಂ ೧೦

ಅಂತೊರೆದನಿಬರುಮೊಂದೆಡೆಗೆವಂದು,

ಇಂದಜಿತಂ ತಪೋವನಕೆ ಪೋದನಧೀಶನೆ ಪೋಗೆ ಮಾಣಲಾ
ಗೆಂದೊಡವೋಗಲಿರ್ದೆಮದಱಿಂ ಬೆಸಕೇಳ್ದಪೆಮೆಂದು ನಮ್ಮ ತಾಯ್
ತಂದೆಗೆ ಪೇೞ್ದು ಬನ್ನಿಮೊಡನಾಡಿದ ಮೇಳದವಳ್ದಿರೆಲ್ಲಮೋ
ನೆಂದಪಿರಕ್ಕ ನೇಲ್ದಳಿ[3]ಪಿ[3] ಮಾಣ್ದೊಡೆ ದುರ್ಜನಮಲ್ತೆ ಸಜ್ಜನಂ ೧೧೦

ಎಂದು ಪರಿಚ್ಛೇದಂಗೆಯ್ದನಿಬರುಂ ನಿತಂಬಿನಿಯರ್ ತಂತಮ್ಮ ಚೆಂಬೊನ್ನಮಾಡದ ನೆಲೆಯನೇಱಿ ನಿಜಗೃಹೋಪವನಕ್ಕೆ ಮುಂ ನೀರೆಱ[3]ದು ನಡಪಿ [4]ಬೆಳೆ[4]ಯಿಸಿದ ಬಾಳಾಶೋಕಪಾದಪಾದಿಗಳ್ಗೆ ಮುಕುಳಿತಾಂಜಲಿಯರಾಗಿ,

ಲಲಿತಲತಾಲಯಂಗಳಿರ !ಸುಂದರಕಾನನಚಂದನದ್ರುಮಂ
ಗಳಿರ! ತಳಿರ್ತಶೋಕೆಗಳಿರಾ! ಸಹಕಾರತಮಾಲಭೂರುಹಂ
ಗಳಿರ! ವಿಯೋಗಮಾದುದೆಮಗಂ ನಿಮಗಂ ಬೆಸಕೆಯ್ವೆಮೆಂದು ವಿ
ಹ್ವಳೆಯರಗಲ್ಕೆಯೊಳ್ ನೆಗಪಿದರ್ ವಸಮಲ್ಲದ ಬಾಷ್ಪವಾರಿಯಂ ೧೧೧

ಅಂತು ಬಾಷ್ಪವಾರಿಧಾರಾಪೂರಿತನೇತ್ರೆಯರುಮತಿ[5]ಶ[5]ಯಚಕಿತಗಾತ್ರೆಯರುಮಾಗಿ,

---

1 ದ (ಅಕ). 2 ರವಂ (ಕ). 3 ಸಿ (ಇಉಎ). 4 ಬಳ (ಅಇಉಎ). 5 ಭಿ (ಕ).

ಎಲೆ ಪರಪುಟ್ಟ ಕೇಳೆಲೆ ಮಧುವ್ರತ ಕೇಳೆಲೆ ರಾಜಕೀರ ಕೇ
ಳೆಲೆ ಕಳಹಂಸ ಕೇಳೆಲೆ ಸರೋಜಿನಿ ಕೇಳೆಲೆ ಚೂತರಾಜ ಕೇ
ಳೆಲೆ ವನರಾಜಿ ಕೇಳ್ ನೆನೆಯುತಿರ್ಪುದು ಕೂರ್ಪುದು ಸೈರಿಸಿರ್ಪುದ
ಗ್ಗಲಿಸಿದ ನಲ್ಮೆ ತಣ್ಮಲೆಯೆ ಬೆನ್ನನೆ ಪೋದಪೆವೆಮ್ಮ ಸಾಮಿಯಾ ೧೧೨

ಎಂದು ಮೆಲ್ಲನಲ್ಲಿಂದಗಲ್ದು ಕಳದು ಗದ್ಗದಕಂಠೆಯರ್ ಕಲಕಂಠಾದಿಗಳಂ ಬೀಳ್ಕೊಂಡು ಮುಕ್ತಿಲಕ್ಷ್ಮೀಸಮಾಗಮಸಮುತ್ಕಂಠಚಿತ್ತನಾಗಿ ಪೋದ ನಿಜ ವಲ್ಲಭನಂ ನೆನೆನೆನೆದು,

ಪಿರಿದುಂ ಪುಣ್ಯದೆ ಪತಿಯಂ
ಪರಮೇಶ್ವರ ಪಡೆದು ನಿನ್ನನಾವನುಭವಿಸು
ತ್ತಿರಲೆಯ್ದೆ ಪಡೆದೆವಿಲ್ಲಂ
ತರಾಯವಾಯ್ತೆಮಗದೊಂದು ವಿಧಿವಶದಿಂ ೧೧೩

ನಿನಗಂಜಿ ಬೆ[1]ರ್ಚಿ[1] ಬೆಸಕೆ
ಯ್ವನಿಬರನಿರಲಿತ್ತುದಿಲ್ಲ ಬಿದಿ ತಳ[2]*ರ್ದೆ[2]ತಪೋ
ವನದತ್ತ ಜಗತ್ತ್ರಯಪಾ
ವನ ತಡೆದಿರೆವಾಗಿ ನಿನ್ನ ಲೋಕಮೆ ಲೋಕಂ ೧೧೪

ಏನೆಮ್ಮ ಮನಮೆ ಶೂನ್ಯಂ
ನೀನಿಲ್ಲದ ರಾಜಮಂದಿರಂ ಶೂನ್ಯಮಯೋ
ಧ್ಯಾನಗರಂ ಶೂನ್ಯಮಖಿಳಾ
ಸ್ಥಾನಂ ಶೂನ್ಯಂ ತ್ರಿಲೋಕಮಂಡನತಿಲಕಾ ೧೧೫

ನಿಂದಪೆವೆ ನಿನ್ನ ಬಟ್ಟೆಯನೆ
ಬಂದಪೆಮೇ[3]ಕೆ[3]ಪ್ಪೆಮಜಿತವಲ್ಲಭ ನಿತ್ಯಾ
ನಂದಕರ ವಿಜಯಸೇನಾ
ನಂದನ ಜಿತಶತ್ರುಪುತ್ರ ಕಾಶ್ಯಪಗೋತ್ರಾ ೧೧೬

---

1 ಚ್ಚಿ (ಅಇಉಎ). 2 ದ್ದ್ರ (ಅಇಉಎ). 3 ಪೆ (ಕ).

ಎಂದು ಮುಂದೆ ನಿಂದನೊಳ್ ನುಡಿವಂತೆ ನುಡಿದು ನೋಡಿ ಕಾಣದೆ,

ಗುಣನಿಧಿಯೆತ್ತಣಂ ಭುವನಪೂಜಿತನೆತ್ತಣನಿಂದ್ರವಂದ್ಯನೆ
ತ್ತಣನಕಳಂಕನೆತ್ತಣನಘಾಂತಕನೆತ್ತಣನಸ್ತದೋಷನೆ
ತ್ತಣನಭಿರೂಪನೆತ್ತಣನನಿಂದಿತನೆತ್ತಣನೀಶರೂಪನೆ
ತ್ತಣನಖಿಳಾವನೀತಿಲಕನೆತ್ತಣನುತ್ತಮಸತ್ವನೆತ್ತಣಂ ೧೧೭

ಪದಯಿದನೆಲ್ಲಿದಂ ಪರಮನೆಲ್ಲಿದನುಜ್ಜ್ವಲಹೇಮವರ್ಣನೆ
ಲ್ಲಿದನಭಿಮಾನಿಯೆಲ್ಲಿದನಸಂಚಳನೆಲ್ಲಿದನಪ್ರಮಾದಿಯೆ
ಲ್ಲಿದನವಧಾತ್ರವೆಲ್ಲಿದನಿಭಧ್ವಜನೆಲ್ಲಿದ [1]ನಾಪ್ತತತ್ವ[1] ನೆ
ಲ್ಲಿದನಬಲಾಮನೋರಮಣನೆಲ್ಲಿದನೆಲ್ಲಿದನೋ ಮನಃಪ್ರಿಯಂ ೧೧೮

ಪೀನಭುಜದ್ವ[2]ಯಂ[2]ಸುಭಗಶುಂಭದುರಸ್ಸ್ಥಲನೆತ್ತವೋದನ
ಬ್ಜಾನನನೆತ್ತವೋದನಸಿತೋತ್ಪಲಲೋಚನನೆತ್ತವೋದನಿಂ
ದ್ರಾನತನೆತ್ತವೋದನುದಿತೋದಿತವೈಭವನೆತ್ತವೋದನಂ
ಭೋನಿಧಿದುಂದುಭಿಧ್ವನಿಗಭೀರಕಲಸ್ವನನೆತ್ತವೋದನೋ ೧೧೯

ಬಡವರ ನಂಟನಾವೆಡೆ ದಯಾಪರನಾವೆಡೆ ಧರ್ಮಚಿತ್ತನಾ
ವೆಡೆ ಶುಭವೃತ್ತನಾವೆಡೆ ಮಹೋದಯನಾವೆಡೆ ಪುಣ್ಯಭಾಜನಾ
ವೆಡೆ ಜನನಾಥನಾವೆಡೆ ಶುಭಾಕರನಾವೆಡೆ ಸತ್ಯವಾಕ್ಯನಾ
ವೆಡೆ ಗುಣಸಿಂಧುವಾವೆಡೆ ಮನೋರಮನಾವೆಡೆ ಪೇೞಲಾಗದೇ ೧೨೦

ಎಂದು ಪ್ರಲಾಪಂಗೆಯ್ದು,

ಪಡಪಡವಾಯ್ದು ಮೆಲ್ಲಿ*ರ್ದೆಗಳಂ ಕರಯುಗ್ಮದಿನೊತ್ತಿ ಕಣ್ಣ ನೀ
ರಡಿಗಡಿಗುಣ್ಮೆ ಪಾಯ್ತರೆ ಮುಖೇಂದು ಬಿಗು[3]ರ್ತಿ[3]ರೆ ಸುಯ್ಯ ಬೆಂಕೆಯುಂ
ನಿಡುಪಮುಳುಂಬಮಪ್ಪಿನೆಗಮಿಾಶನದೆಲ್ಲಿದನೆತ್ತವೋದನಾ
ವೆಡೆಯುನಧೀಶನೆಂದು ಪಲವಾಡಿದರಂದಜಿತಾಂಗನಾಜನಂ ೧೨೧

ಅಂತು ಪಲವಾಡಿ,

ಮಾವನುಮೆಮ್ಮತ್ತೆ[4]ವಿ[4]ರುಂ
ದೇವನುಮಿರಿಸಿಟ್ಟು ಪೋದರಿನಿಬರುಮಂ ಶೂ

---

1 ನೆಮ್ಮ ಕಾಂತ (ಇಉಎ). 2 ಯೊ (ಅಕ). 3 ಳ್ತಿ (ಅಇಉಎ). 4 ಯು (ಅ)

ನ್ಯಾವಾಸದೊಳಿಂತಿರೆ ಪುದಿ
ದಾವುದು ನಿನಗುಚಿತಮಜಿತಸೇನಕುಮಾರಾ ೧೨೨

ತಮ್ಮ ಮಗಂ ಬಗೆಯದೊಡೋ
ವೆಮ್ಮತ್ತೆಯುಮೆಮ್ಮಮಾವನುಂ ಬಗೆಯದೆ ಚೀ
ಕೆಮ್ಮನೆ ಪಾೞ್ಮನೆಯೊಳ್ ಗುಱು
ಗುಮ್ಮನೆ ಸುೞಿದಿರದೆ ಪೋಪಮಜಿತನ ಬೞಿಯಂ ೧೨೩

ಎಂದು ಮಾಡದಿಂದಿೞಿದು ಪೋಗಲ್ ಬಗೆದ ಸಾಸಿರ್ವರರಸಿಯರನಂತಃಪುರಸಂಚರತ್ಕಂಚುಕಿಗಳ್ ಬಾಱಿಸಿ ನಿಮ್ಮನೆಮ್ಮರಸನ ಬೆಸನಿಲ್ಲದೆ ಎಲ್ಲಿಗಂ ಪೋಗಲೀಯೆಂ, ನೀಮೆಲ್ಲಮುಮರೇಂದ್ರವಂದ್ಯನವನ ಜಾನನಷಟ್ಕರಣಾವಧಿಯಂ ಮಾಡಿ ಬೞಿಕ್ಕೆ ನಿಮ್ಮ ಬಗೆವುದಂ ಬಗೆಯಿಮೆಂದೆ[1]ನಿ[1]ತಾನುಂ ನೂಣಿಸಿದರ್.

ಇತ್ತ ಪರಮೇಶ್ವರನತಿಲಲಿತಕಪಿಶಕಿಸಲಯಂಗಳಿಂ ವಿದ್ರುಮಮಿರ್ಪಂತಿರ್ದುಸಪ್ತವರ್ಣದ್ರುಮದ ಮೊದಲೊಳು ಷಷ್ಠೋಪವಾಸದಿಂ ಮಾಘಶುದ್ಧ ನವಮಿಯಪರಾಹ್ಣದೊಳು ರೋಹಿಣೀನಕ್ಷತ್ರದೊಳು ಸಾಸಿರ್ವರರಸುಮಕ್ಕಳು ಧನಧಾನ್ಯದ್ವಿಪದ ಚತುಷ್ಪದಯಾನಶಯನಾಸನ ಕುಪ್ಯಪಾದ ದಶವಿಧ ಚೇತನಾಚೇತನದ ಭೇದಲಕ್ಷಣಮಪ್ಪ ಬಾಹ್ಯಪರಿಗ್ರಹಮುಮಂ ಮಿಥ್ಯಾತ್ವಕ್ರೋಧ ಮಾನಮಾಯಾಲೋಭಹಾಸ್ಯ ರತ್ಯರತಿಶೋಕಭಯ ಜುಗುಪ್ಸಾವೇ[2]ಧ[2]ರಾಗದ್ವೇಷಚತುರ್ದಶಭೇದಮಪ್ಪಭ್ಯಂತರಪರಿಗ್ರಹಮಂ ಪತ್ತುವಿಟ್ಟತಿಸುಂದರ ಚಂದನ[3]ದ್ರ[3]ವ್ಯಚ್ಛಟಾಚ್ಛಾದಿತಮುಮಮರೇಂದ್ರ ಸುಂದರೀನಿಕಾಮಕೋಮಲಕರತಲಾವಿರಚಿತಾನೇಕರತ್ನೋಪಹಾರಮುಮತಿವಿಚಿತ್ರ ಮಣಿಮಯಮಂಡಪಮಪ್ಪ ಚಂದ್ರಕಾಂತಾಶಿಲಾತಲದೊಳು ಪೂರ್ವಾಭಿಮುಖನುಂ ಬದ್ಧಪರ್ಯಂಕಾಸನನುಮಾಗಿರ್ದು ಮಹಾಪ್ರತಿಹಾರಿಭೂತ ಪುರುಹೂತದೂರೋತ್ಸಾರಿತನಿಖಿಲಪರಿಜನನುಮುಪಗತಕ್ಷೋಭನುಮಾಗಿ ಪ್ರಾರಬ್ಧಸಂಗೀತಮಂಗಳಸಂಗತಮಪ್ಪ ಜವನಿಕೆಯ ಮಧ್ಯದೊ[4]ಳು ಉಪ[4]ಚಿತದಿವ್ಯವಸ್ತ್ರಮಾಲ್ಯಾಭರಣನಾಗಿ ಸರ್ವಸತ್ವಂಗಳೊಳು ಸಮಸತ್ವಮಂ ಭಾವಿಸುತ್ತುಂ ತ್ರಿಸಾಕ್ಷಿಕನಾಗಿ ಪಂಚಮುಷ್ಟಿಯಿಂ

ನೆಗಟ್ದಂ ತೀರ್ಥಕರೇಶ್ವರಾಗ್ರಣಿ ನಮಸ್ಸಿದ್ಧೇಭ್ಯ ಎಂದಿಂದ್ರವಂ
ದ್ಯಗುಣಂ ಕರ್ಮದ ಬೇರ್ಗಳಂ ಪಱಿವವೊಲ್ ನೀಲಾಳಿಮಾಲಾವಿಲಾ

---

1 ನೆ (ಅಇಉಎ). 2 ಗ (ಕ). 3 ದ್ರವ (ಇಉಎ), ದ್ರುವ (ಕ). 4 ಳು ಪರಿಚಿತ (ಅ), ಳು ಉಪರ (ಕ).

ಸಿಗಳಂ ಕೇಶಸಮೂಹಮಂ ಪಱಿವುದುಂ ತ್ರಿಜ್ಞಾನಿಗಾಗಳ್ ಪೊದ
ೞ್ದಿೂಗೆದತ್ಯುತ್ತಮದೀಕ್ಷೆಯಂ ಕೊಳಲೊಡಂ ಜ್ಞಾನಂ ಮನಃಪರ್ಯಯಂ ೧೨೪

[1]ಚತುರಸದವಗಮನ ಸಮ
ನ್ವಿತನಜಿತಂ[1] ಪರಮಯೋಗಿ ಪರಲೋಕಗತಾ
ಗತಕಾರ್ಯಕಳಾಪದೊಳವ
[2]ಹಿತನಾದನ್ನದೆ ಜಿಗೀಷು[2]ಮಱಿ[3]ದಿರ್ದಪನೇ ೧೨೫

ಆ ದೀಕ್ಷಾವಲ್ಲರಿ ಜಿನ
ಪಾದಸರೋಜದೊಳನಂತಸುಖಫಲಮೆಸೆದ
ತ್ತಾದಮೆ ಮಹಾಶ್ರಯಂ ತಮ
ಗಾದೊಡೆ ಸಫಲಾತ್ಮಮೆಸೆವುದೊಂದಚ್ಚರಿಯೇ ೧೨೬

ಅಂತು ಸರ್ವಸಾವದ್ಯವಿರತಿಯೊಳು ಸಾಮಾಯಿಕವ್ರತಸಮಿತಿಗುಪ್ತಿಸಮನ್ವಿತ ಮನವಲಂಬಿಸಿ ನಿಲ್ವುದುಂ ಆಗಳಾ ಚತುರ್ಜ್ಞಾನಾಂಭೋನಿಧಿಯುಂ ಮಧುಕರ-ನಿಕರನಿಕಾಶಕೇಶಪಟಲಮಂ ತನ್ನ ಹಸ್ತಪಟಲಕದೊಳಾಂತುಕೊಂಡು ಪಂಚ-ಮಾಂಭೋಧಿಯೊಳಮರೇಂದ್ರವೃಂದಮೊಯ್ದಿಕ್ಕುವುದುಂ,

ಪ್ರಕಟದ್ಯುತಿಪ್ರವಾಳ
ಪ್ರಕರಮುಮಾ ತೀರ್ಥಕರವಿಶೇಷಕನಳಕ
ಪ್ರಕರಮುಮೊಡನೆಸೆದುವು ಪೋ
ಲ್ತು ಕೇಳಿವೆರಸಿರ್ದ ಪವಳಮಂ ನೀಲಮುಮಂ ೧೨೭

ಕರಮುಱುವಾಱು ದುಗ್ಧಜಲವಿಕ್ರಯದಿಂ ದೊರೆಕೊಂಡುದೀಜಿನೇ
ಶ್ವರನಳಕಂಗಳೆಂಬ ಹರಿನೀಲಚಯಂಗಳ ಲಾಭಮಿಾಗಮೆಂ
ದಿರದನುರಾಗದಿಂ ಕುಣಿಯುತಿರ್ಪವೊಲಿರ್ದುದು ವೀಚಿಬಾಹುಗಳ್
ಬೆರಸಳಿಸಂಚರಚ್ಚಟುಳಭಾಸುರಸಂಚಲಪಂಚಮಾರ್ಣವಂ ೧೨೮

ಆ ಪ್ರಸ್ತಾವದೊಳು,

---

1 ಚತುರವಗಮನ ಸಮನ್ವಿತ ವ್ರತನಜಿತಂ (ಇಉಎ). 2 ಹಿತನಾದಂ ವಿಜಿಗೀಷು ವೃತ್ತಿ (ಇಉಎ).

ಪರಿಹೃತವಸನಂ ವಿಗತಾಂ
ಗರಾಗನಪನೀತಭೂಷಣಂ ವಿಬುಧಜನೋ
ದ್ಧರಣಂ ಪಯೋದಸಂಧ್ಯಾ
ಸುರಾಗಭರಣವ್ಯಪೇತರವಿಯಂತಿರ್ದಂ ೧೨೯

ಪರಮೇಶ್ವರನಜಿತನಜಾ
ತರೂಪನುತ್ತಪ್ತಜಾತರೂಪದವೊಲದೇಂ
ಕರಮೆಸೆದುದೊ ನೋಡುವೊಡಾ
ಸುರೂಪಮೇಂ ಜಾತರೂಪದಂತೊಪ್ಪುಗುಮೇ ೧೩೦

ಅಂತಾಪರಮೇಶ್ವರಂ ಪರಮತಪಸ್ಸಂಯಮಧರನಪ್ಪುದುಂ ಶೋಕಾಕುಳೀಕೃತಚಿತ್ತರಾದ ತೀರ್ಥಕರಗುರುಗಳುಮಜಿತಸೇನಕುಮಾರನುಮನೆನಿತಾನುಂ ಸಂತಯಿಸಿ ಸಾಕೇತನಗರಕ್ಕೆ ಕಳಿಪಿ ಬೞಿಯಂ ಪ್ರಥಮತೀರ್ಥೇಶ್ವರಂಗೆ ಮಾಡಿದಂದದೊಳೆ ಪರಿನಿಷ್ಕ್ರಮಣಪೂಜೆಯಂ ಮಾಡಿ,

ವಿವಿಧಸ್ತೋತ್ರಂಗಳಿಂದಂ ಸ್ತುತಿಯಿಸಿ ಭುವನಸ್ತುತ್ಯನಂ ಭವ್ಯವೃಂದೋ
ತ್ಸವಪಂಕೇಜಾತದೊಳ್ ದೇವನ ಪದಯುಗದೊಳ್ ಮುಗ್ಗಿ ಗಂಧಾಕ್ಷತಾದ್ಯ
ಷ್ಟವಿಧೋತ್ಕೃಷ್ಟಾರ್ಚನಾದ್ರವ್ಯದಿನಭವನನಭ್ಯರ್ಚಿತಂಮಾಡಿ ಬೀೞ್ಕೊಂ
ಡು ವಿಮಾನಶ್ರೇಣಿ ಸುತ್ತುಂ ಬರೆ ಸುರಪತಿಗಳ್ ತಮ್ಮ ತಾಣಕ್ಕೆ ಪೋದರ್ ೧೩೧

ಇದು ಸಕಲ ಮುನೀಂದ್ರ ವೃಂದ ವೃಂದಾರಕ ಶ್ರೀಮದಜಿತಸೇನ ಭಟ್ಟಾರಕ

ಶ್ರೀಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ

ಶ್ರೀಮದಭಿನವ ಕವಿಚಕ್ರವರ್ತಿ

ಕವಿರತ್ನ ವಿರಚಿತ

ಶ್ರೀ ದಾನಚಿಂತಾಮಣಿ ವಿನಿರ್ಮಾಪಿತ

ಶ್ರೀಮದಜಿತತೀರ್ಥಕರ ಪುರಾಣತಿಲಕದೊಳ್

– ದೀಕ್ಷಾಗ್ರಹಣವರ್ಣನಂ, ಷಷ್ಠಾಶ್ವಾಸಂ –

ಸಪ್ತಮಾಶ್ವಾಸಂ

ಶ್ರೀಮತ್ಕಾಶ್ಯಪಗೋತ್ರ ಶಿ
ಖಾಮಣಿ ಭವ್ಯಜನಕಲ್ಪತರು ಕಲ್ಪಂ ಕ
ಲ್ಪಾಮರಪೂಜಿತನಜಿತ
ಸ್ವಾಮಿ ಸಮೀಚೀನಚರಿತನಪಗತದುರಿತಂ ೧

ಅಂತಂದಿನ ದಿವಸಮಲ್ಲಿಯೆ ನಿಂದು ಎರಡನೆಯ ದಿವಸದೊಳ್ ದಿವಸಕರ-ಮಂಗಳಪ್ರಕಾಶಭಾಸುರಂ ದಾನಧರ್ಮಪ್ರಕಾಶನಂ ಮಾಡಲೆಂದು ಸಮ್ಯಕ್ತ್ವವೀಕ್ಷಿತೋಭಯಪ್ರಚಾರಮುಂ ಪ್ರವಿಷ್ಟಪೂರ್ವಪರಸ್ವಾಂಗದೇಶವಿಧಾನಮುಮಾಚಾರ್ಯಸೂಕ್ತಪ್ರೋಕ್ತದೇಶಕಾಲಮುಂ ಲಾಭಾಲಾಭಮಾನಾವಮಾನಸಮಾನಮನೋವೃತ್ತಿಯುಂ ಗೀತನೃತ್ಯಪ್ರಸೂತಿಕಾಸುತಪಣ್ಯಾಂಗನಾಪಾಪಕರ್ಮದೀನಾನಾಥಜನ-ಪಾನಶಾಲಾವಿವಾಹಾದಿಮಂಗಳಗೇಹವರ್ಜಿತಮುಂ ಲೋಕಗತಪರಿವರ್ಜಿನೋ-ಪಗತಲಕ್ಷಿತಜಿನವೃತ್ತಿವಿಗಮಮುಂ ಪ್ರಾಸುಕಾಹಾರಗವೇಷಣಪ್ರಣಿಧಾನಪರಾಯಣಮುಮಪ್ಪ ಭೈಕ್ಷಾ[1]ಸಿ[1]ದ್ಧಿಯೊಳು ಷಟ್ಚತ್ವಾರಿಂಶದ್ದೋಷವಿರಹಿತಮುಂ ನವಕೋಟಿಪರಿಶುದ್ಧಮುಂ ಗೋ[2]ಚಾರ[2]ಮುಮಕ್ಷಮ್ಲಕ್ಷಮುಂ ಉದರಾಗ್ನ್ಯುಪಶಮನಮುಂ [3]ಭ್ರಮರಾಹಾರಮುಂ[3] ಶ್ವಭ್ರಪೂರಣಮುಮೆಂಬ ಪಂಚವಿಧಾಹಾರದಿಂ ಮಾರ್ಗಪ್ರಬೋಧನಾರ್ಥಮುಂ ಮುಕ್ತಿಸುಖಸಿದ್ಧ್ಯರ್ಥಮುಮಾಗೆ ಕಾಯಸ್ಥಿತಿಯಂ ಮಾಡಲೆಂದು ನಾನಾವಿಧಾಯನಾಶ್ರಯಕೃತಾವಧಾನಜನಿತಪ್ರಯತ್ನ ಪರಿಹೃತಪ್ರಾಣಿಪೀಡೆ-ಯುಂದ್ರುತವಿಲಂಬಿತಸಂಭ್ರಾಂತಾವಿಸ್ಮಿತಲೀಲಾವಿಕಾರದಿಗವಲೋಕನಾದಿದೋಷ-ವಿರಹಿತನುಮಪ್ಪ ಈರ್ಯಾಪಥಶುದ್ಧಿಯೊಳ್ ನೆಱೆದು ಯುಗಾಂತರದೃಷ್ಟಿಯಾಗಿ ಚರ್ಯಾಮಾರ್ಗದಿನಯೋಧ್ಯಾಪುರಮಂ ಪೊಕ್ಕು ಜಘನ್ಯೋತ್ತಮಗೃಹಂಗಳೊಳ್ ಚಂದ್ರ ಗತಿಯಿಂ [4]ಸಲುತ್ತುಂ[4] ಬ್ರಹ್ಮನೆಂಬರಸನ ಮನೆಗೆವರೆ ಮಂಗಳತೂರ್ಯ-ಮುಮಪ್ಪಮಂಗಳಮುಂಬೆರಸು ಪರಮೋತ್ಸಾಹದಿಂದಿದಿರ್ಗೊಂಡು,

1 ತು (ಅ). 2 ಚರಿ (ಅಕ). 3 (ಇಉಎ) ಗಳಲ್ಲಿಲ್ಲ. 4 ಸಲಿಸುತ್ತುಂ (ಇಉಎ).

ಶ್ರದ್ಧಾ[1]ಶ[1]ಕ್ತಿರಲೋಭತ್ವಂ ಭಕ್ತಿರ್ಜ್ಞಾನಂ ದಯಾ ಕ್ಷಮಾ
ಇತಿ ಶ್ರದ್ಧಾದಯಸ್ಸಪ್ತ ಗುಣಾಶ್ಚ ಗೃಹಮೇಧಿನಾಂ
ಪ್ರತಿಗ್ರಹೋಚ್ಚಸ್ಥಾನೇ ಚ ಪಾದಪ್ರಕ್ಷಾಳನಾರ್ಚನಂ
ಪ್ರಣಾಮೋಯೋಗಶುದ್ಧಿಶ್ಚೈಷಣಶುದ್ಧಿಶ್ಚ ತೇ ನವ

ಎಂದು ಪೇೞ್ವುಂದದಿಂ,

[2]ಪ್ರಣುತೆಯನಯಮೆಂಬೇೞುಂ[2]
ಗುಣದಿಂ ನವವಿಧದ ಪುಣ್ಯದಿಂ ನೆಱಿದು ನೃಪಾ
ಗ್ರಣಿ ನೆಗೞ್ದ* ದಾನಚಿಂತಾ
ಮಣಿ ನಿಱು[3]ಸುವ[3] ತೆಱದಿನಿಱುಸಿದಂ ಬ್ರಹ್ಮನೃಪಂ ೨

ಅಂತು ನಿಱಿಸಿ ಸಿದ್ಧಭಕ್ತಿಪುರಸ್ಸರಂ ಪಾಣಿಪಾತ್ರದೊಳ್ [4]ಕನಕಪಾತ್ರದೊಳ್[4] ತೀವಿದಿಕ್ಷುರಸಮಂ ಪಯೋರಸಮುಮಂ ಪಾನಗಳಿಂದೆಱೆ[3]ಯೆ ನಿರಂತರಾಯದಿ ನಿಲ್ವುದುಮುತ್ತಮ ಪಾತ್ರದಾನದ ಫಲದಿಂ

ಸುರಿಯೆ ವಸುಧಾರೆ ನಭದೊಳ್
ಸುರವೃಂದಂ ಪೊಗೞೆ[3] ಮೊೞಗೆ ಸುರದುಂದುಭಿ ತ
ಣ್ಣೆರಲೆಸಗೆ ಕುಸುಮವರ್ಷಂ
ದೊರೆಕೊಳೆ ಸಾಶ್ಚರ್ಯಮಾಯ್ತು ಪಂಚಾಶ್ಚರ್ಯಂ ೩

ಅಂತು ನಿಂದಕ್ಷಯದಾನಮಕ್ಕೆಂದು ಪರಸಿ ಪರಮೇಶ್ವರನಯೋಧ್ಯಾಪುರ[5]ದಿಂ[5] ಪೊಱಮಟ್ಟು ವನವ್ರತದಿಂ ಗ್ರಾಮನಗರಖೇಡಖರ್ವಡಮಡಂಬಪತ್ತನದ್ರೋಣಾಮುಖಪ್ರದೇಶಂಗಳೊಳ್ ವಿಹಾರಿಸಿ,

ಮಲಮಂಗರಾಗಮಂಬರ
ವಲಯಂ ದಿವ್ಯಾಂಬರಂ ಗುಣಾವಳಿ ಭೂಷಾ
ವಲಿಗಳೆನೆ ಮುಕ್ತಿಲಲನೆಯ
ನೊಲಿಸಲ್ ಕೈಗೈದು ನಿಂದನಜಿತಮುನೀಂದ್ರಂ ೪

ಅನಿಲನವೊಲ್ ನಿಸ್ಸಂಗಂ
ಕನಕಮಹಾದ್ರೀಂದ್ರದಂದದಿಂ ನಿಷ್ಕಂಪಂ

---

1 ಭ (ಅಕ). 2 ಪ್ರಣುತಿ ನಯುಮೆಂಬಿವೇೞುಂ (ಕ). 3 ಸಿದ (ಕ).
4 (ಇಉಎ) ಗಳಲಿಲ್ಲ. 5 ಮಂ (ಇಉಎ).

ವನನಿಧಿಯಂತಕ್ಷೋಭಂ
ಘನಮಾರ್ಗದವೋಲ್ ಮುನೀಶ್ವರಂ ನಿಂದಿರ್ದಂ ೫

ಅಂತಾ ತ್ರಿಲೋಕೈಕಗುರುವುಂ ತ್ರಿಕಾಲಜ್ಞಾನಿಯುಂ ತ್ರಿಕಾಲಯೋಗಿಯುಂ ತ್ರಿಗುಪ್ತಿಗುಪ್ತನುಂ ತ್ರಿದಂಡತ್ರಿಶಲ್ಯತ್ರಿಗಾರವಿರಹಿತನುಂ ತ್ರಿದಶವಂದಿತನುಂ ತ್ರಿಮುಂದವ್ಯಪೇತನುಂ ಯೋಗತ್ರಯಪವಿತ್ರನುಂ ರತ್ನತ್ರಯಾಲಂಕೃತನುಮೆನಿಸಿದಜಿತಯೋಗಿ ನಿಯಮನಿಶ್ಚಲನಾಗಿ ನಿಲ್ವುದುಂ,

ಕರಿಕಲಭಂಗಳ್ ಕರಿಕೇ
ಸರಿಗಳ್ ವೈರ[1]ಮ[1]ನೆ ಬಗೆಯದಹಿನಕುಲಂಗಳ್
ಹರಿಣಚಮೂರಂಗಳ್ ಶಾಂ
ತರೂಪದಿಂದಿರ್ದುವಜಿತನಾಥನ ಕೆಲದೊಳ್ ೬

ವನಮೂಷಕಮಾರ್ಜಾಲಂ
ವನಾಶ್ವಮಹಿಷಂ ವನಾಶ್ವಸೂಕರಮನಿತುಂ
ಮುನಿಸಂ ಪರಿಹರಿಸಿರ್ದುವು
ಮುನಿನಾಥಾಂತಿಕದೊಳುದಿತಶಾಂತರಸಂಗಳ್ ೭

ಅಂತು ಪರಮೇಶ್ವರನ ಕೆಲದೊಳಿರ್ದ ಕ್ರೂರಜಾತಿಗಳೆಲ್ಲಂ ಆ ಮಹಾನುಭಾವನ ತಪಃಪ್ರಭಾವದಿಂ ಅಪಗತರೌದ್ರರಸಂಗಳುಮುಪಗತಶಾಂತರಸಂಗಳುಮಾಗೆ,

ಸುರಿದುವು ಪೂಗಳಂ ಮಿಳಿ*ರ್ವ ಕೊಂಬುಗಳೆಂಬ ಕರಂಗಳಿಂ ಮುನೀ
ಶ್ವರನ ಪದಾಬ್ಜದೊಳ್ ತಮಗೆ ತಾಮೆ ವನಾವನಿಜಂಗಳಂಬುಜಾ
ಕರಮನಿಲಾಹತಿಪ್ರಚಲವೀಚಿಭುಜಂಗಳಿನೊಳ್ಪುವೆತ್ತ ಶೀ
ಕರನಿಕರಂಗಳೊಳ್ ತೊಳೆದುದಾ ಗುಣಸತ್ವನ ಪಾದಪದ್ಮಮಂ ೮

ಅಂತುಗ್ರೋಗ್ರತಪದೊಳ್ ನೆಗಳ್ದ ಬುದ್ಧಿಕ್ರಿಯಾತಪೋಬಲರಸೌಷಧಿ–ಕ್ರಿಯಾಕ್ಷೀಣವಿಕಲ್ಪಮಪ್ಪ ಸಪ್ತ[2]ಸಿ[2]ದ್ಧಿಯೊಳಂ ನಾಮಸತ್ಯಂ ರೂಪಸತ್ಯಂ ಪ್ರತೀತಿಸತ್ಯಂ ಸಂಯೋಜನಸತ್ಯಂ ಜನಪದಸತ್ಯಂ ದೇವಸತ್ಯಂ ಭಾವಸತ್ಯಂ ಸಮಯಸತ್ಯಮುಮೆಂಬೊಂಬತ್ತುಂ ಸತ್ಯದೊಳಂ, ಭಾವಶುದ್ಧಿಯುಂ ಕಾಯಶುದ್ಧಿಯುಂ ವಿನಯ

---

1 ವ (ಇಉಎ). 2 ರ (ಅ) ಋ (ಇಉಎ).

ಶುದ್ಧಿಯುಂ ಈರ್ಯಾಪಥಶುದ್ಧಿಯುಂ ಭಿಕ್ಷಾಶುದ್ಧಿಯುಂ ಪ್ರತಿಷ್ಠಾಪನಶುದ್ಧಿಯುಂ ಶಯನಾಶನಶುದ್ಧಿಯುಂ ವಾಕ್ಯಶುದ್ಧಿಯುಮೆಂಬ ಶುದ್ಧ್ಯಷ್ಟಕದೊಳಂ ಮನೋಗುಪ್ತಿಯುಂ ವಾಗ್ಗುಪ್ತಿಯುಂ ಕಾಯಗುಪ್ತಿಯುಮೆಂಬ ಗುಪ್ತಿತ್ರಯದೊಳಂ ಉತ್ತಮಕ್ಷಮಾಮಾರ್ದವಾರ್ಜವಸತ್ಯಶೌಚಸಂಯಮತಪಸ್ತ್ಯಾಗಾಕಿಂಚನ್ಯಬ್ರಹ್ಮಚರ್ಯಮೆಂಬೀ ದಶಕು[1]ಶ[1]ಲಧರ್ಮದೊಳಮನಶನಾವಮೌದಾರ್ಯವೃತ್ತಿಪರಿಸಂಖ್ಯಾನರಸಪರಿತ್ಯಾಗ ವಿವಿಕ್ತಶಯ್ಯಾಸನಕಾಯಕ್ಲೇಶಂಗಳೆಂಬ ಬಾಹ್ಯತಪದೊಳಂ ಪ್ರಾಯಶ್ಚಿತ್ತವಿನಯ-ವೈಯಾವೃತ್ಯಸ್ವಾಧ್ಯಾಯವ್ಯುತ್ಸರ್ಗಧ್ಯಾನಂಗಳೆಂಬ ಷಡ್ವಿಧಾಭ್ಯಂತರತಪದೊಳಂ ನೆಱೆದು, ಮನೋದಂಡ ವಾಗ್ದಂಡ ಕಾಯದಂಡಮೆಂಬ ದಂಡತ್ರಯಮುಂ ಪರಿಹರಿಸುತ್ತುಂ, ಕ್ಷುತ್ಪಿಪಾಸಾಶೀತೋಷ್ಣದಂಶಮಶಕನಾಗ್ನ್ಯರತಿಸ್ತ್ರೀಚರ್ಯಾನಿಶದ್ಯಾಶಯ್ಯಾಕ್ರೋಶವಧಯಾಚನಾಲಾಭರೋಗತೃಣಸ್ಪರ್ಶಮಲಸತ್ಕಾರಪುರಸ್ಕಾರಪ್ರಜ್ಞಾಜ್ಞಾನದರ್ಶನಂಗಳೆಂಬ ಇರ್ಪತ್ತೆರಡುಂ ಪರೀಷಹಂಗಳಂ ಪರಿಹರಿಸುತ್ತಂ, ಪೃಥ್ವೀಕಾಯಕಮಪ್ಪುಕಾಯಕ ತೇಜಸ್ಕಾಯಕ ವಾಯುಕಾಯಕ ವನಸ್ಪತಿಕಾಯಕ ತ್ರಸಕಾಯಕಮೆಂಬ ಷಡ್ವಿಧಜೀವನಿಕಾಯಮನೋವುತ್ತಂ, ಜೀವಾಜೀವಾಸ್ರವಬಂಧ ಸಂವರನಿರ್ಜರಾಮೋಕ್ಷಂಗಳೆಂಬ ಸಪ್ತತತ್ವಮುಂ ನೈಗಮಸಂಗ್ರಹವ್ಯವಹಾರಋಜುಸೂತ್ರಶಬ್ದಸಮಭಿರೂಢೈವಂಭೂತಮೆಂಬ ಸಪ್ತನಯಮುಮಂ ಭಾವಿಸುತ್ತಂ, ಸತ್ವಂಗಳೊಳ್ ಮೈತ್ರಿಯುಂ ಗುಣಾಧಿಕರೊಳ್ ಪ್ರಮೋದಮುಂ ಕ್ಲಿಶ್ಯಮಾನರೊಳ್ ಕಾರುಣ್ಯಮುಂ [2]ಅ[2]ವಿನಯರೊಳ್ ಮಾಧ್ಯಸ್ಥಮುಮನವಳಂಬಿಸುತ್ತಂ,ಅನಂತಾನುಬಂಧಿಯಪ್ರತ್ಯಾಖ್ಯಾನಸಂಜ್ವಲನಭೇಧಭಿನ್ನ ಕ್ರೋಧಮಾನಮಾಯಾಲೋಭಕಷಾಯಚತುಷ್ಕಂಗಳನಗಲುತ್ತಂ, ಮಿಥ್ಯಾದರ್ಶನಾವಿರತಿಪ್ರಮಾದಕಷಾಯಯೋಗಂಗಳೆಂಬ ಬಂಧಹೇತುಗಳಂ ಪರಿಹರಿಸುತ್ತಂ, ಕಾಯವಾಙ್ಮನೋಯೋಗತ್ರಯಮನವಲಂಬಿಸುತ್ತಂ, ಸ್ಪರ್ಶನರಸನಘ್ರಾಣಚಕ್ಷುಶ್ಶ್ರೋತ್ರಂಗಳೆಂಬ ಪಂಚೇಂದ್ರಿಯ-ವಿಷಯಸ್ಪರ್ಶರಸಗಂಧಶಬ್ದರೂಪಂಗಳಂ ನಿರಾಕರಿಸುತ್ತಂ–ಜೀವಪುದ್ಗಲಧರ್ಮಾ-ಧರ್ಮಕಾಲಾಕಾಶಮೆಂಬೈದುಮಂ ಭಾವಿಸುತ್ತಂ–ಪನ್ನೆರಡು ವರ್ಷದಿಂ[3]ಜಿನ[3]ಕಲ್ಪ-ಚರಿತ್ರದಿಂ ಛದ್ಮಸ್ಥಕಾಲಂ ಪೋಗೆ ಯೋಗಯೋಗ್ಯಪ್ರದೇಶದೊಳ್ ವಾಕ್ಸಂಯಮಮನುಮವಹಿತಧ್ಯಾನನುಮಾಗಿರೆ;

ಪರಮಂಗೆ ಲಕ್ಷ್ಮಿ ಪರಮಾ
ದರದಿಂದಂ ಗೂಢಪದ್ಮವಿಷ್ಟರಮಂ ತಂ

---

1 (ಇಉಎ) ಗಳಲ್ಲಿಲ್ಲ. 2 (ಇಉಎ) ಗಳಲ್ಲಿಲ್ಲ. 3 ಜೀವ (ಇಉಎ).

ದಿರಿಸಲ್ ತದ್ದ್ವಿಗುಣದೆ ಸುಖ
ನಿರಾದರಂಗೆಸೆದುದಾತಪತ್ರಮುಲಕ್ಷಂ ೯

ಎರಡುಂ ಮಡದೆಡೆಯುಂ ನಾ
ಲ್ಪೆರಲುಂಗುಟಮೆರಡಱಿಡೆಯು[1]ಮೊ[1]ಗೇಣೆಂಬಂ
ತಿರೆ ಕಾಯೋತ್ಸರ್ಗದ ಮುದ
ದಿರೆ ಋಜ್ವಾಗತದೊಳಜಿತನೂರ್ಜಿತಧೈರ್ಯಂ ೧೦

ವದನಂ ಸ್ತಿಮಿತಾಕ್ಷಂ ಶ್ಲಿ
ಷ್ಟದಂತಮುಷ್ಟಾಂಗಪಾತಮುಭ್ರೂ[2]ಭಂ[2]ಗಾ
ಸ್ಪದಮೆಸೆದುದು ಯೋಗನಿಯೋ
ಗದೊಳಜಿತಮಹಾಮುನೀಂದ್ರವೃಂದಾರಕನಾ ೧೧

[3]ಕ[3]ನದಂಭೋನಿಧಿಗರ್ಜ
ತ್ಸ್ವನದಿಂ ಗುಂಜದ್ಗುಹಾದ್ರಿಯೆನೆ ಜಿನನಿರ್ದಂ
ಮನದೊಳಗೊಂದೊಂದವ್ಯ
ಕ್ತನಿಜಾಕ್ಷರಜಲ್ಪಮೆಸೆಯೆ ಮಂದರಕಲ್ಪಂ ೧೨

ಅಂತಿರ್ದು ಶುಕ್ಲಧ್ಯಾನದಿಂ ಜ್ಞಾನಾವರಣೀಯಂ ದರ್ಶನಾವರಣೀಯಂ ಮೋಹನೀಯಮಂತರಾಯಮೆಂಬ ಘಾತಿಚತುಷ್ಟಯಮಂ ಕಿಡಿಸಿ ಪುಷ್ಯಮಾಸದ ಶುಕ್ಲಪಕ್ಷದ ಏಕಾದಶಿಯೊಳ್ ಅಪರಾಹ್ಣಸಮಯದೊಳ್ ರೋಹಿಣೀನಕ್ಷತ್ರಮಾಗೆ,

ವನದೊಳ್ ದಾವಾಗ್ನಿ ಪೂರ್ವಾಚಲದೊಳಹಿಮಕೃನ್ಮಂಡಲಂ ವಾರ್ಧಿಯೊಳ್ ಭೋಂ
ಕೆನೆ ಬಂದೌರ್ವಾನಳಂ ಪುಟ್ಟುವವೊಲಜಿತತೇಜೋಮಯಂ ಕರ್ಮವೇಲ್ಲ
ದ್ವನದಾಹೋತ್ಸಾಹವೃತ್ತಿಪ್ರಗುಣಮಜಿತತೀರ್ಥೇಶನೊಳ್ ತೀರ್ಥಕೃನ್ಮಂ
ಡನನೊಳ್ ಪುಟ್ಟಿತ್ತಗಾಧಂ ತ್ರಿಭುವನಜನಮಾಂಗಲ್ಯಕೈವಲ್ಯಬೋಧಂ ೧೩

ಅಂತು ದುರಿತತಿಮಿರವಿಘಟನಪಟುವೆನಿಪ ವಿಮಲಕೇವಲಜ್ಞಾನಭಾನೂದಯಮಾಗೆ;

---

1 ಮೂ (ಇಉಎ). 2 ಭೃ (ಅಇಉಎ). 3 ಘ (ಇಉಎ).

ಹರಿಪೀಠಂ ಸುರಪುಷ್ಪವೃಷ್ಟಿ ಲಲಿತಾಶೋಕದ್ರುಮಂ ಚಾರುಚಾ
ಮರಮಾಲಾವಳಿ ದಿವ್ಯಭಾಷೆ ರುಚಿರಶ್ವೇತಾತಪತ್ರತ್ರಯಂ
ಸುರತೂರ್ಯಧ್ವನಿ ಭಾನುಮಂಡಲನಿಭಂ ಭಾಮಂಡಲಂ ಚೆಲ್ವವೆ
ತ್ತಿರೆ ದೇವೇಂದ್ರನಿನಾದುದಂದಜಿತದೇವಪ್ರಾತಿಹಾ[1]ರ್ಯಷ್ಟಕಂ[1] ೧೪

ಸುಂದರ ಸುರೇಂದ್ರವೃಂದಾ
ನಂದಕರಂಗಳ್ ದುರಂತದುರಿತಹರಂಗಳ್
ಸಂದಿಸಿ ನೆಗಟ್ಟು*ವನುಕ್ರಮ
ದಿಂದೆ ಚತುಸ್ತ್ರಿಂಶದತಿಶಯಂಗಳ್ ಜಿನ[2]ನ[2]ಂ ೧೫

ಅಂತಷ್ಟಮಹಾಪ್ರಾತಿಹಾರ್ಯಮುಂ ಚತುಸ್ತ್ರಿಂಶದತಿಶಯಂಗಳುಮೆಸೆಯೆ ವೃಷಭನಾಥಂಗೆ ವೃಷಭಸೇನಗಣಧರರಂತಜಿತಂಗೆ ಸಿಂಹಸೇನಾಭಿಧಾನಂ ಗಣಪ್ರಧಾನನಾಗಿ ಸರ್ವಭಾಷಾಸ್ವಭಾವಾತ್ಮಕಮುಂ ತ್ರಿಭುವನಜನಭಿತ್ತಿಯುಗ ಪದರ್ಥಪ್ರತಿಪಾದನಸಮರ್ಥಮುಂ ಸೂತ್ರಪೌರುಷೇಯತಾಲಪ್ರಸರಮುಂ ಗಣ-ಧರವಜ್ರಧರಚಕ್ರಧರಪ್ರಶ್ನವ್ಯತಿರೇಕನಿ[3]ಸ್ರು[3]ತಮುಂ ಅಕ್ಷರಾನಕ್ಷರಾತ್ಮಕಮುಮ-ವಿವಕ್ಷಿತವೃತ್ತಮುಂ ತಾಲ್ವೋಷ್ಠವ್ಯಾಪಾರವಿರಹಿತಮುಮಪ್ಪ ದಿವ್ಯವಚನಾಮೃತ ಮುಮನಾತ್ಮೀಯಮತಿಭಾಜನದೊಳಾಪುಣ್ಯಭಾಜನನಾಂತುಕೊಂಡಿರ್ಪಿನಮವ-ಧಿಬೋಧಾಧಿಗತದ್ವಿತೀಯತೀರ್ಥಕರಪರಮದೇವರ ಕೇವಲಾವಗಮನನಾಗಿ ನಾಗೇಂದ್ರಂ ಬಲಾಹಕವಿಕ್ರಿಯಾವಿನಿರ್ಮಿತಮಪ್ಪ ಕಾಮುಕೀವಿಮಾನಮ-ನೇಱಿ ಬಂದಂ. ಇತ್ತ ಸೌಧರ್ಮೇಂದ್ರಂ ನಾಗದತ್ತವಿಕ್ರಿಯಾಸಮುದ್ಭೂತ ಮಪ್ಪ ಐರಾವಣಮನೇಱಿ ಬಂದಂ. ಉೞಿದ ದೇವೇಂದ್ರರುಂ ತಂತಮ್ಮ ವಿಮಾನಮನೇಱಿ ಚತುರ್ನಿಕಾಯಾಮರಜನಮುಂ ಸಪ್ತಾನೀಕಂಬೆರಸು ಬಂದು ಸಕಲಜಗತ್ಪೂಜಿತಮಪ್ಪ ಅಜಿತಜಿನನ ಕೇವಲಜ್ಞಾನೋತ್ಪತ್ತಿಕಲ್ಯಾಣಪೂಜೆಯಂ ಮಾಡಲೆಂದು ಮೂಱು ಸೂಟ್ ಬಲವಂದು [4]ಉ[4]ಪಹೃತಪುಷ್ಪಾಂಜಲಿಗಳು ಮವನತಮಣಿಕಿರೀಟರುಮಾಗಿ ಮುಂದೆ ನಿಂದು,

ಜಯಜಯ ಜಿನಾಧೀಶ ಕನಕಘನಸಂಕಾಶ
ಜಯಜಯ ಜಗತ್ತಿಳಕ ಕೃತಭವ್ಯಜನಪುಳಕ
ಜಯಜಯ ಗುಣಾಭರಣ ಸಕಲಜನಹಿತಕರಣ
ಜಯಜಯ ತಮೋವಿಲಯ ವಿಮಲತೇಜೋನಿಲಯ

---

1 ಯರ್ಸ್ವನಂ (ಕ). 2 ನಿಂ (ಕ). 3 ಶ್ರು (ಇಉಎ). 4 ದು (ಅಇಉಎ.)

ಜಯಜಯ ಮನೋಜಹರ ಸದ್ಧರ್ಮತೀರ್ಥಕರ
ಜಯಜಯ ಜನಾನಂದ ಕೇವಲಾಂಕುರಕಂದ
ಜಯಜಯ ಜನಾಧಾರ ನಿರ್ದಳಿತಸಂಸಾರ

ಜಯಜಯ ಪರಮೇಶ್ವರ ಪರಮದೇವ
ಮಹನೀಯಚರಿತ್ರ ಮಹಾನುಭಾವ
ನಿರ್ದೋಷ ನಿರಂಜನ ನಿರ್ವಿಕಾರ
ನಿರ್ದ್ವಂದ್ವ ನಿರತ್ಯಯ ನಿರ್ವಿಚಾರ
ಜಯ ನಿರ್ಮಲ ನಿರ್ಮದ ನಿರಪವಾದ
ಜಯ ನಿಷ್ಕಲ ನಿಶ್ಚಲ ನಿರ್ವಿಭೇದ
ಸರ್ವಜ್ಞ ಸರ್ವಗತ ಸರ್ವಸ್ವರೂಪ
ಸರ್ವಾಮರವಂದಿತ ವಿಗತಪಾಪ
ಜಯ ಸೂಕ್ಷ್ಮಸ್ಥೂಲಜ್ಞಾನನಿರತ
ಜಯ ಪರಮ ಪರಂಪರ ಜನ್ಮವಿರತ

ಜಯಪುಣ್ಯಜನಾರ್ಚಿತಪಾದನಿಧೇ
ರತ್ನತ್ರಿತಯಾಕರವಾರಿನಿಧೇ
ಜಯ ಸಕಲಸುರಾಸುರಲೋಕಗುರೋ
ಕಲ್ಪಾಮರನಾಯಕ ಕಲ್ಪತರೋ

ಜಯೋತ್ತುಂಗಸಿಂಹಾಸನಾಸೀನಮೂರ್ತೇ
ಜಗಚ್ಚಕ್ರವಿಖ್ಯಾತತೀರ್ಥೇಶಕೀರ್ತೇ
ಜಯ ದ್ರೋಹಮೋಹಾಹಿತೋತ್ಪಾತಕೇತೋ
ಮಹಾಘೋರಕರ್ಮಾರಿಸಂಹಾರಹೇತೋ

ಜಯ ತ್ರಿಲೋಕಮಂಡನ
ಪ್ರಚಂಡಕರ್ಮಖಂಡನ
ಪ್ರಜಾನುರಾಗವರ್ಧನ
ತ್ರಿಲೋಕಸೇವ್ಯ ನಿರ್ಧನ

ಪ್ರಶಾಂತಾಂತರಂಗಪ್ರಭಾಭಾಸ್ವರಾಂಗ
ಪ್ರಸಿದ್ಧಾಭಿಧಾನ ಪ್ರಮೋಕ್ಷಪ್ರ[1]ಧಾನ[1]

---

1 ಮಾಣ (ಇಉಎ).

ಪ್ರಣಷ್ಟಪ್ರಮಾದ ಪ್ರಕೃಷ್ಟ ಪ್ರಮೋದ
ಪ್ರಧೃಷ್ಯದ್ಗಭಸ್ತೇ ನಮಸ್ತೇ ನಮಸ್ತೇ

ವರಭಾವಲಯಂ ಪರ[1]ಭಾ[1]ವಲಯಂ
ಪರಿಭಾವಿಭವಂ ಪ್ರತಿಭಾವಿಭವಂ
ಹಿತಹೃತ್ತನಯಂ ಪರಿವೃತ್ತನಯಂ
ವರತೀರ್ಥಕರಂ ರುಚಿಂರ್ಾರ್ಥಕರಂ
ಭವತಾಪಹರಂ ದುರಿತಾಪಹರಂ
ವಿಗಳದ್ವೃಜಿನಂ ಪ್ರಣಮಾಮಿ ಜಿನಂ

ಜಯ ಜಿನೇಂದ್ರ ನತಸುರೇಂದ್ರ
ದುರಿತದೂರ ದಳಿತಮಾರ
ಹತವಿಕಾರ ಭುವನಸಾರ
ವಿಹತಮೋಹ ಚರಮದೇಹ
ಗುಣವಿಲಾಸ ಸುಖನಿವಾಸ
ಭವ್ಯಶರಣ ಶಾಂತಕರಣ
ವಿದಿತತತ್ವ ವಿಪುಲಸತ್ವ
ವಿಶದವೃತ್ತ ವಿಮಲಚಿತ್ತ
ಸಮವಿಧಾನ ಮದವಿಹೀನ
ಬೋಧನಿಲಯ ಕರ್ಮವಿಲಯ
ಗತಕಷಾಯ ರುಚಿರಕಾಯ
ಸುಭಗರೂಪ ರಹಿತಕೋಪ
ಕಾಲಕಾಲ ಧರ್ಮಶೀಲ
ಶುದ್ಧಭಾವ ಪುಣ್ಯಜೀವ
ಸರ್ವಭವ್ಯ ಲೋಕಸೇವ್ಯ
ಪರಮಪುಣ್ಯ ಜಯ ಶರಣ್ಯ

ಸ್ವಸ್ತಿ ಸಕಲಾಮರನರೋರಗಜನಾಧೀ
ಶಸ್ತುತಪದದ್ವಯ ಸಮಸ್ತವಿದುಷಾಂ ವ
ಸ್ತುಸ್ತವನತೋ ಗುಣಗಣಸ್ತವನತೋ ರೂ
ಪಸ್ತವನತೋ ಭವತು ಮಂಗಳಮಹಾಶ್ರೀಃ

---

1 ಮಾ (ಇಉಎ).

ಜಯ ನರಸುರವರಮೌಳಿಸ್ಫುಲಮಣಿಮಾಕ್ಯಲಾ
ಕಿರಣಗಣವಿಲಾಸಪ್ರೋಲ್ಲಸತ್ಪಾದಪೀಠ
ತ್ರಿದಶಶಿಖರಿಚೂಡಾರತ್ನತ್ರಯಾಲಂ
ಕರಣಗುಣವಿಶುದ್ಧಾ ತೀರ್ಥಕೃತ್ ತ್ವಾಂ ನಮಾಮಿ

ಎಂದು ನಾನಾಚ್ಛಂದೋಬಂಧದಿನಮರವೃಂದಂಬೆರಸಮರೇಂದ್ರಂ ಜಿನೇಂದ್ರವೃಂದಾರಕನನಾನಂದದಿನಭಿವಂದಿಸಿ

ಸುರಪತಿ ಬೆಸಸೆ ಸಮುಗ್ರಾ
ದರದಿಂದಂ ಸ್ವಾಪತೇಯಪತಿ ಸಕಲಜಗ
ದ್ಗುರುಗೆ ಜಗನ್ಮಂಡನಮಂ
ವಿರಚಿಸಿದಂ ಸಮವಸರಣಭೂಮಂಡ[1]ಲ[1]ಮಂ ೧೬

ಬಳಸಿದ ನೀರ್ಗಾದಿಗೆಗಳ
ಬಳೆದ ಮುಗಿಲ್ಗಳ ಬೆಡಂಗು ವಳಯಾಕೃತಿಯಿಂ
ಜಳಧಿದ್ವೀಪಾಕೃತಿಗಳ
ಬೆಳಗುಮನಿಱಿಸಿದುವು ಸಮವಸೃತಿಮಂಡಲದೊಳ್

ಪೆರ್ವೀದಿಗಳಿಂ ನೇಸಱು
ಮಿರ್ವಡಗಲುಮೆಸೆಯೆ ಬೀದಿಬೀದಿಗಳೆಲ್ಲಂ
ಸರ್ವಮಣಿತೋರಣಂಗಳ್
ಪರ್ವಿರೆ ಸೊಗಯಿಪುದು ಸಮವಸರಣವಿಲಾಸಂ ೧೮

ಕೊಳಗಳ ಮಾನಸ್ತಂಭಾ
ವಳಿಯ ಮಹಾಧ್ವಜದ ನಾಟ್ಯಶಾಲೆಯ ಕೋಷ್ಠಂ
ಗಳ ರಚನೆ[2]ಯಿಂದೆ[2] ಧನದಂ
ವಿಳಾಸಮಂ ಮೆಱೆ[3]ಯೆ ಬಣ್ಣಿಸಲ್ಕೆನ್ನಳವೆ ೧೯

ಶ್ರೀಮದಶೋಕಪ್ರಾಸಾ
ದಾಮರತ[3]ರು[3]ಚೈತ್ಯವೃಕ್ಷಸಿದ್ಧಾರ್ಥಮಹಾ
ಸಾಮಜರಿಪುವಿಷ್ಟರ ಲ
ಕ್ಷ್ಮೀಮಂಟಪಗಂಧಕುಟಿಯದೇನೊಪ್ಪಿದುದೊ ೨೦

---

1 ನ (ಅಕ). 2 ಯನೇಂ (ಇಉಎ). 3 ರ (ಇಉಎ).

ಅದೆಂತೆಂದೊಡೀಮಹೀತಳದಿಂ ತೊಟ್ಟು ಮೇಲೆ ಪಂಚಸಹಸ್ರಚಾಪೋ
ತ್ಸೇಧದಿಂ ಗಗನತಲದೊಳು ದ್ವಾದಶಯೋಜನಸಮವೃತ್ತಸಂಸ್ಥಾನಮುಮೇಕ
ಖಂಡಾಖಂಡಲನೀಲೋಪಲವಿನಿರ್ಮಿತಮುಂ ಪ್ರಥಮಾದಿದಿಕ್ಚತುಷ್ಟಯಪ್ರತ್ಯೇಕ
ಶೋಭಮಾನಪಾದಲೇಪೌಷಧಿಸಾಮರ್ಥ್ಯಸಂಪನ್ನ ದಿವಿಜ[1]ಮನುಜ[1]ತಿರ್ಯ
ಗ್ಜಾತಿ ಭವ್ಯಜೀವಸುಖಾರೋಹಣೋಚಿತ ವಿಚಿತ್ರರತ್ನಮಯವಿಂಶತಿಸಹಸ
ಸೋಪಾನವಿರಾಜಮಾನಮುಮಲ್ಲಿಂ ಪೊಱಗೆ ಮಕರತೋರಣಾಲಂಕೃತಮುಂ
ಮಣಿಮಯಸೋಪಾನಬಹುವಿಧಧ್ವಜರಾಜಿವಿರಾಜಿತಮುಂ [2]ಬಾಹ್ಯಾಂತರ[2] ಜಗತೀ
ತಲಯುಗಳಪ್ರತಿಷ್ಠಾಪಿತಪ್ರತ್ಯೇಕಾಷ್ಟೋತ್ತರಶತಕಾಳ ಮಹಾಕಾಳ ಪಾಂಡುಕ
ಪಿಂಗಳ ನೈಸರ್ಪ ಪದ್ಮ ಮಾಣವಕ ಶಂಖ ಸರ್ವರತ್ನನವನಿಧಿ [3]ಪರಿ[3]ಪೂರ್ಣಮುಂ
ಜ್ಯೋತಿಷ್ಕದ್ವಾರಪಾಲಕಸಮನ್ವಿತಮುಮಪ್ಪ ನಾಲ್ಕುಂಕನಕಮಯಗೋಪುರದ್ವಾರ
ದಿಂದಮೊಪ್ಪುವ ಸರ್ವರತ್ನಚೂರ್ಣಘಟಿತಮುಂ ಮಣಿಮಯಾಟ್ಟಾಳಕಾಳಂಕೃತ-
ಮುಮಪ್ಪ ಧೂಳೀಪ್ರಾಕಾರದಿಂದಮಲ್ಲಿಂದೊಳಗೆ ನಾಲ್ಕುಂ ಪೆರ್ವೀದಿಗಳ ನಡುವೆ
ಮೊದಲ ಗೋಪುರದ್ವಾರಕ್ಕೆ ಗಾವುದದಂತದೊಳು ಬೇಱೆ[3]ವೇಱೆ[3] ತಪನೀಯ-
ಗೋಪುರದ್ವಾರದಿಂ ರತ್ನಚೂರ್ಣಘಟಿತಮುಂ ಮಣಿಮಯಾಟ್ಟಾಳಕಾಳಂಕೃತ
ಮುಮಪ್ಪ ಪ್ರಾಕಾರದಿಂದಮಲ್ಲಿಂದೊಳಗೆ ನಾಲ್ಕು ಪೆರ್ವೀದಿಗಳ ನಡುವೆಯೊಂದು
ಗೋಪುರದ್ವಾರಕ್ಕೆ ಗಾವುದದಂತರದೊಳು ರಜತಚತುಷ್ಟಯಪ್ರಾಕಾರತ್ರಯಂಗ
ಳೊಳು ಪ್ರಥಮಪ್ರಾಕಾರದೊಳಗಣ ಮಹಾವೀದೀಭಾಗದೊಳಮರನಾಥ, ಮಹಿಷ
ನಾಥ ಸರಿನ್ನಾಥ ಧನನಾಥಸನಾಥಮಪ್ಪ ದಿಕ್ಪಾಲರ ಕೇಳೀಪ್ರಾಸಾದಂಗಳಿಂದಂ
ದ್ವಿತೀಯಪ್ರಾಕಾರದೊಳಗಣ ಬನದ ನಡುವಣ ವೀದೀಭಾಗದೊಳಗಣ ನೈರೃತಿ-
ಪವಮಾನೇಶಾನಕತಾರರಮ್ಯಹರ್ಮ್ಯಂಗಳಿಂದಮಿಂತ[4]ಷ್ಟ[4] ಲೋಕಪಾಲನಿಲಯಂ-
ಗಳಿಂದಂ ತ್ರಿಕೋಣಚತುಷ್ಕೋಣಸಮವೃತ್ತಂಗಳಪ್ಪ ಬಾವಿಗಳಿಂದೊಪ್ಪುವೆರಡುಂ
ಬನದಿನತ್ತತೃತೀಯಪ್ರಾಕಾರದೊಳಗೆ ವೈಡೂರ್ಯಮಯಮುಂ ಕಾಂಚನಮಯಮುಂ
[5]ಸ್ವರ್ಣ[5]ರತ್ನಮಯಮುಮಾಗಿ ಯಥಾಕ್ರಮದಿನೆಂಟುಂ ನಾಲ್ಕುಂ ನಾಲ್ಕುಂ-
ಬಳ್ಳಿಡಿಯುಮಪ್ಪ ಮೂಱುಂ ಪೀಠಂಗಳ ಮೇ[6]ಗನ[6]ರ್ಘ್ಯ ರತ್ನಮಯಜಿನ-
ಪ್ರತಿಮಾಚತುಷ್ಟಯಾಲಂಕೃತ ಚತುರಸ್ರಮೂಲಭಾಗದೊಳಂ ಸಮವೃತ್ತಮಪ್ಪಗ್ರ-
ಭಾಗದ ಮೇಗೆ ರತ್ನಫಲಂಗಳ ನಾಲ್ಕುಂ ದೆಸೆಯೊಳಮಮರೇಂದ್ರಾಭಿಷಿಕ್ತಮಾಗಿರ್ದ
ಜಿನಬಿಂಬಂಗಳೊಳಮಾಲೋಲಕೇತುಜಾಲಘಂಟಾಜಾಲ ಚಾಮರಮಾಲೆಗಳೊಳಂ
ವಿಚಿತ್ರಾತಪತ್ರತ್ರಯಾಲಂಕೃತಶಿಖರಂಗಳೊಳಂ ನೆರೆದು ಕನಕಮಯಮಣಿಮಯ-

---

1 (ಅಕ) ಗಳಲ್ಲಿಲ್ಲ. 2 ಬಹುತಲ (ಕ). 3 ಸಂ (ಇಉಎ). 4 ಪ್ಪ (ಕ).
5 ಸರ್ವ (ಅಕ). 6 ಲ (ಇಉಎ).

ಮಾನಸ್ತಂಭಚತುಷ್ಟಯಪ್ರಾಕಾರಂಗಳೊಳಗೆ ಮರುಜ್ಜಿನಮಜ್ಜನೋಚಿತಂಗಳುಂ ರತ್ನಮಯಸೋಪಾನಂಗಳುಂ ಕನಕಮಯತಟಿಗಳುಮಪ್ಪ ನಂದೆಯುಂ ನಂದೋತ್ತರೆಯುಂ ನಂದಾವತಿಯುಂ ನಂದಿಘೋಷೆಯುಂ [1]ವಿ[1]ಜಯೆಯುಂ ವೈಜಯಂ[2]ತೆ[2]ಯುಂ ಜಯಂತೆಯುಮಪರಾಜಿತೆಯುಮಶೋಕೆಯುಂ ಸುಪ್ರಬುದ್ಧೆಯುಂ ಕುಮುದೆಯುಂ ಪುಂಡರೀಕೆಯುಂ ಆನಂದೆಯುಂ ಮಹಾನಂದೆಯುಂ ಸುಪ್ರತಿಷ್ಠೆಯುಮೆಂದಿಂತು ಪೂರ್ವಾದಿಯಾಗೊಂದೊಂದು ಮಾನಸ್ತಂಭಕ್ಕೆ ನಾಲ್ಕುಗೆಯ್ದು ಸಮಚತುರಸ್ರಂಗಳಪ್ಪ ಪದಿನಾಱು ಬಾವಿಗಳಿಂದಮವಱ ಪೊಱಗಣ [3]ಕೋಣ್ಗ[3]ಳೊಳ್ ಪಾದಪ್ರಕ್ಷಾಲನೋಪಯೋಗ್ಯಮಾಗಿರ್ದ ಕನಕಕುಂಡಯುಗದಿನೊಪ್ಪಿ ನೃತ್ಯನ್ನಿಳಿಂಪಸುಂದರೀಜನಂಗಳಿಂದಮನೇಕಸ್ತುತಿಶತಮುಖರಾ ಶತಮುಖಪ್ರಮುಖಸುರೇಂದ್ರವೃಂದಾರಕರಿಂದಲಂಕರಿಸಿ ಮಿಥ್ಯಾಜ್ಞಾನಿಯ ಮಾನಮುಂ ಸ್ತಂಭಿಸುವ ಮಾನಸ್ತಂಭಂಗಳಿನೊಂದು ಮಾನಸ್ತಂಭದಿನಾಮಾನಸ್ತಂಭಂಬರಮೇಕೈಕಜಿನಗೃಹಾಂತರಿತವಾಪೀಕೂಪ ಕಮಲಾಕರಮಂಡಿತವನಷಂಡಮಧ್ಯಗತಪಂಚಪಂಚಪ್ರಾಸಾದಪಂಕ್ತಿಗಳಿಂದಂ ಮಾನಸ್ತಂಭದಿರ್ಕೆಲದೊಳಿರ್ದ ಮಣಿತೋರಣಶತಂಗಳಿಂದಂ ಮಾನಸ್ತಂಭದಿಂ ಕಿಱುದಂತರಂಬೋದಲ್ಲಿ ಮುಂ ಪೇೞ್ದ ತೆಱದೊಳೆ ರತ್ನಮಯಸೋಪಾನನಾನಾವಿಧಪತಾಕಾಭಿರಾಮ ಬಹಿರಂತರ್ಜಗತೀತಲಂಗಳೊಳ್ ನಿಱಿಸಿದಷ್ಟಮಂಗಳನವನಿಧಿಪರೀತಮುಂ ಜ್ಯೋತಿಷ್ಕದೌವಾರಿಕಸಮೇತಮುಮಪ್ಪ ರಜತಮಯಗೋಪುರದ್ವಾರದ ಶಾತಕುಂಭವೇದಿಕಾಭ್ಯಂತರದೊಳ್ ವಿಸ್ಫುರಿತಸ್ಫಟಿಕಮಣಿವಿಲಸದುಭಯತಟಘಟಿತಹಾಟಕಸೋಪಾನಶ್ರೇಣಿಯಿಂದಂ ಸಲಿಲಕೇಳೀನಿರತನಿಳಿಂಪಖಚರಯುವತೀಜನಮನೋಹರಮುಮಖಿಳಜಲಚರಜಲಕುಸುಮಸಂದೋಹಸುಂದರಮುಮ — ಹೀಯಮಾನವಿಮಲಸುರಭಿಜಲಭರಿತಮುಮಪ್ಪ ನೀರ್ಗಾದಿಗೆಯಿಂದಮೆರಡನೆಯ ಗೋಪುರದ್ವಾರದಿಂ ಮಣಿತೋರಣಶತದಿಂದೊರ್ಗಾವುದದಂತರದೊಳ್ ಮುಂನೆ ಪೇೞ್ದಂತೆ ಸೋಪಾನವಿವಿಧಧ್ವಜಾಷ್ಟಮಂಗಳ ನವನಿಧಿಜ್ಯೋತಿಷ್ಕದಂಡಧರಪರಿವೃತಸರ್ವರತ್ನರಚಿತಮಪ್ಪ ರೌಪ್ಯಮಯಗೋಪುರದ್ವಾರದ ಕನಕಮಯವೇದಿಕೆಯಿಂದೊಳಗೆ ಬಕುಳತಿಳಕಪುನ್ನಾಗಸಹಕಾರಕರ್ಣಿಕಾರವಿಚಕಿಲನಿಚಯಮಂದಮಕರಂದಸಮಾಸಕ್ತಮತ್ತಮಧುಕರ[4]ವಾಳಕೀರ[4]ಕೋಕಿಳಮುಖರಸಕಲರವರಮಣೀಯಮುಂ ನಿಳಿಂಪದಂಪತೀಶತಕೇಳೀವಿಳಾಸಾಕೃತಕೃತಕಗಿರಿಶತಕಮನೋಹರಮುಮಪ್ಪ ವಲ್ಲೀವನಂಗಳಿಂದಂ ಮೂಱನೆಯ ಗೋಪುರದ್ವಾರದಿಂದತ್ತ ಮಣಿತೋರಣಶತಸಮೇತಯೋಜನಾಂತರದೊಳುನ್ನತಸೋಪಾನವಿಚಿತ್ರವಸ್ತ್ರಧ್ವಜಾಷ್ಟಮಂಗಳನವನಿಧಿಪರ್ಯಂತಮುಂ ಕುಬೇರಕುಮಾರಪ್ರತಿಹಾರಕರಕ್ಷಿತಮುಮಪ್ಪ ರೂಪ್ಯಗೋಪುರ

---

1 ವೆ (ಇಉಎ). 2 ತಿ (ಇಉಎ). 3 ಕೋಣಂಗ (ಇಉಎಕ). 4 ವಾಚಾಳ(ಅಕ).

ದ್ವಾರದಿಂ ಕಾರ್ತಸ್ವರಪ್ರಾಕಾರದಿಂದೊಳಗೆ ಅಶೋಕ ವಕುಳತಿಲಕ ಹಿಂತಾಲ ತಮಾಲಜಂಬುಜಂಬೀರ ಲವಂಗನಾರಂಗಾದ್ಯನೇಕಾನೋಕಹಾನೀಕಕಮನೀಯಮುಮನೇಕಕೃತಕಗಿರಿಕೃತಕನದೀಪುಳಿನತಳಕೇಳೀವಿಳಸಿತಕಳಹಂಸಚೈತ್ಯವೃಕ್ಷೋಪಲಕ್ಷಿತಂಗಳಾಗಿ ನಾಲ್ಕುಂ ದೆಸೆಯೊಳ್ ಅಶೋಕವನಸಪ್ತಪರ್ಣವನಚಂಪಕವನಚೂತವನಂಗಳಿಂದಂ ಮಣಿತೋರಣಶತದಿನೆಸೆವ ಮಹಾವೀಥಿಯಿಕ್ಕೆಲದೊಳಂ ಒಂದೊಂದು ನೆಲಂಗಳೊಳ್ ಮೂತ್ತೆರಡುಗೆಯ್ದ ನಾಟಕಶಾಲೆಯೊಂದೊಂದು ನಾಟಕಂಗಳೊಳ್ ಮೂವತ್ತಿರ್ವರು ನರ್ತಿಸುತಿರ್ಪ ಸುರೇಂದ್ರಸೌಂದರಿಯರಿಂದೊಪ್ಪುವ ಮೂಱುಮೂಱು ನೆಲೆಯ ಧವಳವರ್ಣದೆರಡೆರಡು ನಾಟಕಶಾಲೆಗಳಿಂದಮವಱ ಮುಂದಣಿಕ್ಕೆಲದೆರಡು ಧೂಪಘಟಂಗಳಿಂದಂ ನಾಲ್ಕನೆಯ ಗೋಪುರದ್ವಾರದಿಂದೊಳಗೆ ಯೋಜನಾಂತರದೊಳ್ ಸರ್ವರತ್ನಘಟಿತರತ್ನಮಯಸೋಪಾನನಾನಾಧ್ವಜಾಷ್ಟಮಂಗಳ ನವನಿಧಿಪರೀತಮುಂ ಯಕ್ಷದೌವಾರಿಕರಕ್ಷ್ಯಮುಮಪ್ಪ ರಜತಗೋಪುರದ್ವಾರದ ಕನಕಮಯವೇದಿಕಾಭ್ಯಂತರದೊಳ್ ಪಂಚವಿಂಶತಿಚಾಪಾಂತರಮಾಗಿ ಧ್ವಜಂ ಗರುಡಗವೇಂದ್ರಮೃಗೇಂದ್ರಹಂಸಮಯೂರಕಮಲಮಾಲಾಚಕ್ರವಸ್ತ್ರಗಜಲಾಂಛನಮಪ್ಪ ದಶವಿಧದಿನೆಸೆದು ದಶಾರ್ಧರತ್ನಮಯಸ್ತಂಭಾಗ್ರದೊಳಷ್ಟಾಶೀತ್ಯಂಗಳಿಂದಂ ನೂಱೆಂಟಾಗಿ ಸಾಸಿರದೆಂಬತ್ತಕ್ಕುಂ ಅವೆಲ್ಲಂ ನಾಲ್ಕುಂ ದೆಸೆಯೊಳಮಾಗಿ ನಾಲ್ಸಾಸಿರದ [1]ಮುನ್ನೂ[1]ಱಪ್ಪತ್ತುಮಹಾಧ್ವಜಂಗಳಿಂದಮೊಂದೊಂದರ್ಕೆ ನೂಱೆಂಟಾಗೆ ನಾಲ್ಕುಲಕ್ಕೆ[2]ಯುಮಱುವತ್ತು[2]ಸಾಸಿರದಯ್ನೂಱಱುವತ್ತು ಪರಿವಾರಧ್ವಜಂಗಳಿಂದಂ ಐದನೆಯ ಗೋಪುರದ್ವಾರದಿಂದೊಳಗೆ ಮಣಿತೋರಣಶತಸಹಿತಯೋಜನಾಂತರದೊಳ್ ಪೂರ್ವೋಕ್ತ ವರ್ಣನೋಪೇತಜ್ಯೋತಿರಂಗ ಪ್ರದೀಪಾಂಗ ವಸ್ತ್ರಾಂಗ ತೂರ್ಯಾಂಗ ಭೋಜನಾಂಗ ಮಧ್ಯಾಂಗ ಭೂಷಣಾಂಗ ಗೃಹಾಂಗ ಮಾಲ್ಯಾಂಗ ಭಾಜನಾಂಗಮುಮೆಂಬ ದಶವಿಧಕಲ್ಪವೃಕ್ಷಾಲಂಕೃತಮುಂ ಪ್ರಾಕಾರಾಭ್ಯಂತರಪೀಠತ್ರಯಾಧಿಷ್ಠಿತಮುಮಪ್ಪ ನಾಲ್ಕುಂದೆಸೆಯ ನಮೇರು ಮಂದಾರ ಪಾರಿಜಾತ ಮಹಿಜಾತ ಮೂಲಸ್ಥಿತ ಭಗವದಭಿಮುಖಕಾಯೋತ್ಸರ್ಗಸಿದ್ಧಪ್ರತುಮೆಗಳಿಂದಂ ಅನರ್ಘ್ಯರತ್ನ ತೋರಣಶತಶೋಭಿತವೀಥೀವಿಭಾಗೋಭಯಪಾರ್ಶ್ವಸ್ಥಿತಾ[3]ಶ್ವೇ[3]ತಧವಳಂಗಳಿಂ ದ್ವಾತ್ರಿಂಶತ್ಪ್ರೇಕ್ಷಣಿಕಪ್ರೇಕ್ಷಣೀಯಮುಮಪ್ಪನೇಕನಾಟ್ಯಶಾಲಾದ್ವಯಂಗಳಿಂದಮವಱ ಮುಂದಣಿಕ್ಕೆಲದೊಳಂ ಅತಿಬಹಳಸುರಭಿಪರಿಮಳಕಾಳಾಗರುಧೂಪಧೂಮಶ್ಯಾಮಳಿತ[4]ಶೇ[4]ಖರಂಗಳಪ್ಪೆರಡುಂ ಧೂಪಘಟಂಗಳಿಂದೆಯುಮಾಱನೆಯ ಗೋಪುರದ್ವಾರದಿಂದೊಳಗೆ ಯೋಜನಾಂತರಂಬೋದಲ್ಲಿ ರತ್ನಮಯಸೋಪಾನಧ್ವಜಮಂಗಳನವನಿಧಿಸಮೇ-

---

1 ಮೂನೂ (ಕ). 2 ಮು ಮುವತ್ತಾಱು (ಇಉಎ). 3 ತ್ರೀ (ಅಇಉಎಕ).
4 ಶಿ (ಇಉಎ).

ತಮುಂ ರತ್ನದಂಡಧರರತ್ನೇಂದ್ರರಕ್ಷಿತಮುಮಪ್ಪ ರಜತಗೋಪುರದ್ವಾರದ ಹೇಮಮಯವೇದಿಕಾಭ್ಯಂತರದೊಳ್ ವಜ್ರಾಧಿಷ್ಠಾನಬಂಧಬಂಧುರಮುಂ ಶಾತಕುಂಭಕುಂಭಸ್ತಂಭಸಂಭೃತಮುಂ ಚಂದ್ರಕಾಂತೋಪಲಭಿತ್ತಿಕಾಂತಮುಂ ದ್ವಿತಲತ್ರಿತಲಚತುಸ್ಥಲ ಸಪ್ತಸ್ಥಲಾದ್ಯಲಂಕೃತ ಜಿನಾಭಿಷೇಕ ಜಿನಚರಿತಗೀತನರ್ತನವಿನೋದದಿಂ [1]ನಿರಂತರ[1]ಸುರಮಿಥುನಶತಸನಾಥಮುಂ ಮರುದಾಂದೋಳಿತಾನೇಕಪತಾಕಾಕೀರ್ಣಕಮುಂ ಸ್ವಸ್ತಿಕಸರ್ವತೋಭದ್ರವಲಂಭಿಚ್ಛಂದನಾನಾಚ್ಛಂದಸುಂದರಮುಮಪ್ಪ ಮಹಾಪ್ರಸಾದಪರಂಪರೆಯಿಂದಂ ಮಹಾವೀಥೀಮಧ್ಯದೊಳ್ ಮಣಿತೋರಣಶತಾಂತರಿತಂಗಳುಂ ವಿಚಿತ್ರಛತ್ರತ್ರಯಂಗಳುಂ ಚಂಚಚ್ಚಮರರುಹಮಣಿಕಿಂಕಿಣೀಮಾಳಿಕಾಳಂಕೃತ ಜಿನಸಿದ್ಧಬಿಂಬಕದಂಬಸಂಕೀರ್ಣಂಗಳುಮಪ್ಪ ಸಕಳಭವ್ಯಜನಾಭ್ಯರ್ಚಿತಶೋಣಮಾಣಿಕ್ಯಮಯಸ್ತೂಪಂಗಳಿಂದಮೇಟಿನೆಯ ಗೋಪುರದ್ವಾರದಿಂ[2]ದವೊಳಗರ್ಧ[3]ಯೋಜನಾಂತರದೊಳ್ ಸೋಪಾನಧ್ವಜಮಂಗಳನವನಿಧಿರಮಣೀಯಮುಂ ಮಣಿಖಚಿತದಂಡಧರ ಕಲ್ಪಾಮರದಂಡಧರ ಕಲ್ಪಾಮರಪರಿಪಾಳಿತಮುಮಪ್ಪ ಮರಕತಮಣಿಮಯ ಗೋಪುರದ್ವಾರಕಾಶಸ್ಫಟಿಕಮಯಭಿತ್ತಿಗಳೊಳಂ ಉಭಯೋಭಯವೀಥ್ಯಂತರಾಳಂಗಳೊಳ್ ನವಮವೇದಿಕೆಯಿಂ ಪ್ರಾಕಾರಾಭ್ಯಂತರದೊಳ್ ಶ್ರೀಮಂಟಪಮಿರ್ದ್ದ ಆಕಾಶಸ್ಫಟಿಕಮಯನವಮವೇದಿಕೆಯಿಂ ತೊಟ್ಟು ಧೂಳೀಪ್ರಾಕಾರಂಬರಂ ನೀಳ್ದ ಮಹಾವೀಥಿಗಳಿಕ್ಕೆಲದೊಳಂ ಕ್ಷುಲ್ಲಕದ್ವಾರರಾಜಿವಿರಾಜವಿಮಳಸ್ಫಟಿಕಭಿತ್ತಿಗಳೊಳಂ ಉಭಯೋಭಯವೀಥ್ಯಂತರಾಳಂಗಳೊಳ್ ನವಮವೇದಿಕೆಯಿಂ ತೊಟ್ಟಾಕಾಶಸ್ಫಟಿಕಪ್ರಾಕಾರಂಬರಂ ಬಳಿದೆರಡಾಕಾಶಸ್ಫಟಿಕಭಿತ್ತಿಗಳೊಳಂ ವಿಭಾಗಂ ಬಡೆದ ಪನ್ನೆರಡು ಕೋಷ್ಠಂಗಳೊಳ್ ದಕ್ಷಿಣಾನುಕ್ರಮದೊಳೆ ಸಿಂಹಸೇನಪ್ರಮುಖಗಣಧರಗಣಮುಂ ಕಲ್ಪಾಮರಕಾಂತಾಸಂತತಿಯುಮುಪಾಸಕಾಂಗನಾಸಂಗತಗಣಿನೀಗಣಮುಂ ಜ್ಯೋತಿರಮರಯುವತಿಸಮಿತಿಯುಂ ವಾನವ್ಯಂತರನಿತಂಬಿನೀನಿಕುರಂಬಮುಂ ಭವನವಾಸಿಕವನಿತಾಸಮೂಹಮುಂ[3]+[3] [4]ಥ[4]ನಜಸಂಕುಲಮುಂ ಜ್ಯೋತಿರ್ದೇವಸಮೂಹಮಯಮುಂ ಕಲ್ಪದಿವಿಜಸಮುದಯಮುಂ ಮಾನವನಿವಹಮುಂ ತಿರ್ಯಕ್ತತಿಯುಂ ಎಂಬೀ ದ್ವಾದಶಗಣಂಗಳಿಂ ನೆಱೆದನುಕ್ರಮದೊಳಿರ್ದ ಸಮವಸರಣಮಂಡಲದೊಳ್ ತೀರ್ಥಕರಪರಮದೇವರ ದೇಹೋತ್ಸೇಧದ್ವಾದಶಗುಣೋತ್ಸೇಧಂಗಳಪ್ಪ ಗೋಪುರಮಾನಸ್ತಂಭಪ್ರಾಸಾದಚೈತ್ಯಾಲಯಚೈತ್ಯವೃಕ್ಷತ್ರಿಕ ಸರ್ವಧ್ವಜಸ್ತಂಭಮುಂ,ಸಿದ್ಧಾಯತನಪಾದಪಸ್ತೂಪಲಕ್ಷ್ಮೀಮಂಟಪಾಶೋಕವೃಕ್ಷಂಗಳೆಂಬಿವಱಿಂ ತೀರ್ಥಕರಚತುರ್ಗುಣೋತ್ಸೇಧಮುಂ ಕ್ರಮಹಾನಿಯು–

1 ನಿರತ (ಅಕ). 2 ದೊಳಗೆ (ಕ). 3 ಭವನಜ ಸಮಾಜಮುಂ (ಇಉಎ). 4 ವ (ಈ).

ಮಪ್ಪ ಮಹಾಪ್ರಾಕಾರಂಗಳಿಂ ಸಮರುಂದ್ರಮಪ್ಪ ವೇದಿಕೆಗಳಿಂ ಅವಕ್ಕೆಸಾತಿರೇಕಂ ಗಳಪ್ಪ ತೋರಣಂಗಳಿಂದಷ್ಟಮಗೋಪುರದ್ವಾರದಿಂದೊಳಗೆ ಗವ್ಯೂತ್ಯಂತರಾಳದೊ- ಳಿರ್ದ್ದ ವೈಡೂರ್ಯಕನಕಸರ್ವರತ್ನಮಯಂಗಳುಮಾಗಿ ಯಥಾಕ್ರಮದಿನೆಂಟಃಂ ನಾಲ್ಕುಂ ನಾಲ್ಕುದಂಡೋಚ್ಛ್ರಿತಂಗಳುಂ ಪಂಚಾಶದಧಿಕಸಪ್ತಶತಸಾರ್ಧಸಪ್ತಶತಂ ಸಹ- ಸ್ರಾರ್ಧಚಾಪವಿಷ್ಕಂಭಂಗಳುಮಪ್ಪ ವ[1]ರಮೇಗಣ[1]ನುಕ್ರಮದೊಳೆ ನಾಲ್ಕುಂದೆಸೆ- ಯೊಳೇಕಚಾಪೋತ್ಸೇಧಧರ್ಮಚಕ್ರಧರಯಕ್ಷಕುಮಾರರಿಂದಂ ದಶವಿಧಮಹಾಧ್ವಜಂ ಗಳಿಂದಮಷ್ಟಮಂಗಳನವನಿಧಿಗಳಿಂದಮೊಪ್ಪುವ ಮೂಱುಂ ಪೀಠಂಗಳಿಂದಂ ತೃತೀ- ಯಪೀಠದ ಮೆಲೆ ಷಡ್ದಂಡಶತವಿಸ್ತರಮುಂ ನವದಂಡಶತೋತ್ಸೇಧಮುಮಪ್ಪ ಗಂಧಕುಟಿಯ ಮಧ್ಯಭಾಗಮನಲಂಕರಿಸಿ ನಾನಾರತ್ನಮಯಮಪ್ಪ ಪೀಠಮನು- ತ್ತುಂಗಸಿಂಹಾಸನಮುಮಂ ನಾಲ್ಬೆರಲಂತರಮಂ ಮುಟ್ಟದೆ ಪಂಚಾಶದಧಿಕಚತು- ಶ್ಶತಚಾಪೋತ್ಸೇಧನುಂ ಸಮಚತುರಸ್ರಶರೀರಸಂಸ್ಥಾನನುಮಷ್ಟೋತ್ತರಶತಲಕ್ಷ- ಣನುಂ ನವಶತವ್ಯಂಜನಾಲಂಕೃತನುಂ ಅಖಿಲಭುವನಭವ್ಯಜನನಯನಕುವಲಯ- ವನಶರದಮೃತಕರನಿಕಾಯಮಾನ ಶಾತಕುಂಭವರ್ಣನುಂ ಪ್ರಭಾವಳಯವಿರಚಿತ ಸಕಲಜ್ಯೋತಿರ್ಲೋಕವಿಳಸದಂಶುಮಾಲಿಮಂಡಳನುಂ ಜಗತ್ತ್ರಯಾಶ್ಚರ್ಯಪ್ರಕಾಶನ ಕರಾತಪತ್ರತ್ರಯನುಂ ಯಕ್ಷಕುಮಾರಕರತಳಾಂದೋಳಿತಕ್ಷೀರಾಂಬೋಧಿವೀಚೀನಿ- ಚಯ ರುಚಿರಚತುಷ್ಷಷ್ಟಿಚಂಚಜ್ಜ್ವಾರುಚಾಮೀಕರ ಚಾಮರಕಲಾಪನುಂ ಸಕಲ ವಿನೇಯಜನವಿಲೋಚನ ಚಂಚರೀಕನಿಚಯನಿಚಿತಾಶೋಕಾನೋಕಹನುಂ ಸಾ- ...ವೃಂದಾರಕವೃಂದವಂದ್ಯಮಾನಮಂದ್ರನಿನದ ಗಭೀರದುಂದುಭಿಯುಂ ಶೂನ್ಯೀ ಕೃತತ್ರಿಭುವನೋದ್ಯಾನಮಧುಕರನಿಕರಾರಬ್ಧ ಮಧುಸುಧಾಪಾನಕಸಂತಾನಕಪ್ರಕೃತಿ ಸುರತರುಕುಸು[2]ಮ[2]ಸಾರನುಂ, ಅಶೇಷಭಾಷಾಸ್ವಭಾವಸರ್ವಾರ್ಥಮಾಗಧೀ ಯಪ- ರಾರ್ಧ್ಯಭಾಷಾಸುಧಾಸಾರಸಂತಸಂತರ್ಪಿತ ದಿವಿಜಮನುಜತಿರ್ಯಗ್ವಿನೇಯನುಮಾ ವಿರ್ಭೂತ ಚತುಸ್ತ್ರಿಂಶದತಿಶಯನುಮಮರಪತಿಸಹಸ್ರಚಕ್ಷುರಪರ್ಯಾಪ್ತ ಸೌಂದ- ರ್ಯಾವಲೋಕನುಮಹಮಹಮಿಕಾಪ್ರಣಮದಮರಕೋಟಿ ಮಕುಟಸಂಘಟ್ಟವಿಘಟ್ಟ ಮಾನಮುಕ್ತಾಮಣಿಪ್ರಕರವಿಹಿತಪಾದಪೀಠತಟೋಪಕಂಠತಳಮಹೀತಲೋಪಹಾರ ನುಮಾಗಿ ಧನಪತಿವಿನಿರ್ಮಿತಸಮವಸರಣಮಂಡಲಮನಲಂಕರಿಸಿ—

ವಿಲಸತ್ಕೈವಲ್ಯಬೋಧಾಧಿಗತಸಕಲತತ್ವಾರ್ಥನಾರ್ಹಂತ್ಯಲಕ್ಷ್ಮೀ
ನಿಲಯಂ ಸರ್ವಾಮರಾಧೀಶ್ವರಮಕುಟಮಣಿಜ್ಯೋತಿರೌಘಪ್ರಸೂನಾ

1 ಮೆ ಗಣಾ (ಕ). 2 ಮಾ (ಇಉಎ).

ವಲಿಮಾಲಾಭ್ಯರ್ಚಿತಾಂಘ್ರಿದ್ವಯನಪಗತಘಾತಿದ್ವಿಷದ್ವೀರ್ಯನಿರ್ದಂ
ಕಲಧೌತಕ್ಷ್ಮಾಧರಂಬೊಲ್ ಸಮವಸರಣದೊಳ್ ಧರ್ಮತೀರ್ಥಾಧಿನಾಥಂ ೨೧

ಇದು ಸಕಲ ಮುನೀಂದ್ರ ವೃಂದ ವೃಂದಾರಕ ಶ್ರೀಮದಜಿತಸೇನ ಭಟ್ಟಾರಕ

ಶ್ರೀಪಾದಪದ್ಮ ಪ್ರಸಾದಾಸಾದಿತ ಶ್ರೀರತ್ನತ್ರಯಾಲಂಕೃತ

ಶ್ರೀಮದಭಿನವ ಕವಿಚಕ್ರವರ್ತಿ

ಕವಿರತ್ನ ವಿರಚಿತ

ಶ್ರೀದಾನಚಿಂತಾಮಣಿ ವಿನಿರ್ಮಾಪಿತ

ಶ್ರೀಮದಜಿತತೀರ್ಥಕರ ಪುರಾಣತಿಲಕದೊಳ್

—ಸಮವಸರಣವರ್ಣನಂ ಸಪ್ತಮಾಶ್ವಾಸಂ—

ಅಷ್ಟಮಾಶ್ವಾಸಂ

ಶ್ರೀಸಮವಸರಣಲಕ್ಷ್ಮೀ
ಭಾಸುರನಮರಾಸುರಾರ್ಚನಾವ್ಯಾಪಿತಸಿಂ
ಹಾಸನನವನತಸಕಲಸು
ರಾಸುರನಭಿವಂದ್ಯಚರಿತನಪಗತದುರಿತಂ ೧

ಅಂತೆನಿಸಿರ್ದಶೇಷಜಗದತಿಶಯಾವಹಪುಣ್ಯಪುಂಜಾಯಮಾನಮೂರ್ತಿಯ - ನಮರಪ[1]ತಿ[1]ಸಂಗೀತಕಸಂಗೀಯಮಾನಕೀರ್ತಿಯಂ ಜಿನೇಂದ್ರವೃಂದಾರಕನಶ್ರೀಂ - ಮದಜಿತಭಟ್ಟಾರಕನನಮರಾಧೀಶ್ವರನನೇಕಸ್ತುತಿಶತಸಹಸ್ರಂಗಳಿಂ ಸ್ತುತಿಯಿಸಲು ಬಗೆದು ಬದ್ಧಾಂಜಲಿಯಾಗಿ,

ಶ್ರೀಸಕಲಸುರಾಸುರಪತಿ
ಭಾಸುರಮಣಿ ಮುಕುಟಘಟ್ಟಿತಾಂಘ್ರಿದ್ವಯಸಿಂ
ಹಾಸನಶಿಖರಸ್ಥಿತಚರ
ಣಾ ಸಕಲಜನಕ್ಕೆ ನೀನೆ ಕಲ್ಪಾಂಘ್ರಿಪನೈ ೨

ದಿವದಿಂದಂ ನೀಂ ಗರ್ಭ
ಕ್ಕವತರಿಸದ ಮುನ್ನೆ ಮೂಱು ಕೋಟಿಯುಮರೆಯುಂ
ದಿವಸಕ್ಕಂ ಕಱ[3]ವೊಂ ವೈ
ಶ್ರವಣಂ ಜಿನ[2]ನೀಂಬೊ[2]ಲಧಿಕಪುಣ್ಯರುಮೊಳರೇ ೩

ಅನಿಮಿಷಸುಂದರಿಯರ್ ನಿಜ
ಜನನಿಗೆ ಜಿನ ಮಾಡಿ ಗರ್ಭಸಂಶೋಧನಮುಂ
ವಿನಯಂಬೆರಸೋಲ್[3]ಗಿ[3]ಸುವ
ರೆನಿಸಿದ ಪುಣ್ಯಮನಗಣ್ಯಮುಂ ಬಣ್ಣಿಪರಾರ್ ೪

---

1 ರಿ (ಅಇಉಎ). 2 ನಿಮ್ಮೊ (ಕ). 3 ಯಿ (ಇಉಎ).

ದಿವಿಜರ್ ಮಜ್ಜನವಳ್ಗರ್
ದಿವಿಜನಗಂ ಪೀಠವಾಗೆ ಪಧಿಘೃತದುಗ್ಧಾ
ರ್ಣವಷಂಡಕಾಂಡವಾದು
ತ್ಸವಮುನದೇವೊಗಟ್ಬುದಿಫಬಲಾಹಕಪವನ ೫

ಬಱಿದಾದುದು ಜಲಧಿಜಲಂ
ಕಿಱಿದಿರ್ದುದು ಮೇರು ನಿನ್ನ ಭರದಿಂ ಸುಯ್ಯೊಳ್
ತಱಗೆಲೆಗಳಂತೆ ಪಾಱಿದ
ರಱಿಕೆಯ ಸುರರೇಂ ಕುಮಾರಚರಿತಂ ನಿನ್ನ ೬

ಈವಯಸದೊಳೀರೂಪಿನೊ
ಳೀವಿಭವದೊಳಜಿತ ನೀನೆ ತೊಱೆದೈ ರಾಜ್ಯ
ಶ್ರೀವಲ್ಲಭೆಯಂ ತೊಱೆಯಲ್
ದೇವ ಪೆಱರ್ ತರಳಚಿತ್ತರೇಂ ನೆಱೆದಪರೆ ೭

ಕುಲತಿಲಕ ಸಕಲಜಗತೀ
ತಲತಿಲಕ ಕುಬೇರರಚಿತಮುಚಿತಶ್ರೀಯಂ
ಕಳಕಳಿಪುದು ಸಕಲಶ್ರೀ
ವಿಳಾಸಮಂ ನಿನ್ನ ಸಮುವಸರಣವಿಲಾಸಂ ೮

ನಯನತ್ರಯಯುತ ರತ್ನ
ತ್ರಯನಿಧಿ ಲೋಕತ್ರಯಂ ಸಲೋಕಿತತಾಳ
ತ್ರಯ ಪಾಂಡುರಾತಪತ್ರ
ತ್ರಯಮಿವು ನಿನಗಲ್ಲದಜಿತ ಪೆಱರ್ಗೊಪ್ಪುಗುಮೆ ೯

ಕ್ಷಿತಿಯೊಳಗೆಲ್ಲಂ ಧರ್ಮಾ
ಮೃತಮಂ ಕಱೆಯುತ್ತುಮಿರ್ಪ ನಿನಗೆ ನಿಳಿಂಪ
ಪ್ರತತಿ ಸುರಪುಷ್ಪವೃಷ್ಟಿಯ
ನತಿಶಯಮೆನೆ ಕಱೆವುದೆಂಬುದೊಂದಚ್ಚರಿಯೆ ೧೦

ವನಬರ್ಹಿಗಳಂ ಮೇಘ
ಧ್ವನಿ ತಣಿಪುವ ತೆಱದೆ ದೇವ ನಿನ್ನ ಯ ದಿವ್ಯ
ಧ್ವನಿ ತಣಿಸಿದಪುದು ವಿಷ್ಟಪ
ಜನಮಂ ಸಕಲತ್ರಿವಿಷ್ಟಪೈಕಾಧಿಪತೀ ೧೧

ಭೂಮಂಡಲದೊಳ್ ನಿನ್ನಿಂ
ಭಾಮಂಡಲಮೆಸೆದು ಪಸರಿಸಿರೆ ನಕ್ಷತ್ರ
ಗ್ರಾಮಣಿಗಳ್ ನೆಗೞ್ದ ಹಿಮಕ
ರಾಮೃತಕರರೆಸೆಯಲಜಿತ ಪೀಟಾರ್ಥಪರೆ ೧೨

ದುಂದುಭಿಗಭೀರರವಸುರ
ದುಂದುಭಿಗಳ್ಗಗನತಳದೊಳೆಸೆದಪು[1]ವು[1]ಜನಾ
ನಂದಕರಂಗಳ್ ನೀನಘ
ಸಂದೋಹಮನಿಕ್ಕೆ ನೆಗೞ್ದ ಜಯದುಂದುಭಿವೊಲ್ ೧೩

ನೆರೆದಿಕ್ಕುವ ಯಕ್ಷರ್ಕಳ
ಕರತಲದೊಳ್ ಪೊರೆದು ಚಾರುಚಾಮೀಕರ ಚಾ
ಮರಚಾಮರಾಳಿಚಾಮೀ
ಕರರುಚಿರಚ್ಛಾಯೆ ನಿನಗದೇನೆಸೆದಪುದೊ ೧೪

ಜನಕಜನಜನಿತ ಶೋಕೋ
ಪನುದನವಾಶೋಕವೃಕ್ಷಮೆಸೆದಪುದು ನಮ
ಜ್ಜನಮನಶೋಕಂ ಮಾಟ್ಪವೊ
ಲನೇಕಶಾಖಾನಿಕೀರ್ಣಕಿಸಲಯಚಯದಿಂ ೧೫

ನಿನಗನಘ ತುಂಗಸಿಂಹಾ
ಸನಮೆಸೆವುದು ದುರಿತಗಜಘಟಾಸಿಂಹ ಕನ
ತ್ಕನಕಮಣಿನಿಚಯಖಚಿತಂ
ಕನಕಮಹಾಶಿಖರಿಶಿಖರಲಂಘನಸಿಂಹ ೧೬

ದೇವಕೃತಂಗಳುಮಂ ಸ್ವಾ
ಭಾವಿಕಮುಮನಜಿತ ನೀನೆ ತಾಳ್ದಿದೆ ಜನಚೋ
ದ್ಯಾವಹಮಿವು ನಿನಗಲ್ಲದೆ
ದೇವ ಚತುಸ್ತ್ರಿಂಶದತಿಶಯಂ ಪೆಱರ್ಗೊಳವೆ ೧೭

---

1. ದು (ಕ).

ನಾಕಾವತರಣಭವದಭಿ
ಷೇಕಂ ನಿಷ್ಕ್ರಮಣಕೇವಲೋದಯಮಾಯ್ತಿಂ
ತೀ ಕಲ್ಯಾಣಚತುಷ್ಕಂ
ಪ್ರಾಕಟಕಲ್ಯಾಣಮಿರ್ದುದಿಂ ನಿರ್ವಾಣಂ ೧೮

ಅನಲಂಕಾರಮುಮಜ್ಜನ
ಮುನಂಬರಶ್ರೀವಿಳಾಸಮುಕುಸುಮಮುವಿಲೇ
ಪನಮೆನಿಪ ನಿನ್ನ ರೂಪೊ
ಳ್ಪಿನ ಪೂಪೆಱರುಟ್ಟು ತೊಟ್ಟ ರೂಪೊಪ್ಪುಗುಮೇ ೧೯

ಪದಿನೆಣ್ಛಾಸಿರ ಶೀಲದ
ಮೊದಲಿಗನೆಂಬತ್ತುನಾಲ್ಕುಲ[1]ಕ್ಕೆ[1] ಗುಣಕ್ಕಂ
ಮೊದಲಿಗನೆನೆ ನಿನ್ನಯ ಶೀ
ಲದ ಗುಣಮುನ್ನತಿಯನಜಿತ ಕಾಣ್ಬೆಮೆ ಪೆಱರೊಳ್ ೨೦

ನಿನಗಹಮಿಂದ್ರರುಮಿಂದ್ರರು
ಮುನಿಬರುಮಾ ಲೋಕಪಾಲರುಂ ಫಣಿಪತಿಗಳ್
ಜನಪತಿಗಳೆಲ್ಲಮೆಱಗುವ
ರೆನೆ ನಿನ್ನಡಿಗಜಿತ ಜಗದೊಳೆಱಗದರೊಳರೇ ೨೧

ದೊರೆಗಾಣೆಂ ನಿನಗೆ ಜಿನೇ
ಶ್ವರ ಪೆಱರಂ ನಿನಗೆ ನೀನೆ ದೊರೆಯೆನಿಪೈ ಮಂ
ದರಗಿರಿಗೆ ಮಂದರಾದ್ರಿಯೆ
ದೊರೆ ಜಲಧಿಗಗಾಧಜಲಧಿ ದೊರೆ ಪೆಱವೊಳವೆ ೨೨

ಗುಣನಿಳಯ ಮೇರುಚೂಡಾ
ಮಣಿ ಶರಣಾಗತಜಗತ್ತ್ರಯೀಜನರಕ್ಷಾ
ಮಣಿ ವಿನೆಯದಾನಚಿಂತಾ
ಮಣಿ ಚೂಡಾಮಣಿಮರೀಚಿರಂಜಿತಚರಣಾ ೨೩

ಕವಿರತ್ನನ ವರವಸ್ತು
ಸ್ತವರೂಪಸ್ತವಗುಣಸ್ತವಾಭರಣಂ ಭೂ

1 ಕ್ಯ (ಇಉಎ).

ಭುವನದ ಭವ್ಯಜನಂಗ
ಳ್ಗಿವಲ್ತೆ ಕಂಠಸ್ಥಮಾಗೆ ಕಂಠಾಭರಣಂ ೨೮

ಎಂದು ಸಹಸ್ರಲೋಚನನುತ್ಪನ್ನಕೇವಲವಿಲೋಚನನನನೇಕಸ್ತುತಿಗಳಿಂ-ಸ್ತುತಿಯಿಸಿ ಕಾಶ್ಯಪಗೋತ್ರನುಂ ಪ್ರಜಾಪತಿಯುಂ ಸ್ವಯಂಭುವುಂ ಸರ್ವಜ್ಞನುಂ ಸರ್ವದರ್ಶಿಯುಂ ಸರ್ವಗತನುಂ ತ್ರಿಣೇತ್ರನುಂ ತ್ರಿಲೋಕಸ್ವಾಮಿಯುಮಿವು ಮೊದಲಾಗಿ ಅಜಿತಂಗಷ್ಟೋತ್ತರಸಹಸ್ರನಾಮಮನನ್ವರ್ಥಂ ಮಾಡೆ—

ಭರತಂ ಮುನ್ನಾದಿತೀರ್ಥೇಶ್ವರನ ಚರಣಮಂ ತೀರ್ಥಭೂಪಾಲನತ್ಯಾ
ದರದಿಂ ಬಂದರ್ಚ್ಚಿಯಿಂ ಪೂಜಿಸಿ ಪುರುತರ ಪುಣ್ಯಾರ್ಜನಂಗೆಯ್ದನಾನುಂ
ಪುರುಪುಣ್ಯೋಪಾರ್ಜನಂ ಕೂಡುವೆ [1]ನೆ[1]ನಗೆನುತುಂ ಭಾವಸಂಶುದ್ಧಿಯೆಯ್ದೆ
ತ್ತಿರೆ ತೀರ್ಥಕ್ಷತ್ರಿಯಂ ಪೂಜಿಸಿದನಜಿತತೀರ್ಥೇಶನಂ ಸತ್ಯಭಾ[2]ವಂ[2] ೨೯

ಅಂತಾಸತ್ಯಭಾವನೆಂಬ ತೀರ್ಥಕ್ಷತ್ರಿಯನುಂ ರೋಹಿಣಿಯೆಂಬ ಯಕ್ಷಿಯುಂ ಮಹಾಯಕ್ಷನೆಂಬ ಯಕ್ಷನುಂ ಸಿಂಹಸೇನಂ ಮೊದಲಾಗೆ ತೊಂಬದಿಂಬರ್ ಗಣಧರರುಂ ಮೂಸಾಸಿರದೇಟ್ನೂರಯ್ವಟಂಬರ್ ಪೂರ್ವಧರರುಮಿರ್ಪತೆಣ್ಛಾಸಿರದ ನೂಱಿಪ್ಪದಿಂಬರ್ ಶಿಕ್ಷಕರುಮೊಂಬೈಸಾಸಿರ[3]ನಱು[3]ನೂಱವಧಿಜ್ಞಾನಿಗಳುಮಿರ್ಪತ್ತುಸಾಸಿರ್ವರ್ ಕೇವಲಿಗಳುಮಿರ್ಪತ್ತು ಸಾಸಿರದ ನಾನೂರ್ವರ್ ವಿಕ್ರಿಯಾರ್ಧಿಸಂಪನ್ನರುಂ ಪನ್ನಿಚ್ಛಾಸಿರದಯ್ಪದಿಂಬರ್ ಮನಃಪರ್ಯಯಜ್ಞಾನಿಗಳುಂ ಪನ್ನಿಚ್ಛಾಸಿರದ ನಾಲ್ನೂರ್ವರ್ ವಾದಿಗಳುಂ ಪ್ರಕುಬ್ಜಾರ್ಯಿಕೆಯರ್ ಮೊದಲಾಗೆ ಮೂಱು ಲಕ್ಕೆಯುಮಿಪ್ಪತ್ತು ಸಾಸಿರ್ವರಜ್ಜಿಕೆಯರುಂ ಮೂಱು ಲಕ್ಕೆ ಶ್ರಾವಕರುಮಯ್ದು ಲಕ್ಕೆ ಶ್ರಾವಕಿಯರುಮಸಂಖ್ಯಾತದೇವರುಂ ದೇವಿಯರುಂ ಸಂಖ್ಯಾತತಿರ್ಯಗ್ಜಾತಿ[4]ಯುಂ[4] ಬೆರಸಜಿತನಾಥಂ ದ್ವಾದಶಗಣಪರಿವೃತನಾಗಿ ಧರ್ಮಕ್ಷೇತ್ರಂಗಳೊಳ್ ಭವ್ಯಸಮಿತಿಗೆ ಧರ್ಮಾಮೃತಮಂ ಕಱೆ[5]ವು[5]ತ್ತುಂ ಪಶ್ಚಿಮಸಮುದ್ರಸಮೀಪದೊಳು ಒಂದೊಂದು ಲಕ್ಕೆ ಪೂರ್ವಕಾಲದಿನಗಮನಮುಮುಪಸರ್ಗಭಾವಮುಂ ವಿಗತಾಹಾರತ್ವಮುಮುಚ್ಛಾಯತ್ವಮುಂ ಅಪಕ್ಷಸ್ಪಂದತ್ವಮುಂ ಗವ್ಯೂತಿಶತಚತುಷ್ಕಯ ಸುಭಿಕ್ಷತ್ವಮುಂ ಚತುರಾಸ್ಯತ್ವಮುಂ ಪ್ರಾಣಿವಧವಿಹೀನತ್ವಮುಂ ಸಮುಪ್ರಸಿದ್ಧನಖಕೇಶತ್ವಮುಮನಂತಜ್ಞಾನತ್ವಮುಮೆಂಬ ಘಾತಿಕ್ಷಯಜಂಗಳಪ್ಪ ದಶಗುಣಂ

---

1 ನಿ (ಅಕ). 2 ವು (ಇಉಎ). 3 ದೈ (ಇಉಎ). 4 ಗಳುಂ (ಇಉಎ). 5 ಯು (ಕ).

ಗಳುಂ ಆದರ್ಶತಳಪ್ರತಿಮರತ್ನಮಹೀತಳತ್ವಮುಂ ತೃಣಧೂಳಿಶರ್ಕರಾಕಂಟಕಾದಿರಹಿತಮಹೀತಳದೊಳು ವಾತಕುಮಾ[1]ರಸಂಸ್ತ[1]ರಣಮುಂಮೇಘಕುಮಾರಸುರಭಿಜಳಸೇಚನಮುಂ ಕುಬೇರಕುಮಾರಕುಸುಮವೃಷ್ಟಿಪಾತಮುಂ ಸುರಭಿಮೃದುಶೀತಪವನವಿಜೃಂಭಣಮುಮಾಶಾವಲಯನಿರ್ಮಳತ್ವಮುಂ ಸರ್ವಭಾಷಾತ್ಮಕಾರ್ಧಮಾಗಧತ್ವಧ್ವನಿಗಮನಮುಂ ಸಮವಸರಣಮಂಡಲಗತವೈಯಾಮಯ[2]ವ್ಯದಾ[2]ಪಾಹ್ವಾನಮುಂ(?) ವಿವಿಧವಿಷಯಗೋಚರಾನಂದಮುಂ ಶಾಲಿವ್ರೀಹಿಯವಗೋಧೂಮಾದಿಪ್ರಕೃಷ್ಟಸಸ್ಯನಿಷ್ಪತ್ತಿಯುಂ ಸರ್ವರ್ತುಕಕುಸುಮಫಲಪಲ್ಲವಭರಿತತರುವನಪರಿಣಾಮಮುಂ ಭಗವಚ್ಚರಣಕಮಲವಿನ್ಯಾಸಾ[3]ಪೌ[3]ರಸ್ಪಷ್ಟಕನಕಕಮಲಸಪ್ತಕಸನ್ನಿಧಾನಮುಮಷ್ಟವಿಧಮಂಗಳದ್ರವ್ಯಾಧಾರಿ (?) ವಿಷಯಜನಪ್ರತ್ಯುದ್ಗಮನಮುಂ ಧರ್ಮಚಕ್ರಪುರಸ್ಸರಜನಪ್ರತಿಪದ್ಧರ್ಮಘೋಷಣೆಯುಮೆಂಬ ದೇವಕೃತಚತುರ್ದಶಾತಿಶಯಂಗಳುಮುಂ ತಾಳ್ದಿ ಚತುಸ್ತ್ರಿಂಶದತಿಶಯ ಸಮನ್ವಿತನಾಗಿ ಸಮ್ಮೇದಾಚಲಕ್ಕೆ ವರೆ

ನೆಗಟ್ದಾ*ದಿಜಿನೇಂದ್ರನಿಂದ್ರನಮಿತಂ ಕೈಲಾಸದೊಳ್ ಮುನ್ನ ಮು
ಕ್ತಿಗೆ ಸಂದಂದಜಿತಂ ದುರಂತದುರಿತಪ್ರಧ್ವಂಸಿ ಬಂದಿಲ್ಲಿ ಮು
ಕ್ತಿಗೆ ಸಲ್ವಂ ಗಡ ಬರ್ದೆನೆನ್ನ ಮೊರೆಗಿಲ್ಲದ್ರೀಂದ್ರಮೆಂದುತ್ಸವಂ
ಬಿಗೆ ಸಮ್ಮೇದಮುದಗ್ರಮಾದುದೆನಿಸಿತ್ತುತ್ತುಂಗಕೂಟಂಗಳಿಂ ೨೬

ಪಿರಿಯಂ ಕೀರ್ತಿಗೆ ನೋಂತುದಾಗಿರಿ ಕುಳಾದ್ರೀಂದ್ರಂಗಳಿರ್ದಂತೆ ದೇ
ವರ ದೇವಂ ನೆಗಟ್ದ*ನಿರ್ಮಾ[4]ವ್ಯ[4]ಜಿನತೀರ್ಥಾಧೀಶ[5]ನಂ[5]ತಲ್ಲಿಗಾ
ದರದಿಂ ಬರ್ಕುಮತರ್ಕ್ಯಮುಂತವರಿದೇ ಸೈಪುಳ್ಳೊಡಂತಾ ಮನೋ
ಹರಸಮ್ಮೇದನಗಕ್ಕೆ ಸಮ್ಮದಪರಂ ಬರ್ಪಂತದೇಂ ಸಮ್ಮದಂ ೨೭

ಆದಂ ಕೃತಸುರ ದಂಪತಿ
ಮೋದಂ ನವಸುರಭಿಕುಸುಮಪರಿಮಳಬಹಳಾ
ಮೋದಂ ವಿಯಚ್ಚರೇಂದ್ರವಿ
ನೋದಕೃತಾಹ್ಲಾದಮೊಪ್ಪುಗುಂ ಸಮ್ಮೇದಂ ೨೮

---

1 ರಾಪಸ್ಕ (ಕ), ರಪ (ಅ). 2 ವ್ಯಾ (ಇಎ), ಈ ಪ್ರತಿಯಲ್ಲಿಲ್ಲ. 3 ಪಂ (ಇಉಎ). 4 ಧ್ಯ (ಇಉಎ). 5 ತಂ (ಕ).

ಅಂತೊಪ್ಪುವ ಸಮ್ಮೇದಾವನೀಧರಕ್ಕೆ ಕೃತಸಕಳಮೇದಿನೀವಿಹರಣನೊಂದು ತಿಂಗಳ್ ವಿಹರಣವಿಧಿಯಂ ಮಾಣ್ದು ಬಂದಜಿತನಾಥಂ ಧ್ಯಾನವಿಧಾನದಿಂ ಕರ್ಮಂಗಳಂ ಕಿಡಿಸಿ[1]ದಂ. ಆ[1]ಧ್ಯಾನಯೋಗಮರ್ಹತ್ಸಮಯದೊಳ್ ಧ್ಯಾ[2]ನಾ-ಧ್ಯೇ[3]ಯಂ ಧ್ಯಾತೃ ಫಲಮೆಂದು ಚತುರಂಗಮಕ್ಕುಂ. ಅವಱೊ[3]ಳ್ ಚಿಂತಾ-ಪ್ರಬಂಧಲಕ್ಷಣಂ ಧ್ಯಾನಮೆಂಬುದು; ಯಥಾವಸ್ಥಿತವಸ್ತುಸ್ವರೂಪಂ[3]ಧ್ಯೇ[3]ಯ-ಮೆಂಬುದು; ಕಷಾಯಕಲುಷಿತನುಂ ಗುಪ್ತಿತ್ರಯನುಂ ಧ್ಯಾತೃವೆಂಬೊಂ; ಸಂಸಾರಭ್ರಮಣಮುಂ ಸ್ವರ್ಗಾಪವರ್ಗಮುಂ ಫಲಮೆಂಬುವಕ್ಕುಂ. ಇಂತೀ ಚತುರಂಗಧ್ಯಾನಮಪ್ರಶಸ್ತಂ ಪ್ರಶಸ್ತಮೆಂದಿ[4]ತ್ತೆ[4]ಱನಕ್ಕುಂ ಅವಱೊ[3]ಳಪ್ರಶಸ್ತ-ಮಾರ್ತಮೆಂದುಂ ರೌದ್ರಮೆಂದುಮಿ[4]ತ್ತೆ[4]ಱನಕ್ಕುಂ. ಅವಱೊ[3]ಳ್ ಆರ್ತಧ್ಯಾನಂ ಬಾಹ್ಯಾಧ್ಯಾತ್ಮಿಕಭೇದದಿಂ ದ್ವಿಃಪ್ರಕಾರಮಕ್ಕುಂ. ಅಲ್ಲಿ ಪರಾನುವೇದ್ಯಮಪ್ಪ ಬಾಹ್ಯವಿಲಪನ ಪರಿದೇವನ ತಾಪನ ಪರಿಭವ ವಿಸ್ಮಯ ವಿಷಯಸಂಗಾದಿ ಚಿಹ್ನಮಕ್ಕುಂ. ಸ್ವಸಂವಿದ್ಯೋಕಿತಾರ್ಥಮಮನೋಜ್ಞಸಂಪ್ರಯೋಗಾನುತ್ಪತ್ತಿಸಂ-ಕಲ್ಪಾಧ್ಯವಸಾನಮೆಂದುಮುತ್ಪನ್ನವಿನಾಶಸಂಕಲ್ಪಾಧ್ಯವಸಾನಮೆಂದುಂ ಮನೋ-ಜ್ಞವಿಪ್ರಯೋಗಾನುತ್ಪತ್ತಿ ಸಂಕಲ್ಪಾಧ್ಯವಸಾನಮೆಂದುಂ ಉತ್ಪನ್ನಾವಿನಾಶಸಂ-ಕಲ್ಪಾಧ್ಯವಸಾನಮೆಂದುಂ ಚತುರ್ವಿಧಮಕ್ಕುಂ. ಮನೋಜ್ಞಮೆಂಬುದು ದುಃಖ-ಸಾಧನಂ; ಆ ದುಃಖಹೇತುವುಂ ಬಾಹ್ಯಾಧ್ಯಾತ್ಮಿಕ[5]+[5]ಮೆಂದೆರಡು ತೆಱನಕ್ಕುಂ. ಅಲ್ಲಿ ಬಾಹ್ಯಮೆಂಬುದು ಚೇತನಾಚೇತನಕೃತಮೆಂದುಮಿ[6]ತ್ತೆ[6]ಱನಕ್ಕುಂ. ಅವ-ಱೊಳ್ ಚೇತನಕೃತಮೆಂಬುದು ದೇವಮನುಷ್ಯತಿರ್ಯಕ್ಸಂಪಾದಿತಾಸಾತಮಕ್ಕುಂ. ಅಚೇತನಕೃತಮೆಂಬುದು ವಿಷಕಂಟಕತೃಣಶೀತೋಷ್ಣಾದಿಜನಿತದುಃಖಮಕ್ಕುಂ. ಆಧ್ಯಾತ್ಮಿಕಕಾರಣಮುಂ ಶಾರೀರಮಾನಸಿಕಮೆಂದು ದ್ವಿ[7]ಭೇದ[7]ಮಕ್ಕುಂ. ಅವ-ಱೊಳ್ ಶಾರೀರಮೆಂಬುದು ವಾತಪಿತ್ತದೋಷವಿಶೇಷವೈಷಮ್ಯಸಮುದ್ಭವಮಪ್ಪ ಶಿರೋವಾಕ್ಷಿಕುಕ್ಷಿದಂತಶೂಲಾದಿಜನಿತಮಕ್ಕುಂ. ಮಾನಸಿಕಮೆಂಬುದು ರತ್ಯರತಿ ಶೋಕಭಯಜುಗುಪ್ಸಾವಿಷಾದದೌರ್ಮನಸ್ಯಾದಿಜನಿತಮಕ್ಕುಂ. ಇಂತೀಪೇೞ್ದ ಮನೋಜ್ಞಾದಿಸಂಪ್ರಯೋಗಮೆನಗೆ ಪುಟ್ಟದಿರ್ಕೆಂಬ ಚಿಂತಾಪ್ರಬಂಧಮೆಸಂಕಲ್ಪಂ. ಅವಱೊಳ್ ತೀ[8]ವ್ರ[8]ಕಷಾಯಾನುರಂಜನೆ ಮಧ್ಯಮಾವಸಾನಮಿಂತೀ[9]ದ[9]ಮನೋಜ್ಞ ಸಂಪ್ರಯೋಗಾದುತ್ಪತ್ತಿಸಂಕಲ್ಪಾಧ್ಯವಸಾನಮೆಂಬುದಕ್ಕುಂ. ಪ್ರಥಮಾರ್ತಧ್ಯಾನ ಮಿಾಪೇೞ್ದ ಮನೋಜ್ಞಂ ತಾನೇನಪ್ಪದೊಡಮಾಗದಿ[10]ರ್ಕೆ[10]ವರ್ಕೆಂಬ ಸಂಕಲ್ಪಾ-ಧ್ಯವಸಾನಮುತ್ಪನ್ನವಿನಾಶಸಂಕಲ್ಪಾಧ್ಯವಸಾನಮೆಂಬುದಕ್ಕುಂ. ದ್ವಿತೀಯಾರ್ತ-

1 ನಾ (ಇಉಎ). 2 ನಂ ದ (ಅಕ). 3 ದ (ಅಕ). 4 ತೆ (ಕ). 5 ಕಾರಣ (ಕ) 6 ತೆ (ಕ). 7 ವಿ (ಇಉಎ). 8 ಪ್ರ (...). 9 ಜ (ಇಉಎ) 10 ಕೆ (ಇಉಎ).

ಧ್ಯಾ[1]ನಂ[1]ಮನೋಜ್ಞಮೆಂಬುದು ಧನಧಾನ್ಯವಸ್ತುವಾಹನವಸ್ತ್ರಮಾಲ್ಯಚಂದನ-ನಂದನವಧೂಜನಾದಿಸುಖಸಾಧನಮುವು ಬೇಱಾಗಿರ್ಪು[2]ದಾದೆನಗಾಗದಿ[2]ರ್ಕೆಂಬ ಸಂಕಲ್ಪಾಧ್ಯವಸಾನಂ ಮನೋಜ್ಞವಿಪ್ರಯೋಗಾನುತ್ಪತ್ತಿಸಂಕಲ್ಪಾಧ್ಯವಸಾನ-ಮೆಂಬುದಕ್ಕುಂ. ತೃತೀಯಾರ್ತಧ್ಯಾ[3]ನಂ[3] ಈ ಸುಖಸಾಧನಂಗಳ್ ತನಗಾದೊ-ಡಿವು ಕಿಡದಿರ್ಕೆಂಬ ಸಂಕಲ್ಪಾಧ್ಯವಸಾನಂ ಉತ್ಪನ್ನಾವಿನಾಶಸಂಕಲ್ಪಾಧ್ಯವ-ಸಾನಮೆಂಬುದಕ್ಕುಂ. ಚತುರ್ಥಾರ್ತಧ್ಯಾನಮಿಂತೀಚತುರ್ವಿಧಾರ್ತಧ್ಯಾನಂ ಕೃಷ್ಣನೀಲಕಪೋತಲೇಶ್ಯಾ[4]+[4]ಬಲಾದಾನಮುಂ ಪ್ರಮಾದಾಧಿಷ್ಠಾನಮುಂ ಅಪ್ರಮತ್ತನಿಂ[5]ದಿತ[5] ಷಡ್ಗುಣಸ್ಥಾನಭೂಮಿಕಮುಂ ಪರೋಕ್ಷಜ್ಞಾನಮುಮಪ್ಪುದಱಿಂ ಕ್ಷಾಯೋಪಶಮಿಕಭಾವಮುಮಂತರ್ಮುಹೂರ್ತಕಾಲಮುಪರಿತಿರ್ಯಗ್ಗತಿಫಲಸಂ-ವರ್ತನೀಯಮುಮಪ್ಪುದು. ರೌದ್ರಧ್ಯಾನಮುಂ ಬಾಹ್ಯಾಧ್ಯಾತ್ಮಿಕಮೆಂದಿ[6]ತ್ತೆ[6]ಱ[7]ಮು[7]ಕ್ಕುಂ. ಅಲ್ಲಿ ಪರಾನುಮೇಯಮಪ್ಪ ಬಾಹ್ಯಂ ನಿಷ್ಠುರಾಕ್ರೋಶನನಿಶಾತನವವನತಾಡನಪೀಡನ ಪರದಾರಾತಿಕ್ರಮಣಾದಿಲಕ್ಷಣಮಕ್ಕುಂ. ಸ್ವಸಂವೇದ್ಯ-ಮಪ್ಪಾಧ್ಯಾತ್ಮಿಕಮುಂ ಹಿಂಸಾನಂದ ಮೃಷಾನಂದ ಸ್ತೇಯಾನಂದ ಸಂರಕ್ಷಣಾನಂದಮೆಂದು ಚತುರ್ವಿಧಮಕ್ಕುಂ. ಅವಱೊಳ್ [8]ಸಂ[8]ರಂಭಸಮಾರಂಭಾರಂಭಲಕ್ಷಣಮುಂ ಪರಪೀಡಾಸ್ವರೂಪಮಪ್ಪ ಹಿಂಸೆ ತಥ್ಯಾರ್ತಸಂಕಲ್ಪಾಧ್ಯವಸಾನಂ ಹಿಂಸಾನಂದಮೆಂಬುದಕ್ಕುಂ. ಪ್ರಥಮರೌದ್ರಧ್ಯಾನಂ ಸ್ವಮತಿವಿಕಲ್ಪಿತಮತಂ-ಗಳಿಂ ಪೆಱರ್ ನಂಬುವರೆಂದವರಂ ಬಂಚಿಸಲೆಂದು ನುಡಿವ ಮೃಷಾವಚನದೊ-ಳಪ್ಪ ಸಂಕಲ್ಪಾಧ್ಯವಸಾನಂ ಮೃಷಾನಂದಮೆಂಬುದಕ್ಕುಂ. ದ್ವಿತೀಯರೌದ್ರಧ್ಯಾನಂ ಬಲ್ಲಾಳ್ತನದೊಳಕ್ಕೆ ಮೇಣ್ ತೆಱಪಂ ಪಾರ್ದರ್ಕ್ಕಪಹರಣದೊಳಪ್ಪ ಸಂಕಲ್ಪಾಧ್ಯವಸಾನಂ ಸ್ತೇಯಾನಂದಮೆಂಬುದಕ್ಕುಂ. ತೃತೀಯರೌದ್ರಧ್ಯಾನಂ ಚೇತನಾಚೇತನಲಕ್ಷಣಮಪ್ಪ ನಿಜಪರಿಗ್ರಹದೊಳಿದೆನ್ನೊಡಮೆಯಾನಿದರ್ಕ್ಕೊಡೆಯನೆನೆಂಬಾಗ್ರಹದಿಂ ಕಾಯಲೆಂದದಂ ಕೊಳ್ವವರ್ಗೆ ಪೀಡೆಯಂ ಮಾಡಲು ಕಾಪಿನೊ-[9]ಳಪ್ಪ[9] ಸಂಕಲ್ಪಾಧ್ಯವಸಾನಂ ಸಂರಕ್ಷಣಾನಂದಮೆಂಬುದಕ್ಕುಂ. ಚತುರ್ಥರೌದ್ರಧ್ಯಾನಂ ಕೃಷ್ಣನೀಲಕಪೋತಲೇಶ್ಯಾಬಳಾದಾನಮುಂ ಪ್ರಮಾದಾಧಿಷ್ಠಾನಮುಂ ಪ್ರಮತ್ತನಿಂದೆತ್ತ ಪಂಚಗುಣಸ್ಥಾನಭೂಮಿಕಮುಂ ಪರೋಕ್ಷಜ್ಞಾನಮುಮಪ್ಪುದಱಿಂ ಕ್ಷಾಯೋಪಶಮಿಕಭಾವಮುಂ ಕಷಾಯಪ್ರಧಾನಮಪ್ಪುದಱಿಂ ಔದಯಿಕಭಾವ-ಮುಮಂತರ್ಮುಹೂರ್ತಕಾಲಪರಿವರ್ತನಮುಂ ನರಕಗತಿಸಂವರ್ತನೀಯಮು-ಮಪ್ಪುದು. ಈ ಪೇೞ್ದೆರಡುಮಪಧ್ಯಾನಮುಂ ಪತ್ತುವಿಟ್ಟು ಮೋಕ್ಷಕಾಂಕ್ಷಿಗಳಪ್ಪ

---

1 ನ (ಇಉಎ). 2 ದೆನುತಿ (ಅಕ). 3 ನದಿಂ (ಇಉಎ). 4 ಬಿ (ಇಉಎ). 5 ತ್ತ (ಇಉಎ). 6 ರ್ತ (ಕ). 7 ನ (ಅಕ). 8 ಸೇ (ಇಉಎ). 9 ಳಿಪ್ಪ (ಕ).

ಭಿಕ್ಷುಗಳು ಪರೀಷಹಬಾಧಾಸಹಿಷ್ಣು ಶಕ್ತಿ[1]ಮಂತರಾಗಿ[1] ಉತ್ತಮಸಂಹನನಾನ್ವಿತ ಪ್ರಶಸ್ತಧ್ಯಾನಮಂ ಧ್ಯಾನಿಸುವಾಗಳ್ ಗಿರಿಗುಹೋದರಕಂದರ ವಿಟಪಿಕೋಟರ ನವನದೀ ವಿಪುಳಪುಳಿನತಲ ಪಿತೃವನ ಜೀರ್ಣದ್ವಾರ ಶೂನ್ಯಗೃಹಾದಿಗಳೊ-ಳಾವುದಾನುಮೊಂದೆಡೆಯೊಳು ವ್ಯಾಳಮೃಗಪಶು[2]ಪಂಡಡಕ[2] ಪಕ್ಷಿಮನುಷ್ಯಾದಿ-ಗ[3]ಳ್ಗ[3]ಗೋಚರಮುಂ ತದ್ಭವಾಗಂತುಕ ಸೂಕ್ಷ್ಮಜಂತುಪರಿವರ್ಜಿತಮುಂ ನಿರ್ಜಂತುಕಮುಮತ್ಯುಷ್ಣ ಶೀತವಾತಾವ[4]ಧ್ಯಾ[4]ತ ಪರಹಿತಮುಮಿಂದ್ರಿಯಮನೋ ವಿಕ್ಷೇಪಚಾರಾನಿರಾಕರಣಭೂತಮುಂ ಸಮನುಕೂಲಸ್ಪರ್ಶಮುಂ ಅಪ್ಪ ಭೂತ-ಳದೊಳ್ ಯಥಾಸುಖಮುಮಧಿಷ್ಠಾನಾನುಬದ್ಧ ಪರ್ಯಂಕಾಸನನುಮಾಗಿ ನಿಜಾಂಕ ತಳದೊಳ್ ವಾಮಪಾಣಿತಳದ ಮೇಗುತ್ತಳನಾಗೆ ದಕ್ಷಿಣಕರತಲಮನಿಟ್ಟು ಶರೀರ ಯಷ್ಟಿಯನಚಲಿತಂ ಕಟ್ಟಿ ಹೃದಯಕಂಧರಕಂಠತ್ರಯಮುಮನಸ್ತಬ್ಧಮುಂ ಸಮ-ಮುಮಾಗೆ ಸಮಂಮಾಡಿ ನಿಜಾಸಿ ವಿಲೋಚನಂಗಳನತ್ಯುನ್ಮೀಲಿತಂಗಳುಮತಿ ನಿಮೀಲಿತಂಗಳುಮಾಗಲೀಯದೆ ದಂತಾಗ್ರಮೊಂದೊಂದಂ ಮುಟ್ಟಿಸಿಲ್ವಿನಂಪ್ರಾಣಾ ಪಾನಪ್ರಚುರಮತ್ಯಂತನಿಗ್ರಹದಿಂ ತೀ[5]ವ್ರ[5]ದುಃಖಾಕುಳಚಿತ್ತಗೆ೯ಕಾಕಾರಪರಿಣಾಮಂ ಪ್ರಟ್ಟಿಪ್ರಜಂ ಮಂದಮಂದಪ್ರಾಣಾಪಾನಪ್ರ[6]ವೇ[6]ಶದಿಂ ದ್ರವ್ಯಕ್ಷೇತ್ರಕಾಲಭಾವ ಶುದ್ಧಿಯೊಳ್ ಕೂಡಿ ಕೃತಸಂಸ್ಕಾರನಾಗಿ ನಾಭಿಯಿಂ ಮೇಗೆ ಹೃದಯಲಲಾಟ ಮಸ್ತಕಂಗಳೊಳಕ್ಕೆಪೆಜಿತೊಂದೆಡೆಯೊಳಕ್ಕೆ ಮೇಣಾವೃತ್ತಿಯಂ ಕೃತಾಭ್ಯಾಸಮಪ್ಪಲ್ಲಿ ನಿಜಾಸಿ ಪರಮಯೋಗಿ ಜಿನಂ ಧ್ಯಾನಿಸುವ ಸಂಸೃತಿಲತಾಮೂಲಚ್ಛೇದಮೂಲಹೇತು ಭೂತಪ್ರಶಸ್ತಧ್ಯಾನಂ ಧರ್ಮಶುಕ್ಲಭೇದದಿಂದಿ[7]ತ್ತೆ[7]ಱನಕ್ಕುಂ. ಅಲ್ಲಿ ಧರ್ಮಧ್ಯಾನಂ ಬಾಹ್ಯಾಧ್ಯಾತ್ಮಿಕಭೇದದಿಂ ದ್ವಿವಿಧಮಕ್ಕುಂ. ಅಲ್ಲಿ ಪರಾನುಮೇಯಮಪ್ಪ ಬಾಹ್ಯ ಸೂತ್ರಾರ್ಥಗವೇಷಣಮುಂ ದೃಢವ್ರತಶೀಲಗುಣಾನುರಾಗಮುಂ ಹಸ್ತಪಾದ ವದನ-ದೇಹ ಪರಿಸ್ಪಂದರಹಿತಮುಂ ವಾಯುವ್ಯಾಪಾರ ಜಂಭಜೃಂಭೋದ್ಗಾರಕ್ಷವಥು ಪ್ರಾಣಾಪಾನೋದ್ರೇಕಾದಿ ವಿರಮಣಲಕ್ಷಣಮುಪ್ಪುದು. ಸ್ವಸಂವೇದ್ಯಮಪ್ಪಾದ್ಯಂ ಅಪಾಯವಿಜಯಮುಪಾಯವಿಜಯಂ ಜೀವವಿಜಯಮಜೀವವಿಜಯಂ ವಿಪಾಕ-ವಿಜಯಂ ವಿರಾಗವಿಜಯಂ ಭವವಿಜಯಂ ಸಂಸ್ಥಾನವಿಜಯಂ ಆಜ್ಞಾ ವಿಜಯಂ ಹೇತುವಿಜಯಮೆಂದು ದಶವಿಧಮಕ್ಕುಂ. ಅವಱೊಳಪಾಯದಿಂದಪ್ಪ ಮೀಮಾಂಸೆಯಾವುದೆಂದು ಶುಭಧ್ಯಾನದೊಳದಪಾಯವಿಜಯಮೆಂಬುದುಱಿದವ ರ್ಕೆಲ್ಲಮಿಂತಿನಿತು ಗೆಯ್ವುದೀದಶವಿಧಮುಂ ದೃಷ್ಟಶ್ರುತಾನುಭೂತದೋಷವರ್ಜಿತನುಂ ಮಂದತ್ವಕಷಾಯನುಮಪ್ಪ ಭವ್ಯವರಪುಂಡರೀಕಂಗಕ್ಕುಂ. ಉಪಾಯವಿಜಯ

---

1 ಮಂತಾಗಿ (ಇಉಎ). 2 ಪುಂಡರೀಕ (ಕ). 3 ಳ್ಗೆ (ಇಉಎ). 4 ಧೂ (ಕ), ತೀ (ಕ ಪಾ). 5 ಬ್ರ (ಇಉಎ). 6 ದೇ (ಇಉಎ), ಯಾಸ (ಕ ಪಾ). 7 ರ್ತೆ (ಕ).

ವೆಂಬುದನಾದಿಸಂಸಾರದೊಳ್ ಯಥೇಷ್ಟಾಚಾರಿಯಾಗಿ ಮನೋವಾಕ್ಕಾಯ ವೃತ್ತಿಯಿಂ ನೆರಪಿದ ಕರ್ಮಮಂ ಬೇಕೆ ಯ್ಯಲೆನಗೆಂತ[1]ಕ್ಕುಮೆ[1]ಂಬ ಸಂಕಲ್ಪಂ ಪ್ರಥಮಧರ್ಮ್ಯಂ. ಉಪಾಯವಿಜಯಮೆಂಬುದತಿಪ್ರಶಸ್ತಮನೋವಾಕ್ಕಾಯಪ್ರವೃತ್ತಿವಿಶೇಷಮನಾನೆಂತುಮವಶ್ಯಂ ಮಾಳ್ಪೆನೆಂಬ ಸಂಕಲ್ಪದಿಂ ದ್ವಿತೀಯ ಧರ್ಮ್ಯಂ. ಜೀವವಿಜಯಮೆಂಬುದು ಜೀವನುಪಯೋಗಲಕ್ಷಣನುಮನಾದ್ಯಂತನುಮ ಸಂಖ್ಯೇಯಪ್ರವೇಶನುಂ ಸುಕೃತದುಷ್ಕೃತಫಲೋಪಭೋಗಿಯುಂ ಶರೀರಾದ್ಯ ಚೇತನೋಪಕರಣನುಂ [2]ಗತ್ಯಾದಿ[2]ನಾಮಾದಿನಿರ್ದೇಶಾದಿಸದಾದಿಪ್ರಮಾಣನಯ [3]ನಿಕ್ಷೇಪಗೋಚ[3]ರನುಮಪ್ಪ ವಿನಶ್ವರಭಾವಾನುಚಿಂತನಂ ತೃತೀಯಧರ್ಮ್ಯಂ. ಅಜೀವ ವಿಜಯವೆಂಬುದುಜೀವವಿಲಕ್ಷಣಮುಮಚೇತನಮುಮಪ್ಪ ಪುದ್ಗಲಧರ್ಮಾಧರ್ಮಕಾಳಾಕಾಶ[4]ಮನಂತ[4]ವಿಕಲ್ಪ ಪರ್ಯಾಯಮೆಂಬ ತದೀಯಸ್ವಭಾವಾನು-ಚಿಂತನಂ ಚತುರ್ಥಧರ್ಮ್ಯಂ. ವಿಪಾಕವಿಜಯಮೆಂಬುದು ಗುಳಖಂಡಶರ್ಕರಾಮೃತ ಮಧುರವಿಪಾಕಮುಂ ನಿಂಬಕಾಂಜೀರವಿಷಹಾಳಾಹಳಕಟುಕವಿಪಾಕಮುಂ ದ್ರವ್ಯ-ಭಾವಲಕ್ಷಣಮುಂ ಚತುರ್ವಿಧಬಂಧನಮುಂ ಲತಾದಾರ್ವಸ್ಥಿಶೈಲಭಾವಮುಂ ಮೂಲೋತ್ತರೋತ್ತರಪ್ರಕೃತಿವಿಕಲ್ಪವಿಸ್ತೃತಮುಮಪ್ಪ ವಿವಿಧಕರ್ಮಂಗಳೊಳಾವ ಯೋನಿಯೊಳಾವವಸ್ಥೆಯೊಳ್ ಜೀವಂಗಳ್ಗೆ ವಿಷಯಮಕ್ಕುಮೆಂಬ ವಿಪಾಕಾನು-ಚಿಂತನಂ ಪಂಚಮಧರ್ಮ್ಯಂ. ವಿರಾಗವಿಜಯಮೆಂಬುದು ಶರೀರಂ ವಿನಶ್ವರ ಸ್ವಭಾವಮುಂ ಅನಿತ್ಯಮುಮಪವಿತ್ರಮುಮಶುಚಿಯುಂ ತ್ರಿದೋಷಾಧಿಷ್ಠಿತಮುಂ ಸಪ್ತ ಧಾತುಮಯಮುಂ ಬಹುಮಲಪರಿಪೂರ್ಣಮುಮನವರತನಿಷ್ಯಂದಶ್ರೋತಾಖಿಲ-ಗಂಧಿಯುಂ ಅತಿಬೀಭತ್ಸಮುಂ[5] ಅನಾದೇಯಶೋಚ್ಯಮುಂ ಸಮ್ಯಗ್ಜ್ಞಾನ ವೈರಾಗ್ಯಹೇತುಭೂತಮುಮಪ್ಪುದಿದಱೊಳ್ ಕಮನೀಯಮುಮೆಂಬುದಿಲ್ಲಂ. ಇಂದ್ರಿ-ಯಸುಖಂಗಳುಂ ಪ್ರಮುಖಸುಖರಸಿಕಂಗಳುಂ ಕ್ರಿಯಾವಸಾನವಿರಸಂಗಳುಂ ಕಿಂಪಾಕವಿಪಾಕಂಗಳುಂ ಪರಾಧೀನಂಗಳುಮನಾಸ್ಥಾನಭಂಗುರಂಗಳುಮಪ್ಪುವೆನಿತೆನಿತನನುಭವಿಸುವಂತನಿತನಿತೆ ತೃಷ್ಣಾಪ್ರಸಂಗಮನವಸ್ಥಮಕ್ಕುಂ. ಅಗ್ನಿಗಿಂಧನಗಳಿಂದಂ ಸಮುದ್ರಕ್ಕೆಸರಿತ್ಸಹಸ್ರಂಗಳಿಂದಂ ತೃಪ್ತಿಯಿಲ್ಲದಿಂತಿದಱಿಂದಾರ್ಗಮುಪಶಾಂತಿಯುಮಿಲ್ಲ. ಐಹಿಕಾಮುಷ್ಮಿಕವಿನಿಪಾತಹೇತುಗಳ್. ಅವಂ ದೇಹಿಗಳ್ ಸುಖಮೆಂದೇ ಬಗೆವರ್. ಅವು ಮಹಾದುಃಖಕಾರಣಂಗಳ್. ಆತ್ಮಜಂ ಸುಖಮಪ್ಪುದಱಿಂನಿಷ್ಟಮಾಗಿಯುಂ ನೆಗಳ್ವೆನೆಂಬ ವೈರಾಗ್ಯಕಾರಣವಿಶೇಷಾನುಚಿಂತನಂ ಷಷ್ಠಮಧರ್ಮ್ಯಂ. ಭವವಿಜಯಮೆಂಬುದು ಜೀವಂಗೆ ಚೇತನಾಚೇತನಂಗಳೊಳ್ ಅವಿನಾಭಾವಿ

---

1 ಪ್ಪುದೆಂ (ಕ). 2 ಗತ್ಯಾಧಿ (ಅಕ). 3 ಕ್ಷಪಣಚರಮಪ್ಪ (ಕ ಪಾ). 4 ಮಧರ್ಮ (ಕ). 5 ವಿಭವಸ್ಫುಟಮ (ಇಉಎ).

ಸಹಾಯಮೊಂದುಮಿಲ್ಲಂ. ಜೀವನೋರ್ವನೆ ತನ್ನ ನೆರಪಿದ ಕರ್ಮಫಲಮಂ ಪ್ರತಿಕೂಲಮನಕ್ಕೆ ತಾನೆಯನುಭವಿಸುಗುಂ. ಅನಾದಿಸಂಸಾರದೊಳು ದ್ರವ್ಯಕ್ಷೇತ್ರಕಾಲಭಾವಭವಭೇದಂಗಳೊಳ್ ಜೀವಕ್ಕೆ ಗುಣವಿಶೇಷಮಂ ಕಾಣಲುಬಾರದದಱಿಂ ಭವಸಂಕ್ರಮಣಂ ನಿರರ್ಥಕಮೆಂದಿವು ಮೊದಲಾಗೆ ಭವಸಂಕ್ರಾಂತಿದೋಷಾನುಚಿಂತನಂ ಸಪ್ತಮಧರ್ಮಂ. ಸಂಸ್ಥಾನವಿಜಯಮೆಂಬುದಧಸ್ತಿರ್ಯಗೂರ್ಧ್ವಭೇಧಭಿನ್ನಲೋಕಸ್ವಭಾವಪರಿಣಾಹ ಪರಿಣಾಮ ಸಂಸ್ಥಾನ ಚಿಂತನಮಷ್ಟಮಧರ್ಮಂ. ಆಜ್ಞಾವಿಜಯಮೆಂಬುದತೀಂದ್ರಿಯವಿಷಯಜ್ಞಾನಂ ವಿಷಯಮನಱಿಯಲುಂ ಬಾರದದಱಿನೊಳಂ ಬುದ್ಧಿಶಕ್ತಿಯಿಲ್ಲದುದಱಿಂ ಪರಲೋಕಬಂಧಮೋಕ್ಷ ಲೋಕಾಲೋಕಸದಸದ್ದ್ವಿದ್ಯಾಕಸಪ್ತರ್ಧಿ[1]ಪ್ರ[1]ಭಾವಧರ್ಮಕಾಲದ್ರವ್ಯಾದಿಗಳೊಳ್ ಸರ್ವಜ್ಞಪ್ರಮಾಣತೆಯಿಂ ತತ್ಪ್ರವಾಣಿ[2]ತಾ[2]ಗಮದೊಳ್ ಪೇಳ್ದುವೆಲ್ಲಂ ಅವಶ್ಯಂ ತಪ್ಪುವುವಲ್ಲೆಂದು ಸಮ್ಯಗ್ದರ್ಶನಸ್ವಭಾವದಿನಪ್ಪ ನಿಶ್ಚಯಚಿಂತನಂ ನವಮಧರ್ಮಂ. ಹೇತುವಿಜಯಮೆಂಬುದು ಆದಾಗಮದಿಂ ಪ್ರತೀತಿಯೊಳ್ ನಯವಿಶೇಷಗುಣಪ್ರಧಾನಭಾವೋಪನಯ ದರ್ಶನಮುಂ ಸ್ಯಾದ್ವಾದಪ್ರಕೃತಿಯನವಲಂಬಿಸಿರ್ದ ತರ್ಕಾನುಸಾರಿರುಚಿಯಪ್ಪ ಪುರುಷನಾತ್ಮಸಮಯಗುಣಪರಸಮಯದೋಷವಿಶೇಷಪರಿಚ್ಛೇದದಿನಾವುದೊಂದು ಗುಣಬಹಳಮದಱೊಳಭಿನಿವೇಶಂ ಶ್ರೇಯಮೆಂದೀಯಂದದಿಂ ಸ್ಯಾದ್ವಾದತೀರ್ಥಕರಪ್ರವಚನ ಪೂರ್ವಾಪರವಿರೋಧ ಹೇತುವಿಗ್ರಹಣಸಾಮರ್ಥ್ಯದಿಂ ಸಮವಸ್ಥಾನಗುಣಾನುಚಿಂತನಂ ದಶಮಧರ್ಮಂ. ಇಂತೀ ಪೇಳ್ದ ಧರ್ಮಧ್ಯಾನಂ ಪೀತಪದ್ಮಶುಕ್ಲಲೇಶ್ಯಾಬಳಾದಾನಮುಂ ಅಪ್ರಮತ್ತಂ ಪ[3]ರ[3]ದ್ರವ್ಯಭಾವಲಕ್ಷಣಪ್ರಕೃತಿಕರಣಮುಮಂತರ್ಮುಹೂರ್ತಕಾಲಮುಂ ಪರಿವರ್ತನವುಂ ಪರೋಕ್ಷಜ್ಞಾನತ್ವದಿಂ ಕ್ಷಾಯೋಪಶಮಿಕಭಾವಮುಂ ಸ್ವಭಾವವೊಲಂ ಗತಿಫಲವರ್ತನೀಯಮುಂ ದ್ರವ್ಯಭಾವಾತ್ಮಕಶೇಷೈಕವಿಂಶತಿಮೋಹನೀಯೋಪಶಮಕ್ಷಯಹೇತುಭೂತಮುಮಕ್ಕುಂ ಶುಕ್ಲಧ್ಯಾನಮುಂ ಶುಕ್ಲ ಪರಮಶುಕ್ಲಮೆಂದಿ[4]ತ್ತೆ[4]ಱನಕ್ಕುಂ. ಅವಱೊಳ್ ಶುಕ್ಲಮೆಂಬುದು ಪೃಥಕ್ತ್ವವಿತರ್ಕವಿಚಾರಮುಂ ಏಕತ್ವವಿತರ್ಕವಿಚಾರಮುಂ ಎಂದೆರಡು ತೆಱನಕ್ಕುಂ. [5]ಪೃಥಕ್ತ್ವ[5]ಮೆಂಬುದು ಸೂಕ್ಷ್ಮಕ್ರಿಯಾಪ್ರತಿಪಾತಿಯುಂ ಸಮುಚ್ಛಿನ್ನಕ್ರಿಯಾನಿವೃತ್ತಿಯುಮೆಂದೆರಡು ತೆಱನಕ್ಕುಂ. ಅವಱೊಳ್ ಮತ್ತಂ ಶುಕ್ಲಂ ಬಾಹ್ಯಾಧ್ಯಾತ್ಮಿಕಭೇದದಿನಿ[4]ತ್ತೆ[4]ಱನಕ್ಕುಂ. ಅಲ್ಲಿ ಬಾಹ್ಯಮೆಂಬುದು ಗಾತ್ರನೇತ್ರಪರಿಸ್ಪಂದವಿರಹಿತಮುಂ ಜಂಭಜೃಂಭೋದ್ಗಾರಾದಿವರ್ಜಿತಮುಂ ಅನಭಿವ್ಯಕ್ತಪ್ರಾಣಾಪಾನಪ್ರಚಾರಮುಂ ಸಮುಚ್ಛಿನ್ನಪ್ರಾಣಾಪಾನಪ್ರಚಾರಮುಂ ಅಪರಾದಿತತ್ವ-

1 ಕ (ಇಉಎ). 2 ಕಾ (ಕ). 3 ರಂ (ಇಉಎ). 4 ತೆ (ಕ). 5 ಪರ (ಅಕ).

ಮುನಾಗಿ ಪರಾನುಮೇಯಮಪ್ಪುದಱಿಂ ಬಾಹ್ಯಂ; ಸ್ವಸಂವೇದ್ಯಮಪ್ಪಾಧ್ಯಾತ್ಮಿಕಂ ಪೃಥಕ್ತ್ವವಿತರ್ಕವಿಚಾರಧ್ಯಾನದೊಳ್ ಪೃಥಕ್ತ್ವಮೆಂಬುದು ನಾನಾತತ್ವಂ; ವಿತರ್ಕಮೆಂಬುದು ದ್ವಾದಶಾಂಗಶ್ರುತಂ, ವಿಚಾರಮರ್ಥವ್ಯಂಜನಯೋಗಸಂಕ್ರಮಣಂ, ವ್ಯಂಜನಮೆಂಬುದು ಶಬ್ದಂ, ತದ್ವಿಷಯಮರ್ಥಮೆಂಬುದು, ಮನೋವಾಕ್ಕಾಯಪರಿಸ್ಪಂದಲಕ್ಷಣಂ, ಸಂಕ್ರಾಂತಿಯೆಂಬುದುಮುದನ್ಯೋನ್ಯಪರಿವರ್ತನಮಕ್ಕುಂ. ಅನಾದಿಸಂಭೂತದಿಂ ದೀರ್ಘಸಂಸಾರಸ್ಥಿತಿಸಾಗರಪಾರಮನೆಯ್ದುವ ಮುಮುಕ್ಷುಗಳ್. ಸ್ವಭಾವಜೃಂಭಿತಪುರುಷಾಕಾರಸಾಮರ್ಥ್ಯದಿಂ ದ್ರವ್ಯಭಾವಪರಮಾಣುಗಳೊಂದೊಂದನವಲಂಬಿಸಿ ಸಂವೃತಾವಿಕ್ಷೇಪನುಂ ಮಹಾಸಂವರಸಂವೃತನುಮಾಗಿ ಕರ್ಮಸ್ಥಿತ್ಯನುಭಾವಂಗಳನುಪಶಮಿಸುತ್ತುಂ ಬರಲ್ ಬಹುಕರ್ಮನಿರ್ಜರನಾಗಿಯೊರ್ಮೊರ್ಮೆ ಪರಿವಿಡಿಯಿಂ ದ್ರವ್ಯಪರ್ಯಾಯಮನುವರ್ತದೊಳವಱೊಳ್ ವ್ಯಂಜನಮುಂ ವ್ಯಂಜನದೊಳರ್ಥಮುಂ ಯೋಗದಿಂ ಯೋಗಾಂತರಮುಂ ವ್ಯಂಜನದಿಂ ವ್ಯಂಜನಾಂತರಮುಂ ಪರ್ಯಾಯದಿಂ ಪರ್ಯಾಯಾಂತರಮುಂ ಸಂಕ್ರಮಿಸುವುದು; ಮತ್ತಂ ಜೀವಾದಿಪದಾರ್ಥಂಗಳ್ಗೆ ವಿಜ್ಞಾನವರ್ಣಗತಿಸ್ಥಿತಿವರ್ತನಾವಗಾಹನಾದಿಗಳವಱ ವಿಕಲ್ಪಂಗಳ್ ಪರ್ಯಾಯಂಗಳರ್ಥದೊಳುೞಿದುದಂ ಬಿಸುಟ್ಟೊಂದನೆ ನೆನೆವುದು. ಅರ್ಥಾಂತರಗುಣಪರ್ಯಾಯಂಗಳ್ಗಮಿಂತೆಯಕ್ಕುಂ. ಅಂತರ್ಥಮರ್ಥಾಂತರಂ ಗುಣಂ ಗುಣಾಂತರಂ ಪರ್ಯಾಯಂ ಪರ್ಯಾಯಾಂತರಂ ಎಂಬೀಯಾಱಱೊಳ್ ಮೂಱುಯೋಗದಿಸಿದಾರ್ತ್ಮಂ ಸಂಕ್ರಮಿಸೆ ಪದಿನೆಂಟುಭಂಗಮಕ್ಕುಂ. ಅರ್ಥದೊಳಿರ್ದ ಗುಣಾಗುಣಾಂತರದೊಳ್ ಪರ್ಯಾಯಪರ್ಯಾಯಾಂತರದೊಳ್ ಸಂಕ್ರಮಿಸೆ ಪನ್ನೆರಡುಮರ್ಥಾಂತರಕ್ಕನಿತಾಯಂದದೊಳೆ ಪನ್ನೆರಡಕ್ಕುಂ. ಇಂತು ನಾಲ್ವತ್ತೆರಡುಂ ಭೇದಂ ಪ್ರಥಮಶುಕ್ಲಧ್ಯಾನಂ. ಅದುಪಶಾಂತಕ್ಷೀಣಕಷಾಯನಪ್ರಮತ್ತಕಾಳಂಬರಮಕ್ಕುಂ. ಅದು ಶುಕ್ಲೇತರಲೇಶ್ಯಾಬಳಾದಾನಮುಮಂತರ್ಮುಹೂರ್ತಕಾಲಪರಿವರ್ತನಮುಂ ಕ್ಷಾಯೋಪಶಮಿಕಭಾವಮುಂ ಉಪಾತ್ತಾರ್ಥವ್ಯಂಜನಯೋಗಸಂಕ್ರಮಣತ್ವದಿಂದಮವಿಚಾರಮದಱಿನೇಕತ್ವವಿತರ್ಕಮುಂ ನವದಶಚತುರ್ದಶಪೂರ್ವರಪ್ಪ ಯತಿವೃಷಭನಿಷೇವ್ಯಮುಂ ಸ್ವರ್ಗಾಪವರ್ಗಗತಿಫಲಪರ್ಯಾಯಮುಮಪ್ಪುದು. ಅದುಶುಕ್ಲದೆರಡನೆಯೇಕತ್ವವಿತರ್ಕವಿಚಾರದೊಳೇಕತ್ವದಿಂದಂ ವಿತರ್ಕಮಾದುದೊಂದನೇಕತ್ವವಿತರ್ಕಮುಪಗತಾರ್ಥವ್ಯಂಜನಯೋಗಸಂಕ್ರಮತ್ವದಿಂದವಿಚಾರಮದಱಿನೇಕತ್ವವಿತರ್ಕಾವಿಚಾರಮಕ್ಕುಂ. ಮುಂ ಪೇೞ್ದವಱೊಳ್ ಭವಪರಿಮಾಣುವನೊಂದನೆ ಕೊಂಡು ವ್ಯಂಜನೀಯಯತ್ರೈಕಯೋಗಬಲಾದಾನಮುಮಂತೆ ಪೂರ್ವಧರಯತಿವೃಷಭನಿಷೇವ್ಯಮುಮ [1]ಪಾ[1]ರ್ಥವ್ಯಂಜನಯೋಗಮುಂ ಸಂಕ್ರಮಣವಿಷಯಚಿತ್ತನಿಕ್ಷೇಪವಿರಹಿತತ್ವದಿಂ

———

1 ಶೇಷಾ (ಇಉಎ).

ಬಹುತರಾಶ್ರವಸಂವರಕರ್ಮನಿರ್ಜರಮಶೇಷಘಾತಿಕರ್ಮರಜಃಪರಿಪಾತನಸಮರ್ಥಮು-
ಮುತ್ತಪ್ತತಪೋತಿಶಯರೂಪಮುಂ ಕ್ಷೀಣಕಷಾಯಾವಶಿಷ್ಟಕಾಳಭೂಮಿಕ-
ಮುಮಂತರೀಯಶುಕ್ಲ ಧ್ಯಾನದೊಳ್ ದ್ರವ್ಯಭಾವಸ್ವರೂಪಘಾತಿಗಳಂ ಕತಿಪಯ-
ಘಾತಿಭಾವಂಗಳ್ಗವಸಾನಮಾಗಲೊಡಂ ಕ್ಷಾಯಿಕಂ ಧ್ಯಾನ ದರ್ಶನ
ಸಮ್ಯಕ್‌ಚಾರಿತ್ರ [1]ವೀಯರ್ಾ[1]ತಿಶಯಶಕ್ತಿ ಗಭಸ್ತಿಪ್ರಜ್ವಲಿತ ಕೇವಲಿಜಿನಭಾಸ್ಕ
ರೋದಯ ವ್ಯತಿಕ್ರಾಂತಚ್ಛದ್ಮಸ್ಥಜ್ಞಾನದರ್ಶನಶರೀರಭಾಷಾಂತಃಕರ[2]+[2]ಮಕ್ಕುಂ·
ಕೇವಳಿಜಿನಕುಂಜರಂ ತೀರ್ಥಕರನಕ್ಕೆ ಮೇಣಿತರನಕ್ಕೆ; ಕೃತಕೃತ್ಯನುಂ ಸಿದ್ಧ
ಸಾಧ್ಯನುಂ ಬುದ್ಧಬೋಧ್ಯನುಮತ್ಯಂತನುಮಪುನರ್ಭವಲಕ್ಷ್ಮೀಪಟ್ಟನಿಷ್ಠಿತಾಂತ-
ನುಮಚಿಂತ್ಯಜ್ಞಾನವೈರಾಗ್ಯೈಶ್ವರ್ಯಮಾಹಾತ್ಮ್ಯನುಂ ಲೋಕೇಶ್ವರರಿಂದಭಿಗಮ-
ನೀಯನುಂ ಅರ್ಚನೀಯನುಮಭಿವಂದನೀಯನುಮಾಗಿ ಬಟಿಯಮುತ್ಕೃಷ್ಟ
ದಿಂದೀಶಾನಪೂರ್ವಕೋಟಿಕಾಲಮನುಭವಿಸುತ್ತುಂ [3]ಅಂತ[3]ರ್ಮುಹೂರ್ತಶೇಷಾಯು
ಷ್ಯನಾಗೆ ಸಮಸ್ಥಿತಿವೇದ್ಯನಾಮಗೋತ್ರನಪ್ಪಾಗಳ್ ಬಾದರಮನೋವಚನೋ-
ಚ್ಛ್ವಾಸಂಗಳುಂ ಬಾದರಕಾಯಯೋಗಮುಮಂ ನಿರೋಧಂಗೆಯ್ದು ಸೂಕ್ಷ್ಮ
ಮನೋವಚನೋಚ್ಛ್ವಾಸನುಂ ಸೂಕ್ಷ್ಮಕಾಯಯೋಗನುಮಾಗಿ ನಿರೋಧಕ್ರಿಯಾ-
ಹೇತುವಪ್ಪ ಸೂಕ್ಷ್ಮಕ್ರಿಯಾಪ್ರತಿಪಾದನಮಕ್ಕುಂ. ಅದು ಶುಕ್ಲಸಾಮಾನ್ಯದಿಂ
ತೃತೀಯಂ ಪರಮಶುಕ್ಲಾಪೇಕ್ಷೆ[4]ಯಿಂ[4] ಪ್ರಥಮಂ, ಅಂತರ್ಮುಹೂರ್ತಶೇಷಾಯು
ಸ್ಥಿತಿಯುಂ ತದಧಿಕಸ್ಥಿತಿಶೇಷಕರ್ಮತ್ರಯನುಮಾ[5]ದ[5] ಸಯೋಗಿಭಟ್ಟಾರಕನಾ-
ತ್ಮೋಪಯೋಗಾತಿಶಯನುಂ ಕರ್ಮಾರಾತಿಸಾಧನಸಮರ್ಥಸಾಮಯಿಕಸಮುತ್ಪಾ-
ತಖಲ ಸಹಾಯನುಂ ವಿಶಿಷ್ಟಕರನುಂ ಮಹಾಸಂವರಸಂವೃತಲಘುಕರ್ಮಪರಿಪಾ
[6]ತಿತ[6]ನುಂ ಆಗಿ ಶೇಷಕರ್ಮರೇಣುಪರಿಪಾತನಶಕ್ತಿಸ್ವಭಾವದಿಂ ಸಮಯೇಕಖಂಡಕ-
ಮಪ್ಪ ನಾಲ್ಕುಂ ಸಮಯದೊಳ್: ದಂಡಕವಾಟಪ್ರತರಣಲೋಕಪೂರಣೆಗಳಿಂ
ಸ್ವಾತ್ಮಪ್ರದೇಶವಿಸರ್ಪಣಮಾಗೆ ಮತ್ತಮನಿತೆ ಸಮಯದಿಂದುಪಸಂಹೃತಪಾನ
ಪ್ರಚಾರಸರ್ವಕಾಯವಾಗ್ಮನೋಯೋಗಪ್ರದೇಶಪರ್ಯಾಯಪ್ರದೇಶದಿನೆನಿತಾನುಂ
ಸಮೀಕೃತಾಘಾತಿಸ್ಥಿತಿಚತುಷ್ಟಯನುಂ ನಿರ್ವರ್ತಿತಸಮುದ್ಘಾತತ್ರಿತಯನುಂ, ಪೂರ್ವ-
ಶರೀರವಿರಮಣನುಮಾಗಿ ಚರಮದೊಳ್ ಪರಮಶುಕ್ಲಧ್ಯಾನಮುಂ ಕಡೆಯೆಯ್ದಿಸಿ
ತತ್ಸಮಯದೊಳ್ ದ್ವಿತೀಯಪರಮಶುಕ್ಲಪರಮಪ್ರಾರಂಭನಕ್ಕುಂ. ಪ್ರಾಣಾಪಾನ
ಪ್ರಚಾರಸರ್ವಕಾಯವಾಗ್ಮನೋಯೋಗಪ್ರದೇಶಪರ್ಯಾಯವ್ಯಾಪಾರಂಗಳ್
ಸಮುಚ್ಛಿನ್ನಕ್ರಿಯಾನಿವೃತ್ತಿಯೆಂಬುದು. ಆ ಧ್ಯಾನದೊಳ್ ಸರ್ವಾಸ್ರವನಿರೋಧಮಾಗೆ
ಸರ್ವಶೇಷಕರ್ಮಪರಿಪಾಕಸಾಮರ್ಥ್ಯೋತ್ಪತ್ತಿಯನುಳ್ಳ ಯೋಗಿಕೇವಳಿ ಸಂಪೂರ್ಣ-
ಶೀಲಗುಣನುಂ :ಸರ್ವಸಂಸಾರದುಃಖಜ್ವಲನಜ್ವಾಲಾಪರಿಷ್ವಂಗನುಮಕ್ಕುಂ. ಆ

1 ವಿಪರ್ಯಾ (ಇಉಎ). 2 ಣ (ಕ). 3 ಇಉಎಗಳಲ್ಲಿಲ್ಲ. 4 ಯುಂ (ಇಉಎ).
5 ಗಿ (ಇಉಎ). 6 ಕ (ಕ).

ಕೇವಳಿಯುಮಾಗಳ್ ವಿಶುದ್ಧಧ್ಯಾನಾನಲನಿರ್ದಗ್ಧಸರ್ವಮಲಕಲಂಕೇಂಧನನುಂ, ನಿರ[1]ಸ್ತಪ್ತ[1]ಪಾಷಾಣಜಾತ್ಯಕನಕದಂತೆ ಲಬ್ಧಾತ್ಮಸ್ವಭಾವನುಮಾಗಲೊಡಂ ಪೂರ್ವ-ಪ್ರಯೋಗದಿಂದಾವಿದ್ಧಕುಲಾಲಚಕ್ರದಂತಸಂಗತತ್ವದಿಂದೇರಂಡಬೀಜದಂತೆ ಬಂಧ-ಚ್ಛೇದನದಿಂ[2]ದ[2]ಪಗತಲೇಪಾಲಾಂಬುವಿ[3]ನ[3]ಂತೆ ಊರ್ಧ್ವಗತಿಸ್ವಭಾವದಿನಗ್ನಿ ಶಿಖಿಯಂತೂರ್ಧ್ವಲೋಕಾಂತಂಬರಂ ಸಲ್ಗುಂ. ಗತ್ಯು[4]+[4]ಪಗ್ರಹಪಕಾರಣ ಧರ್ಮಾಸ್ತಿಕಾ[5]ಯಾ[5]ಭಾವದಿಂ ನರಲೋಕಕ್ಕೆ ಸಲ್ವಂ. ಧರ್ಮಶುಕ್ಲಂಗಳೆಂಬ ಷಡ್ದ್ರವ್ಯಂಧ್ಯೇಯಮಪ್ಪುದಱಿಂ ವಿಷಯಂ ಪ್ರತಿಭೇದಮಿಲ್ಲಪ್ಪುದಱಿಂ ವೀತರಾಗ-ನಪ್ಪಜಿತಸ್ವಾಮಿಗಳಿಂ ಆಜಿತಜಿತಂ ಕಾಲಾವಸ್ಥಾಯಿಗಳಪ್ಪುದಱಿಂ ಭೇದಮಿಲ್ಲ. ಎಂದಿಂತುಪೇಳ್ದ ಚತುರ್ವಿಧಧ್ಯಾನಂಗಳೊಳ್ ಪರಮಶುಕ್ಲಧ್ಯಾನದಿಂ ಶ್ರೀಮದಜಿತ ಭಟ್ಟಾರಕಂ ಜ್ಞಾನಾವರಣೀಯಂ, ದರ್ಶನಾವರಣೀಯಂ, ಮೋಹನೀಯಮಂತ-ರಾಯಮೆಂಬ ಘಾತಿಚತುಷ್ಕಮುಮನಾಯುಷ್ಯನಾಮಗೋತ್ರವೇದನೀಯಮೆಂಬ ಘಾತಿಚತುಷ್ಕಮುಮಂ ನಿಶ್ಶೇಷಂ ಕಿಡಿಸಿ ಚೈತ್ರಶುದ್ಧಪಂಚಮಿಯ ಪೂರ್ವಾಹ್ಣ-ದೊಳ್ ಪ್ರಥಮಯೋಗದೊಳಿರ್ದಂ

ಕೃತಮೋಹದ್ರೋಹವಿಧ್ವಂಸನನಧಿಗತಕೈವಲ್ಯಬೋಧೋದಯಂ ಸಾ
ಧಿತಕರ್ಮಾರಾತಿವರ್ಗಂ ಜಯಜಯನಿನದಂ ತೀವೆ ದೇವೇಂದ್ರರಿಂ ದಿ
ಕ್ತತಿಯಿಂದಂದಾನಕಂ ಘೋರ್ಗರೆವಿನಮದಜಿತಸ್ವಾಮಿ ದೇವಾಧಿದೇವಂ
ಕೃತಕೃತ್ಯಂ ಬುದ್ಧಬೋಧ್ಯಂ ಶಿವಪದಸುಖಮಂ ಪೊರ್ದಿದಂ [6]ಸಿದ್ಧ[6]ಸಾಧ್ಯಂ

ಇದು ಸಕಲ ಮುನೀಂದ್ರ ವೃಂದ ವೃಂದಾರಕ ಶ್ರೀಮದಜಿತಸೇನ ಭಟ್ಟಾರಕ
ಶ್ರೀಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ
ಶ್ರೀಮದಭಿನವ ಕವಿಚಕ್ರವರ್ತಿ
ಕವಿರತ್ನ ವಿರಚಿತ
ಶ್ರೀದಾನಚಿಂತಾಮಣಿ ವಿನಿರ್ಮಾಪಿತ
ಶ್ರೀಮದಜಿತತೀರ್ಥಕರ ಪುರಾಣತಿಲಕದೊಳ್
–ಪರಿನಿರ್ವಾಣವರ್ಣನಂ ಅಷ್ಟಮಾಶ್ವಾಸಂ.

---

1 ಸ್ತ (ಇಉಎ). 2 ಅಕ ಗಳಲ್ಲಿಲ್ಲ. 3 ವ (ಇಉಎ). 4 ತ್ (ಇಉಎ). 5 ಯ (ಇಉಎ). 6 ಶುದ್ಧ್ಯಂ (ಅಇಉಎ).

ನವಮಾಶ್ವಾಸಂ

ಶ್ರೀಮದಜಿತಂ ತ್ರಿಲೋಕಶಿ
ಖಾಮಣಿ ಸುಖಮಯಶರೀರನಾದಂ ಸಿದ್ಧ
ಗ್ರಾಮಶಿಖಾಮಣಿ ಭವ್ಯಜ
ನಾಮೃತಮಯಚಾರುಚರಿತನಪಗತದುರಿತಂ ೧

*
ನೆಗೞ್ದಜಿತಪಂಚಕಲ್ಯಾ
ಣಗ[1]ಣದೊಳೋ[1]ರಂತೆ ರೋಹಿಣೀನಕ್ಷತ್ರಂ
*
ನೆಗೞ್ದುದಱಿಂ ಶುಭಕಾರ್ಯಾ
ದಿಗೆ ತಾನೆ ಪವಿತ್ರಮಾದುದಾ ನಕ್ಷತ್ರಂ ೨

ಜನಕಂ ಶ್ರೀಜಿತಶತ್ರು ತಾಯ್ ವಿಜಯಸೇನಾದೇವಿ ಸಂದಿರ್ದಯೋ
ಧ್ಯೆ ನಿಜಾಮ್ನಾಯದ ರಾಜಧಾನಿ ಮಹಿಜಂ ಸಪ್ತಚ್ಛದಂ ದಂತಿಲಾಂ
ಛನ ಮಾರೋಹಿಣಿ ತಾರೆ ಯಕ್ಷಿ ತನಗಾ ಯಕ್ಷಂ ಮಹಾಯಕ್ಷನೆಂ
ಬಿನೆಗಂ ಸಂದಜಿತಂ ಜಿತಾರಿ ಪಡೆದಂ ಸಮ್ಮೇದದೊಳ್ ಮುಕ್ತಿಯಂ ೩

ಅಂತಜಿತಜಿನವಲ್ಲಭಂ ಸಕಲಕರ್ಮನಿರ್ಮೂಲನಂಗೆಯ್ದು ಮೋಕ್ಷಲಕ್ಷ್ಮೀವಲ್ಲಭನುಂ ತ್ರಿಲೋಕೈಕಚೂಡಾಮಣಿಯುಂ ಅನಂತಜ್ಞಾನಾನಂತವೀರ್ಯಾನಂತದರ್ಶನಾನಂತಸುಖಸ್ವರೂಪನುಂ ಈಷತ್ಪ್ರಾಗ್ಭಾರಶಿಖರಿಶೇಖರನುಮಾಗಿರ್ದಂ.

ಇತ್ತ ದೇವೇಂದ್ರನಿಕಾಯಂ [2]ಅಗ್ನೀಂ[2]ದ್ರಮುಕುಟಾಮಲೋದ್ದೀಪಿತದೀಪಧೂಪಸುರಭಿಮಾಲ್ಯಾದಿಗಳಿಂ ಜಿನನಿರ್ವಾಣಕ್ಷೇತ್ರಪೂಜಾವಿಧಿಯಂ ನಿರ್ವರ್ತಿಸಿ

---

1 ಕೊಳಗೋ (ಇಉಎ). 2 ಮದ್ಗಿರೀಂ (ಇಉಎ).

ತದೀಯರೂಪಪವಿತ್ರಭೂಮಿಯಿಂ ಪಂಚಕಲ್ಯಾಣಭೂತಿಭಾಗಿಗಳಮಪ್ಪೆಮಕ್ಕೆ
ಎಂದು ಹೃದಯಕಂಠಮುರಭುಜದ್ವಯಲಲಾಟಪ್ರದೇಶಂಗ[1]ಳೊಳ್[1] ಮುಟ್ಟಿ
ಸೌಧರ್ಮೇಂದ್ರಂ ಪರಿನಿರ್ವಾಣಕಲ್ಯಾಣದೊಳ್ ಆನಂದನೃತ್ಯಮಂ ಮಾಡಿ
ಪೂಜಿಸಿ ಪೊಡೆಮಟ್ಟು ಪೋದಂ.

ಇತ್ತ ಶೋಕಾಕುಲೀಕೃತಚಿತ್ತರಾದ ಜಿತಶತ್ರುಮಹಾರಾಜನುಮಂ ವಿಜಯ
ಸೇನಾದೇವಿಯುಮಂ ಅಜಿತಸೇನಕುಮಾರಕನುಮಂ, ಸಿಂಹಸೇನಾಖ್ಯಗಣಧರ
ಮುಖ್ಯರ್ ಸಂಸಾರಸ್ವರೂಪಮನಱಿಪಿ[2]+[2], ಸದ್ಧರ್ಮೋಪದೇಶಂಗೆಯ್ದು ನಮಗುಂ
ನಿಮಗಮಾಪರಮೇಶ್ವರನಿರ್ದ ವಿನಶ್ವರಪ್ರದೇಶಮೆ ನಿವಾಸಮಕ್ಕುಮೆಂದು
ಸಂತೈಸೆ ಬಂದನಿಬರುಮಯೋಧ್ಯಾಪುರಮಂ ಪೊಕ್ಕು ಮಹಾಮಹಾಮಹಿಮೆಗ-
ಳಪ್ಪ ಜಿನಪೂಜೆಗಳಂ [3]ಮಾಡಿಸುತ್ತುಂ[3] ಮಹೋತ್ತುಂಗತೋರಣಂಗಳಪ್ಪ ಚೈತ್ಯಾ
ಲಯಂಗಳಂ ಮಾಡಿಸಿಯುಂ, ಮಹಾಧ್ವಜಮನೆತ್ತಿಸಿಯುಂ, ಮಹಾದಾನಮಂ
ನೆಗಟ್ಟಿಯುಂ, ಅನೇಕರತ್ನಪ್ರತಿಮೆಗಳಂ ಮಾಡಿಸಿಯುಂ, ರತ್ನತ್ರಯಮಂ
ಕೊಂಡಾಡಿಯುಂ, ದಾನಚಿಂತಾಮಣಿಯಂತೆ ಧರ್ಮಪ್ರಭಾವನೆಯಂ ಮಾಡುತ್ತುಂ
ಉತ್ಕೃಷ್ಟಚಾರಿತ್ರದಿಂ ಚರಿತಾರ್ಥರುಮಾಗೆ;

ಎರಡನೆಯ ತೀರ್ಥನಾಥನ
ಚರಿತದೊಳೆರಡನೆಯ ಚಕ್ರನಾಥನ ಚರಿತಂ
ಬರೆ ಬಣ್ಣಿಸಲಜಿತಜಿನೇ
ಶ್ವರಭಕ್ತಂ ಸಗರಚಕ್ರವರ್ತಿಯೆ ತಕ್ಕಂ ೪

ಅದೆಂತೆಂದೊಡೀಸಗರನೆಂಬನೆರಡನೆಯ ಚಕ್ರವರ್ತಿ ತನ್ನ ಮುನ್ನಿನ ಮೂಱ-
ನೆಯ ಜನ್ಮದೊಳ್ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ತೆಂಕಣ
ತಡಿಯ ವತ್ಸಕಾವತೀವಿಷಯದ ಪೃಥ್ವೀನಗರಮನಾಳ್ವಂ ಜಯಸೇನನೆಂಬರಸ
ನಾದಂ. ಆತನ ಮಹಾದೇವಿಯುಂ ವಿಜಯಸೇನೆಯೆಂಬವಳ್. ಅವರ್ಗೆ ರತಿ
ಷೇಣನುಂ ಧೃತಿಷೇಣನುಮೆಂಬರಿರ್ವರ್ ತನಯರಾದರ್. ಅವರೊಳಗೆ ರತಿ
ಷೇಣನುಂ ಸ್ವರ್ಣಪಾಷಾಣದಂತೆ ಕೃತಾಂತದಂತಾಂತರವಜ್ರಘಾತಜರ್ಝರೀಕೃತ-
ನಾಗೆ ಜಯಸೇನಮಹಾರಾಜಂ ನಿಜಪ್ರಿಯತನೂಜಶೋಕಾನಲಾತ್ಯಂತಸಂತಪ್ತ
ಚಿತ್ತನಾಗೆ-

1 ಳಂ (ಕ). 2 ಪರ್ (ಇಉಎ). 3 ಪೊಱಮಡಿಸಿಯುಂ (ಅಕ).

ವಿನಯಜಲಧೀ ಹಾ ಹಾ ಹಾ ಬಂಧುವತ್ಸಳ ಗೋತ್ರಪಂ
ಡನ ನಿಧಿಯೆ ಹಾ ಹಾ ಹಾ ಹಾರಾಜವಂಶಶಿಖಾಮಣೀ
ಮನಸಿಜವಧೂಲೀಲಾಶೃಂಗಾರನಾರವಧೂಮನೋ
ವನಜತರಣೀ ಹಾ ಹಾ ಹಾ ಪುತ್ರ ಹಾ ರಣಕೇಸರೀ ೫

ಎಂದೆನಿತ್ತಾನುಮುಂದದಿಂ ಬಾಯಬಿಟ್ಟು ವಿಪ್ರಲಾಪಂಗೆಯ್ಯೆ ಜಯಸೇನಮಹಾರಾಯನ ಕರುಣಾರುತಮಂ ಮಹಾರುತನೆಂಬನರಸನ ಮೈದುನಂ ಮಾಣಿಸಿ,

ತನಯವ್ಯಾಮೋಹದಿಂದಂ ಮಱುಗಿದೊಡೆಮಗಿಂ ಬರ್ಕುಮೇ ಸದ್ವಿವೇಕಂ
ಮನದಿಂ ಗೆಂಟಾಯ್ತು ಕಾಲಾನಲಕಬಳಿತರಾರಾರ್ಗೆದಾರಾರ್ಗೆ ಶೋಕಾಂ
ಧನೆಯಪ್ಪೈ ಖೇದಮಂ ನಂ[1]ಬ[1]ದೆ ಜಿನಮತಮಂ ನಂಬು ನೀನೆಯ್ದೆ ಧರ್ಮಂ
ನಿನಗಾರ್ಮಂ ನೀನುಮಾನುಂ ತಳರ್ವಮೊಡನೆ ಸಂಸಾರಕಾಂತಾರದಿಂದಂ ೬

ಎಂದು ತನ್ನ ಭಾವಂಗೆ ಸಂಸಾರಸ್ವರೂಪಮನಾಮಹಾನುಭಾವನಱಿಪುವುದುಮಾತನ ಮಾತಂ ಕೇಳ್ದುಪಗತಶೋಕನುಮುಪಗತವಿವೇಕನುಮಾಗಿ ಧೃತಿಯುಂ ತಾಳ್ದಿ ಧೃತಿಷೇಣಂಗೆ ರಾಜ್ಯಾಭಿಷೇಕಪುರಸ್ಸರಂ ಸಾಮ್ರಾಜ್ಯಪದವಿಯಂ ಕೊಟ್ಟು ಬಾಹ್ಯಾಭ್ಯಂತರಪರಿಗ್ರಹಪರಿತ್ಯಾಗಂಗೆಯ್ದು ಪರಮತಪಸ್ಸಂಯಮಧರರಪ್ಪ ಯಶೋಧರಗುರುಗಳ ಪಕ್ಕದೆ ತಮ್ಮ ಮೈದುನಮಹಾರುತನುಂ ತಾನುಂ ಮತ್ತಂ ಪಲಂಬರಸುಮಕ್ಕಳ್ವೆರಸು ಪರಮಜಿನದೀಕ್ಷೆಯಂ ತ್ರಿಸಾಕ್ಷಿಕನಾಗಿ ಕೈಕೊಂಡು ಕಾಲಾವಸಾನದೊಳ್ ಸನ್ಯಸನಮರಣದಿನಾರಣಮೆಂಬ ಪದಿನೈದನೆಯ ಕಲ್ಪದೊಳ್ ರತ್ನತ್ರಯೋತ್ಸೇಧನುಂ ದ್ವಾವಿಂಶತಿಸಹಸ್ರವರ್ಷ ಸಂಕಲ್ಪವಿಕಲ್ಪಿತಾಮೃತಾಹಾರನುಮೇಕಾದಶಮಾಸನಿರ್ಯತ್ಸುರಭಿನಿಶ್ವಾಸನುಮಣಿಮಾದ್ಯಷ್ಟಗುಣೋಪೇತನುಮಾಗಿಯುಂ ಮಹಾಬಲನೆಂಬಂ ದೇವನಾಗಿ ಪುಟ್ಟೆ ವೈಮಾನಿಕಸುಂದರೀವದನಾರವಿಂದವಿಲೋಕವಿಲಾಸಮಣಿದರ್ಪಣಾಯಮಾನವಿಮಲಕಪೋಲಪುಳಕನಾದಂ. ಮಹಾರುತನುಮಾಕಲ್ಪದೊಳೆ ಮಣಿಕೇತುವೆಂಬೊಂ ದೇವನಾದನಾಗಿ ಸುರಲೋಕಸರೋವರಪರಿಸರೋತ್ತಂಸರಾಜನಾದಂ. ಅಂತವರಿರ್ವರುಂ ಗೀರ್ವಾಣಸುಖಮನನುಭವಿಸುತುಮಿರ್ದೊಂದುಸಮಯದಿನೊಮ್ಮೆ ನಮ್ಮಿರ್ವರೊಳಗಾರ್ ಮುನ್ನಂ ಮನುಷ್ಯಲೋಕಕ್ಕೆ ಪೋದರವರಂ ದೇವಲೋಕದೊಳ್[2]ದ್ದ[2]

---

1 ಬಿ (ಅ). 2 ರ್ದ (ಕ).

ವರ್ ಪೋಗಿ ತಮ್ಮಬಲ್ಲಂದದಿಂ ಪ್ರತಿಬೋಧಿಸಿ ವಿಷಯಸುಖಾನುಮುಖರಂ ದೀಕ್ಷಾ-ಭಿಮುಖರಂ ಮಾಳ್ಪುದೆಂದು ಮಹಾಬಲಮಣಿಕೇತುಗಳ್ ಕೃತಕಸಂಕೇತಂ ಮಾಡೆ ಜಯಸೇನಚರಮಹಾಬಳಂ ದಿವಿಜಂ ದಿವಿಜಲೋಕಸುಖಮನನುಭವಿಸಿ ಬಂದು ಜಂಬೂದ್ವೀಪದ ಭರತಕ್ಷೇತ್ರದ ಕೌಶಲದೇಶದಯೋಧ್ಯಾಪುರಮನಾಳ್ವ ಇಕ್ಷ್ವಾಕು-ವಂಶದ ಗುಣಮಣಿಸಮುದ್ರನೆನಿಸಿದ ಸುಭದ್ರವಿಜಯಂಗಂ ಶೃಂಗಾರಸಮುದ್ರವೇ-ಲಾಲೀಲೆಯೆನಿಸಿದ ಸುವೇಲಾದೇವಿಗಮತಿಕರಾಳಾಲೋಕನಕಬಳಿತಾರಾತಿನಗರಂ ಸಗರನೆಂಬೊಂ ತನಯನಾಗಿ ಸಪ್ತತಿಲಕ್ಷಪೂರ್ವಪರಮಾಯುಷ್ಯನುಂ! ಪಂಚಾಶದಧಿಕ ಚತುಶ್ಶತಪ್ರಮಿತಚಾಪೋತ್ಸೇಧನುಂ ಚಂಚಚ್ಚಾರುಚಾಮೀಕರಭಾಸನುಮೆನಿಸಿ ಪದಿನೆಂಟು ಲಕ್ಷಪೂರ್ವಕುಮಾರಕಾಲಂ ಪೋಗೆ ಮಹಾಮಂಡಳೇಶ್ವರಪದವಿಯ-ನಲಂಕರಿಸಿ ಮಹೀಮಂಡಲಮಂ ಪ್ರತಿಪಾಲಿಸಿ ಮತ್ತಮಷ್ಟಾದಶಲಕ್ಷಪೂರ್ವಕಾಲಾತಿ ಕ್ರಮದೊಳ್ ಚಕ್ರರತ್ನಂ ಪುಟ್ಟೆ ಸಕಲಚಕ್ರವರ್ತಿಯಾಗಿ ಸಾಮ್ರಾಜ್ಯಲಕ್ಷ್ಮಿಯುಂ ತಾಳ್ದಿ,

ಧರೆಯಂಪೂರ್ವಾದ್ರಿಯಂಸೇತುವಿನವಧಿರ್ದಪ*ರಾಂಭೋಧಿಯಿಂಹೈಮಧಾತ್ರೀ
ಧರದಿಂದೇಕಾತಪತ್ರಂ ನಿಜಭುಜವಿಜಯೋತ್ಸಾಹದಿಂ ತಾಳ್ದಿದಂದ್ವಿ
ಟ್ಕರಿಕುಂಭೋನ್ಮುಕ್ತಮುಕ್ತಾಫಳಕಲಿತಜಯಶ್ರೀವಧೂಹಾರಭಾಭಾ
ಸುರಬಾಹೋತ್ಖಾತಖಡ್ಗಪ್ರತಿಭಯವಿನಮದ್ರಾಜಕಂ ರಾಜರಾಜಂ

ರಾಜವತಿಯಾಯ್ತು ಧರೆ ಕಿಂ
ರಾಜರ್ ಪರಿಪಾಲಿಸುತ್ತುಮಿರೆ ಯುವರಾಜಾ
ರಾಜಾಧಿರಾಜನಿಂ[1]ಧರೆ[1]
ರಾಜ[2]ನ್ವ[2]ತಿಯಾದುದೆಸೆಯೆ ಸೌರಾಜ್ಯಗುಣಂ ೮

ಭುಜದಂಡಾವಿದ್ಧದಿಕ್ಚಕ್ರದೊಳಿಭಮದಧಾರಾಜಲಕ್ಲಿನ್ನವೀರ
ಧ್ವಜಿನೀಪಾದಾಹತಕ್ಷ್ಮಾವಲಯಮೃದಿತಮೃತ್ಪಿಂಡಮಂ ಭಾಜನಂ ಮಾ
ಡಿ ಜಸಕ್ಕತ್ಯುಗ್ರತೇಜೋಜ್ವಲನವಿಲಸಿತಂಗೆಯ್ದ ಹಸ್ತಂ ಸುಚಕ್ರ
ಧ್ವಜನಪ್ಪಂ ಚಕ್ರಿ ತಪ್ಪಿಲ್ಲೆನಿಸಿದನವನೀಚಕ್ರಮಂ ಚಕ್ರನಾಥಂ ೯

———

1 ದದೆ (ಅಕ). 2 ಸ್ಥ (ಇಉಎ).

ಅವನವನ್ರಾರಿನರೇಂದ್ರರುನ್ನತಿ ನಿಜಾಂಗುಷ್ಠಂಗಳೊಳ್ ಪಾಣಿಪ
ಲ್ಲವರಾಗಂ ತಲದೊಳ್ ವಿನಮ್ರಮಕುಟಾಲಂಕಾರಮಾಣಿಕ್ಯದೀ
ಪ್ತಿ ವಿತಾನಂ ನಖಪಙ್ಕ್ತಿಯೊಳ್, ನೆಲ[1]ಸಿದಂದತ್ಯುನ್ನ[1]ತಾಂಗುಷ್ಠಮೊ
ಪ್ಪುವುದಾತಾಮ್ರತಲಂ ಕನನ್ನಖಚಯಂ ಪಾದದ್ವಯಂ ಚಕ್ರಿಯಾ ೧೦

ಅಂತೆನಿಸಿ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಿರ್ಪನನ್ನೆಗಂ ಶರತ್ಸ-
ಮಯಸನ್ನಿಧಾನದೊಳ್,

ಅತಿವಿಶದಾಂಬರಮುದ್ಭಾ
ಸಿತಕಮಲಂ ರಾಜಹಂಸಸೇವ್ಯಂ ಶರದಾ
ಕೃತಿ ಪೋಲ್ವುದು ಸಗರನೃಪಾ
ಕೃತಿಯಂ ಚಂದ್ರಾಸ್ಯೆ ಚಂದ್ರಿಕಾರಮಣೀಯಂ ೧೧

ಶರದಂ ಬಂದುದು ನವ:ಗಿದು
ಶರವಂ ರಿಪುಶರದನೆನಿಪ ಸಗರನಿನೆಂದಂ
ದರಿಭೂಪರ್ [2]ತದ್ದಂ[2]ತೀ
ಶರದಪ್ರತಿಘಾತಮಾಗಳಾದಂತಿರ್ದರ್ ೧೨

ಮಿಸುಪ ಸುರೇಂದ್ರಚಾಪತತಿ ತೋರಣಮಾಗೆ ಮರಾಳನಿಸ್ವನಂ
ಪಸರಿಪಮಂಗಳಾನಕಪಟುಸ್ವನಮಾಗೆ ಶರತ್ಪ್ರವೇಶದೊಳ್
ದೆಸೆದೆಸೆಯಂ ಪೊದಱ್ದ ಧವಳಾಭ್ರಕುಳಂಗಳ ಬಳ್ಳವಳ್ಳಿ ಪೋ
ಲ್ತೆಸೆದುದು ಖೇಚರೀಜನಕೆ ಮಾಡಿದ ಬೆಳ್ಳಿಯ ಬಳ್ಳಿಮಾಡಮಂ ೧೩

ಅಂತು ಬಂದ ಶರತ್ಸಮಯದೊಳ್ ಸಗರಚಕ್ರವರ್ತಿ ಸಕಲದಿಗ್ವಿಜಯ
ಯಾತ್ರೋದ್ಯುಕ್ತಚಿತ್ತನಾಗಿ ವಿಜಯಾಭಿಷೇಕಪೂರ್ವಂ ಪೂರ್ವಾಭಿಮುಖನಾಗಿ,

ಸಂಗತಪೂರ್ಣಕುಂಭನುದಿತಧ್ವಜನುಲ್ಲಸಿತಾಗ್ರಪಲ್ಲವಂ
ಭೃಂಗನಿಕಾಯಗೇಯಯುತನಕ್ಷಯಹಸ್ತ ವಿಭಾಸಿ ರೋಚನಾ
ಪಿಂಗವಿಲೋಚನಂ ರುಚಿರಪುಷ್ಕರನುನ್ನತದಂತತೋರಣಂ
ಮಂಗಳಲಕ್ಷಣಂ ವಿಜಯಸಿಂಧುರಮಿರ್ದುದು ಪಟ್ಟವರ್ಧನಂ ೧೪

ಅಂತು ಪಣ್ಣಿ ಬಂದಿರ್ದ ನಿಜವಿಜಯಸಿಂಧುರದ ಬೆಂಗೆ ವಂದು
ಚತುರಂಗಬಲಂಬೆರಸು ತಳವಾರ್ಗಳ್—

1 ಸಿರಲ್ಕತ್ಯುನ್ನ (ಇಉಎ). 2 ಗೆತ್ತಂ (ಕ), ದತ್ತಂ (ಅ).

ಚುಂಬಿಸಿದುದು ದಿಗ್ವನಿತಾ
ಸ್ಯಾಂಬುಜಮಂ ಗಗನಗಂಗೆಯೊಳ್ ನೆರೆದುದು ನೀ
ಳ್ದಂಬರಲಕ್ಷ್ಮಿಯುಮಂ ವಿಟ
ನೆಂಬಿನಮಾಲಿಂಗಿ[1]ಸುತ್ತೆ[1] ಧೂಳೀಪಟಲಂ ೧೫

ಬತ್ತೆ ತೊಱೆ[2] ಬೆಟ್ಟುಗಳ್ ನೆಲೆ
ವತ್ತೆ ಪಡಲ್ವಡೆ ಮಹಾದ್ರುಮಂಗಳ ನೆಲನಂ
ಪೊತ್ತ ಫಣಿ[3]ತಿಣಱು[3]ತಿರೆ ನಡೆ
ದತ್ತಾಗಳ್ ಸಗರಚಕ್ರವರ್ತಿಯ ಕಟಕಂ ೧೬

ಮುಗಿಲಂ ಮುಟ್ಟಿತ್ತು ಸೇನಾರಜದೊಡನೆ ಜಯೋಭದ್ವಜಶ್ರೇಣಿ, ದಿಗ್ಭಿತ್ತಿಗಳಂ ಮುಟ್ಟಿತ್ತು ತೂರ್ಯಾರವದೊಡನೆ ಬಲಕ್ಷೋಭಶಬ್ದಂ ಪಯೋರಾಶಿಗಳಂ ಮುಟ್ಟಿತ್ತು ದಾನಪ್ಲವದೊಡನೆ ಪರಕ್ಷೋಣಿಪಾಲಾಂಗನಾದೃಗ್ವಿಗಳದ್ಬಾಷ್ಪಾಂಬುಧಾರಾಪ್ರಸರಮೆನೆ ನೃಪಂ ದಿಗ್ಜಯೋದ್ಯುಕ್ತನಾದಂ ೧೭

ಅಂತು ತನ್ನ ಬಲದಪರಿಮಿತಪದಾತಿಬಲಪದಾಘಾತದೊಳೆ ನೆಗೆದ ಮಂದೈಸಿ ಕೆಂಮೊಳಿಯೊಳ್ ಕೆಸರ್ಮಸಗಿಪ ಜಲದುರ್ಗಮೆಲ್ಲಂ ನೆಲದೊಳೋರಂತಾಗೆಯುಂ; ತನ್ನ ಬಲದಸಂಖ್ಯಾತತುರಗಬಲದ ಖುರಘಾತದೊಳೆ[3] ವನದುರ್ಗಮೆಲ್ಲಂ ನುರ್ಗುನುರ್ಗಾಗೆಯುಂ; ತನ್ನ ಬಲದಗಣಿತಗಜ[4]ಬಲದ[4] ಪದಾಘಾತದೊಳೆ ಗಿರಿದುರ್ಗಮೆಲ್ಲಂ ನುಚ್ಚುನೂಱಾಗೆಯುಂ; ತನ್ನ ಬಲದಪ್ರಮಿತರಥಬಲದ ಚಕ್ರಘಾತದೊಳೆ ಧರಾತಳಚಕ್ರಮೆಲ್ಲಂ ಕೃಷ್ಟಮುತ್ಕೃಷ್ಟಮಾದಂತಾಗೆಯಮಗುರ್ವಾಗೆ ಬಂದು ಗಂಗಾತಟಂಬಿಡಿದು ನಡೆದು ಮರುದ್ದೇವನೆಂಬ ಪನ್ನೆರಡನೆಯ ಮನುವಿನ ಕಾಲದಿಂ ತಾಳ್ದುತಿಪ್ರವೃದ್ಧಮಾಗಿರ್ದಪಸಮುದ್ರಮಂ ಪುಗದೆ, ಸುಭದ್ರವಿಜಯನಂದನಂ ಗಂಗಾವನವೇದಿಕಾದ್ವಾರದಿಂ ಪೊಕ್ಕು, ಸಾಲ್ವತ್ತೆಣ್ಗಾವುದವಗಲದಿಂ ಬೀಡಂ ಬಿಡಿಸಿ, ಪುರೋಹಿತಾದಿಕುಲವೃದ್ಧೋಪದೇಶರಾಗದಿಂ ತ್ರಿರಾತ್ರೋಪವಾಸಂಗೆಯ್ದು, ದರ್ಭಶಯನದೊಳಿರ್ದು ಪಂಚಪರಮೇಷ್ಠಿಪೂಜೆಯಂ ಮಾಡಿ, ಪಡೆವಳ್ಳನಂ ಪಡೆಗೆ ಕಾಪುವೇೞ್ದು ದಶವಾಹ[5]ಸಂವಾಹ್ಯ[5]ಮುಪ್ಪಜಿತಂಜಯಮೆಂಬ ವಿಜಯರಥಮನೇಱಿ, ಗಂಗಾದ್ವಾರದೊಳಗಣ ಲವಣಜಲಧಿಯಂ ಪೊಕ್ಕು, ಪನ್ನೆರಡು ಯೋಜನಂಬೋದಲ್ಲಿ–ರಥಮಾಣೆಯಿಟ್ಟಂತೆ ಮಾಣೆ ಕಂಡು ರಥಾಂಗಧರನುಂ, ಪ್ರಪ್ತಕೋಪಾವೇಶಿತಾಧರನುಮಾಗಿ—

1 ಸಿತ್ತು (ಇಉಎ). 2 ಪೊಱಲು (ಇಉಎಕ). 3 ದ ಬಲದಿಂ (ಕ). 4 ಘಟೆಯ (ಕ). 5 ಸನ್ನಾಹ್ಯ (ಇಉಎ).

ಜನನುತಸುಭದ್ರವಿಜಯನ
ತನಯುಂಗೆರಡನೆಯ ಚಕ್ರವರ್ತಿಗೆ ಸಗರಾ
ಧಿನೃಪತಿಗಿದಿರ್ಗೆಱಗುವುದೆಂ
ದು ನಾಮಮಂ ಬರೆವಮೋಘಶರದಿಂದೆಚ್ಚಂ ೧೮

ಅಂತೆ[1]ನಿಸಿದ[1] ಶರದಿಂದಿಸೆ ವೃಷಭಂ ಮಾಗಧನೆಂಬ ವ್ಯಂತರಾಧೀಶನಾಸ್ಫೋಟಿಸಿ ನುಡಿಯೆ ಮಾರ್ಕೊಂಡು ಕಲವೃದ್ಧರ್ ತಂದೆಱಗಿಸೆ ರತ್ನಕುಂಡಲಕೇಯೂರ-ಹಾರಪ್ರಭೃತಿಭೂಷಣಂಗಳನಲ್ಲಿ ಕೊಂಡು ಬಂದು ದಕ್ಷಿಣವಿಜಯುಕ್ಕೊಡರ್ಚಿಸಿ ವೈಜಯಂತೀದ್ವಾರದೊಳಗನೆ ಪೋಗಿ—

ಮದಕುಂಭೀರಕುಳಪ್ರಚಾರವಿಚಳದ್ವ್ಯಾಚ್ಛಾಳವೀಚೀಚಯಾ
ಸ್ಪದಮಂ ತುಂಗತರಂಗಸಂಗತತರಡ್ಡಿಂಡೀರ ಪಿಂಡಪ್ರಭಾ
ಸ್ಪದಮಂ ಕೌತುಕದಿಂದೆ ಚಕ್ರಪತಿ ತೀರೋಪಾಂತದೊಳ್ ನಿಂದು ನೋ
ಡಿದನಾಘೂರ್ಣಿತದಕ್ಷಿಣಾರ್ಣವಮನಕ್ಷೀಣಾ[2]ಪದ[2]ಕ್ಷೀಣಮಂ ೧೯

ಅಂತು ನೋಡಿ ವರತನುವೆಂಬನೆಱಗದಿರ್ದೊಡಾತನುಮನೆಱಗಿಸಿ ಕವಚ-ಕಂಠಾಭರಣಚೂಡಾಮಣಿಕನಕಕುಂಡಳಂಗಳಂ ತಂದು ಮುಂದಿಟ್ಟು ಬಂದು ಮುಖದೊಳ್ ತನಗೆ ಸಮ್ಮುಖನಪ್ಪುಮಂ ಅಂತೆ ಪ್ರಭಾಸಾಮರನನಪಗತಪ್ರಭಂ-ಮಾಡಿ ಸಂತಾನಕಮಾಲಾಮುಕ್ತಾಜಾಲಂಗಳನಲ್ಲಿಂಕೊಂಡು ಸಿಂಧುಸರಿತ್ತೀರಂ-ಬಿಡಿದು ವಿಜಯಾರ್ಧಾಚಳಮನೆಯ್ದೆ ವಂದು—

ಮೃದು [3]ವಾದ್ಯ[3] ಸ್ವನಗೀತ ನಿಸ್ವನ ನಟದ್ವಿದ್ಯಾಧರೀನಾಟ್ಯಸಂ
ಪದಮಂ ರತ್ನಮಯಪ್ರಸಿದ್ಧ ಶಿಖರಾಲಂಕಾರಸಿದ್ಧಾಲಯಾ
ಸ್ಪದಮಂ ಖೇಚರಚಕ್ರವರ್ತಿವಿಭವಪ್ರೋದ್ಭಾಸಿಯಂ ಮೆಚ್ಚಿ ನೋ
ಡಿದನಾಭೂಚರಚಕ್ರವರ್ತಿ ವಿಜಯಾರ್ಧಾದ್ರೀಂದ್ರನುಂ ರುಂದ್ರಮಂ ೨೦

ಇಡಿದಿರೆ ಗುಹಾಂಧಕಾರಂ
ಪೊಡರ್ದೆಸೆದಿರೆ ಚಂದ್ರಕಾಂತರುಚಿ ನಗದೊಂದೊಂ
ದೆಡೆಯೊಳ್ ಪೋಲ್ತೊಪ್ಪುವುದೊಂ
ದೆಡೆಯೊಳ್ ನೆಲಸಿರ್ದ ಕಾಳಮುಂ ಜೊನ್ನಮುಮಂ ೨೧

1 ಸಗಿದ (ಕ). 2 ಹದ (ಅ, ಕಪಾ). 3 ವಾಕ್ಯ (ಕಪಾ).

ನಿಚ್ಚಂ ಪಗಲಿನಕಾಂತದ
ಕಿಚ್ಚನಿರುಳ್ ಚಂದ್ರಕಾಂತದೊಱೆ[1]ಸಂ[1] ಪಡೆದಾ
ಕಿಚ್ಚಿ[2]ನದೆನದಿಪೆ[2] ಮಾಡುಗು
ಮಚ್ಚರಿಯಿಂ ಪಗಲುಮಿರುಳುಮಾವಿಜಯಾರ್ಧಂ ೨೨

ಕಲ್ಲಿನ್ನದೆ ಬೆಳೆದ ಪಸು
ರ್ಪುಲ್ಲೆಂದಾಸೆಯೊಳೆ ಸಾರ್ದು ಮರಕತದೊಡ್ಡಂ
ಗಲ್ಲನೆ ಕಾರ್ದು ಮೃಗಂಗಳ್
ಕಲ್ಲನೆ ಕನಲುತ್ತುಮಿರ್ಪುವಾಖಗನಗದೊಳ್ ೨೩

ಹರಿಣಧರಹರಿಣಂ ಪೂ
ಮರದಡಿಯೊಳ್ ಪೊಯ್ದು ಪಟ್ಟ ಪುಲಿಗಳಿವೆನಿಕುಂ
ಪರೆದರುಣಸಿತಾಸಿತಮ
ಪ್ಪ ರಾಗದಿಂ ಬೀಡೆವಟ್ಟ ಬೆಟ್ಟದ ಸಱೆಗಳ್ ೨೪

ವನದಹನಧೂಮ ನಿರ್ಜರ
ವನಪರ್ವತವಾತಸನ್ನಿಪಾತಪ್ರಭವಂ
ಘನಮದಱೊಳ್ ಕಱೆವುವು ಕಡ
ಲ ನೀರನುಪಕಾರಿಗನುಪಕಾರಿಗಳೊಳವೆ ೨೫

ಗಜದಂತಕಷಣಕಂಪಿತ
ಕುಜಕೂಜದ್ವಿಹಗರುತಮನಾಲಿಸಿ ಸಿಂಗಂ
ನಿಜಗುಹೆಯಂ ಪೊಱಮಟ್ಟುದು
ವಿಜಿಗೀಷುಗೆ ಸಂದ ಲಕ್ಷಣಂ ನಿಜಮೆ ವೊಲಂ ೨೬

ಗಜಮಸ್ತಕಮಸ್ತಿಷ್ಕದಿ
ನಜೀರ್ಣಮಾಯ್ತೆಂದು ಲಂಘಸಂಗೆಯ್ದವೊಲೇಂ
ಗಜರಿಪು ಲಂಘಿಸಿದುದೊ ಪವ
ನಜವದೆ ಶಿಖರಕ್ಕೆ ಶಿಖರದಿಂ ಖಗನಗದಾ ೨೭

---

1 ವಂ (ಅಇಉಎ). 2 ಸವನದಿಸೆ (ಇಉಎ).

ಗಿರಿಚರನದೀಚರೋಭಯ
ಚರಂಗಳಂ ಕಂಡು ಕಂಡು ಖಗನಗದ ವನಾಂ
ತರದೊಳ್ ಸಮುದಗ್ರೋಗ್ರ
ದ್ವಿರದಾಗಮುದೊಳ್ ಸಮಗ್ರನೆಂದಱಿದು ನೃಪಂ ೨೮

ಅಂತು ಭಾವಿಸುತಿರ್ಪನ್ನೆಗಂ;

ಸ್ರೋತಸ್ಸುರುಚಿರಪುಷ್ಕರ
ನಾತತ [1]ಖು[1]ಕ್ಷಂ ಗುಹಾನ್ವಿತಂ ಪ್ರಿಯವಂಶೋ
ಪೇತಂ ತುಂಗೋತ್ಸಂಗಸ
ಮೇತಂ ಕರಿರಾಜನೆನಿಸುಗುಂ ಗಿರಿರಾಜಂ ೨೯

ಉಪಗತವಂಶಂ ಸೂಚಿತ
ತಪುಷ್ಕರಂ ಬಹಳಕರ್ಣತಾಳಂ ಮದಲೋ
ಲುಪಮಧುಪಮಧುರಗೀತಂ
ದ್ವಿಪಪತಿ ಸಂಗೀತನಿಕರಮಿರ್ಪಂತಿರ್ಕುಂ ೩೦

ವನಕರಿಕಪೋಲಕಂಡೂ
ಯನದಿಂದಂ ಪಾಯೆ ಮದಜಲಾಸವರಸ ವಾ
ಸನೆಯಿಂದಿತರವನಂಗಳು
ಮನುಕರಿಪುವು ಸಪ್ತಪರ್ಣಪಾದಪವನಮಂ ೩೧

ವನಚರಿ ಬರೆ ವಿದ್ಯುಲ್ಲೇಖೆ ಬರ್ಪಂತೆ ಬೆನ್ನಂ
ವನಮೃಗರುಧಿರೋಲ್ಲಿಪ್ತಾಂಗನುತ್ತುಂಗಚಾಪಂ
ವಿನುತರಚಿತಚಂಚತ್ಕಿಂಕಿರಾತಂ ಕಿರಾತಂ
ಜನಿಯಿಸಿದನಿದಂ ಸಾವ್ಯಂ ಬರಲ್ ಶೋಣಮೇಘಂ ೩೨

ಗಳನಾದಂ ಸ್ಫುಟಮಂತ್ರನಾದಮಧರಂ ಬಂಧೂಕಪುಷ್ಪಂ ನಖಾ
ವಳಿ ದೇವಾವಳಿ ಕೇಶಸಂಸ್ಕರಣಧೂಪಂ ಧೂಮ ನಾನಾಲಸ
ತ್ಪುಳಕಂ ಚಂದನಚರ್ಚೆಯಾಗೆ ಕೆ[2]ಳ[2]ರಂ ಬಂಧುಗ್ರಹಾನುಗ್ರಹಂ
ಕೆಳ[3]ಱ[3]ದೊಡೆ ದರೀಗೃಹಂಗಳೆಸೆಗುಂ ವಿದ್ಯಾಧರದ್ವಂದ್ವದಿಂ ೩೩

1 ಠ (ಅಇಉಎ). ಲ (ಆಕ). 3 ದರ್ (ಅ).

ಸುಮನಸ್ಸೌರಭವಾದ್ಯದುದ್ಯದಳಿಮಾಲಾಗೀತಿ[1]ಯಿಂ ಮೆಚ್ಚಿ[1] ಕೇ
ಳಿ ಮದೋನ್ಮತ್ತವಿಕಾರಕೀರಮುಖವಾದ್ಯಾತೋದ್ಯಮಂ ಕೇಳ್ದು ಮೆ
ಚ್ಚಿ ಮಯೂರೀಲಟಹಪ್ರವೃತ್ತವಿಲಸನ್ನೃತ್ಯಂಗಳಂ ಮೆಚ್ಚಿ ನೋ
ಡೆ ಮರುಳ್ಚಿತ್ತು ಖಗಾದ್ರಿ ಚಕ್ರಧರನಂ ಸಂಗೀತಕಕ್ರೀಡೆಯಿಂ ೩೪

ಆಗಳ್ ವಿಜಯಾರ್ಧಾಚಳೇಂದ್ರಾಧಿಪತಿ ವಿಜಯಾರ್ಧಕುಮಾರಂ ವಿಜಯಾರ್ಧಾಭಿಷೇಕಪೂರ್ವಕಂ ಸಿಂಹಾಸನ ಕನಕಭೃಂಗಾರ ಧವಳಾತಪತ್ರ ಧವಳಚಾಮರಾದಿ ವಿಜಯಚಿಹ್ನಂಗಳಂ ಕೂಡಿಕೊಂಡು ಮಗುಳ್ದು ತಮಿಸ್ರಗುಹಾಸಮೀಪದೊಳ್ ವಿಜಯ [2]ಸ್ಕಂಧವಾರಣಮನಿರಿಸಿ[2] ಕೃತಮಾಲಾಮರನಂ ವಿಧೇಯೀಕೃತಂಮಾಡಿ ತಿಲಕಾದಿಚತುರ್ದಶಭೂಷಣಂಗಳಂ ಮೆಯ್ಗೆಮಾಡಿಸಿ ಸಿಂಧುವನವೇದಿಕೆಯ ತೋರಣದ್ವಾರದಿಂ ಪೊಕ್ಕು ವಿಜಯಾರ್ಧಚೂಳಿಕೆಯ ಸೋಪಾನಮನೇಱಿ ಸಿಂಧುನದಿಯ ಪಡುವಣ ವೇದಿಕೆಯ ತೋರಣದ್ವಾರದಿಂದಮುರ್ಚಿ ವಿಜ[3]ಯಾರ್ಧಾ[3]ದ್ವಾರದಿಂ ಪೊಕ್ಕು ವಿಜಯಾರ್ಧವೇದಿಕಾತೋರಣದ್ವಾರದಿಂ ಪೊಱಮಟ್ಟು ಪಶ್ಚಿಮಖಂಡಮನಖಂಡಭುಜದಂಡಪ್ರತಾಪದಿನಱುದಿಂಗಳ್ಗೆ ಸೇನಾನಾಯಕಂ ಸಾಧಿಸಿ ಮಗುಳ್ದು ಬರೆ ದಕ್ಷಿಣಭರತದ ನರರಂ ವಿದ್ಯಾಧರರನಡಿಗೆಱಗಿಸಿ ಬೞಿಯಂ ಮ್ಲೇಂಛಖಂಡಮಂ ಬಾಯ್ಕೆಳಿಸಿ ಚಕ್ರಪೂಜೆಗೆಯ್ದು ತದ್ಗಿರೀಂದ್ರಕಟಕಂಬಿಡಿದು ನಿಜವಿಜಯಕಟಕಮಂ ನಡೆಯಿಸಿ ಸಿಂಧುನದೀತೀರದ ದ್ವಿತಯಭಾಗದ ಮಹಾವಿಥೀದ್ವಯದಿಂ ಮಹಾಗುಹಾದ್ವಾರಮನೆಯ್ದಿ ಮಂದಗ[4]ತ್ತ[4]ಲೆಯೊಳ್ ಮಣಿರತ್ನಕಾಕಿಣೀರತ್ನಂಗಳೊಳ್ [5]ಬರೆದ[5] ಚಂದ್ರಾದಿತ್ಯಮಂಡಲದ ಬೆಳಗು ಬೆಳಗೆ ಸಿಂಧುವಿನ ತಡಿವಿಡಿದು ಚತುರಂಗಬಲಂಬೆರಸು ನಡೆದು [6]+[6] ನಿಜಸ್ಥಪತಿರತ್ನಪ್ರಯತ್ನನಿರ್ಮಿತಮಪ್ಪ ಸೇತುಬಂಧದಿಂದಮುನ್ಮಗ್ನಜಳೆಯುಮಂ [7]ನಿ[7]ಮಗ್ನಜಳೆಯುಮೆಂಬರಡುಱಿಕೆಯ ತೊಱೆಗಳಂ ಪಾಱಿಯ್ದು ಮಹಾಗುಹೆಯಂ ಪೊಱಮಟ್ಟು ವಿಜಯಾರ್ಧದುತ್ತರೋಪಕಂಠದೊಳ್ ಬೀಡಂ ಬಿಟ್ಟು ಮುನ್ನಿನಂತೆ ಪಶ್ಚಿಮಕ್ಕೆ ಸೇನಾಪತಿಯಟ್ಟಿ ಬಾಯ್ಕೆಳಿಸಿ ತಾನುಮುತ್ತರಾರ್ಧಖಂಡಮಾನಪ್ಪುಕೆ ಸಿಲೆ ಚಿ[8]ಳಾ[8]ತಾವರ್ತನರೆಂಬಿರ್ವರ್ ಮ್ಲೇಂಛರಾಜರ್ ತುಚ್ಛಪರಿಚ್ಛದರುಚ್ಚವಿಗ್ರಹಮನೆತ್ತಿಕೊಂಡು ನಿಚ್ಚಗಾಳೆಗದೊಳಚ್ಚಿಗಂಗೊಳಿಸಿ ತಮ್ಮ ಕುಲ[9]ದೈವಮ[9]ಪ್ಪ ಮೇಘಮುಖ[10]ರೆಂಬ ನಾಗಪ್ರಮುಖರಂ ಬೆಸಸೆ[10] ನೆಲನೆಲ್ಲಮನವರೇಕಾರ್ಣವಂ ಮಾಡಿದೊಡಡಿಯೊಳ್ ಪಸಿದ ಚರ್ಮರತ್ನಮುಂ ಮೇಲೆ ಪಿಡಿದ

---

1 ಯುಂ ಮೆಚ್ಚಿ (ಕ). 2 ಸ್ಕಂಧಾವಾರಮನಿಱಿಪಿ (ಕ). 3 ಯ (ಅಕ). 4 ಟ್ರ (ಕ). 5 ಪರಿದ (ಇಉಎ). 6 ನಿರ (ಅ). 7 ನಿ (ಅಕ) 8 ಳ (ಇಉಎ) 9 ದೇವರ (ಇಉಎ). 10 ರಂ ಬೆಸಸೆ (ಇಉಎ).

ಛತ್ರರತ್ನಮುಂ ಕಾಯೆ [1]ಕಾಕಿಣೀ[1]ರತ್ನದೊಳ್ ಬರೆದ ಚಂದ್ರಾದಿತ್ಯರ ಬೆಳಗಿನೊಳೇೞುದಿವಸಮಿರೆ ಭಗಳಿದೇಶಾಧೀಶತನೂಜೆಯಪ್ಪ ವಿದರ್ಭೆಗಂ ಸಗರಂಗಂ ಪುಟ್ಟಿದ ಭಗೀರಥನಪ್ರತಿರಥಸಕಲಚಕ್ರವರ್ತಿಸ್ಕಂಧಾ[2]ವಾರ[2]ಭಾರವತ್ತ್ಸ್ಕಂಧನಾಗಿ ನಿಜಪತಿಯ ವಿರಗಗನಗೋಚರರಥಂಗಳ್ ವಜ್ರದ ಗಿರಿ[3]ಗಳೇೞುಂ ಬೆರಸು ಮೇಘಮುಖರೊಳ್[3] ಕಾದೆ ಭಗೀರಥನ ವಿಕ್ರಮಗುಣಕ್ಕಂ ಚಕ್ರವರ್ತಿಪ್ರತಿಬದ್ಧಗಣಬದ್ಧದೇವರ ವಿದ್ಯಾವಿಜೃಂಭಣಕ್ಕಮಳ್ಕಿ ಮೇಘಮುಖರ್ ಸಂಗರಮುಖದೊಳ್ ಪರಾಙ್ಮುಖರಾಗೆ ಚಿಲಾತಾವರ್ತನರಾತಾವರ್ತನಪರಿವರ್ತನಂ ಬಂದು ತನ್ಮುಮಗಳ್ದಿರಂ ದಿವ್ಯರತ್ನಂಗಳಂ ಮುಂದಿಟ್ಟು ತನ್ನಡಿಗೆಱಗಿಸಿ ಸಂಧಾನಸಂಧಿಯಂ ಮಾಡೆ ಹಿಮವಂತಪರ್ವತದ ಸಿಂಧು[4]ಪ್ರಪಾತನಮನೆಯ್ದಿ ಸಿಂಧುದೇವಿಯಿಂ ವಿಹಿತಮಂಗಳಾಭಿಷಿಕ್ತನಾಗಿ ಭದ್ರಾಸನಮುಂ ಪಡೆದು ಹಿಮವತ್ಪರ್ವತದ ಕೂಟದೊಳ್ ಪೂರ್ವಕ್ರಮದೊಳೆ ತ್ರಿರಾತ್ರೋಪವಾಸನಾಗಿ ತದ್ವಿತಯವಾಸಿಗಳಪ್ಪ ನಾಗಯಕ್ಷಾದಿಗಳಂ ಬಂದು ಕಾಣ್ಬುದೆಂದು ನಿಜವಿಜಯನಾಮಾಂಕಿತಶರದಿನಿಸೆ ಹಿಮವತ್ಕುಮಾರಾದಿಗಳ್ ಬಂದು ತೀರ್ಥಜಲದಿನಭಿಷೇಕಂಮಾಡಿ ಗೋಶೀರ್ಷಚಂದನಮುಮಂ ಮಹೌಷಧಿಗಳುಮಂ ಕೊಟ್ಟು ಪೋಗೆ ತಿಂಕವೊಗದೆ ಬಂದುತ್ತರಭರತಮಧ್ಯಮಖಂಡಮಧ್ಯವರ್ತಿಯಪ್ಪ ವೃಷಭಾಚಲಮಂ ಕಂಡು ಮನದೆಗೊಂಡು ನಿಜವಿಜಯಪ್ರಶಸ್ತಿಯನಲ್ಲಿ [5]ಬರೆಯಿಸಲೆಂದು[5] ಪೋಗಿ ಪುರಾತನಚಕ್ರವರ್ತಿಗಳ ದಿಗ್ವಿಜಯಕೀರ್ತಿಗಳಂ ಬಾಜಿಸೆ ಕೇಳ್ದು ಗಳಿತಗರ್ವನಾಗಿ ಕಿಱುಪೆಡೆಯ ದಂಡರತ್ನದಿಂ ತೊಡೆಯಿಸಿ ಕಳೆದು ಭರತೇಶ್ವರಚಕ್ರವರ್ತಿಯ [6]ಪ್ರಶಸ್ತಿಯ ಸಮೀಪದೊಳ್ ನಿಜ ಪ್ರಶಸ್ತಿಯಂ[6] ಕಾಕಿಣೀರತ್ನದೊಳ್ ಕವಿರತ್ನನಿಂ ಬರೆಯಿಸಿ ಗಂಗಾದ್ವಾರಕ್ಕೆ ವಂದು ಗಂಗಾದೇವಿಯಿಂದಭಿಷಿಕ್ತನಾಗಿ ಸಿಂಹಾಸನಮಂ ಪಡೆದು ವಿಜಯಾರ್ಧಕಾಂಡಕಪ್ರಪಾತಗುಹೆಯ ವಜ್ರಕವಾಟಮಂ ದಂಡರತ್ನದಿಂ ಜರ್ಝರೀಕೃತಂಮಾಡಿ ಗುಹೆ[7]ಯ[7] ಬೆಂಕೆಯಾಱುವನ್ನೆಗಂ ಪೂರ್ವದಿಗ್ಭಾಗದ ಮ್ಲೇಚ್ಛಖಂಡಮಂ ಬಾಯ್ಕೇಳಿಸಿ ಬರೆ ದಕ್ಷಿಣೋತ್ತರಗಿರ್ಯುಭಯಶ್ರೇಣಿಗಳ ದೇಶಾಧೀಶ್ವರರ್ ಕನ್ಯಾರತ್ನಂಗಳಂ ಕೊಟ್ಟು ಅನರ್ಘ್ಯರತ್ನಂಗಳಂ [8]ಬಱಿವೞಿ[8]ಗೊಟ್ಟು ಪೋಗೆ ಮುನ್ನಮೇ ತೆಱದಱುದಿಂಗಳಾಱುದ ಕಾಂಡಕಪ್ರಪಾತಗುಹೆಯಿಂ ಪೊಱಮಡುವಾಗಳ್ ಗುಹಾಕೂಟಗಿರಿನಿವಾಸಿ ನಾಟ್ಯಮಾಳಾಮರನಿದಿರ್ಗೊಂಡು ಕುಂಡಳದ್ವಯಮೈಕ್ಯ

---

1. ಮಣಿ (ಇಉಎ). 2 ವಾರಣ (ಇಉಎ.) 3. ಗೆಗಳುಂ ಮುಂದಿಟ್ಟು ತನ್ನಡಿಗೆಱಿಗೊಳ್ (ಇಉಎ). 4 ಪ್ರತಾನ (ಇಉಎ). 5 ಬರೆಯುಲೆಂದು (ಇಉಎ). 6 ಪ್ರಶಸ್ತಿಯುಂ (ಅಕ). 7 ಯಂ (ಇಉಎ). 8 ಬಳ್ಳವಳ್ಳಿ (ಕ).

ಕ್ರಮಾಲೆಗಳಂ ಕುಡೆ ಕೊಂಡು ಪೂರ್ವದಿಗ್ಭಾಗದ ಮ್ಲೇಚ್ಛ[1]ಖಂಡಮಂ[1] ಬಾಯ್ಕೇಳಿಸಿ ತನ್ವೇದಿಕೆಯ ತೋರಣದ್ವಾರದಿಂ ಪೊಱಮಟ್ಟು ಷಟ್ಖಂಡಮಂಡಲಾಧೀಶ್ವರಂ ಅಱುವತ್ತಾಱುಸಾಸಿರವರ್ಷಂ ದಿಗ್ವಿಜಯಂಗೆಯ್ದು ಸಿದ್ಧದಿಗ್ವಿಜಯನಾಗಿ ಸರ್ವತೋಮೇದಿನೀಶ್ವರಕ್ಕೆ ವಂದು ಸಜ್ಜಾತಿತ್ವಮುಂ ಸುರೇಂದ್ರತ್ವಮುಂ ಸದ್ಗೃಹಸ್ಥತ್ವಮುಂ ಸಾಮ್ರಾಜ್ಯತ್ವಮುಂ ಪರಮಾರ್ಹಂತ್ಯಮುಂ ನಿರ್ವಾಣತ್ವಮುಮೆಂಬ ಸಪ್ತಪರಮಸ್ಥಾನಭಾಗಿಯಾದ ಭಗವದರ್ಹದಜಿತಭಟ್ಟಾರಕನ ಪರಿನಿರ್ವಾಣಕಲ್ಯಾಣಪವಿತ್ರಕ್ಷೇತ್ರಮುಂ ಕಂಡು ಮೂಱು ಸೂಟ್‌ ಬಲವಂದು ವಿವಿಧಾರ್ಚನೆಗಳಿಂದರ್ಚಿಸಿ ಕರಕಮಲಮುಕುಳಾಲಂಕೃತಶಿರಸ್ಕನುಮೇಕಾಗ್ರಮನಸ್ಕನುಮಾಗಿ—

ಪರಮಶ್ರೀಕುಲಸದ್ಮನಂ ಗುಣಗಣೋಪೇತಂ ಪ್ರಭಾನೂನಕೇ
ಸರಮಾಸಕ್ತ ವಿನೇಯಭೃಂಗನಿಕರಂ ಭಕ್ತಿಪ್ರಣಾಮಾಮರೇ
ಶ್ವರಚಕ್ರೇಶ್ವರ ಪನ್ನಗೇಶ್ವರ ಶಿಖಂಡೋತ್ತಂಸಮಸ್ತಂ ಮನ
ಸ್ಸರಸೀಮಧ್ಯದೊಳೊಪ್ಪುತಿರ್ಕಜಿತತೀರ್ಥೇಶಕ್ರಮಾಂಭೋರುಹಂ ೩೫

ಎಂದು ದ್ವಿತೀಯತೀರ್ಥೇಶ್ವರನಂ ದ್ವಿತೀಯಚಕ್ರೇಶ್ವರನದ್ವಿತೀಯಭಕ್ತಿಯಿಂ ಸ್ತುತಿಯಿಸಿ ಸಿದ್ಧಭಕ್ತಿಯಂ ಶ್ರುತಭಕ್ತಿಯಂ ಚಾರಿತ್ರಭಕ್ತಿಯಂ ಯೋಗಭಕ್ತಿಯಂ ಗೆಯ್ದು ನಿರ್ವಾಣಭಕ್ತಿಯಿಂ ತ್ರಿಃಪ್ರದಕ್ಷಿಣಂಗೆಯ್ದು ಸಿದ್ಧಶೇಷೆಯಂ ಕೊಂಡು ಜಗತ್ಪ್ರಸಿದ್ಧಮಪ್ಪ ಸರ್ವತೋದಪರ್ವತದೊಳುತ್ತುಂಗತೋರಣಂಗಳುಮಪ್ಪನೇಕಚೈತ್ಯಾಲಯಂಗಳಂ ಸ್ಥಪತಿರತ್ನಂಗಳಿಂ ಮಾಡಿಸಿ ಮಗುೞ್ದು ಬಂದು ನಿಜವಿಜಯರಾಜಧಾನಿಯನಯೋಧ್ಯಾಪುರಮಂ ಪುಗುವಾಗಳ್ —

ಮಸೆದಂಗಜನಲರ್ಗಣೆಯವೊ
ಲೆಸೆದೊಪ್ಪುವ ನಿಡಿಯ ಬೞಿಯ ತುಱುಗೆವೆಗಣ್‌ ಕ
ಣ್ಗೆಸೆಯೆ ನಡೆ ನೋಡಿದರ್‌ ಭಾ
ವಿಸಿ ಸಗರನ [2]ನಸಿಯ[2] ಪಸಿಯ ಪೊಸಜವ್ವನೆಯರ್‌ ೩೬

ಅಗಲಿತೊಳಗಬ್ಜಾಕೃತಿಯಿಂ
ಮುಗಿಲಟ್ಟಣೆಯೊಳಗೆ ಚಂದ್ರಬಿಂಬಾಕೃತಿಯಿಂ

---

1 ಕಾಂಡಮಂ (ಇಉಎ). 2, ಸಿರಿಯ (ಇಉಎ.)

ಪೆಂಗವೊಪ್ಪೆ ಮೀನಲೋಚನೆ
ಮೃಗೇಕ್ಷಣವೆ ಸಗರನೃಪನನಭಿವೀಕ್ಷಿಸಿದಳ್ ೩೭

ಸ್ಖಲಿತಗತಿ ಲುಲಿತಕುಂತಲೆ
ವಲಿತನಿಜಗ್ರೀವೆ ಮಗುಳ್ದು ನೋಡಿದಳೊರ್ವಳ್
ಗಲಿತವಃ[1]ದೆ[1] ಚಲಿತಮಾನಸೆ
ಲಲಿತಾಂಗನನೊಲ್ದು ಸಗರಚಕ್ರೇಶ್ವರನಂ ೩೮

ಪವನಾಬ್ಜಾಸವಗಂಧಲಂಪಟರಟದ್ಭೃಂಗಗಳಂ ಸೋ[2]ವ[2]ಲೆ
ತ್ತಿದ ನೀಲೋತ್ಪಲಮಾಲೆಯಂ ದ್ವಿಗುಣಿಸಲ್ಕರ್ತತ್ತು ಕರ್ಣಾಂತಗಾ
ಮಿದಳತ್ಪಂಕಜಪತ್ರಶೋಭಿ ಕುಮುದಜ್ಯೋತ್ಸ್ನಾವದಾತಪ್ರಭಂ
ಮದನೋತ್ತೇಜಿತಬಾಣವಿಭ್ರಮಮಪಾಂಗಾಲೋಕನಂ ನಲ್ಲಳಾ ೩೯

ಅಂತು ನಗರಜನ ನಾರೀಜನವಿಲಾಸಮುಮಂ ನಗರಮುಮನೊಡನೊಡನೆ ಪೊಕ್ಕು ಪುರಜನಂಗಳ್ ಪಾದಾಭಿಷೇಕಂಗೆಯ್ಯೆ ಮೂರ್ಧಾಭಿಷಿಕ್ತಮಹಾಕ್ಷತ್ರಿಯರಿಂ ಸಾರ್ವಭೌಮರಾಜ್ಯಾಭಿಷಿಕ್ತನುಂ ಮಹೋತ್ತುಂಗಸಿಂಹಾಸನಾಸೀನನುಮಾಗಿ,

ಧರಣೀಚಕ್ರಂ ಪ್ರಶಾಂತಕ್ಕಗಿಯೆ ಸಕಲದಿಕ್ಚಕ್ರಮುಲ್ಲಾಡೆ ವಿದ್ಯಾ
ಧರಚಕ್ರಂ ಜೀಯ ದೇವೆಂದಡಿಗೆಱಗೆ ಜಗಚ್ಚಕ್ರದೊಳ್ ಕೀರ್ತಿಯಂ ಬಿ
ತ್ತರಿಸುತ್ತುಂ ಚಕ್ರವರ್ತಿಪ್ರಥಿತಭುವನಸಾಮ್ರಾಜ್ಯಮುಂ ತಾಳ್ದಿ ಜಾತಾ
ದರದಿಂದಂ ಚಕ್ರಪೂಜಾಪರಿಕರವಿಧಿಯಂ ಮಾಡಿದಂ ಚಕ್ರನಾಥಂ ೪೦

ಇದು ಸಕಲ ಮುನೀಂದ್ರ ವೃಂದ ವೃಂದಾರಕ ಶ್ರೀಮದಜಿತಸೇನ ಭಟ್ಟಾರಕ
ಶ್ರೀಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ
ಶ್ರೀಮದಭಿನವ ಕವಿಚಕ್ರವರ್ತಿ
ಕವಿರತ್ನ ವಿರಚಿತ
ಶ್ರೀದಾನಚಿಂತಾಮಣಿ ವಿನಿರ್ಮಾಪಿತ
ಶ್ರೀಮದಜಿತತೀರ್ಥಕರ ಪುರಾಣತಿಲಕದೊಳ್
–ದಿಗ್ವಿಜಯ ವರ್ಣನಂ ನವಮಾಶ್ವಾಸಂ–

1 ನೆ (ಎ). 2. ಯು (ಅಇಉಎ).

ದಶಮಾಶ್ವಾಸಂ

ಶ್ರೀಮಹಿತ ಧರ್ಮಚಕ್ರ
ಸ್ವಾಮಿ ಜಗಚ್ಚಕ್ರವಲ್ಲಭಂ ತ್ರಿಭುವನ ಚೂ
ಡಾಮಣಿ ಮಾಱ್ಕಜಿತಂ ಸುಖ
ಧಾಮಕನಕಳಂಕಚರಿತನಪಗತದುರಿತಂ ೧

ಎಂದಜಿತನಾಥಂಗೆ ನಮಸ್ಕಾರಂಗೆಯ್ದು ಜಿನಪೂಜೆಯುಮಂ ಚಕ್ರಪೂಜೆಯುಮಂ ಮಾಡಿ ಸಗರಚಕ್ರೇಶ್ವರಂ ಗ್ರಾಮನಗರಖೇಡಖರ್ವಡಮಡಂಬಪತ್ತನ ದ್ರೋಣಾಮುಖಸಂವಾಹ[1]ನ[1] [2]ವಜ್ರ[2]ಸ್ಥಾನೀಯ ಪ್ರಮುಖತ್ರಿಮಾನವ ಲಾಟ[3]+[3]ತತ್ಸಗೌಡ ಮಹಾರಾಷ್ಟ್ರಾದ್ಯಷ್ಟಾದಶ ವಿಷಯಭಾಷಾಸಮನ್ವಿತನಪರಿವೃತ ಷಟ್ಖಂಡ [4]ಭ[4]ರಿತಮಪ್ಪ ಭರತಮಂ ಭರತನಂತೇಕಚ್ಛತ್ರಚ್ಛಾಯಸ್ವಾಯತ್ತಮುಂ ಆಜ್ಞಾವಿಧೇಯಮುಮಂ ಮಾಡಿ ವಜ್ರವೃಷಭನಾರಾಚಸಂಹನನುಂ ಚರಮಶರೀರನುಂ ಸಮಚತುರಸ್ರಶರೀರಸಂಸ್ಥಾನನುಂ ಚತುಷ್ಟಯಲಕ್ಷಣಧರನುಂ ಅನೇಕವ್ಯಂಜನಾಲಂಕೃತನುಂ ಅನಂತವೀರ್ಯನುಂ ಅಪ್ರತಿಹತಶಾಸನನುಮಾಗಿ ಮೂವತ್ತಿಚ್ಛಾಸಿರ ಜನಪದಂಗಳಿಂ ಮೂವತ್ತಿಚ್ಛಾಸಿರ ಮಹಾಮಕುಟಬದ್ಧರಿಂ ಮೂವತ್ತಿಚ್ಛಾಸಿರರ್ ವಿದ್ಯಾಧರದೇವಿಯರಿಂ, ಮೂವತ್ತಿಚ್ಛಾಸಿರ್ವರ್ ಜನಪದಕಲ್ಯಾಣರಿಂ, ಮೂವತ್ತಿಚ್ಛಾಸಿರ್ವರ್ ಕಲ್ಯಾಣಿಯರಿಂ ಅಂತು ತೊಂಭ[5]ತ್ತ[5]ಱುಸಾಸಿರಮಂತಃಪುರಂಗಳಿಂ ಮೂವತ್ತಿಚ್ಛಾಸಿರ ಗೀತನಾಟ್ಯಶಾಲೆಗಳಿಂ ಎಪ್ಪತ್ತುಸಾಸಿರ ಪುರಂಗಳಿಂ ತೊಂಬತ್ತಾಱುಕೋಟಿ ಗ್ರಾಮಂಗಳಿಂ ತೊಂಭತ್ತೈಸಾಸಿರ ದ್ರೋಣಾಮುಖಂಗಳಿಂ ನಾಲ್ವತ್ತೆಣ್ಸಾಸಿರ ಪಟ್ಟಣಂಗಳಿಂ ಪದಿನಾಱುಸಾಸಿರ ಖೇಡಂಗಳಿಂ ಐವತ್ತಾಱು ಅಂತರದ್ವೀಪಂಗಳಿಂ

---

1 ಕ (ಅಕ). 2 ವ್ರಜ (ಇ). 3 ವ (ಅ). 4 ಚ (ಇಎ). 5 ತ್ರಾ'(ಇಉಎ).

ಪದಿನಾಲ್ಸಾಸಿರ ಸಂವಾಹಸಂಗಳಿಂ ಅನೇಕಕೋಟಿ ಪ್ರಮಾಣ[1]ಸ್ಥಾ[1]ಳಿಗಳಿ-ನೊಂದು ಲಕ್ಕೆ ಕೋಟಿ [2]ಧೇನು[2]ಗಳಿಂ, ಮೂಱುಕೋಟಿ ಗೋಮಂಡಲಂಗಳಿಂ, ಎಪ್ಪತ್ತೆಂಟುಸಾಸಿರಂ ಏಳ್ನೂಱು ಕುಕ್ಷಿನಿವಾಸಂಗಳನೆಪ್ಪತ್ತೆಣ್ಛಾಸಿರ ದುರ್ಗಾದಿ-ಗಳಿಂ, ಪದಿನಾಱು ಸಾಸಿರ್ವರ್ ಮ್ಲೇಚ್ಛರಾಜರಿಂ, ಎಂಭತ್ತು ನಾಲ್ಕು ಲಕ್ಕೆ ಭದ್ರಹಸ್ತಿಗಳಿಂ, ಅನಿತೆ ರಥಂಗಳಿಂ, ಪದಿನೆಂಟುಕೋಟಿ ಜಾತ್ಯಶ್ವಂಗಳಿಂ, ಎಂಭತ್ತುನಾಲ್ಕುಕೋಟಿ ಪದಾತಿಬಲಂಗಳಿಂ ನೆಱೆದ ಸಮ್ರಾಜ್ಯಲಕ್ಷ್ಮಿಗಧಿಪತಿ-ಯಾಗಿ ಮತ್ತಂ ಲೌಕಿಕವಾರ್ತಾಸಿವರ್ತನಮಪ್ಪ ಪಲವುಂ ತೆಱದ ಪಱ[3]ಗಳುಂ ಷಟ್ಕರ್ಮಸಾಧನಮಪ್ಪ ವಸ್ತುಗಳಂ ದಿವ್ಯಶಯ್ಯಾಸನ ನಾನಾಸದನಂಗಳುಮಂ, ಗೋಧೊಮಾದಿ ಧಾನ್ಯಘೃತಾದಿ ರಸಂಗಳುಮಂ, ದೂಕೂಲಾದಿ ವಿಚಿತ್ರ ವಸ್ತ್ರ-ವಿಶೇಷಂಗಳುಮಂ, ಸ್ತ್ರೀಪುರುಷಯೋಗ್ಯ ವಿವಿಧಾಭರಣಂಗಳುಮಂ, ಆರ್ ಕೊಳ್ವೊಡಂ ತಡೆಯುದ ಕನಕರಾಶಿಯುಮಂ,ಪದ್ಮರಾಗ ಮರಕತ ವಜ್ರ ಮುಕ್ತಾ-ಫಲ ರತ್ನಂಗಳುಮನನುಕ್ರಮದಿಂ ಶ್ರೀಗೃಹದೊಳ್ ಪುಟ್ಟೆ ಕುಡುವ,ಕಾಲ ಮಹಾಕಾಲ ನೈಸರ್ಪ,ಪಾಂಡುಕ,ಪದ್ಮ,ಪಿಂಗಳಕ ಮಾಳವಕ ಶಂಖ ಸರ್ವರತ್ನ-ಮೆಂಬ ನವನಿಧಿಗಳುಂ ಆಯುಧಶಾಲೆಯೊಳ್ ಪುಟ್ಟಿದ ಚಕ್ರಾಸಿದಂಡಛತ್ರ-ರತ್ನಂಗಳುಂ, ಶ್ರೀಗೃಹದೊಳ್ ಪುಟ್ಟಿದ ಮಣಿಚರ್ಮಕಾಕಿಣೀರತ್ನಂಗಳುಂ, ವಿಜಯಾರ್ಧದೊಳ್ ಪುಟ್ಟಿದ ಗಜಾಶ್ವಸ್ತ್ರೀರತ್ನಮುಂ, ಅಯೋಧ್ಯೆಯೊಳ್ ಪುಟ್ಟಿದ ಸೇನಾಪತಿ ಗೃಹಪತಿ ಸ್ಥಪತಿ ಪುರೋಹಿತರತ್ನಂಗಳುಂ--ಇಂತು ಪದಿನಾಲ್ಕು ಜೀವಾಜೀವ ರತ್ನಂಗಳುಂ,ಪದಿನಾಱು ಸಾಸಿರ್ವರ್ ಗಣಬದ್ಧದೇವರುಂ,ಕ್ಷಿತಿಸಾಗರ-ಮೆಂಬ ಮಹಾಪ್ರಾಕಾರಮುಂ,ಸರ್ವತೋಭದ್ರಮೆಂಬ ಗೋಪುರಮುಂ, ನಂದ್ಯಾ-ವರ್ತಮೆಂಬ ಶಿಬಿರನಿವೇಶಮುಂ, ವೈಜಯಂತಿಯೆಂಬ ಮಹಾಪ್ರಾಸಾದಮುಂ, ದಿಕ್ ಸ್ವಸ್ತಿಕಮೆಂಬ ಸುಧಾಭೂಮಿಯುಂ, ಸುವಿಧೆಯೆಂಬ ಚಕ್ರಮುಮ[3]ವ್ವಾ[3]-ಯಷ್ಟಿಯುಂ, ಗಿರಿಕೂಟಮುಮೆಂಬ ದಿಗವಲೋಕನಗೃಹಮುಂ, ವರ್ಧಮಾನ-ಮುಮೆಂಬ ಮಹಾಪ್ರೇಕ್ಷಾಗೃಹಮುಂ,ಮಹಾಘರ್ಮಾಂತಮೆಂಬ ಧಾರಾಗೃಹಮುಂ, ಗೃಹಕೂಟಮೆಂಬ ವರ್ಷಾವಾಸಮುಂ,ಪುಷ್ಕರವತಿಯುಮೆಂಬ ಶಯನಸದನಮುಂ, ಕುಬೇರಕಾಂತಮೆಂಬ ಭಂಡಾರಮುಂ,ವಸುಧಾಗಾರಮೆಂಬ ಕೋಷ್ಠಾಗಾರಮುಂ, ಜೀಮೂತಮೆಂಬ ಮಜ್ಜನಗೃಹಮುಂ, ರತ್ನಮಾಲೆಯುಮೆಂಬ ವಸಂತಿಕೆಯುಂ, [4]ದೇವ[4]ರಮ್ಯಮೆಂಬ ಪಟಕುಟಿಯುಂ ಮಹಾಮಹಿಮೆಯೆಂಬ ಶಯ್ಯೆಯುಂ,ಅನು-ತ್ತರಮೆಂಬ ಸಿಂಹಾಸನಮುಂ, ಯಕ್ಷಕರವಿಧೂಯಮಾನಂಗಳಪ್ಪನುಪಮಂಗಳೆಂಬ ಮೂವತ್ತೆರಡುಂ ಚಾಮರಂಗಳುಂ,ವಿದ್ಯುತ್ಪ್ರಭಮೆಂಬ ಮಣಿಕುಂಡಲಮುಂ,ವಿಷ-

1 ಸ್ಥ (ಕ). 2 ಧನು (ಕ,ಪಾ). 3 ನಾ (ಇಉಎ). 4 ದೇವಾ (ಅಇಉಎ).

ಮೂಷಿಕೆಗಳೆಂಬ ಪಾವುಗೆಗಳುಂ, ಅಭೇದ್ಯವೆಂಬ ಕವಚಮುಂ, ಅಜಿತಂಜಯಮೆಂಬ ರಥಮುಂ, ಕೋದಂಡಮೆಂಬ ಚಾಪಮುಮಮೋಘಮೆಂಬ ಶರಮುಂ, ವಜ್ರವಂತಮೆಂಬ ಶಕ್ತಿಯುಂ, ಶೃಂಗಾರಮೆಂಬ ಕೊಂತಮುಂ, ಲೋಹವಾಹಿನಿಯೆಂಬ [1]ಸುರಿಗೆ[1]ಯುಂ, ಮನೋವೇಗಮೆಂಬ ಕಣೆಯುಂ, ಭೂತಮುಖಮೆಂಬ ಖೇಟಕಮುಂ,ಸುದರ್ಶನಮೆಂಬ ಚಕ್ರರತ್ನಮುಂ, ಚಂಡವೇಗಮೆಂಬ ದಂಡರತ್ನಮುಂ, ವಜ್ರಮಯಮೆಂಬ ಚರ್ಮರತ್ನಮುಂ, ಚೂಡಾಮಣಿಯೆಂಬ ಮಣಿರತ್ನಮುಂ, ಚಿಂತಾಮಣಿಯೆಂಬ ಕಾಕಿಣೀರತ್ನಮುಂ, ಸೂರ್ಯರತ್ನಮೆಂಬ ಛತ್ರರತ್ನಮುಂ,ನಂದಕಮೆಂಬ ಖಡ್ಗರತ್ನಮುಂ,ಅಯೋಧ್ಯನೆಂಬ ಸೇನಾಪತಿಯುಂ, ಬುದ್ಧಿ[2]ಸಾಗರ[2]ನುಮೆಂಬ ಪುರೋಹಿತನುಂ,ಕಾಮ[3]ವೃಷ್ಟಿ[3]ಯೆಂಬ ಗೃಹಪತಿಯುಂ, ಭದ್ರಮುಖಮೆಂಬ ಸ್ಥಪತಿಯುಂ,ವಿಜಯಪರ್ವತಮೆಂಬ ಗಜಮುಂ,ಪವನಂಜಯಮೆಂಬ ವಾಜಿಯುಂ, ಸುಭದ್ರೆಯೆಂಬ ಸ್ತ್ರೀರತ್ನಮುಂ, ದ್ವಾದಶಯೋಜನಂಬರಮೆಸೆವ ಪಾನಂದಿಗಳೆಂಬ ಪನ್ನೆರಡುಂ ಭೇರಿಗಳುಂ, ಅನಿತೆ ವಿಜಯಘೋಷಮೆಂಬ ಪಟಹಂಗಳುಂ,ಗಂಭೀರಾವರ್ತನಂಗಳುಮೆಂಬಿಪ್ಪತ್ತುಂ ನಾಲ್ಕುಂ ಶಂಖಂಗಳುಂ, ನಾಲ್ವತ್ತೆಂಟುಕೋಟಿ ಪತಾಕೆಗಳುಂ, ವೀರಾಂಗದಂಗಳೆಂಬ ಹಸ್ತಕಟಕಂಗಳುಂ, ಗೋದಿವ್ಯಾಹಾರಮುಮಮೃತರೂಪಂಗಳೆಂಬ ಭಕ್ಷ್ಯಸ್ವರೂಪಂಗಳುಂ, ಅಮೃತಕಲ್ಪವೆಂಬ ಸ್ವಾದುವುಂ, ಅಮೃತವೆಂಬ ಪಾನಮುಂ, ಮುನ್ನೂಱಱುವರ್ ಶರೀರವೈದ್ಯರುಂ,ಅರುವತ್ತುಸಾಸಿರ್ವರ್ ಮಕ್ಕಳುಂ ಬೆರಸು ಇಂತು ಸಕಲ ಚಕ್ರವರ್ತಿಸಾಮ್ರಾಜ್ಯಪರಿಕರಪರಿವೃತನಾಗಿ

ದಿವ್ಯಂ ಪುರಂ ರತ್ನಮಯೋ ನಿಧಿಶ್ಚ
ದಿವ್ಯಾಂಬರಾಚ್ಛಾ[4]ದ[4]ನಭಾಜನೇ ಚ
ದಿವ್ಯಾನಿ ಶಯ್ಯಾಸನವಾಹನಾನಿ
ದಿವ್ಯಾನಿಮಾಂಶ್ಚಾರ್ಥದಶಾಂಗಭೋಗಾಃ

ಎಂಬೀ ದಶಾಂಗಭೋಗದೊಳ್ ಕೂಡಿ ಸುಖಮಿರ್ದು ಒಂದು ದಿವಸಂ ತನ್ನ ಪೊಱಲ ಸಿದ್ಧವನದೊಳ್ ಶ್ರೀಭಟ್ಟಾರಕರ್ ಚತುರ್ಮುಖಪ್ರತಿಮಾಯೋಗಧಾರಿಗಳ್ ಉತ್ಪನ್ನಕೇವಳಜ್ಞಾನಿಗಳಾಗಿರ್ಪರೆಂಬುದಂ ವನಪಾಲಕನಿಂ ಕೇಳ್ದು ಸಕಲ ಮಹೀಪಾಲಸಮುದಿತಧರ್ಮಾನುರಾಗದಿಂದಾನಂದಭೇರಿಯಂ ಪೊಯ್ಸಿ ಮಹಾಸಾಮಂತಮಂಡಳಿಕಮುಕುಟಬದ್ಧಾದಿಗಳ್ ಷಣ್ಣವತಿಸಹಸ್ರಾಂತಃ-

---

1 ಸರಗೆ (ಇಉಎ). 2 ಪಾರಪ (ಕ, ಪಾ). 3 ವೃಷ್ಟಿ (ಅಕ). 4 ಜ (ಆಇಉಎ),

ಪುರಮುಮಱುವತ್ತು ಸಾಸಿರ್ವರ್ ಮಕ್ಕಳುಂ [1]ಶ್ರೇಷ್ಠಿ[1] ಸೇನಾಪತಿ ತಳವಱ ದಂಡನಾಯಕಪ್ರಭೃತಿಗಳುಂ, ಹಸ್ತ್ಯಶ್ವ ರಥಪದಾತಿಗಳುಂ ಬೆರಸು ವಿಭೂತಿಯಿಂ ಬಂದು ವಾಹನಂಗಳಿಂದಿೞಿದು ಮುನ್ನೆ ಬಂದಿರ್ದ ಚತುರ್ನಿಕಾಯಾಮರಜನ-ದೊಡನೆ ವಿವಿಧಾರ್ಚನೆಗಳಿಂದರ್ಚಿಸಿ ವಿವಿಧಸ್ತುತಿಶತಂಗಳಿಂ ಸ್ತುತಿಯಿಸಿ ಕುಳ್ಳಿರ್ದು ಧರ್ಮಾರ್ಣವತಂಸಾಲಂಕೃತಕರ್ಣನಾಗಿರ್ಪಿನಂ; ಅಲ್ಲಿಗಮರನಿಕಾಯ-ದೊಡನೆ ಬಂದಾರಣಕಲ್ಪದ ಮಣಿಕೇತುದೇವಂ ಬೆಸಸೆ ಮುನ್ನ ಕೆಳೆಯಂ ಜಯಸೇನಚರನಪ್ಪ ಮಹಾಬಲನೆಲ್ಲಿ ಪುಟ್ಟಿದನೆಂಬುದುಮಿಾಯಿರ್ದನೆ ಸಗರ-ಚಕ್ರವರ್ತಿಯೆಂದು ಭಟ್ಟಾರಕರ್ ಬೆಸಸೆ ಸಗರನೊಳ್ ಸಂಭಾಷಣಂಗೆಯ್ದು ದಿವ್ಯಾಂಬರಭೂಷಣಂಗಳಿಂ ಪೂಜಿಸಿ

ಭೂತಳವಲ್ಲಭ ರಿಪುಲಯ
ಕೇತು ಜನಾನಂದಹೇತು ಧರ್ಮೋದನ್ವ
ತ್ಸೇತುಭವತ್ಸಖನೇಂ ಮಣಿ
ಕೇತುವನೇನಱುವೊ ನೀಂ ಮಹಾಬಲಚರನೈ ೩

ತ್ರಿದಶನಿವಾಸದೊಳ್ ನೆನೆವು[2]ದಿಷ್ಟ[2]ಮುಮಾವರದಿಂ ವ್ಯವಸ್ಥೆಮಾ
ಡಿದುದನಪಾರಸಂಸರಣಪಾರಮನೆಯ್ದುವುದೆಂದೊಡಂತರಂ
ಗದೊಳದನಾನೃಪಂ ನೆನೆದುಮಾಱನೆ ಷಷ್ಟಿಸಹಸ್ರಪುತ್ರಮೋ
ಹದೆ ನಿಜರಾಜ್ಯಮುಂ ತೊಱೆಯಲಾರ್ ಗೆಲಲಾರ್ಪರೊ ಮೋಹರಾಜನಂ ೪

ಅಂತಾತನನೆಂತುಮೊಡಂಬಡಿಸಲಾಱದೆ ದಿವಿಜಂ ನಿಜನಿವಾಸಕ್ಕೆ ಪೋಗಿ, ಅನೇಕಸಂವತ್ಸರಂಗಳಳುಪಿ ಪೋಗುತ್ತಿರೆ, ಮತ್ತಮೊಂದುದಿವಸಮಾರಣಕಲ್ಪದಿಂ ಚಾರಣಋಷಿರೂಪದೆ ಮಣಿಕೇತು ಬಂದಾ ಪೊೞಲ ಜಿನಾಲಯದ ಮಂಡಪ-ದೊಳಿರ್ಪುದುಂ;ಸಗರಚಕ್ರವರ್ತಿ ವಂದನಾಭಕ್ತಿಯಿಂ ಬಂದು ಬಂದಿಸಿ ಆ ಚಾರ-ಣರಂ ನಿಮ್ಮ ತಪಂಬಟ್ಟ ಕಾರಣಮೇನೆಂದು ಬೆಸಗೊಳೆ, ಜಾತಿಜರಾಮರಣಾ-ನಿಷ್ಟ ಸಂಯೋಗಮಿಷ್ಟವಿಯೋಗಸಹಜಸಮುದ್ಭವಶಾರೀರಮಾನಸಾಗಂತುಕ-ದುಃಖದಿಂ; ಪತ್ತುವಿಟ್ಟನಂತಚತುಷ್ಟಯಮುಂ ಪೊರ್ದಲೆಂದು ತಪಂಬಟ್ಟೆನೆಂದಱಪಿ ಕಿಱಿದುಂ ಬೇಗದಿಂ ತನ್ನ ದಿವ್ಯಸ್ವರೂಪಮುಂ ತೋಱಿ,ಮತ್ತಂ ತಮ್ಮ ಕೃತಪ್ರತಿ-ಜ್ಞೆಯಂ ತೋಱಿ ನುಡಿದು

---

1 ಶ್ರೇಷ್ಠ (ಇ). 2 ದಿರ್ವ(ಅ).

ಅಳವಿ[1]ಯಿನಿಂತ[1]ನಂತಸುಖನಂತಜರಾಮರನಂತೆ ಮುಕ್ತಿಹೇ
ತುವನಘಕೇತುವಂ ಪರಮದೀಕ್ಷೆಯನೊಲ್ಲದೆ ರಾಜ್ಯಮೋಹದಿಂ
ಭವಜಲರಾಶಿಯೊಳ್ ಮುೞುಗಲೞ್ತಿಯೆ ಚರ್ವಿತಚರ್ವಣಕ್ಕೆ ನೀ
ನವ್ವಚಱಿಬೇಡ ಸಾಲದೆ ಭವಾನುಭವಂ ಸಗರಾವನೀಶ್ವರಾ ೫

ಕಡುಚಪಲನಿವಂ ತನಗೇ
ಗಿಡುಗುಮೋ ಪರದುಃಖಶೀತಲಂ ಮೆಚ್ಚಿ[2]ದಪೊ[2]ಲ್
ನುಡಿದಪನೆನ್ನದಿರೆನ್ನೀ
ನುಡಿ [3]ನಿನಗೆ[3] ಹಿತಾರ್ಥಮೆಂದೆ ಬಗೆ ಗಡ ನೃಪತೀ ೬

ಎಂದೊಡಂ ರಾಜ್ಯಮೋಹದೊಳಂ ಪುತ್ರಸ್ನೇಹದೊಳಂ ತನ್ನ ನುಡಿಗೊಡಂಬ-
ಡದನಿತಱಿಂ ಮಣಿಕೇತುವಾತನ ವೈರಾಗ್ಯಹೇತುವನವಧಾರಿಸಿ,

ಅಜಯಸೇನನಾದ ಭವದೊಳ್ ರತಿಷೇಣವಿಯೋಗದೊಳ್ ಮಹಾ
ರಾಜವಿಭೂತಿಯಂ ತೊಱೆ[4]ದ[4]ನಿಲ್ಲಿಯುಮಂತೆ ಸುತವ್ಯಪಾಯಮಂ
ಯೋಜಿಸೆ ರಾಜ್ಯಮಂ ತೊಱೆಗುಮೆಂದಱಿದಾಮಣಿಕೇತು ಚಿತ್ತಪಂ
ಕೇಜದೊಳೊಂದುಪಾಯಮಕರಂದಮನಿಟ್ಟೊಸೆದಿರ್ದನಿರ್ಪಿನಂ ೭

ಅಂತನೇಕಸಂವತ್ಸರಂ ಕಱಿಪುತಿರಲೊಂದುದಿವಸಮಱುವತ್ತು ಸಾಸಿರ್ವರ್
ಕುಮಾರರುಂ ತಮ್ಮಯ್ಯನನೋಲಗಿಸಲ್ ಬಂದು ಕಿಱಿದು ಬೇಗಮೋಲಗಿಸು-
ತಿರ್ದು,ಬೀಡಿಂಗೆ ಪೋಗಿಮೆನೆ,

ಬೆಸನಂ ಬೆಸಸೆನೆ ಸಗರಂ
ಬೆಸನೇಂ ಮಕ್ಕಳಿರ ನಿಮಗಮೆಂದಿಂತೀಗಳ್
ಬೆಸಕೆಯ್ಯದರುಮನೆನಗಂ
ಬೆಸಕೆಯ್ಯಲ್ ಚಕ್ರರತ್ನಮಿರ್ದಪುದಲ್ತೆ ೮

ನೀಮಿನಿಬರುಮೆನ್ನೊಡನೆ ಸಾಮ್ರಾಜ್ಯಸುಖ[illegible]ನನುಭವಿಸುತಿರ್ದಪುದಿದುವೆ
ಬೆಸನೆಂಬುದುಮಾಗ್ರಹಬುದ್ಧಿಗಳಾಗಿ,

---

1 ಯನಂತ (ಎ). 2 ದೆಯೊ (ಅಇಉಎ). 3 ನಿನ್ನ (ಕ). 4 ನೆ (ಇಉಎ),

ಶರಣೆಂದಾರ್ ಬಂದೊಡಂ ಕಾಯಲುಂ ಮೆಚ್ಚಿದವರ್ಗಾರ್ತ್ತಿಯುಮಂ ಮಾಡಿದಂ ತೊ
ಳೆರಡಂ ಧಾತ್ರಂ ಜನಕ್ಕಂತೆರಡು ಗುಣಮುಮಿಲ್ಲೆಂಬಿನಂ ಬದ್ಧವೈರ್ದಂ
ನರಕಾವಾಸಂಗಳೊಳ್ ದುರ್ಯಶಕೆ ಗುಱಿಯುಮಾಗಿರ್ದನೀಯುಕ್ತಿ ಮೆಯ್ವೆ
ತ್ತಿರೆ ಬರ್ದೇಬರ್ದೆ ಮೋಗೆಯ್ವ ಪು[1]ವೆ[1]ಮಗೆ ವೃಥಾಮಾನದೋರ್ದಂಡಷಂಡಂ ೯

ಕುಲಮದವೊಂದು ಜಾತಿಮದವೊಂದು ವಯೋಮದವೊಂದು ಸಂದದೋ
ರ್ವಲಮದವೊಂದು ರಾಜ್ಯಮದವೊಂದಿನಿ[2]ತುಂ ಮದ[2]ಮೆಯ್ದೆ ಕೂಡೆ [3]ಜಾ[3]
ವಲಿಸೆ ಮದೋದ್ಧತರ್ಕಳಿರಲಾಱದೆ ಪೇೞ್ ಬೆಸನಾವುದೆಂದು ಭೂ
ತಲಪತಿಯಂ ಕದರ್ಥಿಸಿದರಂಕದ ಷಷ್ಟಿಸಹಸ್ರನಂದನರ್ ೧೦

ಅಂತು ನಿಚ್ಚನಿಚ್ಚಂ ಕದ[4]ರ್ಥಿ[4]ಸೆ ನೀವಿಂತು ಬೆಸಕೆಯ್ವಲ್ಲದಿರಿರಪ್ಪೊಡೆ ಕೈಲಾಸಪರ್ವತದೊಳ್ ಪ್ರಥಮತೀರ್ಥೇಶ್ವರ ತನೂಭವಂ ಪ್ರಥಮಚಕ್ರೇಶ್ವರಂ ಭರತರಾಜಂ ಅನೇಕರತ್ನಮಯಪ್ರತಿಮೆಗಳಂ ಮಾಡಿಸಿದವಕ್ಕೆ ನಿಮ್ಮ ಬಲ್ಲಂದ[5]ದೆ[5] ಭೂಮಿಗೋಚರರ್ಗಗೋಚರರಪ್ಪಂತು ಕಾಪಂಮಾಳ್ಪುದೆನೆ, ಮಹಾಪ್ರಸಾದಮಂತೆಗೆಯ್ವೆಮೆಂದು ಬೆಸನಂ ಬೇಡಿಕೊಂಡು ಬೀಳ್ಕೊಂಡು ಪೋಗಿ ದಿಕ್ಕರಿಕರಾಕಾರಭುಜದಂಡದೋರ್ದಂಡರತ್ನದಿಂ ಕೈಲಾಸಮಂ ಬಳಸೆಯುಮಗಳ್ಗಳುಮಂ ಮಾಡುತ್ತಿರ್ಪನ್ನೆಗಂ ಮಣಿಕೇತುವಿಂತೆಂದು ಬಗೆದಂ: ಹಿತಪ್ರಿಯಮುಮಹಿತಪ್ರಿಯಮುಂ ಹಿತಾಹಿತಪ್ರಿಯಮುಮಹಿತಾಹಿತಪ್ರಿಯಮುಮೆಂಬ ಚತುರ್ವಿಧ ಕ್ರಮದೊಳ್ ಕಡೆಯೆರಡುಮಂ ಪತ್ತುವಿಟ್ಟು ಮೊದಲೆರಡುಮನನುರಕ್ತರಪ್ಪರೊಳ್ ಗುರುಮಂತ್ರಿಸಹಾಯಜನಂಗಳ್ಗೆ ನೆಗಳ್ವೆಲ್ಲುಮವಱಿಂ ಮದೀಯಪ್ರಿಯವಯಸ್ಯನೊಳತಿರಹಸ್ಯದಿನಪ್ರಿಯಮಾಗಿಯುಂ ಹಿತಮಪ್ಪುದಂ ನೆಗಳ್ವೆನೆಂದು ವಿಷದೃಷ್ಟಿ ವಿಷೋರಗಸ್ವರೂಪದಿಂ ಸಗರನಱುವತ್ತು ಸಾಸಿರ್ವರ್ ಮಕ್ಕಳುಮನೊಡನೆ ಕೃತಕದಿಂ ಭಸ್ಮಾವ[6]ಲೇಪನಮಾಗಿ[6] ಮಾಡಿ ಭಗೀರಥನೊರ್ವನುಮಂ ವಾರ್ತಾನಿವೇದನಾರ್ಥಂ ಕಾದುಳಿಪಿ ಕೃತಕಧರ್ಮಮರವೇಷಧರನಾಗಿ ಮಣಿಕೇತು ಅಯೋಧ್ಯೆಗೆ ಬಂದು,

ಅವಿ[7]ಧಾ[7]ಪಾರ್ವನನೊರ್ವನುಳ್ಳ ಮಗನಂ ನಿಷ್ಕಾರಣಂ ನಿರ್ಘೃಣಂ
ಜವನೊಯ್ದಂ ಸಕಲಾವನೀವಲಯಮಂ ಕಾ[8]ವೀ[8]ನೃಪಂ ಮತ್ತನೂ

---

1 ಮೆ (ಅ). 2 ತಲ್ಲದೆ (ಇಉಎ) 3 ಜಾ (ಅಕ). 4 ರ್ಥಿ (ಇಉಎ). 5 ದಿಂ (ಇಉಎ). 6 ಶೇಷರಾಗಿ (ಕ, ಪಾ). 7 ಧೋ (ಕ, ಪಾ). 8 ದೀ (ಕ, ಪಾ).

ಭವನಂ ತಂದೆನಗೀಯುವೇೞ್ಪುದವನಂ ತಂದೀಯದಂದಾನುಮಿ
ಲ್ಲಿ ವಿ[1]ಮು[1]ಕ್ತಾಸುವೆನಪ್ಪೆನೆಂದೊದಱಿದಂ ರಾಜಾಲಯದ್ವಾರದೊಳ್ ೧೧

ಅಂತು ಕೆಯ್ಯ ತೊವಲ್ವೆರಸು ಮೆಯ್ಯಱಿಯದೆ ಪುಯ್ಯಲಿಡುವ ಪಾರ್ವನ ಪುಯ್ಯಲಂ ಆಸ್ಥಾನಮಂಟಪದೊಳೋಲಗಂಗೊಟ್ಟಿರ್ದರಸಂ ಕೇಳ್ದಿನ್ನೆವರಮೆನ್ನ ರಾಜ್ಯದೊಳೆಲ್ಲಿಯುಂ ಮುಱಿದಪ್ಪುಡಂ ಕೇಳ್ದಱಿಯೆನಿಂದಶ್ರುತಪೂರ್ವಮಪ್ಪ ಕರುಣಾಕ್ರಂದನಮಂ ಕೇಳ್ದೆನೆಂದು ವಿಸ್ಮಯಂಬಟ್ಟು ಧರಾಮರಂಗೆ ಬಱಿಯನಟ್ಟಿ ಬೆಸಗೊಳೆ

ಭರತನೃಪಂ ಮುನ್ನ ಧರಾ
ಮರಜನನಮಂ ಪಡೆದನವನ ಪಡೆದಿರ್ದ ಧರಾ
ಮರವೇಷದೆನ್ನ ಸುವನು
ದ್ಧರಿಪುದು ನೀಂ ಸಗರ ದುಃಖಸಾಗರದಿಂದಂ ೧೨

ಪರಕೆಗಳನೊಯ್ದು ಕೊಟ್ಟೆಂ
ಪರಮೇಶ್ವರಂಗಳ್ಗೆ ಪೋಗಿ ಪಾಳಂ ಬಟ್ಟೆಂ
ನರನಾಥ ಪುಣ್ಯಪುಂಜ
ಸ್ವರೂಪನಂ ಪಡೆದನೊರ್ವನಂ ನಂದನನಂ ೧೩

ಪಡೆದು ವಿವಾಹೋತ್ಸವಮಂ
ತಡೆಯದೆ ಮಾಳ್ಪಲ್ಲಿ ಬಂದು ಜವನೆಂಬ ಸಿಡಿಲ್
ಸಿಡಿಲೆಱಗಿ[2]ದೊಡಾ[2]ನುಂ ನಿ
ನ್ನಡಿಗೆಱಗಿದೆನೆನ್ನ ಮಗನನೀಯಲೆ ವೇೞ್ಕುಂ ೧೪

ಶರಣಾಗಾ ದ್ವಿಜನೆನ್ನಂ
ಕರುಣಿಸು ನೀನೆನ್ನ ಮಗನನಂತಕಪುರದಿಂ
ತರವೇೞ್ಪುದೆನಗೆ ಮರಣಂ
ಶರಣಂ ಮೇಣೆನಿತೆ ನಿನ್ನ ಚರಣಂ ಶರಣಂ ೧೫

---

1 ಯು (ಅ). 2 ದುದಾ (ಅಕ).

ದ್ವಿಜವಂಶಮನಾಭರತಂ
ಸೃಜಿಯಿಸಿದಂ ಚಕ್ರವರ್ತಿ ನೀನುಂ ಚಕ್ರ
ಧ್ವಜನ್ವೈ ಬಡವನನೊರ್ವ
ದ್ವಿಜಸುತನಂ ದೇವ ಕಾವುದೇನರಿದಾಯ್ತೆ ೧೬

ಎಂದು ಕರುಣಮಾಗಿ ಬಾಯಱಿದು ಪುಯ್ಯ[1]ಲ್ಚಿ[1] ತನ್ನಂ ಮೊದಲಿಸಿ ನುಡಿಯೆಯಾದ್ವಿಜನ ನುಡಿಯಂ ಕೇಳ್ದು ವಿಸ್ಮಯಾಕ್ರಾಂತಸ್ವಾಂತನಾಗಿ,

ಬೆಸಕೆಯ್ಯದ ಮಂಡಲಮಂ
ಬೆಸಕೆಯ್ಸಿಯುಮೆಱಗದವರನೆಱಗಿಸಿಯುಮುಪಾ
ರ್ಜಿಸಿದೆನ್ನ ಯಶಃಪ್ರಸರಂ
ಮಸುಳ್ವಂತಾಗಿರ್ಕುಮೀದ್ವಿಜನ್ಮನ ನುಡಿಯಿಂ ೧೭

ಬಡವಂ ಪಾರ್ವನಪತ್ಯಶೋಕವಿಕಳಂ ಬಂದೆನ್ನನೀಯಂದದಿಂ
ನುಡಿದಂ ಸತ್ತರನೆತ್ತಲಾರ್ಪರೊಳರರ್ಥಿಪ್ರಾರ್ಥನಾಭಂಗದಿಂ
ಕಿಡುಗುಂ [2]ನಿರ್ಮಳ[2]ಕೀರ್ತಿಲಕ್ಷ್ಮಿ ಪೆಱ[3]ತೇನೇ[3]ನೆಂದುಮೆಂತೆಂದು [4]ಮಿಂ
ನುಡಿಯಲ್ಕಾ[4]ವುದುಮಿಲ್ಲ ಪಾರ್ವನೊಳಿವಕ್ಕೇ[5]ಗೆಯ್ವೆನೆಂತಕ್ಕುಮೋ[5] ೧೮

ಸತ್ತರನೆತ್ತುವುದೆಂಬುದ
ದೆತ್ತಣಮಾತಘಟಮಾ[6]ನಮೀ[6]ಪಾರ್ವಂ ತಾ
ನೆತ್ತೆತ್ತ ಬಂದು ಮೂಡಿದ
ನೆತ್ತೆತ್ತನಗಿನಿತು ದುರ್ಯಶಂ ಮಾಡಿದನೋ ೧೯

ಎಂದು ಚಿಂತಿಸುತಿರ್ದ ತಮ್ಮರಸನ ಚಿತ್ತವೃತ್ತಿಯನಱಿದು ಬುದ್ಧಿಸಾಗರನೆಂಬ ಪುರೋಹಿತನೆಂದನೆಂದುಂ ತಮ್ಮೊಳೋರೊರ್ವರಪ್ಪೊಡಂ ಸತ್ತಱಿಯದರ ಮನೆಯ ಪುಲ್ಲಂ ಕಿರ್ಚುಮಂ ಕೊಂಡು ಬಪ್ಪುದು, ಮೋ[7]ಣ್ಡಪ್ಪಡಂ[7] ನಿನ್ನ ಮಗನಂ ಪಡೆವೆನೆಂದೊಡಾನುಡಿ[8]ಯನಱಿದು[8] ಮಱೆಯದಂತೆ ಕಿಱಿದಂತ-

---

1 ಲಿಡೆ (ಇಉಎ). 2 ನಮ್ಮಯ (ಕ, ಪಾ). 3 ರೇನೇ (ಇಉಎ). 4 ಮಿಾನುಡಿಯಲ್ಕೆ (ಕ, ಪಾ) 5 ಗೆಯ್ದಿನೆಂತಿರ್ಕುವೊ (ಇಉಎ). 6 ಣನೀ (ಇಉಎ), ದುದೀ (ಕ). 7 ಣ್ಪುರ್ಪೊಡಂ (ಕ). 8 ಯಂ ಕೇಳ್ದು (ಇಉಎ).

ಕಂಬರಂ ಪೋಗಿ ಮಗುಳೆ ಬಂದೆಲ್ಲಿಯುಂ ಪಡೆದೆನಿಲ್ಲೆಂಬುದುಂ, ಆತನಂ ಮೆಲ್ಲ-ಮೆಲ್ಲನೆ ಮಾತಾಡಿಸಿ

ಪಗಲಿರುಳೆಳೆಜೊನ್ನಂ ಕಾಳಮೆಂಬುಕ್ತಿ ಚಿತ್ತಂ
ಬುಗೆ ನೆರೆದರಗಲ್ವರ್ ಪುಟ್ಟುವರ್ ಪೊಂದುವರ್ ನೀಂ
ಬಗೆಯ ಮರುಳೆ ಕಾಳಾಭೀಳವಕ್ತ್ರಾಂತಮಂ ದಲ್
ಪುಗದರೊಳರೆ ಪೇೞ್ ನಿಮ್ಮಜ್ಜ ಪಜ್ಜರ್ಕಳಾರುಂ ೨೦

ಮಱೆವುದು ದುಃಖಮನಱಿವಂ
ಮೆಱೆವುದು ಸೈರಿಪುದು ಮುಂತೆ ನೀಂ ಪೋಗಾನುಂ
ಪೆಱಗನೆ ಬಂದಪೆನೆಂಬೀ
ತೆಱನಲ್ಲದೆ ಜವನ ಬಾಱಿಯೊಳ್ ಬರ್ದು*ಕುವರಾರ್ ೨೧

ಆರಾರಂ ನುಂಗಿದನಿ
ಲ್ಲಾರಾರಂ ನೊಣೆದನಿಲ್ಲ ಸವಿನೋಡಿದನಿ
ಲ್ಲಾರಾರಂ ಸುರಮಾನವ
ನಾರಕತಿರ್ಯಕ್ಸಮೂಹಮಂ ಯಮರಾಜಂ ೨೨

ಬಡವಂ ಬಾೞ್ಗೆಂಗುಮೊ ಸಿರಿ
ಯೊಡೆಯಂ ಮಾಣ್ಗೆಂಗುಮೋ ತಪಸ್ವಿಗಳಿವರಂ
ಕಡೆಗಣಿಸುವೆನೆಂಗುಮೊ ಪೆ
ಣ್ಬಡೆಯೆಂಗುಮೊ ತುಱುದು ಪರಿಗುಮಂತಕರಾಜಂ ೨೩

ಆಯು ನೆಱೆವಿನೆಗಮಿರ್ಪನೆ
ಜಾಯೆಂಬನೆ ಮಾ[1]ಣ್ಬನಿಂದಿ[1]ನೊಂದಿವಸಮನ
ಧ್ಯಾಯಂ ಮಾಡುವನೆಂಬನೆ
ಬಾಯಱಿದಱೆಯಱೆ ಜನಂಗಳಂ ಜವನೊಯ್ಗುಂ ೨೪

ಏಂ ನಿಷ್ಕರುಣಿಯೊ ಪಸುಮಗ
ನೆನ್ನದೆ ಮುತ್ತಾಣ್ಮನೆನ್ನದಱಿವುಳ್ಳಂ ಬಾ
ೞ್ಗೆನ್ನದೆ ಮರುಳಕ್ಕಟ ಮಾ
ಣೆನ್ನದೆ ಮುಂ[2]ಬಿ[2]ಟ್ಟು ಕೊಂದಪಂ ಯಮರಾಜಂ ೨೫

---

1 ಣ್ಬೆನೆಂದು (ಎ). 2 ದಿ (ಇಉಎ).

ಕುಲಜಂ ಕುಲಹೀನನಿವಂ
ಕಲಿಪಂದೆಯಿವಂ ಮಹಾಭಿಮಾನಿಯಿವಂ ನಾ
ಣಿಲಿಯಿವನೆನ್ನದೆ ಪಲರಂ
ನಲಿನಿದಾಟಂದು ಕೊಂದಪಂ ಯಮರಾಜಂ ೨೬

ಕಟ್ಟಿದ ಕುಱಿಗಳ್ ಬೋನದೊ
ಳಟ್ಟೇಱಿಸಿ ಬಯ್ತ ಬಾಡುಗಳ್ ಬಡ್ಡಿಸಿ ತಂ
ದಿಟ್ಟಾ[1]ಚಾ[1]ದ್ಯಂಗಳ್ ಮುಂ
ದಿಟ್ಟ ನಿವೇದ್ಯಂಗಳಂತಕಂಗೆ ಜನಂಗಳ್ ೨೭

ನೋಱಿಯಿಡೆಯಿಡೆ ಕೂಗಿಡೆಯಿಡೆ
ದಱಿದಱಿಯೆಂದೆಟಿದು ಪುಯ್ಯಲಿಡೆಯಿಡೆ ಕೊಲ್ಗುಂ
ಕುಱಿಯಂ ಕೊ[2]ಲ್ವಂತಿರೆ[2] ತಿಱಿ
ಕೊಳ್ ಗೊಂಡು ಜಗಜ್ಜನಂಗಳಂ ಯಮರಾಜಂ ೨೮

ಮೃತಪಟಹಂ ಜಯಪಟಹಂ
ಚಿತಾಗ್ನಿಧೂಮಂ ಜಯಧ್ವಜಂ ಜನಕರುಣಾ
ರುತಿ ಜಯಮಂಗಳರುತಿಯೆನೆ
ಕೃತಾಂತರಾಜಂಗೆ ರಾಜ್ಯಚಿಹ್ನಮಿದಲ್ತೆ ೨೯

ಆ ಜಗದೇಕಕಂಟಕನನಾಬಹುಭಕ್ಷಿಯನಾತ್ರಿಲೋಕಪಂ
ಕೇಜಸಮುತ್ಥಜೀವಮುಕರಂದಮುದಾಳಿಯನಾಪರಿಸ್ಫುರ
ತ್ತೇಜನನಂಗಜಾಂತಕನಮೋಹನಘಾಂತಕನಂತಕಾಂತಕಂ
ಶ್ರೀಜಿನರಾಜನಲ್ಲನುಟಿದೊಂ ಗೆಲಲಾರ್ಕುಮೆ ಮೃತ್ಯುರಾಜನಂ ೩೦

ಎಂದು ಬುದ್ಧಿಸಾಗರನುಂ ತನಗೆ ಸಂಸಾರಸ್ವರೂಪಮನಱಿಪಿ ಸದ್ಧರ್ಮೋಪದೇಶಂಗೆಯ್ದಾಗಳಾಬ್ರಾಹ್ಮಣಂ[3]ಸಮಾವೃ[3]ರಾದಿನೊಮವಿಚಲ ಸ್ಯಂದಿಯೆಂಬುದಿವರನಿವರ ನುಡಿಯೊಳ್ ತೊಡರ್ಚುವೆನೆಂದು,

ಈನಿನ್ನ ಪೇೞ್ದ ಧರ್ಮಮಿ
ದೇನೆನಗೆಯೊ ನಿನಗಮುಂಟೊ ನಿನಗುಳ್ಳೊಡದಂ
ನೀನಱಿಪುವುದೆನೆ ದರಹಸಿ
ತಾನನನೆಂದಂ ನರೇಂದ್ರನೆನಗಮು ಮುನ್ನಂ ೩೧

---

1. ಚ್ಛಾ (ಅಇಉಎ). 2 ಲು ವಂದದಿ (ಇಉಎ). 3 ಮಾತೃ (ಇಉಎ).

ಉಂಟೆಂಬುದು, ನಿನ್ನಱುವತ್ತು ಸಾಸಿರ್ವರ್ ಮಕ್ಕಳುಮಿಂದು ದೃಷ್ಟಿವಿಷ-ವಿಷಮವಿಷಧರಸಿಂ ಭಸ್ಮಾವಶೇಷರಾದರೆಂಬುದುಂ ಸಂಸಾರಿಜೀವಂಗಳಂದು ಪುಟ್ಟಿ-ದರಂದೆ [1]ಸತ್ತರ[1]ದೇಂ ಚೋದ್ಯಮೆಂಬುದು. ಮುನ್ನಿನಂತೆ ಧರ್ಮಕಥಾಕಥನದೊಳಿ-ರ್ಪನ್ನೆಗಮಶ್ರುಜಲವಿಲುಳಿತವಿಲೋಚನನುಮುಪಗತೋತ್ತರೀಯನುಂ ಮನ್ಯೂ-ದ್ಗತಕಂಠನುಮತಿಪ್ರಚುರವಿಪ್ರಲಾಪಾಕ್ಷರಮುಖರಮುಖನುಂ ಅಸಹ್ಯಶೋಕ-ಪಾವಕಶಿಖಾಕಲಾಪಸಂತ[2]ಪ್ತ[2]ಮಾನಮಾನಸನುಂ ಭಗ್ನಮನೋರಥನುಮಾಗಿ ಭಗೀರಥಂ ಬಂದು ತಂದೆಯ ಮುಂದೆ ಮೆಯ್ಯನೀಡಾಡಿ—

ಬೆಸನೆಂದು ಪೂಣ್ದು ದೇವರ
ಬೆಸನಂ ಸುಕುಮಾರರೆನಿಪ ರಾಜಕುಮಾರರ್
ಬೆಸದಪ್ಪಿದರೆನಗನಿತೊಂ
ದು ಸೈಪು ಸಮನಿಸದೆ ಬರ್ದುಕ್ಕಿ ಬಱ[3]ದೆಂ ನೃಪತೀ[3] ೩೨

ಎನಲೊಡಮಾಪೊತಂ ಕೇ
ಳ್ದನಭ್ರವಜ್ರಾಭಿಘಾತಮಾದಂತೆ ಸಭಾ
ಜನಮೆಲ್ಲಂ ಮೋಹಿಸೆ ಭೋಂ
ಕೆನೆ ಹಾಹಾಕ್ರಂದಮೊಗೆದುದಂತಃಪುರದೊಳ್ ೩೩

ಅವಿರಳಗಳದಶ್ರುಜಲ
ಪ್ರವಾಹಮುದ್ದೃಪ್ತಪುತ್ರಶೋಕಾ[4]ವೇಗಂ
ದಿವಸಂ[4] ಕೆಡೆದಿರ್ದುದು ಷ
ಣ್ಣವತಿಸಹಸ್ರಾಂಗನಾಳಿ ನೃಪನಡಿಮೊದಲೊಳ್ ೩೪

ಬಿರ್ದು ನಿನಗೆ ಚತುರ್ದಶರತ್ನಂ
ಜನೇಶ ಬೆಸಕೆ[5]ಯ್ದು[5]ಮಮರರೆಲ್ಲಂ ಬೆಸನೇ
ನೆನುತಿರ್ಪರ್ ಬೆಸದಪ್ಪಿದ
ತನೂಜರಂ ಜವನೊಳಿಱಿದು ಬರಿಸಲ್ವೇಟ್ಕುಂ ೩೫

ಬಾಳಂ ಕಿತ್ತಂಜಿಸಿ ಬಾ
ಯ್ಕೇಳಿಸಿ ಷಟ್ಖಂಡಭರತಮಂ ಕಲಿಯೈ ಬ

---

1 ರೆಂಬುದಿ (ಕ). 2 ಪ್ತ್ಯ (ಅ), ಪ್ತ್ಪ (ಇಉಎ) 3 ಪಸೆ ನರಸಾ (ಇಉಎ). 4 ಪೇದಾ ದಿವಸಂ (ಇಉ), ವೇದಾ ಪಿವಸು (ಎ). 5 ಯ್ದು (ಕ).

ಲ್ಲಾಳಿನೆ ನೆಗಟ್ಟಿದ್ಭೆ ಧರಣೀ
ಪಾಳ ನಿಜಾತ್ಮಜರನೇಕೆ ರಕ್ಷಿಸದಿರ್ಪೈ ೩೬

ಎಲ್ಲಿತ್ತೊ ಚಕ್ರರತ್ನಮ
ದೆಲ್ಲಿತ್ತಸಿರತ್ನಮಶ್ವಗಜರತ್ನಂ ತಾ
ಮೆಲ್ಲಿತ್ತವೋಯ್ತೊ ಜಗತೀ
ವಲ್ಲಭ ನಿಜಸುತರನುಜಿದೆ ಜವನುಯ್ವಾಗಳ್ ೩೭

ನಿನಗಂ ಬಲ್ಲಿದರೊಳರೇ
ನಿನಗಂ ಮಾರ್ಮಲೆವರೊಳರೆ ನಿನಗಂ ತಲೆದೋ
ರ್ಪನಿ [1]ತಮರರೊಳರೆ[1] ನಿಜನಂ
ದನರಂ ನೀನಿರೆ ನೃಪೇಂದ್ರ ಕೊಲ್ವರುಮೊಳರೇ ೩೮

ಉರಿದಟೀದಪ್ಪುದು ಎಮ್ಮಯ
ಶರೀರಮೋ[2]ವೆಮ್ಮ[2]ಪುತ್ರಶೋಕಾನಲನಿಂ
ನರಪಾಲ ಮತ್ತಮನಲಾಂ
ತರಮೇವುದೊ ದಗ್ಧವಾರಿಯೆಂಬುದುಮುಂಟೆ ೩೯

ಕುಡುವುದು ಕಿಚ್ಚಂ ದೇವರ್
ತಡೆಯದೆ ಕತ್ತಿಗೆಯನೆಮಗೆ ಬೆಸಸುವುದಿನ್ನೇಂ
ಪಡೆಮಾತೊ ತನಯರಿಲ್ಲದೆ
ತಡೆದಿರ್ಪುದು ತಕ್ಕುದಲ್ತು ಭುವನಾಧಿಪತೀ ೪೦

ಒಗೆವ ಪತಿವಿರಹತಾಪದೆ
ಪುಗಲಿರ್ದರ್ ಜಿನಗೃಹಂಗಳಂ ಶಿಖಿಶಿಖೆಯಂ
ಪುಗಲಿರ್ದ ಸೊಸೆವಿರೆಲ್ಲರ
ಮೊಗಂಗಳಂ ದೇವ ನೋಡಿ ಕರುಣಿಸವೇಡಾ ೪೧

ಪಡೆವುದು ಮೇಣ್ ನಂದನರಂ
ನಡೆವುದು ಮೇಣ್ ತಪಕೆ ಸಗರವಲ್ಲಭ ಮತ್ತಂ
ಪಡೆವುದೊ ತನಯರ್ಕಳ ಪಿಂ
ಬಡಿನೊಳ್ ಪೇೞ[3]ಮಗಮರಸ[3] ಮಾನಸವಾಳೀ ೪೨

1 ನಿತುವರ ಮೊಳರೆ (ಅ). 2 ವೆಂದು (ಇಉಎ). 3 ೞ್ಕಿ ಮಗೆ ಮತ್ತೆ (ಇ).

ಎಂದು ವಿಪ್ರಲಾಪಂ ಗೆಯ್ಯೆ

ಜನಪಾಂತಃಪುರಕಾಂತಾ
ಜನವದನಸರೋಜಮಶ್ರುಜಲಕಣಮುಮನಾಂ
ತನುಕರಿಸಿರ್ದುದು ಹಿಮಬಿಂ
ದುನಿಚಿತಹೈಮಂ ಸರೋಜವನವಿಭ್ರಮಮಂ ೪೩

ಅರಸಿಯರ ಕಣ್ಣ ನೀರ್ಗಳ
ಬೆರಸಿದ ಕಾಡಿಗೆಯ ಕರ್ಪು ಪೋಲ್ತತ್ತು ಕುಚಾಂ
ತರದೊಳ್ ಬೀೞುತ್ತುಂ ತ
ತ್ಪರಿತಾಪಜ್ವಲನಧೂಮ್ರಧೂಮಚ್ಛವಿಯಂ ೪೪

ದವರೌದ್ರಜ್ವಲನಾದ್ಭುತಂ ಹೃದಯದೊಳ್ ಶೋಕಾಗ್ನಿ ಕೈಗಣ್ಮೆ ಪೊ
ಣ್ಮುವ ಕಿಚ್ಚಂ ನದಿಪಲ್ಕೆ ಬರ್ಪ ತೆಱದಿಂದಂ ಕಣ್ಗಳಿಂಗುಣ್ಮಿ ಪೊ
ಣ್ಮುವ ನೇತ್ರಾಂಜನಮಿಶ್ರಬಾಷ್ಪಜಲಧಾರಾಬಿಂದುಗಳ್ ಕೂಡೆ ಕಂ
ಠವಿಮುಕ್ತಚ್ಯುತನೀಲಕಂಠಿಕೆವೊಲಾಯ್ತಂತಃಪುರಸ್ತ್ರೀಯರಾ ೪೫

ಅರಸನನೋಲಗಿಸುತ್ತಾ
ದರದಿಂದಂ ಮುಗಿದ ಕೆಯ್ಯುಮೆಱಗಿದ ತಲೆಯುಂ
ಬೆರಸಿಪ್ಪರಸುಗಳಿರದೆಱ
ಗಿರೆ ತಲೆಯುಮನೆತ್ತದೆಱಗಿ ಶೋಕಾಕುಲಿತರ್ ೪೬

ಅನಿತೊಂದು ಶೋಕವೇಗಂ
ತನಗಾಗೆಯುಮಚಲಿತಸ್ವರೂಪದಿನಿರ್ದಂ
ಕನಕನಗಂಬೊಲ್ ಸಗರನ
ಮನಮಂ ಸಾಗರದ ಗುಣ್ಪನಱವರುಮೊಳರೆ ೪೭

ಅನಿಲಾಹತಿಯಿಂ ಚಳಿಯಿಕು
ಮನೋಕಹಾನೀಕಮದ್ರಿ ಚಳಿಯಿಕುಮೆ ಪೃಥ
ಗ್ಜನದಂತುದಾತ್ತಚಿತ್ತಂ
ಜನಪತಿ ಧೈರ್ಯಾಂಬುರಾಶಿ ಚಳಿಯಿಸಿದಪನೆ ೪೮

*
ಬಳಸಿದ ಪೊರಟ್ಟಿಂಗನೆಯರ
ಬಳಗದಿನವರಶ್ರುಜಲದಿನನಿಲಾಹತಿಚಂ

ಚಳಲತೆಯುಂ ನಿರ್ಜರಮುಮ
ನೊಳಕೊಂಡು ಸುವರ್ಣಗಿರಿಯನರಸಂ ಪೋಲ್ತಂ ೪೯

ಅವಿವೇಕಿಗಳ ಮನಂಗಳ
ನವಿರಳಬಹಳಸ್ವರೂಪಮಜ್ಞಾನತಮಂ
ಕವಿದತ್ತರಸನ ಮನಮಂ
ವಿವಿಕ್ತವಿಶದಮನದೆಂತುಮಾಱದೆ ಪೊರ್ದಲ್ ೫೦

ಘೋರತಮಮೊಡ್ಡಿಸುವೊಡಾ
ತಾರಕಮಂಡಳಮನೊಡ್ಡಿಕುಂ ಗಗನಾಲಂ
ಕಾರನನುಜ್ಜ್ವಲತೇಜೋ
ಭಾರನನೇನಹಿಮಕರನನೊಡ್ಡಿಸಿದಪುದೇ ೫೧

ಅಂತು ಧೈರ್ಯಾರ್ಣವಷ್ಟಂಭಗಂಭೀರನಾಗಿ—

ಅರಸ ಕೃತಾಂತನುಯ್ದ ಸುತರಂ ಪಡೆದೀಯೆಮಗೆಂದು ಕಾಂತೆಯರ್
ನುಡಿದಪರೆನ್ನ ಪೆತ್ತ ಮಗನಂ ಪಡೆದೀಯೆನಗೆಂದು ಪಾರ್ವನುಂ
ನುಡಿದಪನಯ್ಯ ಸತ್ತವರನೆತ್ತುವರಾರ್ ಮತಿಗೆಟ್ಟರಕ್ಕಟಾ
ಬಡವುಗಳೀಕುಲಾಂಗನೆಯರೀಬಡಪಾರ್ವನ ನಂಟರಾಗರೇ ೫೨

[1]ಎಂದು[1] "ಸಮಶೀಲವ್ಯಸನೇಷು ಸಖ್ಯ" ಮೆಂದವರ ದೀನಾನನಂಗಳಂ ನೋಡಲಾಱದೆ ಮನಮಂ ಬಲಿದು ನಿಲೆ

ಪರಿಜನಮುಂ ಪುರಜನಮುಂ
ನೆರೆ[2]ದನಿಬರ್ತ[2]ಮ್ಮೊಳರಸನೇಂ ಕಲ್ಲೆರ್ದೆಯೋ*
ಮರಮಾನಿಸನೋ ಕಲ್ಲುಂ
ಮರನಿರ್ಪಂತಿರ್ದನಿಂತು ನಿಷ್ಕರುಣನೊ ಪೇೞ್ ೫೩

ಎಂಬ ಜನಾಪವಾದಮಂ ಕೇಳ್ದು ಬುದ್ಧಿಸಾಗರಂ ಸಗರನ ಮೇಲೆ ಸಿತಸರ್ಷಪಂಗಳನಿಟಿಯೆ ಸುರಿವುದುಂ ತಪ್ತಾಯಃಕಟಾಹಪತಿತಲಾಜಃಪುಂಜದಂತೆ ದೆಸೆದೆಸೆಗೆ ಚಿಳಿಲ್‌ಚಿಳಿಲೆನೆ ಸಿಡಿಲ್ದು ಪಾಱುವುದುಮೋರೊರ್ವರ್ಗೋರೊರ್ವರ್ ಮಕ್ಕಳ ದುಕ್ಕಮಂತರಸಂಗಱುವತ್ತುಸಾಸಿರ ಮಕ್ಕಳದುಕ್ಕಂ ಸಾಮಾನ್ಯಮಕ್ಕುಮೆ! ಮಹಾಸತ್ವನುಂ ಧೈರ್ಯಾಂಬುರಾಶಿಯುಮಪ್ಪುದಱಿನಸಹ್ಯಮಪ್ಪ ದುಃಖೋದ್ರೇಕಮಂ ಸೈರಿಸಿರ್ದನೆಂದು ಸಕಲಜನಕ್ಕೆಲ್ಲಂ ಪ್ರಕಟಂಮಾಡೆ ಸಗರನಾ-

---

1 ಅಂತು (ಅಇಉಎ). 2 ದೆಂಬರ್ (ಅಇಉಎ).

ಬ್ರಾಹ್ಮಣಂಗಮಂತಃಪುರಕ್ಕಂ ಮಱುಮಾತುಗುಡಲಱಿಯದೆ “ಮೌನಂ ಸರ್ವಾರ್ಥಸಾಧನ”ಮೆಂಬುದಂ ಮನದೊಳೆ ಬಗೆದು,

ಕಡೆಯೆಯ್ದುತ್ತಿನಗಿಂದು ರಾಜ್ಯವಿಭವಂ ಪೊಣ್ಮಿರ್ದ ಮೋಹೋದಯಂ
ತಡಿಸಾರ್ದಿರ್ದಪು[1]ದಕ್ಕೆ[1] ಮಂಗಳಮಹಾಶ್ರೀ ಪೋಪೆನೀಗಳ್ ತಪಂ
ಬಡಲೆಂದುತ್ತಮಸತ್ವನೂರ್ಜಿತಗುಣಂ ಸಿಂಹಾಸನಂ ಭೇರಿ ಬೆ
ಳ್ಗೊಡೆಯಿಂತೆಲ್ಲಮನೊಲ್ಲ[2]ದೆ[2]ರ್ದನರಸಂ ತಳ್ವಿಲ್ಲದಾಸ್ಥಾನ[3]ದಿಂ[3]

ಇದು ಸಕಲ ಮುನೀಂಪ್ರ ವೃಂದ ವೃಂದಾರಕ ಶ್ರೀಮದಜಿತಸೇನ ಭಟ್ಟಾರಕ

ಶ್ರೀಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ

ಶ್ರೀಮದಭಿನವ ಕವಿಚಕ್ರವರ್ತಿ

ಕವಿರತ್ನ ವಿರಚಿತ

ಶ್ರೀದಾನಚಿಂತಾಮಣಿ ವಿನಿರ್ಮಾಪಿತ

ಶ್ರೀಮದಜಿತತೀರ್ಥಕರಪುರಾಣತಿಲಕದೊಳ್

—ತಪೋವನಗಮನವರ್ಣನಂ ದಶಮಾಶ್ವಾಸಂ.

1 ದಲ್ತೆ (ಕ,ಪಾ). 2 ದಿ (ಇಉಎ). 3 ದೊಳ್ (ಕೆ).

ಏಕಾದಶಾಶ್ವಾಸಂ

ಶ್ರೀಮಹಿತಮಹೀರಾಜ್ಯ
ವ್ಯಾಮೋಹಂ ಮಾಣ್ಗೆ ಶರಣಮಕ್ಕೆಮಗಜಿತ
ಸ್ವಾಮಿ ಭವಭಯಹರಂ ಸಕ
ಳಾಮರಜನವಿನುತಚರಿತನಪಗತದುರಿತಂ ೧

ಎಂದು ತಱಿಸಂದು ಷಟ್ಖಂಡಮಂಡಳ ಮಹೀಮಂಡಳೇಶ್ವರನಾಸ್ಥಾನಮಂಡಪದಿನೆರ್ದು ದೀಕ್ಷಾಗ್ರಹಣಮನೋರಥಂ ಮಹಾರಥಂ ಭಗೀರಥಂಗೆ ಸಾಮ್ರಾಜ್ಯಪದವಿಯಂ ದಯೆಗೆಯ್ದು

ಜಳಧಿತರಂಗತಾಟಿತಮಹೀಪತಿ ಚಕ್ರಧರಂ ತಪಂಬಡಲ್
ತಳರ್ವುದುಮೀಗಳಿನ್ನ ಬಗೆ ಕೂಡಿದುದಸ್ತಭವಾಬ್ಧಿಮಾಡಿದೆಂ
ಕೆಳೆಯನನೆಂದು ಸಂತಸದಿನಾಮಣಿಕೇತು [1]ವಿಚಿತ್ರಕೇತುಗಳ್
ಮಿಳಿರೆ[1] ವಿಚಿತ್ರನರ್ತನಮನಾಡಿಸಿದಂ ಖಗಮಾರ್ಗರಂಗದೊಳ್ ೧

ಆಗಳ್ ಸಗರಚಕ್ರವರ್ತಿ ದೀಕ್ಷಾಗ್ರಹಣದೃಢಚಿತ್ತನಾಗಿ ದೃಢಧರ್ಮರೆಂಬ ಕೇವಳಿಗಳ ಪಕ್ಕದೆ ಸರ್ವಸಂಗಪರಿತ್ಯಾಗಪುರಸ್ಸರಂ ಸಂಯಮಮುಂ ಕೈಕೊಂಡಂ. ಇತ್ತ ಕಪಟಬ್ರಾಹ್ಮಣನುಂ ತನ್ನ ವಿಕ್ರಿಯೆಯಿಂ ಮಱೆದಿರ್ದ ಕುಮಾರರಲ್ಲಿಗೆ ಕಾಳೆಗಕ್ಕಮೊಳಂ ಪುಯ್ಯಲ್ಗಮೊಳನೆಂಬಂತೆ ಬೇಗಂ ಬಂದು ಚಕ್ರಧರದೀಕ್ಷಾಗ್ರಹಣಮನಱಿಪಲೊಡಂ ಅವರುಮಂತೆ ಸಂವೇಗನಿರ್ವೇಗಪರರಾಗಿ ದೃಢಧರ್ಮಕೇವಳಿಗಳ ಸನ್ನಿಧಿಯೊಳ್ ತಪೋನಿಧಿಗಳಾದರ್. ಆ ವ್ಯತಿಕರಮುಂ

1 ಮನೋನುರಾಗಮುಂ ತಳೆದು (ಇಉಎ).

ಭಗೀರಥಂ ಕೇಳ್ದು ತಾನುಮವರಲ್ಲಿಗೆ ಬಂದು ಪಂಚಮುಷ್ಟಿಯಿಂ [1]ಬಂ[1]ದಿಸಿ ಕುಳ್ಳಿರ್ದು ಧರ್ಮಶ್ರವಣಾನಂತರಂ ಪೇ[2]ೞ[2]ವೇನಗೆ ಕರ್ಮಪ್ರಕೃತಿಯುಮಂ ಲೋಕವಿಭಾಗಮುಮಂ ಜೀವಸ್ವರೂಪಮುಮನಱಿಯೆ ಬೆಸಸುವುದೆಂದು ಮುಕುಳಿತಾಂಜಲಿ[3]+[3]ಯಾಗಿ ಬಿನ್ನಪಂಗೆಯ್ವಾಗಳ್—

ವದನೇಂದುಸುಧಾರಸಮೆನೆ
ವದನಾಬ್ಜಾಮೋದಮೆನೆ ಮುನೀಶ್ವರಮುಖದಿಂ
ಹೃದಯಂಗಮವಚನಾಮೃತ
ಮುದಯಿಸಿದುದು ಸಕಲಭವ್ಯಸಂತೋಷಕರಂ ೨

ನಿನ್ನ ಬೆಸಗೊಂಡ ಪರಮೇಶ್ವರಧರ್ಮತತ್ತ್ವಾರ್ಥಕಥನದೊಳ್—ಪರಿಣತವಯಸ್ಕನುಂ ವಪುಷ್ಕಾಂತನುಂ ಅನಾಮಯಶರೀರನುಂ ಬಹುಶ್ರುತನುಂ ಅತಿಪ್ರಗಲ್ಭನುಂ ಮೇಧಾವಿಯುಂ ನಿರುಪಕ್ರಿಯಾಪ್ರವೃತ್ತನುಂ ಪವಿತ್ರಚಾರಿತ್ರನುಮೆಂಬ ಅಷ್ಟವಿಧೋತ್ಕೃಷ್ಟಗುಣಂಗಳಿಂದಂ ನೆಱೆದನಾಚಾರ್ಯನಕ್ಕುಂ. ದಾಕ್ಷಿಣ್ಯವಂತನುಮೇಕಾಗ್ರಮನಸ್ಕನುಂ ಅನುಕೂಲಕನುಮನಾಲಸ್ಯನುಮನವಕಾರ್ಯನುಂ ಲಬ್ಧಿಬುದ್ಧಸದೃಶನುಂ ಕಲಹಂಸಮನನುಮನುರಕ್ತನುಂ ಮಧ್ಯಸ್ಥನುಮೆಂಬ ದಶವಿಧಶುದ್ಧಗುಣಂಗಳಿಂ ನೆರೆದಂ ಶ್ರೋತೃವೆಂಬೊನಕ್ಕುಂ. ಅದಱಿನಿನಿ[4]+[4] ಗುಣಂಗಳ್ಗೆ ಪಾತ್ರಭೂತನಾದ ನೀನವಹಿತಚಿತ್ತನಾಗಿ ಕೇಳ್ವುದು. ಆ ಕರ್ಮಗಳುಂ ಜ್ಞಾನಾವರಣೀಯಂ ದರ್ಶನಾವರಣೀಯಂ ವೇದನೀಯಂ ಮೋಹನೀಯಮಾಯುಷ್ಯಂ ನಾಮಗೋತ್ರಮಂತರಾಯಮೆಂಬಷ್ಟವಿಧಂಗಳಕ್ಕುಂ. ಅವಱೊ[5]ಳ್[5] ಅಭಿನಿಬೋಧಿತಮತಿ[6]ಶ್ರುತಾ[6]ವಧಿಮನಃಪರ್ಯಯಕೇವಲಾವರಣೀಯಭೇದದಿಂ ಜ್ಞಾನಾವರಣೀಯಂ ಪಂಚವಿಧಮಕ್ಕುಂ. ನಿದ್ರಾನಿದ್ರಾಪ್ರಚಳಾಪ್ರಚಳಸ್ತ್ಯಾನಗೃದ್ಧಿನಿದ್ರಾಪ್ರಚಳಾಚಕ್ಷುರಚಕ್ಷುರವಧಿಕೇವಲಾವರಣೀಯಭೇದದಿಂ ದರ್ಶನಾವರಣೀಯಂ ನವವಿಧಮಕ್ಕುಂ. ಸಾತಾಸಾತಭೇದದಿಂ ವೇದನೀಯಂ ದ್ವಿವಿಧಮಕ್ಕುಂ. ದರ್ಶನ ಚಾರಿತ್ರ ಭೇದದಿಂ ಮೋಹನೀಯಂ ದ್ವಿವಿಧಮಕ್ಕುಂ. ದರ್ಶನಮೋಹನೀಯಂಬಂಧದಿಂ ಕುಱುತ್ತೇಕವಿಧಮಕ್ಕುಂ. ಸತ್ತ್ವಮಂ ಕುಱುತ್ತು ಸಮ್ಯಕ್ತ್ವಂ ಮಿಥ್ಯಾತ್ವಂ ಸಮ್ಯಙ್ಮಿಥ್ಯಾತ್ವಭೇದದಿಂ ತ್ರಿವಿಧಮಕ್ಕುಂ. ಚಾರಿತ್ರಮೋಹನೀಯಮುಂ ಕಷಾಯನೋಕಷಾಯಭೇದದಿಂದಿರ್ತೆಱನಕ್ಕುಂ.

---

1 ವ (ಇ). 2 ೞ್ನೀ (ಅಇಉಎ). 3 ಪುಟ (ಇಉಎ) 4 ತು (ಕ). 5 ಳಾ (ಅಇಉಎ). 6 ಶಂಕಾ (ಕ, ಪಾ).

ಅವಱೊಳಂ ಪ್ರತ್ಯೇಕಾನಂತಾನುಬಂಧ ಪ್ರತ್ಯಾಖ್ಯಾನಾಪ್ರತ್ಯಾಖ್ಯಾನಸಂಜ್ವಲನ-ಕ್ರೋಧಮಾನಮಾಯಾಲೋಭ ಭೇದದಿಂ ಕಷಾಯಚಾರಿತ್ರಮೋಹನೀಯಂ ಷೋಡಶವಿಧಮಕ್ಕುಂ. ಹಾಸ್ಯರತ್ಯರತಿಶೋಕಭಯಜುಗುಪ್ಸಾಸ್ತ್ರೀಪುನ್ನಪುಂಸಕ-ಭೇದದಿಂ ನೋಕಷಾಯಚಾರಿತ್ರಮೋಹನೀಯಂ ನವವಿಧಮಕ್ಕುಂ. ನಾರಕಾ-ದ್ಯಾಯುಭೇದದಿಂದಾಯುಷ್ಕರ್ಮಂ ಚತುರ್ವಿಧಮಕ್ಕುಂ. ಗತಿಜಾತಿಶರೀರ-ಬಂಧನಸಂಘಾತಸಂಸ್ಥಾನಾಂಗೋಪಾಂಗಸಂಹನನವರ್ಣಗಂಧರಸಸ್ಪರ್ಶಾನು-ಪೂ[1]ರ್ವ[1]ಗುರುಲಘೂಪಘಾತಪರಘಾತಾತಪೋದ್ಯೋತೋಚ್ಛ್ವಾಸವಿಹಾಯೋ-ಗತ್ರಯತ್ರಸಂಸ್ಥಾವರ ಸ್ಥೂಲಸೂಕ್ಷ್ಮಪರ್ಯಾಪ್ತಾಪರ್ಯಾಪ್ತ ಪ್ರತ್ಯೇಕಶರೀರ-ಸಾಧಾರಣಶರೀರಸ್ಥಿರಾಸ್ಥಿರಶುಭಾಶುಭಸುಭಗದುರ್ಭಗಸುಸ್ವರದುಸ್ವರಾದೇಯನಾ-ದೇಯ ಯಶಸ್ಕೀರ್ತ್ಯಯಶಸ್ಕೀರ್ತಿನಿರ್ಮಾಣ ತೀರ್ಥಕರಭೇದದಿಂ ನಾಮ-ಕರ್ಮ ನಾಲ್ವತ್ತೆರಡು ಭೇದಮಕ್ಕುಂ. ಅಲ್ಲಿ ನರಕಾಯುರ್ಭೇದದಿಂ ಗತಿ-ನಾಮಂ ಚತುರ್ಭೇದಮಕ್ಕುಂ. ಏಕೇಂದ್ರಿಯಾದಿ ಭೇದದಿಂ ಜಾತಿನಾಮಂ ಪಂಚವಿಧಮಕ್ಕುಂ. ಔದಾರಿಕವೈಕ್ರಿಯಿಕಾಹಾರಿಕತೈಜಸಕಾರ್ಮಣಭೇದದಿಂ ಶರೀರನಾಮಂ ಪಂಚವಿಧಮಕ್ಕುಂ. ಔದಾರಿಕಾದಿಭೇದದಿಂ ಬಂಧನಾಮಂ ಪಂಚವಿಧಮಕ್ಕುಂ. ಆ ಶರೀರಭೇದದಿಂ ಸಂಘಾತನಾಮಮುಂ ಪಂಚವಿಧ-ಮಕ್ಕುಂ. ಚತುರಸ್ರಮುಂ ನ್ಯಗ್ರೋಧಪರಿಮಂಡಲಮುಂ ಸ್ವಾತಿಯುಂ ವಾಮ-ನಮುಂ ಕುಬ್ಜಮುಂ ಹುಂಡಮುಮೆಂದು ಸಂಸ್ಥಾನನಾಮಂ ಷಡ್ವಿಧಮಕ್ಕುಂ. ಔದಾರಿಕವೈಕ್ರಿಯಿಕಾಹಾರಭೇದದಿಂದಂ ಗೋಪಾಂಗನಾಮಂ ತ್ರಿವಿಧಮಕ್ಕುಂ. ವಜ್ರ ವೃಷಭ ನಾರಾಚ ವಜ್ರನಾರಾಚ ನಾರಾಚಾರ್ಧನಾರಾಚ ಕೀಲಿತಾ-ಸಂಪ್ರಾಪ್ತಸೃಪಾಟಿಕಾಭೇದದಿಂ ಸಂಹನನಾಮಂ ಷಡ್ವಿಧಮಕ್ಕುಂ.. ಕೃಷ್ಣನೀಲ-ಪೀತಹರಿತರಕ್ತಶುಕ್ಲಭೇದದಿಂ ವರ್ಣನಾಮಂ ಪಂಚವಿಧಮಕ್ಕುಂ. ಸುಗಂಧ-ದುರ್ಗಂಧಭೇದದಿಂ ಗಂಧನಾಮಂ ದ್ವಿವಿಧಮಕ್ಕುಂ. ತಿಕ್ತಕಟುಕಷಾಯಾಮ್ರ-ಮಧುರಭೇದದಿಂ ರಸನಾಮಂ ಪಂಚವಿಧಮಕ್ಕುಂ. ಮೃದುಕರ್ಕಶಗುರುಲಘು-ಸ್ನಿಗ್ಧರೂಕ್ಷಶೀತೋಷ್ಣಭೇದದಿಂ ಸ್ಪರ್ಶ[2]+[2]ನಾಮಂ ಅಷ್ಟವಿಧಮಕ್ಕುಂ. ನರಕಾದಿ-ಪ್ರಯೋಗ್ಯಾನುಪೂರ್ವಭೇದದಿಂದಾನುಪೂರ್ವನಾಮಂ ಚತುರ್ವಿಧಮಕ್ಕುಂ. ಪ್ರಶಸ್ತಾಪ್ರಶಸ್ತದಿಂ ವಿಹಾಯೋಗತಿನಾಮಂ ದ್ವಿವಿಧಮಕ್ಕುಂ. ಉಚ್ಚನೀಚ-ಭೇದದಿಂ ಗೋತ್ರ [3]ನಾಮಂ[3] ದ್ವಿವಿಧಮಕ್ಕುಂ. ದಾನಲಾಭಭೋಗೋಪಭೋಗ-ವೀರ್ಯಭೇದದಿಂದೆ ಅಂತರಾಯಕರ್ಮಂ ಪಂಚವಿಧಮಕ್ಕುಂ. ಇಂತು ಮೂಲ-

---

1 ರ್ವ್ಯ (ಇಎ). 2 ನ (ಅಇಉಎ). 3 ಕರ್ಮಂ (ಅಇಉಎ).

ತ್ರ[illegible]ಗಳೆಂಟಕ್ಕಮುತ್ತರಪ್ರಕೃತಿಗಳ್ ನೂಱನಾಲ್ವತ್ತೆಂಟಕ್ಕಮುತ್ತರೋತ್ತರ-ಪ್ರಕೃತಿಗಳಸಂಖ್ಯಾತಭೇದಮಕ್ಕುಂ. ಮೊದಲ ಮೂಱು ಪ್ರಕೃತಿಗಳ್ಗಂತರಾಯಕ್ಕಂ ತ್ರಿಂಶತ್ಕೋಟೀಕೋಟಿಸಾಗರೋಪಮಸ್ಥಿತಿಯಕ್ಕುಂ. ನಾಮಗೋತ್ರಂಗಳ್ಗೆ ವಿಂಶತಿಕೋಟೀಕೋಟಿಸಾಗರೋಪಮಸ್ಥಿತಿಯಕ್ಕುಮಾಯುಷ್ಯಮಂ ಮೂವತ್ತಮೂಱು ಸಾಗರೋಪಮಕಾಲಮುತ್ಕೃಷ್ಟದಿಂ ಸ್ಥಿತಿಯಕ್ಕುಂ. ಮತ್ತಂ ವೇದನೀಯಕರ್ಮ ಪನ್ನೆರಡು ಮುಹೂರ್ತಮಾಱದ ಕರ್ಮಂಗಳೆಲ್ಲಮಂತರ್ಮುಹೂರ್ತಕಾಲಜಘನ್ಯದಿಂ ಸ್ಥಿತಿಯಕ್ಕುಮೊಂದು ಮೂಲೋತ್ತರಭೇದದಿಂ ಭಿನ್ನಕರ್ಮಪ್ರಕೃತಿಗಳಂ ಸಂಕ್ಷೇಪ-ಕ್ರಮದೊಳಱಪಿ ಕಮಾನ್ನೃತಂಗಳುಂ [illegible]ಪಸುಕ್ತಂಗಳುಮಪ್ಪ ಜೀವಾದಿ-ದ್ರವ್ಯಂಗಳಾಧಾರಭೂತಮಪ್ಪ ಲೋಕವಿಭಾಗಮೆಂತೆಂದೊಡೆ:—

ಪೊಡವಿಯೊಳ್ ವೇತ್ರಾಸನದೊಂ
ದಿದಂಪವಮಂ ನಡುವೆ ಝಲ್ಲರೀವಿಭ್ರಮಮಂ
ತುದಿಯೊಳ್ ಮೃದಂಗಮಂ ಪೋ
ಲ್ತುದು ಲೋಕಮಿದಲ್ತೆ ಲೋಕದೊಂದಾಕಾರಂ ೩

ಸಂಗತವೃತಾಖಸ್ಥಾ
ನಂ ಗುರುಕಟಿನಾಭಿಘಟಿತಕರನೆಂಬಿನೆಗಂ
ರಂಗಂಬೊಕ್ಕಭಿನಯಿಪ ನ
ಟಂಗೆಣೆಯೆನಿಪುದು ಕಣ್ಗೆ ಲೋಕಾಕಾರಂ ೪

ಅಂತು ನೇಮಾತ್ರವೃತ್ತಿಯುಂ ಮುಗ್ಗಚ್ಛವಿಯುಂ ಕಲ್ಲೋತಚ್ಛಾಯು-ಯುಮಪ್ಪ ಘನೋದಧಿಯುಂ ಘನಾನಿಳನುಂ ತನುವ ತಮುಮುಂಬ ವಾಯು-ತ್ರಯದಿಂ ವೇಷ್ಟಿತಮುಂ ಚತುರ್ದಶರಜ್ಜೂತ್ಸೇಧಮುಂ ಸಪ್ತ[illegible]-ರಜ್ಜುವಿಸ್ತಾರಮುಮಕೃತ್ರಿಮಮುಮಪ್ಪ ಲೋಕಾಕಾಶದ ಮಧ್ಯಮಪ್ರದೇಶ-ಮನಲಂಕರಿಸಿ,

ಮಹಾಭೂತವೃತ್ತ [illegible]
[illegible]
[illegible]
[illegible] ೫

ಮೊತ್ತಮೊದಲ್ ಚಿತ್ರಾವನಿ
[1]ಗೊ[1]ತ್ತಿರ್ದುದು ನಟ್ಟನಡು ಪೊದೆಟ್ಟುದು ದೆಸೆಯೊಳ್
ತುತ್ತತುದಿ [2]ರುತು[2] ವಿಮಾನಮ
ನೊತ್ತಿರ್ದುದು ನಗದ ಪಂಪನದನೇ[3]ವ್ರೊಗೞ್ಪೆಂ[3] ೬

ಅಂತು ನವನವತಿಸಹಸ್ರಂ ಯೋಜನೋತ್ಸೇಧಮುಂ ಸಹಸ್ರಯೋಜನಾಧಃಪ್ರವಿಷ್ಟಮುಮಪ್ಪ ಮಂದರಾಚಲದಧೋಭಾಗದ ಚಿತ್ರೆಯೆಂಬ ನೆಲದಿಂ ಕೆಳಗೆ ಪದಿನಾಱುಸಾಸಿರ ಯೋಜನಾಂತರದ ಖರ ಭಾಗದೊಳ್ ನಾಗಾದಿನವವಿಧಭವನವಾಸಿಕನಿವಾಸಮಿರ್ದುದು. ಅವರ ಶರೀರೋತ್ಸೇಧಂ ದಶಧನುಃಪ್ರಮಾಣಮುಮಕ್ಕುಮವರ್ಗೆಲ್ಲಮನುಕ್ರಮದೊಳ್ ಮೂಱುಮೆರಡುವರೆಯುಮೆರಡುಮೊಂದುವರೆಯುಂ ಪಲ್ಯೋಪಮಾಯುಮುತ್ಕೃಷ್ಟದಿಂದಮಕ್ಕುಂ. ಅವರ ಭವನಂಗಳೆಲ್ಲಮೇೞುಕೋಟಿಯುಮೆಂಟು [4]ಲಕ್ಕ[4]ಮುಮಕ್ಕುಮಲ್ಲಿಂ ಕೆಳಗೆ ಚತುರಶೀತಿಸಹಸ್ರ ಯೋಜನಾಂತರಮಪಾಂತದೊಳಸುರಕುಮಾರರಿರ್ಪರ್. ಅವರ ಶರೀರೋತ್ಸೇಧಂ ಪಂಚವಿಂಶತಿ ಬಾಣಾಸನಮಕ್ಕುಂ. ಅವರ್ಗುತ್ಕೃಷ್ಟದಿನೇಕಸಾಗರೋಪಮಾಯುಷ್ಯಮಕ್ಕುಂ. ಅವರ ಭವನಂಗಳೆಲ್ಲಂ ಚತುಷ್ಷಷ್ಟಿಲಕ್ಷಪ್ರಮಾಣಮಕ್ಕುಂ. ಅಲ್ಲಿಂ ಕೆಳಗೆ ಅಶೀತಿಸಹಸ್ರಯೋಜನಾಂತರದ ಉದಕಭಾಗದೊಳ್ ಘರ್ಮೆಯೆಂಬ ಪೆಸರ ರತ್ನಪ್ರಭೆಯೆಂಬ ಮೊದಲ ನರಕಮಿರ್ದುದು. ಆ ನರಕಬಿಲಂಗಳೆಲ್ಲಂ ತ್ರಿಂಶಲ್ಲಕ್ಷಪ್ರಮಾಣಮಕ್ಕುಂ. ಆ ನರಕಶರೀರೋತ್ಸೇಧಂ ಏೞು ಬಿಲ್ಲುಂ ಮೂಱುಮೊೞನುಮಾಱಂಗುಲಮುಮಾಗೆ ಹುಂಡಸಂಸ್ಥಾನರುಂ ತೃತೀಯವೇಧರುಂ ಘಾತಿಗಂಧರುಂ ಮಷೀಮಲಿನವರ್ಣರುಂ ಕೃಷ್ಣಲೇಶ್ಯಾಪರಿಣಾಮರುಮಪ್ಪವರ್ಗೆಮಯುತವರ್ಷಂ ಜಘನ್ಯಾಯುಮಾದಿಯಾಗೆ ಸಮಯೋತ್ತರಕ್ರಮದಿನೇಕಸಮುದ್ರೋಪಮಂಬರಮನಪವರ್ತ್ಯಾಯುಷ್ಯರಪ್ಪರ್. ಅಲ್ಲಿಂದತ್ತಸಂಖ್ಯಾತಯೋಜನಾಂತರಪೊಳ್ ಹಂಸೆಯೆಂಬ ಪೆಸರ ಶರ್ಕರಾಪ್ರಭೆಯೆಂಬೆರಡನೆಯ ನರಕಮಿರ್ದುದಾನರಕಬಿಲಂಗಳೆಲ್ಲಮಿಪ್ಪತ್ತೈಯ್ದುಲಕ್ಷಮಕ್ಕುಂ. ಆ ನಾರಕರಾಯುಮುತ್ಕೃಷ್ಟದಿಂ ತ್ರಿಸಾಗರೋಪಮಮಕ್ಕುಂ. ಅಲ್ಲಿಂದತ್ತಲೇಕರಜ್ಜುಪ್ರಮಾಣಾಂತರದೊಳ್ ಮೇಘೆಯೆಂಬ ಪೆಸರ ವಾಲುಕಪ್ರಭೆಯೆಂಬ ಮೂಱನೆಯ ನರಕಮಿರ್ದುದಾ ನರಕಬಿಲಂಗಳೆಲ್ಲಂ ಪದಿನೈದುಲಕ್ಷಮಕ್ಕುಂ. ಆ ನಾರಕರಾಯುಷ್ಯಮುತ್ಕೃಷ್ಟದಿಂ ಸಪ್ತಸಾಗರೋಪಮಮಕ್ಕುಂ, ಅಲ್ಲಿಂದೇಕರಜ್ಜುಪ್ರಮಾಣಾಂತರದೊಳಂಜನೆಯೆಂಬಪೆಸರ ಪಂಕಪ್ರಭೆಯೆಂಬ ನಾಲ್ಕನೆಯನರಕಮಿರ್ದುದಾ ನಾರಕಬಿಲಂಗಳೆಲ್ಲಂ ದಶಲಕ್ಷಮಕ್ಕುಮಾನಾರಕರಾಯುಮುತ್ಕೃಷ್ಟದಿಂ ಪತ್ತು ಸಮುದ್ರೋಪಮಮಕ್ಕುಂ.

---

1 ವೊ (ಇಉಎ). 2 ಪತು (ಕ, ಪಾ). 3 ವೇೞ್ವೆಂ (ಇಉಎ). 4 ಕ್ಷ (ಇಉಎ).

ಅಲ್ಲಿಂವತ್ತಮೇಕರಜ್ಜುಪ್ರಮಾಣಾಂತರದೊಳಮರಿಷ್ಟೆಯೆಂಬ ಪೆಸರನುಳ್ಳ ಧೂಮಪ್ರಭೆಯೆಂಬಯ್ದನೆಯ ನರಕಬಿಲಂಗಳೆಲ್ಲಂ ಮೂಱುಲಕ್ಕಮಕ್ಕುಂ. ಆ ನಾರಕರಾಯುಮುತ್ಕೃಷ್ಟದಿಂ ಪದಿನೇೞು ಸಮುದ್ರೋಪಮಮಕ್ಕುಂ. ಅಲ್ಲಿಂ ಕೆಳಗೇಕರಜ್ಜುಪ್ರಮಾಣಾಂತರದೊಳ್ಮಘವಿಯೆಂಬ ಪೆಸರ ತಮಪ್ರಭೆಯೆಂಬಾಱನೆಯ ನರಕಮಿರ್ದುದಾನರಕಬಿಲಂಗಳೆಲ್ಲಂ [1]ಅಯ್ದು[1]ಗುಂದೆಲಕ್ಕಮಕ್ಕುಂ ಆ ನಾರಕರಾಯುಮುತ್ಕೃಷ್ಟದಿಂ ದ್ವಾವಿಂಶತಿಸಾಗರೋಪಮಮುಮಕ್ಕುಂ. ಅಲ್ಲಿಂ ಕೆಳಗೇಕರಜ್ಜುಪ್ರಮಾಣಾಂತರದೊಳ್ಮಾಘವಿಯೆಂಬ ಪೆಸರ ಮಹಾತಮಪ್ರಭೆಯೆಂಬೇೞನೆಯ ನರಕಮಿರ್ದುದು. ಅಲ್ಲಿ ಕಾಳಮಹಾಕಾಳ ರೌರವ ಮಹಾರೌರವ ಪ್ರತಿಷ್ಠಾನಂಗಳೆಂಬಯ್ದು ಬಿಲಂಗಳಕ್ಕುಂ. ಆ ನಾರಕರಾಯುಮುತ್ಕೃಷ್ಟದಿಂ ತ್ರಯಸ್ತ್ರಿಂಶತ್ಸಾಗರೋಪಮಮಕ್ಕುಂ. ಅಂತು ರತ್ನಪ್ರಭೆಯಿಂತೊಟ್ಟು ನಾಲ್ಕುವರೆ ನರಕಭೂಮಿವರಂ ಉತ್ಕೃಷ್ಟಮುಷ್ಣಮುಂ ಅಲ್ಲಿಂದತ್ತೆರಡುವರೆ ಭೂಮಿವರಮತಿಶೀತಮಕ್ಕುಂ. ಪ್ರಥಮನಾರಕೋತ್ಸೇಧದ್ವಿಗುಣದ್ವಿಗುಣೋತ್ಸೇಧಮುಂ ಅಂತಾನಾರಕರ್ಕಳುಮವರನುಕ್ರಮದಿಂದಮಿಂತಿರ್ದೇೞು ನರಕಂಗಳೇಕರಜ್ಜುಪ್ರಮಾಣದೊಳ್

ಆವಿರ್ಭೂತತಮೋಮಯ
ಮಾವಿಷ್ಕೃತದುಃಖಮುಂಟು ಲೋಕಾಕಾಶಂ
ಜೀವಂಗಳಿಗೇಕೇಂದ್ರಿಯ
ಜೀವಕ್ಕುತ್ಪತ್ತಿಯಾದುದನಿತೆ ನಿಗೋಧಂ

ಅಲ್ಲಿ ಸೂಕ್ಷ್ಮವನಸ್ಪತಿಕಾಯಜೀವಂಗಳಂತ[2]ವ೯ಃ[2]ಹೂರ್ತದೊಳಱುವತ್ತಾಱುಸಾಸಿರದ ಮುನ್ನೂಱುಮೂವತ್ತಾಱು ಸೂೞ್ಸಾವೆ ಪುಟ್ಟುತ್ತುಂ ಪೊಂದುತ್ತುಮಿರ್ಕುಂ. ಆ ಪೆಱಗೆ ಪೇೞ್ದ ನರಕಬಿಲಂಗಳಂ ಮೇಗ[3]ಳೊ[3]ಟ್ಟಗಳೊಳಿಟ್ಟ ಜೇನ ಪುಟ್ಟಿಗಳುಮನುದ್ದಿಗಳುಮಂ ಖರಕರಭಕಾಕೋಳೂಕಸೃಗಾಲಶಾರ್ದೂಲಶುನಕಸೂಕರಾದಿಮುಖಂಗಳುಮನನುಕರಿಸುವ ಭೀಭತ್ಸಕುತ್ಸಿತೋತ್ಪತ್ತಿಪ್ರದೇಶಂಗಳೊಳ್ ಮಿಥ್ಯಾದರ್ಶನಾನಂತಾನುಬಂಧಿಕ್ರೋಧಮಾನಮಾಯಾಲೋಭಾಭಿಭೂತರುಂ ಬಹ್ವಾರಂಭಪರಿಗ್ರಹಗೃಹೀತರುಂ ಮೃಗವ್ಯಸನವಶಗತರುಮನೃತವಚನನಿರತರು-

---

1 ಯ್ದ (ಇ). 2 ಸ್ಮ (ಅಇಉಎ). 3 ಳ (ಕ), ಣ (ಅ), ನ (ಇಉ).

ಮನೇಕಮನಾಜರಣಪರಿಣತರುಂ ಕೃಷ್ಣಲೇಶ್ಯಾಪರಿಣಾಮರುಂ ಪರದಾರಾಲೋಲುಪರುಂ ಮಧುಮದ್ಯಮಾಂಸಲಂಪಟರುಮಪ್ಪ ಮಹಾಪಾಪಕರ್ಮಕರ್ಮಠರುಂ ಅಧೋಮುಖರಾಗಿ ನೆಲಸಿ ಮುಹೂರ್ತಮಾತ್ರದೊಳಗಾಹಾರಶರೀರೇಂದ್ರಿಯೋಚ್ಛ್ವಾಸಭಾಷಾಮನಸಂಗಳೆಂಬಾಱುಂ ಪರ್ಯಾಪ್ತಿಗಳ್ ನೆಱೆದು

ಕಡುಗಾಯ್ದ ಶಿಲೆಗಳೊಳ್ ಕೊ
ರ್ಪುಡುಗದ ಕೈಮುಗಳೊಳೆಱಗಿ ಪೊಯ್ದುದಿಯೊಳಗಂ
ದಡಸಿ ಜವದೂತರಂದದೆ
ಬಡಿಗಳ್ವೆರಸೆಯ್ದೆ ಮುಸುಱುಗುಂ ರೌದ್ರಾಕಾರರ್ ೮

ದಱದಱನೆಟಿದೆಯೆಟಿದೆ ಪಿಡಿ ಪಿಡಿ
ತಱುತಱು ಕರಗಸವೊಳಿಕ್ಕಿ ಸೀಳ್ ಸೀಳ್ ಕೊಲ್ ಕೊ
ಲ್ಲಿಱಯಿಱ ತಿವಿ ತಿವಿ ಪೊಯ್ ಪೊಯ್
ಕೊಱೆ ಕೊಱೆಯೆಂದೊದಱು ಗಜಱು ಗರ್ಜಿಸಿ ಮುಳಿವರ್ ೯

ಪಿಡಿಪಿಡಿ ಕಟ್ಟು ಕಟ್ಟಡಸಿ ಘಾತಿಸು ಘಾತಿಸು ಸಂಧಿಸಂಧಿಯಂ
ಕಡಿಕಡಿ ಕುತ್ತುಕುತ್ತು ಬಲಿಗೆಯ್ ಬಲಿಗೆಯ್ ಪೆಱವೆಣ್ಗೆ ಸೋಲ್ವ ಕ
ಳ್ಗ ಡಿವಡದಿಂಬ ನಂಬಿಪರನೋವದೆ ಛಿದ್ರಿಪ ಕಳ್ವ ಕಳ್ವನೊಳ್
[1]ನುಡಿ[1]ನಟಿಯಾವನೆಂದು ನವನಾರಕರಂ ಪಿಡಿಯೆಯ್ದೆ ನಾರಕರ್ ೧೦

ಅಂತು ಕಷ್ಟಾನಿಷ್ಟಕಠೋರಕರ್ಕಶಪರುಷವಿಷಮಂಗಳಂ ನುಡಿಯುತ್ತುಮೋರೊರ್ವರನಗುರ್ವಾಗಿ ವಿಕಟಕೂಟಶಾಲ್ಮಲಿಗಳನಡಿಗಡಿಗೇಱಿಸುತ್ತುಂ ದಿನಂತರಸಂತಪ್ತಕಾರಿಗಳಪ್ಪ ಇಕ್ಷುಯಂತ್ರದೊಳಿಕ್ಕಿ ಹಿಱಸುತ್ತುಂ,ತತ್ತಱಗುದಿದು ಕಾಯ್ದ ಕಾಯ್ಗೊಂಡಪೆಣ್ಣೆಯೊಳದ್ದಿ ಬದ್ದಿಸುತ್ತುಮಾಪಾದಮಸ್ತಕಂಬರಂ ಪ್ರತ್ತಿಸಿ ಪತ್ತಿ ತಿದಿಯು[2]ಗಿಯುತ್ತೆ[2] ಕೇಸುರಿಯ ಬಣ್ಣಮಾಗೆ ಕರಮೆ ಕರಗಿಸಿದ ಕಾಳಾಯಸರಸಮನೊಟ್ಟೆಯಿಸಿಗೊಟ್ಟುಂ ಗುಡಿಯಿಸು ಕಕ್ಕಿಗೆ ಕೈಬಾಚಿಯೊಳಂ ಕಿಱಕಿಱದು ತಱತಱದು ಕೊಱೆಕೊಱೆದವರ ಬಾಯೊಳಗೆ ಅವರ ಖಂಡಂಗಳನಡಸಿ ಗಿಡಿಯುತ್ತುಂ, ನಿಡಿಯ ನಾಲಗೆಯಂ ಪಿಡಿದು ಪೆಸತಲೆಯುಂ

---

1 ಗುಡಿ (ಇಉ), ಕುಡಿ (ಎ). 2 ಗುರೊ (ಇಉಎ).

ತೆಗೆದೆರಡು ಕೆಯ್ಯೊಳ್ ಮುಚ್ಚಿ [1]ಚು[1]ಚ್ಚುತ್ತುಮಸುರಕುಮಾರವಿಕ್ರಿಯಾಸಮುದ್ಭೂತಪಿಯುದ್ವೈತರಣೀತರಂಗಿಣಿಯ ಪೆರ್ನುಡುಗಳೊಳಿದಿರುಂ ಬಱಿಯುಂ [2]ವಿ[2]ಸಿಸುತ್ತುಂ, ಮತ್ತಂ ಕಾಲಂ ಪಿಡಿದು ಬೀಸಿಯುಮಡ್ಡಂ ಪಿಡಿದು ಜಾಸಿಯುಂ ಮಿಡಿಯಂ ಪರಿಯೆಯುಂ ಮೂಳೆಯಂ ಮುಱಿಯೆಯುಂ [3]ಚಗಟ[3] ಗಳೆಯುಯುಂ ನಡುಬೆನ್ನಂ ಸಜ್ಜಿನೆ ಸೀಳಿಯುಂ ತೊಡೆಯನುಡಿಯೆಯುಂ ತಲೆಯಂ ಕಡಿಯೆಯುಂ ಕರುಳನುರ್ಚಿಯುಂ ಮೊಗಮಂ ಚುರ್ಚಿಯುಂ [4]ಮೆ[4]ಳ್ಳಿಯಂ ಕುತ್ತಿಯುಮಿ[5]ರ್ಕುಳೊಳೊ[5]ತ್ತಿಯುಂ ಒರಿಯಂ ಸುರಿಯೆಯುಂ ಗೊಂಕೆಯಂ ನು[6]ಲಿ[6]ಯೆಯುಂ ನಖದೊಳ್ ಸೂಜಿಯುಂ [7]ಪೆಟ್ಟಿಯುಂ[7] ಚಾತಬೊಕ್ಕಣಂಗಟ್ಟಿಯುಂ ಕರ್ಜಱಿಯು ನೂಱಿಯುಂ ಮುಳ್ಗಿಟ್ಟಿಱಿಯೆಯುಂ ಬಾ[8]ಯಜೆ[8]ತ್ತಿಱಿಯೆಯುಂ ಪಲ್ಲಂ ಕಟಿಲೆಗುಟ್ಟಿಯುಂ ನೀರೊಳಿಕ್ಕಿ ಮೆಟ್ಟಿಯುಂ ನವಖಂಡಂದಱಿಯೆಯುಂ ಬಸುಱಂ[9]ಪೋಳೆಯು[9]ಯುಂ ಪೊ[10]ಳ್ಳೆ[10]ನೆ ಸೀಳಿಯುಂ ಬಱಿಗಯ್ಯೊಳೆ ಗು[11]ದ್ದಿ[11]ಯುಂ ಪುಡುಕು ನೀ[12]ರೊಳ[12]ರ್ದಿಯುಂ ಪುಟಪಾಕಂ ಸುಡೆಯುಂ ಮಡು ಪುಗ್ಗಿಡೆಯೆಯುಂ ಬಾಱಿತ್ತಿ ಸೀಳಿಯುಂ ಗುಗ್ಗುಳಂಬೊತ್ತಿಸೆಯುಂ[13]ಮಸಗಲ್ಲಿನೊಳ್ ಮಸೆಯುಯುಂ[13] ಚಿತ್ರವಿಧಂಗೆಯ್ಯೆಯುಂ ಮತ್ತಮಸಿಪತ್ರವನನಿಕರ್ತದೊಳಂ ತಪ್ತಾಯಃಪುತ್ರಿಕಾಲಿಂಗನದೊಳಮತಿವಿಶಾಲಪಟ್ಟಕೋಳ್ಪಟ್ಟಣದೊಳಮತಿದಾರುಣಕ್ರಕಚವಿದಾರಣದೊಳಮತಿಕರಾಳ ಶೂಲಾರೋಹಣದೊಳಮತಿಭಯಂಕರಕುಕ್ಕುಟಾದ್ಯಾಗ್ರಹನಿಗ್ರಹದೊಳಮತಿಸ್ಫಾರ-—ವಿಷ್ಫುಲಿಂಗಸ್ಫೀತಾವರೋಹಣದೊಳಂ ದಂಡನಖಂಡನತಾಡನಪೀಡನಗರ್ಜನತರ್ಜನಾದಿಗಳನೆಯ್ದಿ ನಿಳಲೆಡೆಯಿಲ್ಲದಡಹಡಿಸಿ ಸುಡುಮಿಡುವಂದು ನಡನಡನಡುಗಿ ಮಿಡುಮಿಡುಮಿಡುಕಿ ಪುಡುಪುಡುಪುಗ್ಗಿ ತಡತಡದಡಿಸಿ ಬೀಱುತ್ತುಮೇಱುತ್ತುಮಿಸಿಸಪ್ಪೊಡಮುಸಿರ್ ಪ[14]ತ್ತು[14]ವಡೆಯದೆ ಶರೀರಮಾನಸಕ್ಷೇತ್ರಜಪರಸ್ಪರೋದೀರಿತದನುಜೋದೀರಿತಂಗಳೆಂಬ ಪಂಚವಿಧದುಃಖಪ್ರಪಂಚಂಗಳಿಂ ಪೂರ್ವಭವಸಂಚಿತದುಷ್ಕರ್ಮಫಲಮನನುಭವಿಸುತ್ತುಮಾಟವಿಟಂ ಬಂದು ಮಲಮಲಮಱುಗಿ ಪುಯ್ಯಲಿಡುತ್ತುಂ

ಅವರನುಭವಿಸುವರಾಯುವ
ತವುವಲೆ ವರಮಧಿಕದುಃಖಮಂ ಸಣ್ಣಿಗೆಯಿಂ

---

1 ಮು (ಅಕ). 2 ಮಿ (ಇಉಎ). 3 ಬಗಟೆ (ಕ). 4 ಅ (ಕ). 5 ಕ್ಕುಳಲೊ (ಆಇಉಎ). 6 ರಿ (ಅಕ) 7 ಟೆ (ಅಕ). 8 ್ಯಯಿಂಬ (ಇಉಎ). 9 ಫೋಳೆ (ಅ), ಪೊಳೆಯು (ಇಉಎ). 10 ಳಸೆ (ಇಉ), ಳಪೆ (ಎ). 11 ರ್ದ್ದ (ಅಕ). 12 ರ (ಅಕ). 13 ಅಸಪೊಯುಲ್ಪೊಯ್ಯೆಯುಂ (ಅಕ). 14 ತ್ತಿ (ಇಎ).

ದವರಂ ಸಣ್ಣಿಸುವೊಡವಿಂ
ತವರಸುಗಳ್ ಪೋಗ[1]ವ[1]ಣಮೆ ಕರಗವು ತನುಗಳ್ ೧೧

ಕೇವಲಮೆ ನರಕದುಃಖಂ
ಕೇವಲವಿಜ್ಞಾನವಿಷಯಮ[2]ಲ್ಪಶ್ರುತ[2]ದೊಳ್
ಭಾವಿಪೊಡಾರ್ ನೆಱ[3] ನುಡಿವರೊ
ದೇವಂ ಸರ್ವಜ್ಞನೊರ್ವನೇ ನೆಱ[3] ನುಡಿಗುಂ ೧೨

ಎಂದು

ಮಂಗಳಗುಣರೇಟುಂ ನರ
ಕಂಗಳ ನಾರಕರ ದಂಡನಾದಿಗಳಂ ದುಃ
ಖಂಗಳನಭಿವರ್ಣಿಸಿದೊಡ
ಸುಂಗೊಂಡುದು ಮೆಯ್ ಭಗೀರಥಕ್ಷಿತಿಪತಿಯಾ ೧೩

ಎಂದಧೋಲೋಕಮನಭಿವರ್ಣಿಸಿ ಮಧ್ಯಮಲೋಕಮನಾಲೋಕಗುರುಗಳಂ ಬಣ್ಣಿಸಲ್ಬಗೆದೀನರರಿರ್ದ ಜಂಬೂದ್ವೀಪದ ಮಧ್ಯವರ್ತಿಯಪ್ಪ ಮಂದರದ ದಕ್ಷಿಣೋತ್ತರ ಪೂರ್ವಾಪರವಿದೇಹಂಗಳಿರ್ದವಲ್ಲಿಹಿಮವನ್ಮಹಾಹಿಮವನ್ನಿಷಧ[ಮಂದರಗಜದಂತ] ನೀಳರುಗ್ಮಿಶಿಖರಗಳೆಂಬಾಱು ಕುಲಪರ್ವತಂಗಳಿಂದಮವಱ ಮೇಗಣ ಪದ್ಮೆ ಮಹಾಪದ್ಮೆತಿಗಿಂಛಕೇಸರಿ ಪುಂಡರೀಕೆ ಮಹಾಪುಂಡರೀಕೆಗಳೆಂಬ ಆಱುಂ ಮಹಾಸರೋವರಂಗಳಿಂದಂ, ತನ್ನಿವಾಸಿನಿ ಶ್ರೀಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಗಳೆಂಬಱುವರ್ ಶ್ರೀಯಾ[ದಿ]ದೇವಿಯರಿಂದಮಾಕೊ[3]ಳ[3]ದೊಳ್ ಪುಟ್ಟಿಬೇಱ[3]ವೇಱ[3]ಪದಿನಾಱರು ಸಾಸಿರಮಱ[3]ಕೆಯ ತೊಱ[3]ಗಳ್ಕೂಡಿ ಪೂರ್ವಾಪರಸಮುದ್ರಗಾಮಿಗಳಾದ ಗಂಗೆಯುಂ ಸಿಂಧುವುಂ ರೋಹಿತೆಯುಂ ರೋಹಿತಾಸ್ಯೆಯುಂ ಹರಿತೆಯುಂ ಹರಿಕಾಂತೆಯುಂ ಸೀತೆಯುಂ ಸೀತೋದೆಯುಂ ನಾರಿಯುಂ ನರಕಾಂತೆಯುಂ ಸುವರ್ಣಕೂಲೆಯುಂ ರೂಪ್ಯಕೂಲೆಯುಂ ರಕ್ತೆಯುಂ ರಕ್ತೋದೆಯುಮೆಂಬ ಪದಿನಾಲ್ಕುಮಹಾನದಿಗಳಿಂದಂ, ಹಿಮವನ್ಮಹಾಹಿಮವನ್ಮಧ್ಯದ ಹೈಮವತಮೆಂಬ ಜಘನ್ಯಭೋಗಭೂಮಿಯಿಂದಮಾಮಹಾಹಿಮವನ್ನಿಷಧಮಧ್ಯದ ಹರಿಯೆಂಬ ಮಧ್ಯಭೋಗಭೂಮಿಯಿಂದಂ, ಮಂದರನಿಷಧಗಜದಂತಾಕಾರಮಪ್ಪ ಗಿರಿಯನಡುವಿರ್ದದೇವಕುರುವೆಂಬುತ್ತಮಭೋಗಭೂಮಿಯಿಂದಂ, ಹೈಮವತೈರಾವತಪ್ರತಿಬದ್ಧವಿಜಯಾರ್ಧಪರ್ವತಂಗಳಿಂದಮವಱ ಮೇಗಣ ನೂಱಪತ್ತು ಪೊಟಲಿಂದಮುಭಯವಿದ್ಯಾಧರಶ್ರೇಣಿ-

---

1 ದ (ಇಉಎ). 2 ಲ್ಪಾಶ್ರಯ (ಕ). 3 ಣ (ಇಉಎ)

ಗಳಿಂದಮಾಗಜದಂತಗಿರಿಗಳಂ ಮುಟ್ಟೆ ಕಿನ್ನರಕಿಂಪುರುಷಾದಿವ್ಯಂತರಾವಾಸನಿರಂ-
ತರಮಾಗಿರ್ದೆಂಟು ದಿಕ್ಕರಿಗಿರಿಗಳಿಂಗಂ, ನೀಲನಿಷಧಂಗಳೊಳ್ ಪುಟ್ಟೆ ಪೂರ್ವಾ-
ಪರವಿದೇಹಂಗಳ ಮೂವತ್ತೆರಡು ನಾಡುಗಳ ನಡುವೆ ಪರಿದ ಸೀತೆಯು ಸೀತೋ-
ದೆಯು ತಡಿವಿಡಿದಿರ್ದಯ್ದು ಮಹಾಸರೋವರಂಗಳ ಪೂರ್ವಾಪರತಟನಿಕಟ
ವರ್ತಿಗಳಾಗಿ[1]ರ್ದು[1] ನೂಱುಗೆಯ್ದ ಕನಕಗಿರಿಗಳಿಂದಂ, ನೀಳನಿಷಧಂಗಳಂ
ಸೋಂಕಿರ್ದ ಚಿತ್ರವಿಚಿತ್ರಯಮಕವಿಷಕೂಟಂಗಳೆಂಬ ನಾಲ್ಕುಯಮಕಗಿರಿ
ಗಳಿಂದಂ, ಮೇರುಗಿರಿಯದಕ್ಷಿಣಪಶ್ಚಿಮದಿಗ್ಭಾಗದೊಳ್ ಸರ್ವರತ್ನರಂಜಿತಮು
ಮನಾದೃತಗರುಡೇಂದ್ರಸುಂದರಮುಮಾಗಿರ್ದಶಾಲ್ಮಲೀದ್ರುಮದಿಂದಮಾ ಮಂ-
ದರದ ಪೂರ್ವೋತ್ತರದಿಗ್ಭಾಗದೊಳ್ ಪಂಚಶತಯೋಜನವಿಸ್ತಾರದೊಳಮಷ್ಟಶತ-
ಯೋಜನೋತ್ಸೇಧದೊಳಂ ನೆಱೆ[3]ದು ಕಲ್ಪದ್ರುಮಕಲ್ಪಮುಂ ಪೃಥ್ವೀಪರಿ-
ಣಾಮಮುಂ ವ್ಯಂತರಾವಾಸಮುಮಾಗಿರ್ದ ಜಂಬೂವೃ[2]ಕ್ಷದಿನು[2]ಪಲಕ್ಷಿತಮುಮೇಕ-
ಲಕ್ಷಯೋಜನಮುಮಾಗಿರ್ದ ಜಂಬೂದ್ವೀಪಮಂ ಬಳಸಿರ್ದ ವಜ್ರವೇದಿಕೆಯಿಂದಂ
ಪೊಱಗೆರಡುಲಕ್ಷಯೋಜನದಗಲಮಂ ತಾಳ್ದಿ ಲವಣಸಮುದ್ರಮಿರ್ದುದಲ್ಲಿಂ ಪೊಱಗೆ
ನಾಲ್ಕುಲಕ್ಷಯೋಜನದೊಳ್ ನೆಱೆ[3]ದ ಧಾತಕೀಷಂಡದ್ವೀಪಮಿರ್ದುದಾದ್ವೀಪದಿಂ
[3]+[3] ಪೂರ್ವಾಪರವಿದೇಹಂಗಳುಂ ಚತುರಶೀತಿಸಹಸ್ರಯೋಜನೋತ್ಸೇಧದೊಳೆ-
ರಡು ಮಂದರಗಿರಿ[4]ಗಳ[4]ರ್ದುದಾದ್ವೀಪಮನೆಂಟುಲ[5]ಕ್ಕೆ[5] ಯೋಜನದಗಲದೊ[6]ಳ್[6]
ಬಳಸಿ ಕಾಳೋದಕ ಸಮುದ್ರಮಿರ್ದುದಲ್ಲಿಂದತ್ತ ಷೋಡಶ ಯೋಜನೋಪಲಕ್ಷಿ-
ತಮಾಗಿ ಪುಷ್ಕರವರದ್ವೀಪಮಿರ್ದುದದಱ ನಡುವೆ ಮಾನುಷೋತ್ತ[7]ರಾಚಳ[7]
ಮಿರ್ದುದದಱ ಮಧ್ಯಪ್ರದೇಶದೊಳೆಂಟು ಲಕ್ಷಯೋಜನದಗಲದ ಪುಷ್ಕರಾರ್ಧದ
ಪೂರ್ವಾಪರದಿಗ್ಭಾಗದೊಳೆರಡು ಮಂದರಗಿರಿಗಳಿರ್ದುವಿಂತೆಲ್ಲಮಯ್ದು ಮಂದರ-
ಗಿರಿಗಳಾಗೆ—

ನೆಗೞ್ದಿರ್ದಯ್ದುಂ ಮಂದರ
ನಗಂಗಳೊಳ್ ನಾಲ್ಕು ನಾಲ್ಕು ಬನಮೊಪ್ಪುಗುಮಾ
ಸೊಗಯಿಪ ವನತತಿಯೊಳೆ ನಾ
ಡೆ ಗಡೆಸೆಗುಂ ನಾಲ್ಕು ನಾಲ್ಕು ಜಿನಭವನಂಗಳ್ ೧೪

ಆ ಮಂದರಂಗಳಲ್ಲಿ ಭರತೈರಾವತಂಗಳುಂ ಪೂರ್ವಾಪರವಿದೇಹಂಗಳುಂ
ಭೋಗಭೂಮಿಗಳುಮಿಲ್ಲಿಯ ಮಂದರಕ್ಕೆ ಪೇೞ್ದ ತೆಱದೊಳಕ್ಕುಮಾಪೂರ್ವಾ-

———

1 ರ್ದ (ಇಉಎ). 2 ಕ್ಷೋ (ಕ). 3 ದ (ಇಉ), ದಾ (ಎ). 4 ಯಿ (ಇಉಎ). 5 ಕ್ಷೆ (ಇಉಎ) 6 ಳ್ (ಇಉಎ). 7 ರ ಪರ್ವತ (ಇಉಎ).

ಪರವಿದೇಹಂಗಳ ಮನುಷ್ಯರುಂ ಪೂರ್ವಕೋಟಿ ವರ್ಷಂಬರಮಾಯು[1]ಷ್ಯ[1]ರುಂ ಪಂಚಶತಶರಾಸನೋತ್ಸೇಧರುಮಪ್ಪರಲ್ಲಿ

ಪದದೊಳ್ ಕೊಳ್ವವಲ್ಲಿ ಮಾ[3] ಪರ್ವ ಬಟಿಂ ಪಸವೆಂಬುದಾವುದಂ
ತದಱಿ[3]ರೊಳವಿಲ್ಲ ತೀರ್ಥಕರರೀಗಳುಮಾಗಳುಮಿರ್ಪರನ್ಯಥ
ರ್ಮದ ಪೆಸರಿಲ್ಲ ಧರ್ಮನಿರತರ್ ನೃಪರೆಲ್ಲರುಮೆಂದೊಡೇನನೆಂ
ಬುದೊ ಸಕಳಾವನೀತಿಲಕಮೆನ್ನದರಾರೆರಡುಂ ವಿದೇಹಮಂ ೧೫

ಆ ಜಘನ್ಯೋತ್ತಮಮಧ್ಯಮಭೋಗಭೂಮಿಗಳೊಳಮನುಕ್ರಮದಿನೇಕದ್ವಿತ್ರಿ-ಪಲ್ಯೋಪಮಾಯು[2]ಷ್ಯ[2]ರುಂ ದ್ವಿಚತುಷ್ಷಟ್ಸಹಸ್ರಚಾಪೋತ್ಸೇಧರುಮಪ್ಪ ದಂಪ-ತಿಗಳಾಗೆ

ಪೆಸರಿಂ ಜ್ಯೋತಿಷ್ಕದೀಪಾಸನವಸನಲಸದ್ಭೂಷಣಾತೋದ್ಯಮದ್ಯಾ
ವಸಥಸ್ರಗ್ಭೋಜನಾಂಗಪ್ರಕಟತರದಶಾಂಗಾಮರಾನೋಕಹಂ ಸಂ
ದಿಸುಗುಂ ತಾನೇನನೊಂದಂ ಬಗೆದರದನೆ ತಂದ[3]ಟ್ಟು[3]ಯಿಂದೆಂದೊಡೇನೆಂ
ದುಸಿರಲ್ಕಂ ಬಾರದಾ ದಂಪತಿಗಳ ಪರಮಾಗಣ್ಯಪುಣ್ಯಪ್ರಭಾವಂ ೧೬

ಸುರಶೈಳಂ ನಿಷಧಾಚಳಂ ಸುರನಗಂ ನೀಳಾಚಳಂ ಮೇರೆಯಾ
ಗಿರೆ ಶುಂಭದ್ಗಜದಂತಶೈಲತಟದೊಳ್ ಸೀತಾನದೀತೀರಮೊ
ಪ್ಪಿರೆ ಸೀತೋದೆಯ ಚೆಲ್ವು ಮಿಕ್ಕಿರೆ ದಶಾಂಗೇಂದ್ರದ್ರುಮಜ್ಯೋತಿಗಳ್
ಬೆರಸಿರ್ದುತ್ತಮಭೋಗಭೂಮಿಯೆರಡುಂ ಸಗ್ಗಕ್ಕೆ ಮೇಲಲ್ಲವೇ ೧೭

ಆ ಮಾನುಷೋತ್ತರ ಪರ್ವತದಿಂದೊಳಗೆರಡುವರೆ ದ್ವೀಪಮುಮೆರಡುವರೆ ಸಮುದ್ರಮಿರ್ದುವಲ್ಲಿಂ ಪೊಱಗೆ ಪುಷ್ಕರಸಮುದ್ರಮಿರ್ದುದಲ್ಲಿಂ ಪೊಱಗೆ ವಾರುಣ-ದ್ವೀಪಮುಂ ವಾರು[4]ಣ[4]ವರಸಮುದ್ರಮುಂ ಕ್ಷೀರವರ ದ್ವೀಪಮುಂ ಕ್ಷೀರವರ-ಸಮುದ್ರಮುಂ ಘೃತವರದ್ವೀಪಮುಂ ಘೃತವರಸಮುದ್ರಮುಂ ಇಕ್ಷುವರದ್ವೀಪ-ಮುಮಿಕ್ಷುವರಸಮುದ್ರಮುಮಲ್ಲಿಂ ಪೊಱಗೆ ನಂದೀಶ್ವರದ್ವೀಪಮಿರ್ದುದು.

---

1 ಷ್ಕ (ಇಉಎ). 2 ಷ್ಯ (ಇಉಎ). 3 ತ್ಥ (ಅಇಉಇ). 4 ಣೀ (ಇಉಎ).

ಸಕಳಾಶಾಚಕ್ರಮುಂ ಪಜ್ಜ್ವಳಿಪಮಣಿಗಣಾಲೋಕಮಾಷಾಢದೊಳ್ ಕಾ
ರ್ತಿಕದೊಳ್ ಪರ್ಯಾಯದಿಂ ಫಾಲ್ಗುಣದೊಳೆಸೆಯೆ ಶುದ್ಧಾಷ್ಟಮೀವಾಸರಂ ಭ
ಕ್ತಿಕರಂ ಕೈಗಣ್ಮೆ ಬಂದರ್ ಜನಪರಿಕರದಿಂದರ್ಚಿಸುತ್ತಿರ್ಪ ವೈಮಾ
ನಿಕರಿಂ ನಂದೀಶ್ವರದ್ವೀಪದ ಜಿನಭವನಂ ಸ್ತೋತ್ರಪಾತ್ರಂ ಪವಿತ್ರಂ ೧೮

ಆ ನಂದೀಶ್ವರದ್ವೀಪದಿಂ ಪೊಱಗೆ ನಂದೀಶ್ವರ ಸಮುದ್ರಮಿರ್ದುದಲ್ಲಿಂ ಪೊಱಗರುಣದ್ವೀಪಮುಂ ಅರುಣಸಮುದ್ರಂ ಅರುಣಪ್ರಭಾದ್ವೀಪಮುಂ ಅರುಣಪ್ರಭಾಸಮುದ್ರಮುಂ ಕುಂಡಲದ್ವೀಪಮುಂ ಕುಂಡಲಸಮುದ್ರಮುಂ ಶಂಖದ್ವೀಪಮುಂ ಶಂಖಸಮುದ್ರಮುಂ ರುಚಕದ್ವೀಪಮುಂ ರುಚಕಸಮುದ್ರಮುಂ ಭುಜಗದ್ವೀಪಮುಂ ಭುಜಗಸಮುದ್ರಮುಂ ಕುಶದ್ವೀಪಮುಂ ಕುಶಸಮುದ್ರಮುಂ ಕ್ರೌಂಚದ್ವೀಪಮುಂ ಕ್ರೌಂಚಸಮುದ್ರಮುಮಿಂತುದ್ಧಾರದ ಪಲ್ಯೋಪಮದ ರೋಮರೇಣುಗಳೆನಿತೊಳವನಿತೆ ಲೆಕ್ಕದಿಂ ದ್ವೀಪಸಮುದ್ರಂ ದ್ವಿಗುಣದ್ವಿಗುಣಮಾಗಿರ್ದುವು.

ವಳಯಾಕಾರ[1]ದಿ[1] ಚಳಸಿದ
ಜಳಧಿದ್ವೀಪಂಗಳಿಂದೆ ಕಡೆಯೊಳ್ ವಿಚಳ
ಜ್ಜ್ವಳಚರಸಂಕುಳಕೋಳಾ
ಹಳಮಿರ್ದತ್ತರ್ಣವಂ ಸ್ವಯಂಭೂರಮಣಂ ೧೯

ಅಲ್ಲಿಗೇಕರಜ್ಜುಯೋಜನಪ್ರಮಾಣವಿಸ್ತಾರದಿಂ ಲೋಕಮಕ್ಕುಮಲ್ಲಿಂದತ್ತಲೋಕಮಕ್ಕುಮಿಾನಮ್ಮಿರ್ದ ಭರತಕ್ಷೇತ್ರದೊಳ್ ಪ್ರತಿಶ್ರುತಿಯುಂ ಸನ್ಮತಿಯುಂ ಕ್ಷೇಮಂಧರನುಂ ಕ್ಷೇಮಂಕರನುಂ ಸೀಮಂಧರನುಂ ಸೀಮಂಕರನುಂ ವಿಮಳವಾಹನನುಂ ಚಕ್ಷುಷ್ಮನುಂ ಯಶಸ್ವಿಯುಂ ಅಭಿಚಂದ್ರನುಂ ಚಂದ್ರಾಭನುಂ ಮರುದ್ದೇವನುಂ ಪ್ರಸನ್ನ[2]ಜೇತ[2]ನುಂ ನಾಭಿರಾಜನುಮಿಂತು ಪದಿನಾಲ್ಕುಮನುಗಳಪ್ಪರ್. ವೃಷಭನುಮಜಿತನುಂ ಶಂಭವನುಂ ಅಭಿನಂದನನುಂ ಸುಮತಿಯುಂ ಪದ್ಮಪ್ರಭನುಂ ಸುಪಾರ್ಶ್ವನುಂ ಚಂದ್ರಪ್ರಭನುಂ ಪುಷ್ಪದಂತನುಂ ಶೀತಳನುಂ ಶ್ರೇಯಾಂಸನುಂ ವಾಸುಪೂಜ್ಯನುಂ ವಿಮಲನುಂ ಅನಂತನುಂ ಧರ್ಮನುಂ ಶಾಂತಿಯುಂ ಕುಂದುವುಂ ಅರನುಂ ಮಲ್ಲಿಯುಂ ಮುನಿಸುವ್ರತನುಂ

---

1 ದೆ (ಕ) 2 ಚಿತ್ತ (ಇಉಎ).

ನಮಿಯುಂ ನೇಮಿಯುಂ ಪಾರ್ಶ್ವನುಂ ವರ್ಧಮಾನನುಮೆಂದಿ[1]ರ್ಪ[1]ತ್ತುನಾಲ್ವರ್ ತೀರ್ಥಕರಪರಮದೇವರಪ್ಪರ್. ಭರತನುಂ ಸಗರನುಂ ಮಘವನುಂ ಸನತ್ಕುಮಾರನುಂ ಶಾಂತಿಯುಂ ಕುಂದುವುಂ ಅರನುಂ ಸುಭೌಮನುಂ ಮಹಾಪದ್ಮನುಂ ಹರಿಷೇಣನುಂ ಜಯಷೇಣನುಂ ಬ್ರಹ್ಮದತ್ತನುಮೆಂದು ಪನ್ನೀರ್ವರ್ ಚಕ್ರವರ್ತಿಗಳ[2]ಪ್ಪರ್[2]. ವಿಜಯನುಮಚಲನುಂ ಧರ್ಮನುಂ ಸುಪ್ರಭನುಂ ಸುದರ್ಶನನುಂ ನಂದಿಯುಂ ನಂದಿಮಿತ್ರನುಂ ರಾಮನುಂ ಪದ್ಮನುಮೆಂದು ಬಲದೇವರೊಂಬದಿಂಬರ್. ತ್ರಿಪಿಷ್ಟನುಂ ದ್ವಿಪಿಷ್ಟನುಂ ಸ್ವಯಂಭುವುಂ ಪುರುಷೋತ್ತಮನುಂ ಪುರುಷಸಿಂಹನುಂ ಪುರುಷವರನುಂ ಪುಂಡರೀಕನುಂ ದತ್ತನುಂ ಕೃಷ್ಣನುಮೆಂದು ವಾಸುದೇವರೊಂಬದಿಂಬರುಮಪ್ಪರ್. ಅಶ್ವಗ್ರೀವನುಂ ತಾರಕನುಂ ಮೇರಕನುಂ ಮಧುಕೈಟಭನುಂ ನಿಶುಂಭನುಂ ಬಲಿಯುಂ ಪ್ರಹ್ಲಾದನುಂ ರಾವಣನುಂ ಜರಾಸಂಧನುಮೆಂದೊಂಬದಿಂಬರ್ ಪ್ರತಿವಾಸುದೇವರುಂ ಭರತನುಂ ಸತ್ಯಭಾವನುಂ ವೀರ್ಯನುಂ ವಿ[3]ತ್ರಭಾವ[3]ನುಂ ಮಿತ್ರವೀರ್ಯನುಂ ದಾನವೀರ್ಯನುಂ ಧರ್ಮವೀರ್ಯನುಂ ಮಘವನುಂ ಯುದ್ಧವೀರನುಂ ಸೀಮಂಧರನುಂ ತ್ರಿವಿಷ್ಟನುಂ ಸ್ವಯಂಭುವುಂ ಪುರುಷೋತ್ತಮನುಂ ಪುರುಷವರನುಂ ಪುಂಡರೀಕನುಂ ದತ್ತನುಂ ಕುನಾಪನುಂ ನಾರಾಯಣನುಂ ಸುಭೌಮನುಂ ಅಜಿತಂಜಯನುಂ ಜಯಸೇನನುಂ ಮಹಾಸೇನನುಂ ಅಜಿತನುಂ ಶ್ರೇಣಿಕನುಂ ಎಂದು ತೀರ್ಥಕರಕ್ಷತ್ರಿಯರಿಪ್ಪತ್ತು ನಾಲ್ವರ್. [4]ವೃಷಭಮುಖನುಂ[4] ಮಹಾಯಕ್ಷನುಂ ತ್ರಿಮುಖನುಂ ಯಕ್ಷೇಶ್ವರನುಂ ತುಂಬುರನುಂ ಕುಸುಮನುಂ ಮಾರ್ತಂಡನುಂ ವಿಜಯನುಂ ಅಜಿತನುಂ ಬ್ರಹ್ಮನುಂ ಈಶಾನನುಂ ಕುಮಾರನುಂ ಷಣ್ಮುಖನುಂ ಕಿನ್ನರನುಂ ಗರುಡನುಂ ಗಂಧರ್ವನುಂ ವಿಜಯನುಂ ಕುಬೇರನುಂ ವರುಣನುಂ ವಿದ್ಯುತ್ಪ್ರಭನುಂ ಸರ್ವಾಹ್ಣನುಂ ಧರಣೇಂದ್ರನುಂ ಮಾತಂಗ[5]ಮ[5]ನುಮೆಂದು ಯಕ್ಷರಿಪ್ಪತ್ತು ನಾಲ್ವರಪ್ಪರ್. ಚಕ್ರೇಶ್ವರಿಯುಂ ರೋಹಿಣಿಯುಂ ಪ್ರಜ್ಞ[6]ಪ್ತಿ[6]ಯುಂ [7]ವಜ್ರಶೃಂಖಳೆ[7]ಯುಂ ಪುರುಷದತ್ತೆಯುಂ ಮನೋವೇಗೆಯುಂ ಕಾಳಿಯುಂ ಜ್ವಾಲಾಮಾಲಿನಿಯುಂ ಮಹಾಕಾಳಿಯುಂ ಮಾನವಿಯುಂ ಗೌರಿಯುಂ ಗಾಂಧಾರಿಯುಂ ವೈರೋಟಿಯುಮನಂತಮತಿಯುಂ ಮಾನಸಿಯುಂ ಮಹಾಮಾನಸಿಯುಂ ವಿಜಯೆಯುಂ ಅಪರಾಜಿತೆಯುಂ ಬಹುರೂಪಿಣಿಯುಂ ವಿದ್ಯುತ್ಪ್ರಭೆಯುಂ ಕೂಷ್ಮಾಂಡಿಯುಂ ಪದ್ಮಾವತಿಯುಂ ಸಿದ್ಧಾಯಿನಿಯುಮೆಂದು ಶಾಸನದೇವಿಯರಿರ್ಪತ್ತುನಾಲ್ವ[8]ರುಮಪ್ಪ[8]ರ್. ಇಂತು

---

1 ಪ್ಪ (ಅಇಉಎ). 2 ಕ್ಕುಂ (ಇಉಎ). 3 ತ್ರಾಭ (ಇಉಎ). 4 ವೃಷಭ (ಇಉಎ). 5 (ಅಇಉಎ) ಗಳಲ್ಲಿಲ್ಲ. 6 ಪ್ರಿಯೆ (ಕ). 7 ವಜ್ರ ಸಂಖ್ಯೆ (ಇಉಎ), ವಜ್ರ ಸಿಂಖಳೆ (ಅ). 8 ರಿಪ್ಪರ್ (ಕ).

ಕುಳಭೃದ್ವೃಂದಾರಕರ್ ತೀರ್ಥಕರಪರಮದೇವೋತ್ತಮರ್ ಚಕ್ರನಾಥರ್ ಬಳದೇವರ್ ವಾಸುದೇವರ್ ತದರಿನೃಪತಿಗಳ್ ತೀರ್ಥಭೂಪಾಲಕರ್ ಭೂತಳದೊಳ್ ಸಂದಿರ್ದ ಯಕ್ಷರ್ ಜಿನಸಮಯಮಹಾಯಕ್ಷಿಗಳ್ ಧರ್ಮಮಂ ನಿರ್ಮಳಮಪ್ಪಂತಿಲ್ಲಿ ಕೊಂಡಾಡುವರೆನೆ ಭರತಕ್ಷೇತ್ರಮೆಂದುಂ ಪವಿತ್ರಂ ೧೯

ಈ ಪೇಟ್ದ ಮಂದರಾಚಳ
ದೀಪರ್ವತತತಿಯ ಪಂಚರತ್ನದ್ಯುತಿ ದಿ
ಗ್ವ್ಯಾಪಕಮಾಗಿರೆ ರತ್ನ
ದ್ವೀಪಮಿದೆನಿಸುವುದು ಕಣ್ಗೆ ಜಂಬೂದ್ವೀಪಂ ೨೦

ದ್ವೀಪಕಲಾಪಂ ಶೈಲಕ
ಲಾಪಮದೆನಿತಪ್ಪೊಡಕ್ಕೆ ಚೆಲ್ವೆಸೆದಿರ್ಕುಂ
ದ್ವೀಪಂಗಳೊಳಗೆ ಜಂಬೂ
ದ್ವೀಪಂ ಶೈಲಂಗಳೊಳಗೆ ಮಂದರಶೈಲಂ ೨೧

ಹರಿನೀಲಾಚಲದಿಂ ಸುವರ್ಣಗಿರಿಯಿಂ ರೂಪ್ಯಾದ್ರಿಯಿಂ ನಂದನೋ
ತ್ಕರಪತ್ರದ್ಯುತಿಯಿಂ ಪಿಶಂಗಕಮಳಶ್ರೀಲೀಲೆಯಿಂ ಪಂಚರ
ತ್ನರುಚಿವ್ಯಾಪ್ತಿ ನಿರಂತರಂ ನೆಗಟ್ದ್ವಿನಂ ದಿಕ್ಕನ್ಯಕಾವೃಂದಮಾ
ದರದಿಂ ತೀ[1]ವಿದು[1]ದೊಂದು [2]ನೀರಜನನಂ[2] ಪೋಲ್ತತ್ತು ಧಾತ್ರೀತಳಂ ೨೨

ಆ ಚಿತ್ತೆಯೆಂಬ ಧಾತ್ರೀತಳಕ್ಕೇಳ್ನೂಱತೊಂಬತ್ತುಯೋಜನಾಂತರದೊಳ್ ಮಧ್ಯಮಲೋಕಪ್ರತಿಬದ್ಧಮಪ್ಪ ಚಂದ್ರಾದಿತ್ಯಗ್ರಹನಕ್ಷತ್ರತಾರಕಾಪ್ರಕೀರ್ಣಕವಿಕಲ್ಪಜ್ಯೋತಿರ್ಗಣಾಲಂಕೃತಮಾಗಿರ್ದ ದಶೋತ್ತರ ಶತಯೋಜನವಿಸ್ತಾರಬಹಳತೆಯೊಳಂ ಲೋಕಾಂತಪರ್ಯಂತವ್ಯಾಪ್ತಿಯೊಳಂ ಜ್ಯೋತಿರ್ಲೋಕದೊಳ್ ಪುಟ್ಟಿದವರೆಲ್ಲಮುಯೋನಿಸಂಭವರುಮಣಿಮಾದಿಗುಣೋಪೇತರುಂ ಸಪ್ತಚಾಪೋತ್ಸೇಧರುಮಪ್ಪವರಲ್ಲಿ ಚಂದ್ರರೆಲ್ಲಮೇಕಲ[3]ಕ್ಷಾಧಿಕ[3]ಪಲ್ಯೋಪಮಾಯುಷ್ಕರುಮಾದಿತ್ಯರೆಲ್ಲಂ ಸಹಸ್ರಾಧಿಕಪಲ್ಯೋಪಮಾಯುಷ್ಕರುಂ, ಶುಕ್ರರೆಲ್ಲಂ

---

1 ಹ (ಕ). 2 ನೀರಜನವಮಂ (ಅಇಉಎ). 3 ಕ್ಷೆ (ಇಉಎಕ).

ಶತಾಧಿಕಪಲ್ಯೋಪಮಾಯುಷ್ಕರುಂ, ಬೃಹಸ್ಪತಿಗಳೆಲ್ಲಂ ಪಲ್ಯೋಪಮಾಯುಷ್ಕರುಮುಪ್ಪರಿತರಗ್ರ[4]ಹಂ[4]ಗಳೆಲ್ಲಂ ಪಲ್ಯೋಪಮಾರ್ಧಜೀವಿಗಳಪ್ಪರ್. ನಕ್ಷತ್ರತಾರಕಾಗಣಕ್ಕೆಲ್ಲಮುತ್ಕೃಷ್ಟಪಲ್ಯೋಪಮದ ನಾಲ್ಕನೆಯ ಭಾಗಮಾಯುಃಪ್ರಮಾಣಮಕ್ಕುಂ; ಜಘನ್ಯದಿಂ ಪಲ್ಯೋಪಮದೆಂಟನೆಯ ಭಾಗಮಕ್ಕುಂ. ಮಂದರಾಚಲದ ನಂದನವನದ ಸಾಸಿರದ ನೂ[2]ಱು[2] [3]ಪ್ಪ[3]ತ್ತೊಂದುಯೋಜನದಗಲದಲ್ಲಿ ತಾರಕಾಗಣವಿಮಾನವಿರ್ದು[4]ದ[4]ಲ್ಲಿಂ ಮೇಗೆ ದಶಯೋಜನಾಂತರದೊಳಾದಿತ್ಯವಿಮಾನವಿರ್ದುದಲ್ಲಿಂ ಕೆಳಗಾವಿಮಾನಕ್ಕೆ ಸಾತಿರೇಕಮಾಗಿ ಮಹೇಂದ್ರ ನೀಳ ಮಾಣಿಕ್ಯಮಯಮಾಗಿ[5]ರ್ದ[5] ರಾಹುವಿಮಾನವಿರ್ದುದಲ್ಲಿಂ ಮೇಗೆಂಭತ್ತು ಯೋಜನಾಂತರದೊಳದಕ್ಕೆ ಸಾತಿರೇಕಮಾಗಿ ಚಂದ್ರವಿಮಾನವಿರ್ದುದಲ್ಲಿಂ ಕೆಳಗಿಂದ್ರನೀಳಮಯಮಾಗಿ ನಿತ್ಯರಾಹುವಿಮಾನವಿರ್ದುದಲ್ಲಿಂ ಮೇಗೆ ನಾಲ್ಕುಯೋಜನಾನಂತರದೊಳಶ್ವಿನ್ಯಾದಿನಕ್ಷತ್ರವಿರ್ದುದಲ್ಲಿಂ ಮೇಗೆ ನಾಲ್ಕುಯೋಜನಾಂತರದೊಳ್ ಬುಧನ ವಿಮಾನವಿರ್ದುದಲ್ಲಿಂದತ್ತ ಶುಕ್ರಬೃಹಸ್ಪತ್ಯಂಗಾರಕಶನೀಶ್ವರವಿಮಾನಂಗಳ್ ಪ್ರತ್ಯೇಕಂ ಮೂಱುಯೋಜನಾಂತರಿತಂಗಳಾಗಿರ್ದ ಚಂದ್ರಾದಿತ್ಯರ ವಿಮಾನಂಗಳಿರ್ದುವಲ್ಲಿಂ ಮೇಗೆ ನೂಱು ಯೋಜನಂಬರಂ ಕೆಳಗೆ ಸಾಸಿರದೆಂಟನೂಱು ಯೋಜನಂಬರಂ ಕೆಲದೊಳ್ಪೈವತ್ತುಸಾಸಿರ ಯೋಜನಾಂತಂಬರಂ ತೊಳಗಿ ಬೆಳಗುತ್ತಿರ್ಕುಂ.

ಮಾತೇಂ ಮನುಜಕ್ಷೇತ್ರಂ
ಜ್ಯೋತಿಸ್ಥಿತಿ ಬಳಸುಗುಂ ಸುರಾದ್ರಿಯ[6]ನಿರತ[6]
ಜ್ಯೋತಿಸ್ಥಿತಿ ನಿಶ್ಚಳಿತ
ಜ್ಯೋತಿಗಳಿರ್ದೆಡೆಯೊಳಿರ್ದು ಬೆಳಗುತ್ತಿರ್ಕುಂ ೨೩

ಅರುಣಂಗಳ್ ಕನಕಾಭಮೇಚಕರುಚಿಪ್ರಸ್ಪರ್ಧಿಗಳ್ ಪಾಂಡುಗಳ್
ಗುರು ಶುಕ್ರಂ ರವಿ ಮಂದ ಚಂದ್ರ ಬುಧಸಂವಾಸಿತ್ವದಿಂ ತದ್ರುಚಿ
ಸ್ಫುರಿತಂ ಸಂಧಿಸಿದಂತೆ ವೀ[7]ಚ[7]ವಿಚರದ್ಗರ್ಜದ್ಘನಾಡಂಬರಾಂ
ಬರದೊಳ್ ಮಾಡುಗುಮಿಂದ್ರಚಾಪರುಚಿಯಂಜ್ಯೋತಿರ್ಗಣಜ್ಯೋತಿಗಳ್ ೨೪

ಆ ನಕ್ಷತ್ರಗಣಮೆ ತನಗಲಂಕಾರಮಾಗೆ—

---

1 ಹ (ಇಉಎ). 2 ಱಿ (ಇಉಎ). 3 ಪ್ಪ (ಅಇಉಎ). 4 ವ (ಅ). 5 ರ್ಪ (ಆ). 6 ನಿತರ (ಅಕ). 7 ಚಿ (ಕ).

ಸುರಭೂಭೃನ್ಮೂಲದಿಂದಂ ಕೆಳಗೆಸೆದುವಧೋಲೋಕಮಿಂದ್ರಾಚಲೇಂದ್ರ
ಸ್ಫುರದಗ್ರಪ್ರೋಲ್ಲಸತ್ಪಾಂಡುಕವನಕೃತಮರ್ಯಾದೆಯಿಂ ಮಧ್ಯಲೋಕಂ
ಕರಮೊಪ್ಪುತಿರ್ದುದಾಪಾವನಗಿರಿವನದಿಂ ಮೇಗೆ ಧರ್ಮಾಸ್ತಿಕಾಯಂ
ಕರಮಿರ್ದತ್ತುದ್ಧುರರತ್ನಪ್ರಚುರರುಚಿಕೃತಾಲೋಕಮಪ್ಪೂರ್ಧ್ವಲೋಕಂ ೭೫

ಕನಕಾಚಲಮೆಂಬ ಕನ
ತ್ಕನಕಾಬ್ಜದ ಕರ್ಣಿಕಾಗ್ರದೊಳ್ ಪಾಯ್ವಳಿಯಂ
ನೆನೆಯಿಸಿ ಕಣ್ಗೊಪ್ಪುವುದಿಂ
ದ್ರನೀಲಮಣಿರುಚಿಯಿನೆಸೆವ ಚೂಳಿಕೆ ನಭದೊಳ್ ೭೬

ಎಂದು ಮಧ್ಯಮಲೋಕಮನಭಿವರ್ಣಿಸಿ ಮಂದರಾಚಲದ ಚೂಳಿಕಾಗ್ರಕ್ಕೆ ಭೋಗಭೂಮಿಜ[1]ರವಾಳಾಗ್ರಮಾತ್ರದೊಳ್ ಸೌಧರ್ಮರಿತು ವಿಮಾನಮಿರ್ದುದಾ ಸೌಧರ್ಮೇಶಾನಕಲ್ಪಂಗಳ ಮೇಗೆ ಸನತ್ಕುಮಾರಕಲ್ಪಂಗಳಿರ್ದುವವಱೊಳ್ ಶ್ರೇಣೀಬದ್ಧಪ್ರಕೀರ್ಣವಿಮಾನಂಗಳ್ ನಮೇರುಮಂದಾರಸಂತಾನಕಪಾರಿಜಾತಕಲ್ಪವೃಕ್ಷಂಗಳುಮಕ್ಕುಮಲ್ಲಿ ಸಾಮಾನಿಕತ್ರಯಸ್ತ್ರಿಂಶತ್ಪಾರಿಷದಾತ್ಮರಕ್ಷಲೋಕಪಾಲಾನೀಕ ಪ್ರಕೀರ್ಣಕಾಭಿಯೋಗ್ಯಕಿಲ್ಬಿಷಿಕಾದಿ ಪರಿವಾರಪರಿವೃತರುಂ ಗಜವೃಷಭರಥಾಶ್ವಗಂಧರ್ವನರ್ತಕಿಪದಾತಿಭೇದಸಪ್ತಾನೀಕಸಮನ್ವಿತರುಂ ಸಹಜಾಂಬರಕುಸುಮದಾಮಮಣಿಭೂಷಣವಿಭೂಷಿತರುಮನೇಕದೇವಾಂಗನಾಸಂಗತರುಮಣಿಮಾದ್ಯಷ್ಟಗುಣೈಶ್ವರ್ಯಸಮೇತರುಮಪ್ಪ ಕಲ್ಪಜರಿರ್ಪರಲ್ಲಿ ಮೊದಲೆರಡು ಕಲ್ಪಂಗಳದೇವರುಂ ಸಪ್ತರತ್ನಿಪ್ರಮಾಣೋತ್ಸೇಧರುಂ ದ್ವಿಸಾಗರೋಪಮಾಯುಷ್ಕರುಂ ಕಾಯಪ್ರವಿಚಾರರುಂ ದ್ವಿಸಹಸ್ರವರ್ಷಸಂಕಲ್ಪಕಲ್ಪಿತಾಮೃತಾಹಾರರುಂ ಏಕಮಾಸನಿರ್ಯತ್ಸುರಭಿಶ್ವಾಸರುಂ ಪದ್ಮಲೇಶ್ಯಾಪರಿಣಾಮರುಮಪ್ಪರಲ್ಲಿಂ ಮೇಗೆ ಮೂಱನೆಯ ನಾಲ್ಕನೆಯ ಕಲ್ಪದವರೆಲ್ಲಂ ಷಡುರತ್ನಿಪ್ರಮಾಣೋತ್ಸೇಧರುಂ ಸಪ್ತಸಮುದ್ರೋಪ[2]ಮಾನ[2]ಜೀವಿಗಳುಂ ಸ್ಪರ್ಶಪ್ರವಿಚಾರರುಂ ಸಪ್ತಸಹಸ್ರವರ್ಷಸಂಕ[3]ಲ್ಪಾ[3]ಹಾರರುಂ ಸಾರ್ಧತ್ರಿಮಾಸನಿರ್ಯ[4]ತ್ಸುರಭಿನಿ[4]ಶ್ವಾಸರುಮಪ್ಪರಲ್ಲಿಂ ಮೇಲೆ ಅಯ್ದನೆಯಾಱನೆಯ ಕಲ್ಪಂಗಳಿಗೆ ಬ್ರಹ್ಮೇಂದ್ರನೋರ್ವನೆ; ತತ್ಕಲ್ಪದವರೆಲ್ಲಂ ಪಂಚರತ್ನಿಪ್ರಮಾಣೋತ್ಸೇಧರುಂ ದಶಸಾಗರೋಪಮಜೀವಿಗಳುಂ ರೂಪಪ್ರವಿಚಾರರುಂ ದಶಸಹಸ್ರವರ್ಷಸಂಕ[5]ಲ್ಪಾ[5]ಹಾರರುಂ ಪಂಚಮಾಸನಿರ್ಯ[6]ತ್ಸುರಭಿನಿ[6]ಶ್ವಾಸರುಮಪ್ಪರ್. ಬ್ರಹ್ಮಕಲ್ಪಾಂತರದೊಳ್

---

1 ಚರ (ಕ), ಜರಾ (ಇಉಎ). 2 ಮನು (ಅಇಉಎ). 3 ಲ್ಪ ಕಲ್ಪಿತಾ (ಕ). 4 ನ್ನಿ (ಅಇಉಎ). 5 ಲ್ಪ ಕಲ್ಪಿತಾ (ಕ) 6 ನ್ನಿ (ಅಇಉಎ).

ಲೋಕಾಂತಿಕದೇವರೆಂಬರಿರ್ಪರಲ್ಲಿಂ ಮೇಗೇಟನೆಯ ಎಂಟನೆಯ ಕಲ್ಪಂಗಳೆಲ್ಲಂ ಲಾಂತವೇಂದ್ರನೊರ್ವನೆ; ತತ್ಕಲ್ಪದವರೆಲ್ಲಂ ಪಂಚರತ್ನಿಪ್ರಮಾಣೋತ್ಸೇಧರುಂ ಚತುರ್ದಶಸಾಗರೋಪಮಜೀವಿಗಳುಂ ರೂಪಪ್ರವಿಚಾರರುಂ ಚತುರ್ದಶವರ್ಷ-ಸಂಕಲ್ಪಾಹಾರರುಂ ಸಪ್ತಮಾಸನಿರ್ಯನ್ನಿಶ್ವಾಸರುಮಪ್ಪರಲ್ಲಿಂ ಮೇಗೊಂಭತ್ತ-ನೆಯ ಪತ್ತನೆಯ ಕಲ್ಪಂಗಳ್ಗೆ ಶುಕ್ರೇಂದ್ರನೋರ್ವನೆ; ತತ್ಕಲ್ಪದವರೆಲ್ಲಂ ರತ್ನಿ-ಚತುಷ್ಕಪ್ರಮಾಣೋತ್ಸೇಧರುಂ ಷೋಡಶಸಾಗರೋಪಮಜೀವಿಗಳುಂ ಶಬ್ದಪ್ರವಿ-ಚಾರರುಂ ಷೋಡಶಸಹಸ್ರವರ್ಷಸಂಕಲ್ಪಾಹಾರರುಂ ಅಷ್ಟಮಾಸನಿರ್ಯನ್ನಿ-ಶ್ವಾಸರುಮಪ್ಪರಲ್ಲಿಂ ಮೇಗೆ ಪನ್ನೊಂದು ಪನ್ನೆರಡನೆಯ ಕಲ್ಪಂಗಳ್ಗೆ ಶತಾ-[1]+[1]ರೇಂದ್ರನೊರ್ವನೆ; ತತ್ಕಲ್ಪದವರೆಲ್ಲಮರತ್ನಿಚತುಷ್ಟಯಪ್ರಮಾಣೋತ್ಸೇಧರುಂ ಅಷ್ಟಾದಶಸಾಗರೋಪಮಜೀವಿಗಳುಂ ಶಬ್ದಪ್ರವಿಚಾರರುಂ ಅಷ್ಟಾದಶಸಹಸ್ರ-ವರ್ಷಸಂಕಲ್ಪಾಹಾರರುಂ ನವಮಾಸನಿರ್ಯನ್ನಿಶ್ವಾಸರುಮಪ್ಪರಲ್ಲಿಂ ಮೇಗೆ ಪದಿ-ಮೂಱನೆಯ ಪದಿನಾಲ್ಕನೆಯ ಕಲ್ಪಂಗಳ್ಗಾನತಪ್ರಾಣತೇಂದ್ರರಿರ್ಪರಲ್ಲಿಯ ಕಲ್ಪಜರೆಲ್ಲಮರ್ಧಾಧಿಕರತ್ನಿಪ್ರಮಾಣೋತ್ಸೇಧರುಂ ವಿಂಶತಿಸಾಗರೋಪಮಜೀವಿ-ಗಳುಂ ಮನಃಪ್ರವಿಚಾರರುಂ ವಿಂಶತಿಸಹಸ್ರವರ್ಷಸಂಕಲ್ಪಾಹಾರರುಂ ದಶಮಾಸ-ನಿರ್ಯನ್ನಿಶ್ವಾಸರುಮಪ್ಪರಲ್ಲಿಂ ಮೇಗೆ ಪದಿನೈದನೆಯ ಪದಿನಾಱನೆಯ ಕಲ್ಪಂ-ಗಳ್ಗಾರಣಾಚ್ಯು[2]ತರೇಂ[2]ದ್ರರಿರ್ವರಿರ್ಪರಾಕಲ್ಪದವರೆಲ್ಲಂ ರತ್ನಿತ್ರಯೋತ್ಸೇಧರುಂ ದ್ವಾವಿಂಶತಿಸಾಗರೋಪಮಜೀವಿಗಳುಂ ಮನಃಪ್ರವಿಚಾರರುಂ ದ್ವಾವಿಂಶತಿ-ಸಹಸ್ರವರ್ಷಸಂಕಲ್ಪಾಹಾರರುಮೇಕಾದಶಮಾಸನಿರ್ಯನ್ನಿಶ್ವಾಸರುಮಪ್ಪರ್-

ಪ್ರಥಮದ್ವಿತೀಯಕಲ್ಪ
ಪ್ರಥಿತಸುರಾಂಗನೆಯರಿತರಕಲ್ಪಜರ್ಗೆ* ಮನೋ
ರಥಮಂ ಪುಟ್ಟಿಸುವರ್ ಮ
ನ್ಮಥಸುಖದಿಂದನ್ಯಕಲ್ಪದೊಳ್ ಪುಟ್ಟಿದವರ್ ೨೭

ಸುರಕಾಂತಾನಯನಾಮೃತಾಭಿಷವಣಂ ದೇವಾಂಗನಾವಕ್ತ್ರಸಂ
ಕರುಹಾಮೋದವಿಶೇಷ[3]ಣಂ[3] ಸುರವಧೂಕರ್ಣೋತ್ಪ[4]ಲಮ್ಲಾ[4]ನಶೇ
ಖರಮಿಂಪ್ರಪ್ರಮದಾಕಪೋಲವಿಮಲಶ್ರೀದರ್ಪಣಂ ಸಂದಿಸು
ತ್ತಿರೆ ಸಂತೋಷಮನೆಯ್ದೆ ಬಣ್ಣಿ[5]ಸ[5]ದರಾರ್ ಕಲ್ಪೇಶ್ವರೈಶ್ವರ್ಯಮಂ ೨೮

---

1 ವ (ಇಉಐ). 2 ತೇಂ (ಕ). 3 ನ (ಅಇಉಐ). 4 ಲಾವ್ಮಾ (ಕ). 5 ಶಿ (ಇಉಐ).

ಉಣಿಸಮೃತಂ ಸುರಾಂಗನೆಯರಂಗನೆಯರ್ ಸಹಜಾತಮಾಲ್ಯಭೂ
ಷಣವಸನೋತ್ಕರಂ ಪಸದನಂ ಮನೆ ದಿವ್ಯವಿಮಾನಮಂಡನಂ
ಮಣಿಮಯಭೂಮಿ ಕಲ್ಪತರುಗಳ್ ತರು ವಾದಿತಗೀತನರ್ತನಂ
ಪೆಣೆದ ವಿನೋದಮೆಂದೊಡಱಿಯೆಂ ಪೊಗೞಲ್ ಸುರಲೋಕಸೌಖ್ಯಮಂ ೨೯

ಆ ಪದಿನಾಱುಕಲ್ಪಂಗಳ ಮೇಲೆ ನವಗ್ರೈವೇಯಕಂಗಳಿರ್ದುವವಱೊಳ್ ಪುಟ್ಟಿದಹಮಿಂದ್ರರ್ಗಿಪ್ಪ[1]ತ್ತ[1] ಮೂಱು ಸಾಗರೋಪಮಂ ಮೊದಲಾಗೆ ಮೂವತ್ತೊಂದು ಸಾಗರೋಪಮಾಯು ಪೆರ್ಚುತ್ತುಂ ಬ[2]ರ್ಕು[2]ಮವರ ಶರೀರೋತ್ಸೇಧಮುರತ್ನಿಪ್ರಮಾಣಮೆರಡುವರೆಯುಮೆರಡುಮೊಂದುವರೆಯುಂ ಒಂದಕ್ಕುಮವರ್ಗೆಲ್ಲಂ ಪೂರ್ವೋಕ್ತಕ್ರಮದೊಳೆ ಮಾನಸಾಮೃತಾಹಾರಸುರಭಿನಿಶ್ವಾಸಂಗಳಕ್ಕುಮಲ್ಲಿಂ ಮೇಗೆ ನವಸಂಖ್ಯೆಯಿಂ ಮೂಱುಗೆಯ್ದ ಮೂಱು[3]ೞಿಯೊಳ್[3]ದ್ವಿ ಸಂಗಳೆಂಬುವಕ್ಕುಮಲ್ಲಿಯುಹಮಿಂದ್ರರೆಲ್ಲಮೇಕರತ್ನಿಪ್ರಮಾಣೋತ್ಸೇಧರುಂ ದ್ವಾತ್ರಿಂಶತ್ಸಹಸ್ರಸಾಗರೋಪಮಜೀವಿಗಳುಮಪ್ಪರಲ್ಲಿಂ ಮೇಗೆ ವಿಜಯ ವೈಜಯಂತ ಜಯಂತಾಪರಾಜಿತಸರ್ವಾರ್ಥಸಿದ್ಧಿಗಳೆಂಬ ಪಂಚಾಣೂತ್ತರೆಗಳಕ್ಕುಮಲ್ಲಿ ಪುಟ್ಟಿವಹಮಿಂದ್ರರೆಲ್ಲಮೇಕರತ್ನಿ ಪ್ರಮಾಣೋತ್ಸೇಧರುಂ ಶುದ್ಧಸ್ಫಟಿಕವರ್ಣರುಂ ತ್ರಯಸ್ತ್ರಿಂಶತ್ಸಾಗರೋಪಮಾಯುಷ್ಕರುಂ ತ್ರಯಸ್ತ್ರಿಂಶತ್ಸಹಸ್ರವರ್ಷಸಂಕಲ್ಪಕಲ್ಪಿತಾಮೃತಾಹಾರಿಗಳುಂ ಸಪ್ರವಿಚಾರಾನಂತಗುಣನಿಷ್ಪ್ರವಿಚಾರರುಂ ಶುಕ್ಲಲೇಶ್ಯಾಪರಿಣಾಮರುಮಪ್ಪರ್. ಇಂತು

ಪದಿನಾಱುಂ ಕಲ್ಪದೊಳ್
[4]ರ್ಪ[4] ದೇವರಿತ್ತಣ್ಗೆ ವರ್ಪರೆಱಗಲ್ಕರ್ಹ
ತ್ಪದಪದ್ಮಕ್ಕಹಮಿಂದ್ರರ್
ತದಂಘ್ರಿಗಿದ್ದಲ್ಲಿ ಕಂಡು ಕರಮಂ ಮುಗಿವರ್ ೩೦

ನಿಖಿಲಾಮರಕಲ್ಪಂಗಳ
ಸುಖಮುಹಮಿಂದ್ರರ ಸುಖಕ್ಕೆ ಸಮನಾಗದಣಂ
ಸುಖಮುಮೆನಿಸುವ ಸಿದ್ಧರ
ಸುಖಕ್ಕೆ ನೇರ್ಗಱಿದ[5]ನಿಪ್ಪ[5]ದಹಮಿಂದ್ರಸುಖಂ ೩೧

1 ತ್ತು (ಕ). 2 ಕ್ಕು (ಅಇಉಎ). 3 ದ್ವಿ (ಕ). 4 ಪ್ಪ (ಅಇಉಎ)
5 ಕ್ಕುಮ (ಕ).

ಆ ಸರ್ವಾರ್ಥಸಿದ್ಧಿಗೆ ಪನ್ನೆರಡು ಯೋಜನಾಂತರದೊಳ್ ಮರ್ತ್ಯಲೋಕ-ಪ್ರಮಾಣಮಾಗಿರ್ದಷ್ಟಯೋಜನಬಹಳತೆಯೊಳಂ ಮಗುಳ್ಚಿಕ್ಕಿದ ಧವಳಚ್ಛತ್ರ-ದಾಕಾರದೊಳಂ ನೆಱೆದು ಸಮುವೃತ್ತಮಾಗಿರ್ದುದೀಷತ್ಪ್ರಾಗ್ಭಾರಮೆಂಬು-ದಕ್ಕುಂ.

ಅದು ಸಿದ್ಧಕ್ಷೇತ್ರಮಾಕ್ಷೇತ್ರದೊಳಖಿಳಜಗದ್ವಲ್ಲಭರ್ ಮೋಕ್ಷಲಕ್ಷ್ಮೀ
ವದನಾಂಭೋಜಾತಭೃಂಗರ್ ನಿರತಿಶಯಶುಭಧ್ಯಾನದಗ್ಧಾಷ್ಟಕರ್ಮರ್
ತ್ರಿದಶಕ್ಷ್ಮಾಭೃದ್ಭುಜಂಗೇಶ್ವರಹೃದಯಸರೋಲಗ್ನಪಾದಾರವಿಂದರ್
ವಿದಿತಂ ತ್ರೈಲೋಕ್ಯಚೂಡಾಮಣಿಗಳಧಿಕಸೌಖ್ಯಾಸ್ಪದರ್ ಸಿದ್ಧರಿರ್ಪರ್ ೩೨

ಅವರ್ಗೆ ಸಮ್ಯಕ್ತ್ವಮುಮನಂತಜ್ಞಾನಮುಮನಂತಸುಖಮುಮನಂತ-ವೀರ್ಯಮುಂ ಸೂಕ್ಷ್ಮತ್ವಮುಂ ಗುರುಲಘುತ್ವಮುಮವ್ಯಾಬಾಧಂಗಳೆಂಬೆಂಟು ಗುಣಂಗಳಕ್ಕುಂ.

ಅಮಿತಸುಖನಿಳಯಮಮುಮನ
ಷ್ಟಮಪೃಥ್ವಿಯನಾನರಾಮರಸ್ತುತಮಂ ಪಂ
ಚಮಗತಿಯಂ ಪರಮಸ್ಥಾ
ನಮನಾ ಶಿವಪದಮನೆಯ್ದಿ ಪೊಗೞ್ದಿರುಮೊಳರೆ* ೩೩

ಪರಮಪದಸ್ಥಿತಿ ಸಿದ್ಧರ
ಪರಮಸುಖಂ ಪೊಗೞಲರಿದತೀಂದ್ರಿಯವಿಷಯಂ
[1]ನರಸುರಸುಖಂಗಳವು[1]ತ
ಚ್ಚರಣಾಬ್ಜಸ್ಮರಣದಿಂದಮಾದ ಸುಖಂಗಳ್ ೩೪

ಚರಮಶರೀರಂ ಸಗರಂ
ಚರಮಶರೀರರ್ ನಿಜಾಗ್ರಜಾತರ್ ನೀನುಂ
ಚರಮಶರೀರನೆಯಪ್ಪುದಱಿಂ
ಪರಮಪದಂ [2]ಮಗನೆ[2] ನಿಮಗಮಾಸ್ಪದಮಕ್ಕುಂ ೩೫

---

1 ನರರ ಸುಖಂಗಳನಿವು (ಕ, ಪಾ). 2 ನಿಮಗೆ (ಇಉಎ).

ಕೇವಲಗಮ್ಯಂ ತ್ರಸಮುಂ
ಸ್ಥಾವರಮುಂ ಕೆಲವು ಪೆತ್ತ ತುಪ್ಪದಿನೆತ್ತಂ
ತೀವಿದ ಕೊಡ[1]ದಂ[1]ತಿರ್ದುವು
ಜೀವದ್ರವ್ಯಂಗಳಿಂ ಜಗತ್ತ್ರಯಮಧ್ಯಂ ೩೬

ಪರಮಜಿನಧರ್ಮಮಂ ತ
ತ್ಸ್ವರೂಪದಿಂ ನಂಬಲೊಲ್ಲದೀಸಂಸೃತಿಯೊಳ್
ತಿರಿಪವು ಜೀವಮದನಾ
ದರದಿಂ ನಂಬಿದೊಡೆ ತಿರಿವ ಜೀವಸಮುಂಟೆ ೩೭

ನಾರಕತಿರ್ಯಗ್ಗತಿ ಸಂ
ಸಾರಿಗೆ ಪಾಪೋಪಚಯದೆ ಸುರಗತಿ ಪುಣ್ಯ
ಪ್ರೇರಿತದೆ ನೃ[2]ಗ[2]ತಿ ಮಿಶ್ರದೆ
ಸಾರೆ ವಲಂ ಸುಗತಿ ಪುಣ್ಯಪಾಪಕ್ಷಯದಿಂ ೩೮

ಪರಿಣಾಮವಸಂಖ್ಯಾತಂ
ಪರಿವರ್ತಿಸುತಿರ್ಪುವಲ್ಲಿ ಶುಭಪರಿಣಾಮಂ
ಬೆರಸೊಸೆದಿರ್ಕಾಗಳುಮಾ
ರ್ತರೌದ್ರದೊಳೆ ಮೂಡಿ [3]ಮುಳುಗುತಿರ್ಪ್ಪುದೆ ಚದುರಂ[3] ೩೯

ದೊರೆಕೊಂಡಿರ್ದ ಶುಭಾಶುಭ
ಪರಿಣಾಮಮೆ ಪುಣ್ಯಪಾಪಕಾರಣಮದಱಿಂ
ಪರಿಣಾಮಶುದ್ಧಿಯಿಂದಾ
ಚರಿಪುದು ಪರಲೋಕಹಿತಮನಿದೆ ಜಿನತತ್ವಂ ೪೦

ಎನಗುಂಟೆವರ್ಗಿ*ಲ್ಲಿವ*ರ್ಗು*ಂ
ಟೆನಗಿಲ್ಲೆನಬೇಡ ತನ್ನ ಗೆಯ್ದುದು ಪೆಱ*ರ್ಗಂ

---

1 ನ (ಇಉಎ). 2 ಪ (ಅಇಉಎ). 3 ಮುಱುಗಿ ಮುಳುಗುತ್ತಿರ್ಪರ್ (ಕ).

ತನ[1]ಗಂ ಪು[1]ದುವಲ್ಲದಱಿಂ
ದನುಭವಿಪುದು ತಾನೆ ತನ್ನ ಮುಂ ನೆಱಿಪಿದುದಂ ೪೧

ಪೆಱಿರ ವಿಭವಕ್ಕೆ ಬಯಸುವ
ಮಱುಗುವ ಗಾವಿಲಿಕೆಯೇಕೆ ಪೇೞ್ ಬಯಸುವೊಡಂ
ಮಱುಗುವೊಡಂ ಬರ್ಕುಮೆ ಮುಂ
ಮಱೆ[3]ದಂ ತಾನಿಂದು ಬಯಸಿ ಮಱುಗಿ[2]ದೊಡುಂ[2] ೪೨

ಜಿನಮತದೊಳ್ ಸಮ್ಯಗ್ದ
ರ್ಶನಮುಳ್ಳೊಡೆ ಸಾ[3]ಲ್ವಡ[3]ದುವೆ ಬೀಜಂ ಗಡ! ನೆ
ಟ್ಟನೆ ಮೋಕ್ಷಸುಖಕೆ ತಾಳ್ದುವು
ದು ನೀನಿದಂ ಸಗರಕುಲವಿಯತ್ತಲತಿಲಕ ೪೩

ಅಣಿಮಾದ್ಯಷ್ಟಗುಣಂಗಳ
ಕಣಿಯೆನಿಸುವ ದೇವಗತಿಗಮುತ್ತಮಗತಿಗಂ
ಮಣಿಮಯಸೋಪಾನೋಪಮ
ಮಣುಗುಣಶಿಕ್ಷಾವ್ರತಂಗಳೆಂದಱಿ ನೃಪತೀ ೪೪

ಎಂದು

ಮೊದಲಿಂ ತಗುಬ್ಧಿ ಥೋಲೋ
ಕದ ಮಧ್ಯಮಲೋಕದೂರ್ಧ್ವಲೋಕದ ತೆಱನಂ
ವಿದಿತಂ ಮಾಡೆ ಮುನೀಂದ್ರನ
ಪದಪದ್ಮಕ್ಕೆಱಗಿದಂ ಭಗೀರಥರಾಜಂ ೪೫

ಅಂತೆಱಗಿ ಪೊಡೆವಟ್ಟು

ಬಗೆಯೊಳ್ ಧರ್ಮಾನುರಾಗಂ ನೆಗೞೆ[3] ನೃಪಸಭಾಸೇವ್ಯನಾಸನ್ನಭವ್ಯಂ
ವಿಗಳದ್ಬಾಷ್ಪಾಂಬುನೇತ್ರಂ ವಿಪುಳಪುಳಕಸಂದೋಹಸಂಛನ್ನಗಾತ್ರಂ

---

1 ಗಪ್ಪು (ಇಉಎ). 2 ದುದುಂ (ಕ). 3 ಲ್ಪೊಡ (ಕ), ಲ್ವದ (ಎ).

ಸಗರಕ್ಷ್ಮಾಪಾಲಪುತ್ರಂ ಸಕಲವಸುಮತೀಸ್ವಾರಾಜ್ಯಸಾಮ್ರಾಜ್ಯಪಾತ್ರಂ
ವಿಗತವ್ಯಾಮೋಹಭೇದಂ ಜಿನಪತಿಮತಮಂ ಕೇಳ್ದು ಸಂತುಷ್ಟನಾದಂ ೪೬

ಇದು ಸಕಲ ಮುನೀಂದ್ರ ವೃಂದ ವೃಂದಾರಕ ಶ್ರೀ ಮದಜಿತಸೇನ ಭಟ್ಟಾರಕ

ಶ್ರೀಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ

ಶ್ರೀಮದಭಿನವ ಕವಿಚಕ್ರವರ್ತಿ

ಕವಿರತ್ನ ವಿರಚಿತ

ಶ್ರೀ ದಾನಚಿಂತಾಮಣಿ ವಿನಿರ್ಮಾಪಿತ

ಶ್ರೀ ಮದಜಿತತೀರ್ಥಕರ ಪುರಾಣತಿಲಕದೊಳ್

-ಧರ್ಮೋಪದೇಶವರ್ಣನಂ ಏಕಾದಶಾಶ್ವಾಸಂ.

———

ದ್ವಾದಶಾಶ್ವಾಸಂ

ಶ್ರೀವಿಮಳಧರ್ಮಚಕ್ರಮ
ನಾವಂ ಭೂಚಕ್ರದೊಳ್ ನೆಗಟ್ಚಿದನೆಮಗಾ
ದೇವನಜಿತಂ ಜಗತ್ತ್ರಯ
ಪಾವನ[1]ನೊ[1]ಸೆಗಸಮಚರಿತನಪಗತದುರಿತಂ ೧

ಎಂದಜಿತನಾಥಂಗೆ ನಮಸ್ಕಾರಂಗೆಯ್ದತ್ಯಂತ ಸಂತುಷ್ಟಚಿತ್ತನಾಗಿ ಮೋಕ್ಷ-ಪುರಪ್ರಸ್ಥಿತಭವ್ಯಪಥಿಕಪಾಥೇಯಮಪ್ಪ ಸಮ್ಯಕ್ತ್ವಮುಮಂ ಸ್ವರ್ಗಾಪವರ್ಗಸೋಪಾನಮಾರ್ಗಂಗಳಪ್ಪ ಪರಮಶ್ರಾವಕಬ್ರತಂಗಳುಮಂ ಭಗೀರಥಮಹೀಪತಿ ಕೆಯ್ಕೊಂಡುಮಲ್ಲಿ ಸಮಕ್ತ್ವಮಾಜ್ಞೆಯೆಂದುಂ ಅಧಿಗಮಮೆಂದುಮಿರ್ತೆಱನಕ್ಕುಂ. ಅವಱೊಳಾಜ್ಞಾಸಮ್ಯಕ್ತ್ವಮೆಂಬುದು—

ಅರ್ಹದ್ದೇವಸಮೋ ನಾಸ್ತಿ [2]ಧರ್ಮೋ[2] ನಾಸ್ತಿ ದಯಾಪರಃ
ತಪೋ ನಾ[3]ಸ್ತೀತಿ[3] ನೈರ್ಗ್ರಂ[4]ಥ್ಯೈ[4]ರಿತಿ ಸಮ್ಯಕ್ತ್ವಮುತ್ತಮಂ

ಎಂದುಮಧಿಗಮಮೆಂಬುದುಂ ಪಂಚಾಸ್ತಿಕಾಯಷಡ್ದ್ರವ್ಯಸಪ್ತತತ್ವನವ-ಪದಾರ್ಥಗಳಂ ನೆಱೆಯಱಿದು ನಂಬುವುದು; ಸಮ್ಯಕ್ತ್ವಮುಂ—ನಿಶ್ಯಂಕೆಯುಂ ನಿಷ್ಕಾಂಕ್ಷೆಯುಂ ನಿರ್ವಿಚಿಕಿತ್ಸೆಯುಂ ಅಮೂಢದೃಷ್ಟಿತ್ವಮುಂ ಉಪಬೃಂಹತ್ವಮುಂ ಸ್ಥಿತಿಕರಣಮುಂ ವಾತ್ಸಲ್ಯಮುಂ ಪ್ರಭಾವನೆಯುಮೆಂಬಷ್ಟಗುಣಾರ್ಜಿತಮುಂ ತದ್ವಿಪರೀತಾಷ್ಟದೋಷವಿವರ್ಜಿತಮುಂ ಕುಲಮದಂ ಜಾತಿಮದಮಾಜ್ಞಾಮದ—

---

1 ಮೊ (ಅಇಉಎ). 2 ದಮೋ (ಇಉಎ). 3 (ಅಕ)ದಲ್ಲಿಲ್ಲ. 4 ಥೇ (ಅಕ).

ಮೈಶ್ವರ್ಯಮದಂ ವಿಜ್ಞಾನಮದಂ ಬಲಮದಂ ರೂಪಮದಂ ತಪೋಮದಮೆಂಬ-ಷ್ಟಮದವ್ಯಪೇತಮುಂ ಮಿಥ್ಯಾದೇವರುಂ ಮಿಥ್ಯಾಲಯಮುಂ ಮಿಥ್ಯಾತಪಮುಂ ಮಿಥ್ಯಾತಪಸ್ವಿಯುಂ ಮಿಥ್ಯಾಜ್ಞಾನಂ [1]ಮಿಥ್ಯಾವಿನಯಮು[1]ಮೆಂಬ ಷಡನಾಯ[2]ತ[2] ಸೇವಾ[3]ವಿ[3]ರಹಿತಮುಂ ಲೋಕಮೂಢ ದೇವತಾಮೂಢ ಸಮಯಮೂಢ-ಮೆಂಬ ಮೂಢತ್ರಯಬಹಿ[4]ಷ್ಕೃತ[4]ಮುಮಕ್ಕುಂ. ಇಂತು ಪಂಚವಿಂಶತಿ ಮಲವಿ-ರಹಿತಮುಮಪ್ಪ ಸಮ್ಯಕ್ತ್ವಮಂ ಕೈಕೊಂಡು,

ಹಿಂಸಾಸತ್ಯಂ ಸ್ತೇ[5]ಯಾ[5]ಬ್ರಹ್ಮಪರಿಗ್ರಹಂ ಚ ಬಾದರಭೇದಾಃ
ದ್ಯೂತಂ ಮದ್ಯಂ ಮಾಂಸಂ ಗೃಹಿಣಾಂ ವ್ರತಮಷ್ಟಧಾ ಪ್ರೋಕ್ತಂ

ಎಂಬ ಪಂಚಾಣುವ್ರತಮಂ, ದ್ಯೂತಾದ್ಯಾಶ್ರಯಾನಿವೃತ್ತಿಯುಮಂ, ರಾತ್ರಿಭೋಜನವಿರಮಣಮುಮೆಂಬ [6]ಷ[6]ಷ್ಠಮಣುವ್ರತಮುಮಂ, ದಿಗ್ದೇಶಾ-ನರ್ಥ ದಂಡವಿರತಿಯೆಂಬ ಮೂಱುಂ ಗುಣವ್ರತಮುಮಂ, ಸಾಮಯಿಕಮುಂ ಪ್ರೋಷ[7]ಧೋಪ[7]ವಾಸಮುಂ ಭೋಗೋಪಭೋಗ ಪರಿಮಾಣಮುಮಂ ಅತಿಥಿ-ಸಂವಿಭಾಗಮೆಂಬ ನಾಲ್ಕುಂ ಶಿಕ್ಷಾವ್ರತಮುಂ [8]ಇಜ್ಯೆ[8]ಯುಂ ವಾರ್ತೆಯುಂ ದತ್ತಿಯುಂ ಸ್ವಾಧ್ಯಾಯಮುಮೆಂಬಾರ್ಯ ಷಟ್ಕರ್ಮಂಗಳುಮನೇಕಧರ್ಮಕ್ಕೆ ಕುಲಧರ್ಮಂಗಳಾಗಿರ್ದುವು. ಅವಱೊಳಿ[9]ಜ್ಜೆ[9]ಯೆಂಬುದು ಜನಪೂಜಾವಿಧಾನ-ಮದು. ನಿತ್ಯಮಹಾಮಹಮೆಂದುಂ ಚತುರ್ಮುಖಮೆಂದುಂ ಕಲ್ಪವೃಕ್ಷಮೆಂದುಂ ಇಂದ್ರಧ್ವಜಮೆಂದುಂ ಬಲಿಸ್ನಪನಮೆಂದುಮಕ್ಕುಂ. ಅಲ್ಲಿ ನಿತ್ಯಮಹಮೆಂಬುದು ನಿಚ್ಚನಿಚ್ಚಯಥಾಶಕ್ತಿಯಿಂ ಜಿನಗೃಹಕ್ಕೆ ನಿಜಗೃಹದಿಂದಷ್ಟವಿಧಾರ್ಚನೆಯನು ಯ್ವುದುಂ ಚೈತ್ಯಾಲಯಂಗಳಂ ಮಾಡಿಸಿ ಭಕ್ತಿಪೂರ್ವಕದಿಂ ಶಾಸನಂಬಿಡಿಸು-ವುದುಂ ಮುನಿಜನಂಗಳಂ ಪೂಜಿಸುವುದುಮಕ್ಕುಂ. ಚತುರ್ಮುಖಮೆಂಬುದು—ಮಕುಟಬದ್ಧರ್ ಮಾಳ್ಪ ಪೂಜೆ; ಸರ್ವತೋಭದ್ರಮೆಂಬುದು—ಮಧ್ಯಮಕಲ್ಪ-ವೃಕ್ಷಮೆಂಬುದು—ಬೇಡಿದರ ಬೇಡಿ[10]ಮ[10]ದನೆ ಕೊಟ್ಟು ತಣಿಪಿ ಚಕ್ರವರ್ತಿಗಳ್-ಮಾಳ್ಪ ಪೂಜಾವಿಧಾನಮಕ್ಕುಂ. ಅಷ್ಟಾಹ್ನಿಕಮೆಂಬುದು—ಸಕಲಶ್ರಾವಕಜನಂ-ಗಳ್ ಮಾಳ್ಪ ಪೂಜೆಯಕ್ಕುಂ. ಇಂದ್ರಧ್ವಜಮೆಂಬುದು—ಇಂದ್ರಾದಿಗಳ್ ಮಾಳ್ಪ ಪೂಜೆಯಕ್ಕುಂ. ಬಲಿಸ್ನಪನಮೆಂಬುದು—ಮೂಱುಂಸಂಜೆಯೊಳ್ ಮಾಳ್ಪ ಜಿನಾ-

---

1 ಮಿಥ್ಯಾಜ್ಞಾನಿಯುಂ (ಅಕ). 2 ಕ (ಕ). 3 ಪ (ಕ, ಖಾ). 4 ಷ್ಕ (ಇಉಎ). 5 ಯಂ ಬ್ರಹ್ಮ (ಕ), ಯಬ್ರಹ್ಮ (ಇಉಎ) 6 ಅ (ಇಉಎ). 7 ಯೋಪ (ಕ), ಡೋಪ (ಇಉ) 8 ಈಜ್ಜೆ (ಅ), ಈಗ್ಗೆ (ಇಉ), ಇಜ್ಜೆ (ಎ). 9 ಜ್ಯೆ (ಕ). 10 ದ (ಅಇಉ).

ಭಿಷೇಕಂ ಜಿನಪೂಜೆಗಳುಮಂ ಪೇೞ್ದವಱ ವಿಕಲ್ಪಮೆ ಪೆಱವು ಪೂಜಾವಿಶೇಷ-ಮಕ್ಕುಂ. ವಾರ್ತೆಯೆಂಬುದಸಿಮಷಿ ಕೃಷಿವಣಿಗ್ವಿದ್ಯಾದಿ ಕರ್ಮಂಗಳೊಳ್ ವಿಶುದ್ಧಿವೃತ್ತಿಯಿನರ್ಥೋಪಾರ್ಜನಂಗೆಯ್ವುದಕ್ಕುಂ. ದತ್ತಿಯೆಂಬುದು---ದಯಾ-ಪಾತ್ರಸಮಸಕಳಭೇದದಿಂ ಚತುರ್ವಿಧಮಕ್ಕುಂ. ಅಲ್ಲಿ ದಯಾದತ್ತಿಯೆಂಬುದು---ಅನುಕಂಪೆವೆರಸನುಗ್ರಾಹ್ಯಮಪ್ಪ ಜೀವಂಗಳ್ಗೆ ಕರಣತ್ರಯ[1]ಶು[1]ದ್ಧಿಯಿನಭಯ-ದಾನಂಗುಡುವುದು. ಪಾತ್ರದತ್ತಿಯೆಂಬುದು---ಮಹಾತಪೋಧನರ್ಗೆ ನಿರವದ್ಯಾ-ಹಾರಮುಮಂ ಸಂಯಮೋಪಕರಣಮುಮಂ ಕುಡುವುದು. ಸಮದತ್ತಿಯೆಂಬುದು--ತಮ್ಮೊಳ್ ಸಮಾನಕ್ರಿಯಾಮಂತನಪ್ಪ ನಿಸ್ತಾರಮಪ್ಪ ಕಾಸ್ತ್ಯಮಂಗೆ ಕನ್ಯಾ-ಭೂಮಿಸುವರ್ಣಹಸ್ತ್ಯಶ್ವರತ್ನಾದಿಗಳಂ ಕುಡುವುದು, ತಮ್ಮೊಳ್ ಸಮಾನರಿಲ್ಲ-ದಂದು ಮಧ್ಯಮಪಾತ್ರಕ್ಕೆ ಕುಡುವುದು. ಸಕಲದತ್ತಿಯೆಂಬುದು—ತನ್ನ ಸಂತ-ತಿಯಂ ನಿಜ[2]+[2]ಸಲೆಂದು ಪುತ್ರಂಗಕ್ಕೆ, ಗೋತ್ರಜಂಗಕ್ಕೆ ಧರ್ಮಮಂ ಸರ್ವಸ್ವ-ಮುಮನಪ್ಪಯಿಸಿ ಕುಡುವುದು. ಅನ್ವಯದತ್ತಿಯೆಂಬುದು—ಅನ್ವಯಕ್ಕಂ, ಸ್ವಾಧ್ಯಾಯಮೆಂಬುದು – ವಿಜ್ಞಾನಮನೋದಿಯೋದಿಸುವುದುಂ, ನೆನೆವುದುಮಕ್ಕುಂ. ಸಂಯಮಮೆಂಬುದು—ಪಂಚಾಣುವ್ರತಪ್ರವರ್ತನಮಕ್ಕುಂ [3]ತಪಮೇ[3]ತಪ-ಮೆಂಬುದನಶನಾದಿದ್ವಾದಶಾನುಷ್ಠಾನಮಕ್ಕುಂ. ಆರ್ಯಷಟ್ಕರ್ಮಮುಮ[4]ನಱಿಪಿ[4] ಸದ್ದೃಷ್ಟಿಗ[5]ಳಿಗನುಷ್ಟಯಮಪ್ಪಾಯತಿ[5] ಮೂಱುಂ ಗರ್ಭಾನ್ವಯಕ್ರಿಯೆಗಳುಮನವ[6]ಧಾರಿಥೀ[6]ಗಳಪ್ಪನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಗಳುಮಂಸಂಜ್ಞಾತತ್ವಂ ಮೊದಲಾಗೇೞನ್ವಯಕ್ರಿಯೆಗಳುಮನಱಿಪಿ ಕೈಕೊಂಡುಪೋದನೇಕದೀಕ್ಷಿತರಾಗಿ ಸಕಲಶ್ರಾವಕವ್ರತಂಗಳೊಳ್ ಪರಿಪೂರ್ಣರಾಗಿ ದೃಜಧರ್ಮ-ಕೇವಳಿಗಳಂ ಪೂಜಿಸಿ ಪೊಡೆವಟ್ಟು ಮನೋರಥಂಬೆರಸು ಭಗೀರಥಂ ಪೋದಂ.

ಆಗಳ್ ಮಣಿಕೇತು ತನ್ನ ಗೆಯ್ದ ಷಟ್ಪ್ರಪಂಚಮಂ ಪ್ರಕಟಂ ಮಾಡಿ ನಿಶ್ಶಲ್ಯಂಗೆಯ್ದು ನಿಜನಿವಾಸಕ್ಕೆ ಪೋದಂ.

ಇತ್ತ ಸಗರಮುನಿವೆರಸಱುವತ್ತು ಸಾಸಿರ ಕುಮಾರಮುನಿಗಳುಮಂ ಚರಮ ದೇಹಧಾರಿಗಳಾತನ ಪರೋಪಕಾರಬುದ್ಧಿಯುಮಂ "ಇಷ್ಟಂ ಧರ್ಮೇಣ ಯೋಜ-ಯೇತ್" ಎಂಬ ವಾಕ್ಯಮುಮಂ ನೆನೆದಾಕಲ್ಯಾಣಮಿತ್ರಂ---ಅಪ್ಪೊಡಿಂತಾಗ-[7]ಲ್ವೇ[7]ೞ್ಕುಮಾತನಂತು ನಮಗೆ ಪರೋಪಕಾರಿಗಳಾರುಮಿಲ್ಲ. [8]ಅನಂತ[8] ಸಂಸಾರ-

---

1 ಸಿ (ಇಉಎ). 2 ಯಿ (ಇಉಎ). 3 (ಎಕ) ಗಳಲ್ಲಿಲ್ಲ. 4 ನೆಱಿಪ್ಪಿ (ಅ) ನೆಱಿಗಿ (ಇಉಎ). 5 ಳಿಂಗನುಷ್ಟಯ ಮಪ್ಪಾಯತಿ (ಇಎ), ಳಿಂದ (ಎ), ಳಿಂದನುನಯ ಮಪ್ಪಾಯತಿ (ಉ). 6 ಧಾರಿ (ಇಉಎ). 7 ವೇ (ಇಉಎ). 8 ನನ್ನಂತೆ (ಇಉಎ).

ಚಕ್ರಿದೊಳ್ ತಿಜ್ರಿನೆ ತಿರಿವ ನವ್ರ್ಯನಿಬರುಮನಪವರ್ಗಮಾರ್ಗಮಂ ಕಾಣಿಸಿ-ದನೆಂದು ಪರಮಾನಂದಭರಿತನಾಗಿ ಪೊಗಟ್ಟು ಸಮ್ಮೇದಾಗ್ರದೊಳುಗ್ರೋಗ್ರ-ತಪ[1]ದೊಳ್[1] ನೆಗಳ್ದು ಕೆಲವು ಕಾಲದಿಂ ಸಗರಮುನಿಕುಂಜರಂ ಸಂಸಾರ ಬಂಧಕಾರಣನಿಗಳಬಂಧಂಗಳಂ ಪಱಿಯೆ ಪೊಯ್ದು, ಕರ್ಮವೀರರಂ ಬೆಪಱಿ ಬೆಂಕೊಂಡು, ಸನ್ಮಾರ್ಗವೀಥಿಯೊಳ್ ಪರಿದು ಪರಮಗತಿಯನೆಯ್ದುವುದುಂ; ತದನಂತರಮೆ ತನಗೊಡವುಟ್ಟಿದ ಕುಮಾರಮುನಿಗಳನಿಬರುಮನುಕ್ರಮದಿಂ ಮುಕ್ತಿಗೆ ಸಂದರೆಂಬುದಂ ಭಗೀರಥಂ ಕೇಳ್ದು ನಿರ್ವೇಗಪರನಾಗಿ ವರದತ್ತ-ನೆಂಬ ನಿಜತನೂಜಂಗೆ ರಾಜ್ಯಭಾರಮಂ ಕೊಟ್ಟು ತಪೋಭಾರಮಂ ಕೈಕೊಳ-ಲೆಂದು ಕೈಲಾಸಶೈಲಕ್ಕೆ ಬಂದು ಶಿವಗುಪ್ತ ಮುಮುಕ್ಷುಗಳ ಸಮಕ್ಷದೊಳ್ ದೀಕ್ಷೆಯಂ ಕೈಕೊಂಡು ಉಗ್ರೋಗ್ರತಪ[2]ದೊಳ್[2] ತಪಮನೆತ್ತಿಕೊಂಡು—

ಪ್ರಾವೃಟ್ಕಾಲದೊಳಡಸಿ ಮ
ಹಾವರ್ತದ ಮುಱಿಗಳೋಘಮೇಘಂ ಕೊಳೆ [3]ಸ್ವ
ಸ್ಥಾ[3]ವಿಷ್ಕೃತಚಿತ್ತಂ ಧೈ
ರ್ಯಾವಷ್ಟಂಭದೊಳ್ ವೃಕ್ಷಮೂಲದೊಳಿರ್ದಂ ೨

ಹಿಮಸಮಯದೊಳಾ[4]ಧಿಪಂ ತಾ[4]
ಹಿಮದಿಂದೆಲುವಡೆಯೆ ಬಗೆ[5]ಯ[5] ಬಕ್ಕಂಬಯಲೊಳ್
ಹಿಮನಿಧಿಯೆಮನಿಧಿ[ಸಲೆ]ಧೈ
ರ್ಯಮಹಾಂಬುಧಿ ನೆಲಸಿ ಬೆಳ್ಳವಾಸದೊಳಿರ್ದಂ ೩

[6]ಪೊತ್ತ[6] ನೆಲಂ ನೆಲದೊಡ[7]ನ್[7]ಡೆ
ಯೊತ್ತಿದಪುದು [8]ಸೆ[8]ಲೆಯ ಮೇಲೆ ಸೂರ್ಯಾಂಶುಗಳ
ಬ್ಬಿ[9]ತ್ತು[9]ಮಿರೆ ನಿಯಮನಿಶ್ಚಲ
ಚಿತ್ತಂ ಬೇಸಗೆಯೊಳಂದು ಕಲ್ನೆಲೆನಿಂದಂ ೪

ಅಂತಾಪರಮಯೋಗೀಶ್ವರಂ ತ್ರಿಕಾಲದೊಳಮೀರ್ಯಾಸಮಿತಿಯುಂ ಭಾಷಣಸಮಿತಿಯುಮೇಷಣಸಮಿತಿಯುಂ ಆದಾನನಿಕ್ಷೇಪಣಾಸಮಿತಿಯುಂ

---

1 ದಿಂ (ಇಉಎ). 2 ದಲ್ಲಿಂ (ಇಉ), ಲಿಂ (ಎ). 3 ಸತ್ವ (ಕ), ಸತ್ವ (ಅ).
4 ದೀಪಂ (ಕ). 5 ಯೆ (ಕ) 6 ಪತ್ತೆ (ಇಉಎ). 7 ನೆ (ಇಉಎ). 8 ನೆ (ಇಉಎ).
9 ತ್ತುಗ (ಅಇಉಎ).

ಉತ್ಸರ್ಗಸಮಿತಿಯುಮೆಂಬ ಪಂಚಸಮಿತಿಯೊಳಂ, ಮನೋಗುಪ್ತಿ ವಾಗ್ಗುಪ್ತಿ ಕಾಯಗುಪ್ತಿಯುಮೆಂಬ ಗುಪ್ತಿತ್ರಯದೊಳಂ, ಸಾಮಯಿಕಮುಂ ಛೇದೋ-ಪಸ್ಥಾಪನಮುಂ ಪರಿಹಾರವಿಶುದ್ಧಿಯುಂ ಸೂಕ್ಷ್ಮಸಾಂಪರಾಯಮುಂ ಯಥಾಖ್ಯಾತ ಚಾರಿತ್ರಮುಮೆಂಬ ಪಂಚವಿಧಚಾರಿತ್ರದೊಳಂ, ವಾಚನೆಯುಂ ಪೃಚ್ಛನೆಯುಮನುಪ್ರೇಕ್ಷೆಯು[1] + [1]ಮಾಮ್ನಾಯಮುಂ ಧರ್ಮೋಪದೇಶಮುಮೆಂಬ ಪಂಚವಿಧಸ್ವಾಧ್ಯಾಯದೊಳಂ ನೆಱೆ[3]ದು ನಿಸ್ಸಂಗರಾಗಿ ಗಂಗಾತೀರಕ್ಕೆವಂದು-ಜಂಗಮಸಿದ್ಧಪ್ರತಿಮಾನಂ ಚತುರ್ಮುಖಪ್ರತಿಮಾಯೋಗದೊಳಲ್ಲಿ ಕೇವಲ-ಜ್ಞಾನೋತ್ಪತ್ತಿಯಾಗೆ--ಚತುರ್ವಿಧ ದೇವನಿಕಾಯಂಬಂದು ಮಾನಸ್ತಂಭಚತು-ರ್ವರ್ಣ ಹೇಮಪ್ರಾಕಾರಮಂಡಿತನಪ್ಪ ಮುಂಡಕೇವಳಿಗಳಿಗೆ ಸುಧಾಪಿಂಡಪಾಂಡು-ರಮಪ್ಪ ದುಗ್ಧಾಬ್ಧಿಜಲದಿಂ ಪಾದಾಭಿಷೇಕಂಗೆಯ್ಯೆ-[2]ತ[2]ದಮಲಜಲಪ್ರವಾಹ-ಸಂಗಮದಿಂ ಗಂಗಾಜಲಂ ಜಗನ್ಮಂಗಳಮಾದುದು. ಅಂದಿಂದಿತ್ತ ಗಂಗೆಯಂ ಭಗೀರಥಂ ತಂದನೆಂಬ ಲೋಕಪ್ರಸಿದ್ಧಿಯಾಗೆ, ಭಾಗೀರಥಿಯೆಂದು ಕೊಂಡಾ-ಡಿ[3]ದರ್[3]ಭಗೀರಥಕೇವಳಿಯುಂ ಕೆಲವು ಕಾಲಕ್ಕೆ ಕರ್ಮಕ್ಷಯಂಗೆಯ್ದುಮೋಕ್ಷ-ಲಕ್ಷ್ಮೀಕಟಾಕ್ಷವಿಕ್ಷೇಪಲಕ್ಷಿತಸುಖಮಯಶರೀರನಾಗಿರ್ದಂ. ಇತ್ತ ವರದತ್ತ-ಮಹಾರಾಜಂ ತಮ್ಮಜ್ಜನಪ್ಪ ಸಗರ ಚಕ್ರವರ್ತಿಯ ತಮ್ಮಯ್ಯನಪ್ಪ ಭಗೀ-ರಥನ ಸಾಮ್ರಾಜ್ಯಸುಖಪದವಿಯಂ ತಾಳ್ದಿದ ಕನತ್ಕನಕಮಣಿಮಯಂಗಳು-ಮಭ್ರಂಕಷಕೂಟಕೋಟಿಗಳುಮಪ್ರತಿಲ[4]ಹ[4]ಮಾನಸ್ತಂಭಂ ಮಹಾಧ್ವಜವಿರಾಜ-ಮಾನಂಗಳುಮಪ್ಪನೇಕಚೈತ್ಯಾಲಯಂಗಳಂ ಮಾಡಿಸಿಯುಂ, ನಾನಾಚ್ಛಂದ-ಸಂದೋಹಮಂ ಸಮೆಯಿಸಿಯುಂ, ಮಹಾಮಹಾದಿಜಿನಮಹಾಮಹಿಮೆಗಳಂ ನೆಗಳ್ಚಿಯುಂ, ಪರಾರ್ಥ್ಯದ ರತ್ನಮಯಜಿನಪ್ರತಿಷ್ಠೆಗಳಂ ಪ್ರತಿಷ್ಠಿಸಿಯುಂ-ಕನಕರಜತಮಣಿಮಯಘಂಟಾಜಾಲಪ್ರದೀಪಮಾಲೆಗಳಂ ನಿರ್ವರ್ತಿಸಿಯುಂ, ಮಹಾಭಿಷೇಕವಿಧಿಯನನುಷ್ಠಿಸಿಯುಂ, ಮಹಾಮಹಾದಿ ಚತುರ್ವಿಧಾರ್ಚ-ನೆಗಳಂ ಪ್ರವರ್ತಿಸಿಯುಂ, ಪರಮೇಶ್ವರ ಧರ್ಮಪ್ರಭಾವನೆಯಂ ಪ್ರತಿದಿನಂ [5]ಪ್ರವರ್ತಿಸಿಯುಂ ಮಹೋತ್ಸವಮಂ[5] ಮಾಡಿಸಿಯುಂ [6]ದಿ[6]ನಾರ್ಚನಾತಿ-ಶಯಮನುತ್ತರೋತ್ತರಂ ಮಾಡಿಯುಂ, ಜಿನಶಾಸನಮನುದಿತೋದಿತಂ ಮಾಡಿಯುಂ, ಸರ್ವಜನಭವ್ಯಜನಂಗಳಭ್ಯುದಯಪರಂಪರಾದಿವೃದ್ಧಿಯನತ್ಯಧಿಕಂ ಮಾಡಿಯುಂ, ಮತ್ತಮಿಂತು

---

1 ಮುಮಾಯು (ಇಉಎ). 2 ಸ (ಇಉಎ). 3 ದುರು (ಅಕ). 4 (ಇಉಎ) ಗಳಲ್ಲಿ ಇಲ್ಲ; ಕ (ಉ). 5 ಪ್ರವರ್ಧಮಾನಮಹೋತ್ಸವಮಂ (ಅಕ). 6 ಜಿ (ಕ).

ಪರಮಶ್ರೀ ಜೈನಧರ್ಮೋನ್ನತಿ ಸಗರನಿನೆಮ್ಮಯ್ಯನಿಂ ಸಂದುದಿಂತೀ
ಧರೆಗಾಸುಂ ಕೂಡೆ ಕೊಂಡಾಡುವೆನಿದನಡಱಿಂದೆನ್ನ ರಾಜ್ಯೋದಯಂ ಬಿ
ತ್ತರಿಸುತ್ತಿರ್ಕುಂ ಮಹೀಮಧ್ಯದೊಳೆನುತುಮತಿಪ್ರೀತಿಯಿಂ ಧರ್ಮಚಿತ್ತಂ
ವರದತ್ತಂ ದಾನಚಿಂತಾಮಣಿಯೆನಿಸಿ ಯಶೋಭಾರಮಂ ತಾಳ್ದಿ ನಿಂದಂ ೫

ಬಿಳಿಯರ್[1]ಳ್[1]ಯಂತೆ ಗಂ[2]ಗಾ
ಜ[2]ಳದಂತೆಸೆವಜಿತಸೇನಮುನಿಪತಿಯ ಗುಣಾ
ವಳಿಯಂತೆ ನೆಗಟ್ದ* ಕೊಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ ೬

ಪುರುದೇವಾಜಿತದೇವರಿರ್ವರೆ ದಲಾದ್ಯೋಪಾದ್ಯತೀರ್ಥೇಶ್ವರರ್
ಭರತೇಶಂ ಸಗರೇಶನಿರ್ವರೆ ದಲಾದ್ಯೋಪಾದ್ಯಚಕ್ರೇಶ್ವರರ್
ವರದಾನೋತ್ತಮನಾದನಾದಿಯುಗದೊಳ್ ಶ್ರೀಯಾಂಸನೀಕಾಲದೊಳ್
ಪರಮಶ್ರಾವಕಿ ನೀನೆ ದಾನಿಯೆ ವಲಂ ಶ್ರೀದಾನಚಿಂತಾಮಣೀ ೭

ವ್ರತಮಂಪೇ[3]ಟ್ಪ್ರೊ[3]ಡೆ ನೋಂತು ತಾಱಿದೊಡಲುಂ ಚಕ್ರೇಶನಾಜ್ಞಾಧಿಪಂ
ಸುತನಂ ಪೇ[3]ಟ್ಪ್ರೊ[3]ಡೆ ಚಕ್ರವರ್ತಿಕಟಕಕ್ಕಾರಾಧ್ಯೆಯಾಗಿರ್ದೆಯಾ
ಯತಿಯಂ ಪೇ[3]ಟ್ಪ್ರೊ[3]ಡೆ ಕೆಟ್ಟ ಕಾಲದೊಳಿದಂ ಕೊಂಡಾಡಿಪ್ಪೈ ಧರ್ಮದು
ನ್ನತಿಯಂ ಪೆರ್ಚಿಸುವಂದು ನೀನೆ ಪಿರಿಯೈ ಶ್ರೀದಾನಚಿಂತಾಮಣೀ ೮

ಪಿರಿಯಂ ಬೂತುಗನಾತ[4][ನಿ][4] ಮುಮುಳನಾತಂ[5]ಗಂ ನೊಳಂಬಾಂತಕಂ[5]
ಪಿರಿಯಂ ನೆಟ್ಟನೆ ದಾನಧರ್ಮಪಡೆಯೊಳ್ ಚಾವುಂಡರಾಯಂ ಕರಂ
ಪಿರಿಯಂ ಶಂಕರಗಂಡನಲ್ತೆ ಪಿರಿಯಂ ತದ್ಭಾರಮಂ ಪೊತ್ತು ನಿ
ತ್ತರಿಸುತ್ತಿರ್ಪುದಱಿಂದೆ ನೀನೆ ಪಿರಿಯೈ ಶ್ರೀದಾನಚಿಂತಾಮಣೀ ೯

ನೆಗಟ್ದರ್* ದಾನದಿನೊರ್ವರೊರ್ವರಱಿವಂ ತಾಳ್ದಿರ್ದ ಸಮ್ಯಕ್ತ್ವದಿಂ
ನೆಗಟ್ದರ್* ಧರ್ಮದ ಪೆರ್ಮೆ[6]ಯುಂ[6] ಕೆಲಕೆಲರ್ ಶೀಲವ್ರತಾಚಾರದಿಂ
ನೆಗಟ್ದ*[3]ಳೈ ನೀನೆ ಜಗಕ್ಕೆ ದಾನಗುಣದಿಂ ಸಮ್ಯಕ್ತ್ವದಿಂ ಧರ್ಮದಿಂ
ಮಿಗೆ ಶೀಲವ್ರತದಿಂ ಸದಾಚರಣದಿಂ ಶ್ರೀದಾನಚಿಂತಾಮಣೀ ೧೦

---

1 ಳಿ (ಕ). 2 ಘಾ ಜ (ಇಉಎ). 3 ಟ್ಟ (ಇಉಎ). 4 ನಿಂ (ಸರ್ವಪ್ರತಿ). 5 ಗಾನಿಚ್ಮಂತನುಂ (ಇಉಎ). 6 ಯುಂ (ಕ)

ದಯೆಯಂ ತಾಳ್ದಿದ ಜೈನಧರ್ಮರುಚಿಯಂ ಕೈಕೊಂಡು ಸಮ್ಯಕ್ತ್ವ ಶು
ದ್ಧಿ[1]ಯಿ[1]ನೀಕಾಲದೊಳಪ್ಪುಕೆಯ್ದು ಭುವನಕ್ಕಾಶ್ಚರ್ಯಮಪ್ಪಂತು ಕೀ
ರ್ತಿಯನಾವರ್ಜಿಸುತಿರ್ಪುದಾವ ಚರಿತಪ್ರಾರಂಭದಿಂ ಚಕ್ರವ
ರ್ತಿಯುಮಂ ಪೆರ್ಚಿಸಿದೊಳ್ಪು ನಿನ್ನೊಳೆಸೆಗುಂ ಶ್ರೀದಾನಚಿಂತಾಮಣೀ ೧೧

ಮಹಿಚಕ್ರಕ್ಕಿದು ಚೋದ್ಯಮಲ್ತೆನಿಸುವಂತಾರ್ತೀರ್ಪುದುಂ ಕಂಡು [2]ಸ[2]
ಸ್ಪೃಹರೆಲ್ಲಂ ಗೆಳೆಗೊಂಡು ಬಣ್ಣಿಸುವರಿನ್ನೇಂಚೋದ್ಯಮಿಾಗಳ್ ಜಗ
ನ್ಮಹನೀಯತ್ವಮನೆಯ್ದೆ ತಾಳ್ದಿದ ಮಹಾಪ್ರಖ್ಯಾತಿಯಂ ಕೇಳ್ದು ನಿ
ಸ್ಪೃಹರುಂ ಬಣ್ಣಿಪರಲ್ತೆ ನಿನ್ನ ಗುಣಮಂ ಶ್ರೀದಾನಚಿಂತಾಮಣೀ ೧೨

ನಯಮಂ ತಾಳ್ದಿ ಪೊಗೞ್ತೆವೆತ್ತು ಭುವನಕ್ಕಾರಾಧ್ಯೆಯಾದತ್ತಿಮ
ಬ್ಬೆಯ ಶೀಲೋನ್ನತಿಗತ್ತಿಮಬ್ಬೆಯ ಮಹಾದಾನೋತ್ಸವಕ್ಕತ್ತಿಮ
ಬ್ಬೆಯ ಧರ್ಮಸ್ಥಿತಿಗತ್ತಿಮಬ್ಬೆಯ ಜಿನೇಂದ್ರಾರಾಧನಕ್ಕತ್ತಿಮ
ಬ್ಬೆಯ ಭಕ್ತಿಕ್ರಮಕತ್ತಿಮಬ್ಬೆಯ ಗುಣಕ್ಕಾರುಂ ಸಮಂ ಪೋಲ್ಪರೇ ೧೩

ಗುಣದೊಳ್ಪಿಂ ಸಂದ ತನ್ನನ್ವಯಕೆ ನೆಗೞ್ದಳಂಕಾರಮಂ ಮಾೞ್ಪ ಭೂಷಾ
ಮಣಿಯುಂ ಶ್ರೀಜೈನಧರ್ಮೋನ್ನತಿಯ ಮಹಿಮೆಯುಂ ಭಕ್ತಿ[3]ಯಂ[3] ಪಾವರಕ್ಷಾ
ಮಣಿಯುಂ ಭವ್ಯೋತ್ತಮಾಂಗಾಸ್ಪದದೊಳೆ ಗುಣಮುದ್ದಾನಿಯಂ ಮಾೞ್ಪ ಚೂಡಾ
ಮಣಿಯುಂ ಶ್ರೀದಾನಚಿಂತಾಮಣಿಯೆ ಪೆಱರೊಳಿಂತೀ ಗುಣಶ್ರೇಣಿಯುಂಟೇ ೧೪

ರಣದೊಳ್ ಮಾಱಾಂತ ಚೂಡಾಮಣಿಗೆ ಮಣಿಯದುದ್ವೃತ್ತನಂ ಗೆಲ್ದ ವಿದ್ಯಾ
ಮಣಿ ವೀರಾರಾತಿರಕ್ಷಾಮಣಿ ನಿಖಿಳವಿನೇಯಾಗ್ರಗಣ್ಯೈಕ ಚೂಡಾ
ಮಣಿ ಧರ್ಮಾಂಭೋಜಷಂಡದ್ಯುಮಣಿ ಬುಧಜನಪ್ರೀಣನಾಗ್ರೇಸರಗ್ರಾ
ಮಣಿಯಾದಂ ದಾನಚಿಂತಾಮಣಿ ಗುಣಮಣಿಶ್ರೇಣಿಕಾಶ್ರೇಣಿಯಿಂದಂ ೧೫

ಜಿನಪೂಜೋತ್ಸವಕೆಲ್ಲಿಯುಂ ಜಿನಕಥಾಳಾಪೋತ್ಸವಕ್ಕೆಲ್ಲಿಯುಂ
ಜಿನತೀರ್ಥೋತ್ಸವಕೆಲ್ಲಿಯುಂ ಜಿನಮುನಿವ್ರಾತೋತ್ಸವಕ್ಕೆಲ್ಲಿಯುಂ
ಜಿನಗೇಹೋತ್ಸವಕೆಲ್ಲಿಯುಂ ಜಿನಮಹಾದಾನೋತ್ಸವಕ್ಕೆಲ್ಲಿಯುಂ
ಧನಮಂ ಪತ್ತಿಸುತಿರ್ಪೆ ನೀನೆ ಪಿರಿಯೈ ಶ್ರೀದಾನಚಿಂತಾಮಣೀ ೧೬

---

1 ಯಃ (ಕ). 2 ಸಂ (ಇಉಎ). 3 ಯಿಂ ಕ).

ಅಲಸುತವಿರ್ಪಾವ ಚಿಂತಿಸುತವಿರ್ಪಾವ ಮೊಗಂಮುರಿದೀವ[1] ಮುಟ್ಟಮೂ
ದಲಿಸುತವಿರ್ಪಾವ ಪೆರ್ಚನೊಸೆದೀವತಿ ಬೆಳ್ಮೊಗದಿಂದವಿರ್ಪಾವ[1] ಮು
ಮ್ಮಲನುಱುಗುತ್ತುವಿರ್ಪಾವ ಕಡುಲೋಭಕದಾನಗುಣಂಗಳಂ ಖಟಂ
ಚಲಿವಪುದಾರ್ತುರ್ ಕೊರ್ತುರ್ ಪಿರಿದೀವ ಗುಣಂ ಗುಣದಂಕಕಾರ್ತಿಯಾ ೧೭

† ನುಡಿದುದನೀಗಳಾಗ ಪೊಗಸುಂ ಪರೆ ಪೊತ್ತರೆ ನಾಳೆ ನಾಡಿದಂ
[2][ದಡಗಡೆ][2] ನಿಚ್ಚಲುಂ ಪುಸಿವ ಲೋಭದ ಮಾತಿನೊಳೇನೊ ಧಾತ್ರಿಯೊ
ಳ್ನುಡಿದುದೆ ನಂಬಿ ಮಾಡಿದುದೆ ಶಾಸನಮಿತ್ತುದೆ ದೇವರಿತ್ತದಂ
ದೊಡೆಗುಣದೊಳ್ಪನೇಕೆ ಬೆಸೆಗೊಂಡಪೆ ನೀ ಗುಣದಂಕಕಾರ್ತಿಯಾ ೧೮

ಪದೆದೆರೆದರ್ಥಿಗೀಯದೆ ಜಸಕ್ಕೆ ತಗುಳ್ಚದೆ ತಮ್ಮ ದಾನಧ
ರ್ಮದೊಳುಪಯೋಗನಾಗದುಪಭೋಗಿಸದರ್ಥಮನಾವಮಾನೆಗಂ
ಕುಮರಿಗನಾರ್ತುರ್ವೆಚ್ಚಿಸವೆ ಪೂಜಿಸಿ ಪೂಜಿಸಿಯಾಳ್ದು ಪೂಟ್ಟು ಬ
ಯ್ತುದೆ ಪೆಱಗೆಂಬುದೀದೊರೆತು ದಾನಗುಣಂ ಗುಣದಂಕಕಾರ್ತಿಯಾ ೧೯

ಎನಿಸಿ ನೆಗಟ್ಟಿತ್ತಿಮಬ್ಬೆಯ
ತನಯಂ ಪಡೆವಳ್ಳ ತೈಲನಣ್ಣಿಗದೇವಂ
ವಿನಯಾರ್ಣವನೂರ್ಜಿತ [3]ಶೌ[3]
ರ್ಯನಿದಾನಂ ಚಕ್ರವರ್ತಿಸೈನ್ಯಾಧೀಶಂ ೨೦

ಶ್ರೀನೇಮಿಚಂದ್ರಮುನಿಗಳ್
ಕಾನೂರ್ಗಣತಿಲಕರವರ ಶಿಷ್ಯರ್ ಸದ್ವಿ
ದ್ಯಾನಿಳಯಣಯ್ಯಣಯ್ಯಂ
ತಾನೋದಿಸೆ ಕುಶಲನಾದನಣ್ಣಿಗದೇವಂ ೨೧

ಮುಂ ಗಡಮಾಬ್ರಹ್ಮಂ ದೇ
ವಾಂಗನೆಯಂ ನೋಡಿ ಸೋಲ್ತು ಕಡ್ಡಬ್ರಹ್ಮಂ, ಚಿಂ
ತಾಂಗಜನಂತರಮುಂ ಬ್ರ
ಹ್ಮಂಗಮದಕ್ಕೀ ತ್ರಿವಿಕ್ರಮಂ ಬ್ರಹ್ಮಂಗಂ ೨೨

---

† ಈ ಪದ್ಯ (ಇಉಎ) ಗಳಲ್ಲಿ ಮಾತ್ರ ಇದೆ. 1 ಪೆಚ್ಚಿ ಪೆಚ್ಚಲನೊಸೆದೀವ ಬೆಳ್ಮೊಗದಿನೀವ ಕುಮುಂಗುಳಿನಿವಾವ (ಇಉಎ) 2. ಡಗಡೆ (ಇ), ದಸಡೆ (ಉ), ಡಿಗಡೆ (ಎ). 3 ಶಾ (ಕ, ಖ).

ಪದಯಿದನೆನೆ ಪದುಳಿದನೆನೆ
ಪದಸ್ಥನೆನೆ ಸತ್ಯಶೌರ್ಯಶೌಚಾದಿಗುಣಾ
ಸ್ಪದನೆನೆ ನೆಗಟ್ದಾಹವಮ
ಲ್ಲದೇವನಂ ಮನದೆಗೊಂಡನಣ್ಣಿಗದೇವಂ ೨೩

ವಿನುತಾರ್ಥಿಗೆ ಗಡ ಮಾಣಿಕ
ಮೆನೆ ನಚ್ಚುವ ನಾಗದೇವನಗ್ರಸುತಂ ಮಾಂ
ತನದಿಂ ಮಕ್ಕಳ ಮಾಣಿಕ
ಮೆನಿಸಿದನಭಿಮಾನಿ ದಾನಿ ಪಡೆವಳತೈಲಂ ೨೪

ಆದಿರದ ಗಂಡನೆಂಬುದುದಿತೋದಿತನೆಂಬುದಗಣ್ಯಪುಣ್ಯನೆಂ
ಬುದು ಗುಣವಂತನೆಂಬುದು ದಯಾಪರನೆಂಬುದು ಧರ್ಮಚಿತ್ತನೆಂ
ಬುದು ಶುಭವೃತ್ತನೆಂಬುದು ಮಹೋದಯನೆಂಬುದು ದೇವಭಕ್ತನೆಂ
ಬುದು ಪತಿಭಕ್ತನೆಂಬುದು ಜಗದ್ವಳಯಂ ಪಡೆವಳ್ಳತೈಲನಂ ೨೫

ದಿನಕರಸುತವಚನಂ ರಾ
ಮ[1]ನೇಸು[1] ಕಂಡರಿಸಿ ಕಲ್ಲೊಳಿಟ್ಟಕ್ಕರಮೆಂ
ಬಿನೆಗಮೆಸೆದಪುದು ನೃ[2]ಪ[2]ಶಾ
ಸನಮೆನಿಸುವ ನನ್ನಿ ನನ್ನಿನಾರಾಯಣ[3]ನ[3] ೨೬

ಜಗತೀಚಕ್ರಮನಾಳ್ಗೆ ತೈಲನೃಪನೇಕಚ್ಛತ್ರದಿಂ ಚಕ್ರವ
ರ್ತಿಗೆ ದಿಗ್ಭಿತ್ತಿವರಂ ನಿಮಿರ್ಗೆ ನೆಲನಾಸ್ವಾ[4]ಮಿ ಪ್ರಸಾದೋದಯಂ[4]
ಮಿಗೆ ತೈಲಂ ನೆಗಟ್ದಿತ್ತಿಮಬ್ಬೆಯ ಮಗಂ ಮತ್ಸ್ಯಾನ್ವಯಮಂ ಮೆಚ್ಚಿ ಕೇ
ಳ್ವ ಗುಣಂಗೊಳ್ವ ಜನಕ್ಕಮಕ್ಕೆ ವಿಭವಂ ಭದ್ರಂ ಶುಭಂ ಮಂಗಳಂ ೨೭

ಕತೆಯೊಳಗಱಿಯದೆ ವಿಪರೀ
ತತೆಯಿಂದಂ ಪೇಟ್ದ ಕೃತಿಗಳಿರ್ಕೆ ಪುರಾಣ
ಸ್ಥಿತಿಯೊಳೆ ಕವಿರತ್ನನಿನ
ನ್ವಿತಮಾದುದು ಸಗರಚಕ್ರವರ್ತಿಯ ಚರಿತಂ ೨೮

---

1 ನೆನಿಸು (ಅಕ). 2 ತ (ಆಇಉಎ). 3 ನಂ(ಆಇಉಎ). 4 ದಿಪ್ಪ ಸಾರೋದಯಂ (ಕ).

ಸಗರಸುತರೆಲ್ಲರುಂ ಮೋ
ಕ್ಷಗಾಮಿಗಳ್ ಚರಮದೇಹಧಾರಿಗಳಂತಾ
ಬಗೆಗೆಟ್ಟವಂದಿರಂ ಪ
ನ್ನಗರಾಜಂ ಕೊಂದನೆಂಬುದಪಸಿದ್ಧಾಂತಂ ೨೯

ಜಿನರ್ಗ*ಂ ತ್ರಿಕಾಲಯೋಗಂ
ಜಿನರ್ಗ*ಂ ಸ್ವಾಧ್ಯಾಯಮಯ್ದು ಮಾಸಮಿತಿಗಳುಂ
ಜಿನರ್ಗ*ವೊಳವುಳ್ಳೊಡಂ ನೆಱೆ
ಯೆ ನೋಡಿ ನಂಬುಗೆ ಮಹಾಪುರಾಣ[1]ದೊಳ್[1] ಬುಧರ್ ೩೦

ಪ್ರಾಯಶ್ಚಿತ್ತಂ ವಿನಯಂ
ವೈಯಾವೃತ್ತ್ಯಂ ಜಿನಂಗೆ ಕೂಡದು ದೋಷಾ
ಪಾಯ[2]ತಿ[2]ಯಿಂ ಧ್ಯಾನಂ ಸ್ವಾ
ಧ್ಯಾಯವ್ಯುತ್ಸರ್ಗಮುಂಟು ಸಂದೆಯಮುಂಟೇ ೩೧

ಎನಿತೊಳವು ಮನದ ಸಂದೆಯ
ಮನಿತುಮಸಂದಿಗ್ಧಮೆನಿಸುಗುಂ ಧರ್ಮದೊಳ
ಪ್ಪನುರಾಗಮೊದವುಗುಂ ರ
ತ್ನ[3]ನ[3] ಪೇೞ್ದಜಿತನ ಪುರಾಣಮಂ ಕೇಳಲೊಡಂ ೩೨

ಪೆರ[4]ವು[4]ವುಳ್ಳುವಿಲ್ಲಿಯೊಳವಾಗಮಭಾಷೆಗಳಲ್ಲಿಯುಳ್ಳುವಂ
ಪೆಱವುಳಿ ಕಾಣಲಾಗದೆನೆ ಪಂಪನ ಪೊನ್ನನ ಪೇೞ್ದ ಕಬ್ಬದೊಳ್
ನೆಱೆಯೆ ಪರಿಸ್ಫುಟಂ ನೆಱೆಯದಿರ್ದುದುಮಂ ನುಡಿದೆಯ್ದೆ ಬಲ್ಮೆ ಕ
ಣ್ದೆಱೆಯೆ ನೆಗೞ್ದುದಂ ಕವಿಚತುರ್ಮುಖನಾಗಮವೇದಿಯಪ್ಪುದಂ ೩೩

ಈ ದೊರೆಯ ಕಥಾನಾಯಕ
ನೀದೊರೆಯ ಮಹಾಪ್ರಸಿದ್ಧಕವಿ ಪೋದರೊಳಿ
ಲ್ಲಾದರೊಳಿಲ್ಲಪ್ಪರೊಳಿ
ಲ್ಲೀದೊರೆಯಪ್ಪ ಕೃತಿಗಳಿಲ್ಲ ಸದಲಂಕೃತಿಗಳ್ ೩೪

---

1 ದಿ ಪಿ (ಕ). 2 ಕೆ (ಕ). 3 ನು (ಅಇಉಎ). 4 ಪೊಳ (ಕ).

ಇನಿತುಪಪತ್ತಿಯೆಲ್ಲಿನಿತು ಬಿನ್ನಣಮಿಲ್ಲಿನಿತರ್ಥದೃಷ್ಟಿಯಿ
ಲ್ಲಿನಿತುಚಿತೋಕ್ತಿಯಿಲ್ಲಿನಿತಳಂಕೃತಿಯಿಲ್ಲಿನಿತಾಗಮಾರ್ಥಮಿ
ಲ್ಲಿನಿತುವರಂ ಪ್ರಭೋಧಮಣಮಿಲ್ಲ ಪೆಱರ್ಗಿದು ಕಾವ್ಯರತ್ನಮಂ
ಘನಮೆನೆ ಮಚ್ಚಿ ಬಣ್ಣಿಸದರಾರ್ ಕವಿರತ್ನನ ಕಾವ್ಯರತ್ನಮಂ ೩೫

ಜಗದೊಳಗಾದಿಪುರಾಣಂ
ನೆಗೞ್ದುದು ಮುಂ ಪಂಪನಿಂದೆ ಪೊನ್ನಿಗನಿಂದಂ
ನೆಗೞ್ದುದು ಶಾಂತಿಪುರಾಣಂ
ನೆಗೞ್ದುದು ಕವಿರತ್ನನಿಂದಮಜಿತಪುರಾಣಂ ೩೬

ಉಪಮಾತೀತಮೆನಿಪ್ಪಾ
ದಿಪುರಾಣದ ರೇಖೆಗಂ ಬರಲ್ ನೆಱೆಗುಮೆ ಶಾಂ
ತಿಪುರಾಣದ ರೇಖೆಗಮ್ಮಜಿ
ತಪುರಾಣದ ರೇಖೆಗಂ ಪುರಾಣದ ಕೃತಿಗಳ್ ೩೭

ಕವಿಜನದೊಳ್ ರತ್ನತ್ರಯ
ಪವಿತ್ರಮೆನೆ ನೆಗೞ್ದ ಪಂಪನುಂ ಪೊನ್ನಿಗನುಂ
ಕವಿರತ್ನನುಮೀಮೂವರ್
ಕವಿಗಳ್ ಜಿನಸಮಯದೀಪಕರ್ ಪೆಱರೊಳರೆ ೩೮

ಸುಭಗಕವಿ ಪಂಪನಿಂ ವಾ
ಗ್ವಿಭವೋನ್ನತಿ ನೆಗೞ್ದವನಗುಣ[1]ದೊಳಗ[1]ಸೆದಿ
ರ್ದುಭಯಕವಿಚಕ್ರವರ್ತಿಗ
ಮಭಿನವಕವಿಚಕ್ರವರ್ತಿಗಂ ದೊರೆಯೊಳರೆ ೩೯

ಕವಿಗಳೊಳವರಿರ್ವರೆ ಪು
ಣ್ಯವಂತರಿರ್ವರೆ ಕೃತಾರ್ಥರಿರ್ವರೆ [2]ಸೊಬ[2]ಗರ್
ಕವಿತಾಗುಣಾರ್ಣವಂ ಮೇಣ್
ಕವಿರತ್ನಂ ಮೇಣ್ ಗುಣಕ್ಕೆ ಮಚ್ಚರಮುಂಟೆ ೪೦

---

1 ಜೆಯೊಳೆ (ಅ), ಗಣನೆಯೊಳೆ (ಕ). 2 ಸುಭ (ಕ).

ತ್ರಿಜಗದೊಳಾದಿಪುರಾಣಮು
ಮಜಿತಪುರಾಣಮುಮನೆಸೆಯೆ ಪೇೞ್ದುದಱಿಂದಂ
ದ್ವಿಜವಂಶಧ್ವಜ ವೈಶ್ಯ
ಧ್ವಜರೆನ್ನದರೊಳರೆ ಪಂಪನಂ ರತ್ನನುಮಂ ೪೧

ಧರಣಿಗೆ ನೆಗೞ್ದಿರ್* ಸಲೆ ರ
ಟ್ಟರಾಜ್ಯದೊಳ್ ಮುನ್ನೆ ಪಂಪನುಂ ಪೊನ್ನಿಗನುಂ
ನರಪತಿಪೂಜ್ಯಂ ಚಾಳು
ಕ್ಯರಾಜ್ಯದೊಳ್ ನೆಗೞ್ದ*ನುಭಯಕವಿ ಕವಿರತ್ನಂ ೪೨

ಅಭಿಮತಜೈನೇಂದ್ರವಚೋ
ವಿಭವಂ ಶಬ್ದಾನುಶಾಸನಪ್ರಭವವಚೋ
ವಿಭವವೊಡನೆಸೆಯೆ ರಂಜಿಪ
ನುಭಯವ್ಯಾಕರಣ [1]ಪರಿಣತಂ[1] ಕವಿರತ್ನಂ ೪೩

ಕರಮೆಸೆದುವು ರತ್ನತ್ರಯ
ಪರಿಕಲ್ಪದೆ ಪರಶುರಾಮಚರಿತಂ ಚಕ್ರೇ
ಶ್ವರಚರಿತಮಜಿತತೀರ್ಥೇ
ಶ್ವರಚರಿತಂ ರತ್ನನಿಂದೆ ಭುವನತ್ರಯದೊಳ್ ೪೪

ಬೆಳುಗರೆ ನಾಡೊಳ್ ಪುಟ್ಟಿದ
ಬಳಿಗಾಱರ ಕುಲದೊಳೆಱೆ[3]ದಜಿ[2]ತ[2]ಶಾಸನವತಂ
ಬೆಳಗುವ ಚಕ್ರೇಶ್ವರಮಂ
ಡಳೇಶ್ವರಂ ಬೆಸಸೆ ನೆಗೞ್ದ* ಕವಿ ಕವಿರತ್ನಂ ೪೫

ಅಱಿಕೆಯ ಗಟ್ಟಗೆಯುಂ ಪೆ
ದೊರ್ಱೆ[3]ಯುಂ ಪರಿ[3]ವ[3]ಲ್ಲಿ ತದ್ದವಾಡಿಗೆ ತೆಂಕಲ್
ತೊಱಗಲೆಗೆ ಬಡಗಲಿರ್ದುದು
ನೆಱೆ[3]ಯೆ ಸುಖೋದ್ದೀಪಮೆನಿಸಿ ಬೆಳುಗಲಿದೇಶಂ ೪೬

---

1 ಪಂಡಿತಂ (ಕ). 2 ನ (ಕ). 3 ದ (ಅ, ಕ).

ಬೆಳುಗಲಿಯಯ್ನೂಱರೊಳ
ಗ್ಗಳಮೆನಿಸುವ ಜಂಬುಖಂಡಿಯೆಪ್ಪತ್ತರ್ಕಂ
ತಿಳಕಮೆನೆ ನೆಗಟ್ದ* ಮುಃದುವೊಟ
ಲೊಳೆ ಪುಟ್ಟ ಸುಪುತ್ರನೆನಿಸಿದಂ ಕವಿರತ್ನಂ ೪೭

ಸಂದ ಪತಿವ್ರತಾಗುಣವಿಭೂಷಣದಿಂ ನೆಗಟ್ದ*[1]ಬ್ಬಲ[1]ಬ್ಬೆ ತಾಯ್
ತಂದೆ ಜಿನೇಂದ್ರಪಾದಕಮಲಭ್ರಮರಂ ಜಿನವಲ್ಲಭೇಂದ್ರನ
ಣ್ಣಂ ದೃಢಬಾಹುರೇಚಣನುದಾರಗುಣಂ ಗುಣಿಮಾರಮಯ್ಯನೆಂ
ದಂದೆ ವಣಿಕ್ಕುಳಾರ್ಕನೆನಿಸಿತ್ತೆಸಕಂ ಕವಿಚಕ್ರವರ್ತಿಯಾ ೪೮

ದೊರೆಕೊಂಡು ಸೌಮ್ಯಸಂವ
ತ್ಸರದೊಳ್ ಕರ್ಕಟಕರಾಶಿಯೊಳ್ ಸೌಮ್ಯಮುಖಂ
ಗುರು ವ[2]ತ್ಸ[2]ಳ ನುದಯಿಸಿದಂ
ಸರಸ್ವತೀರತ್ನಮಂಡನಂ ಕವಿರತ್ನಂ ೪೯

ಗುರುಗಳಜಿತಸೇನಾಚಾರ್ಯರಿಂದ್ರಾದಿವಂದ್ಯಾ
ಚರಿತರಜಿತ [3]ಶೌ[3]ರ್ಯ ಸ್ವಾಮಿ ಚಾವುಂಡರಾಯಂ
ವರದನಜಿತನಾಥಂ ಸತ್ಯನೆಂದಂದು ರತ್ನಂ
ಬರೆಗಮಧಿಕಪುಣ್ಯಂ ನೋಡೆಯೇಂ ನೋಂತನಾವೊಂ ೫೦

ಮದ[4]ನಾ[4]ವತಾರಮುಂ ಕನ
ಕದಂಡಚಾಮರಮನುನ್ಮದೇಭಮನುತ್ತುಂ
ಗದ ಛತ್ರಗಾವೆಯುಂ ಪಡೆ
ದುದಾತ್ತಕವಿತಿಲಕನೆನಿಸಿದಂ ಕವಿರತ್ನಂ ೫೧

ಸಂತತದೇವಭಕ್ತಿ ಪತಿಭಕ್ತಿಗುಣಗಂಳೆ ಭೂಷಣಂಗಳೆ
ರ್ಪಂತೆಸೆದಿರ್ಪಿನಂ ತನಗೆ ಧರ್ಮಕುಲೋಚಿತಶುದ್ಧವೃತ್ತಿಯಿಂ
ಕಾಂತೆಯರೊಳ್ಗುಣಂಬಡೆದ ಧರ್ಮದ ಪೆರ್ಮೆಗೆ ನೋಂತ ಜಕ್ಕಿಯುಂ
ಶಾಂತಿಯುಮೆಂಬರಿರ್ವರೆ ಕುಲಾಂಗನೆಯರ್ ಕವಿಚಕ್ರವರ್ತಿಯಾ ೫೨

---

1 ತ್ರಿಮ (ಕ). 2 ಚ್ಛ (ಅ, ಕ). 3 ಸಾ (ಅ, ಕ). 4 ನನ (ಕ).

ವಿದಿತವಿರೋಧಿವತ್ಸರದ ಭಾದ್ರಪದೋದಿತ ಶುಕ್ಲಪಕ್ಷದೊಳ್
ಬಿದಿಗೆಯೊಳಾದಿವಾಸರದೊಳುತ್ತರೆಯೊಳ್ ಶಿವಯೋಗದೊಳ್ ಸುಖ
ಪ್ರದಮೆನೆ ಕನ್ನೆರಾಸಿಯೊಳೆ ವೃಶ್ಚಿಕಲಗ್ನದೊಳರ್ಕಜಾಂಶಮಾ
ದುದು ಕವಿರತ್ನನಂದನನ ರಾಯನ ಜಾತಕಮುತ್ತರೋತ್ತರಂ ೫೧

ವಿಜಯಾಬ್ದಂ ನೆಗೞ್ದಂದು ಮಾರ್ಗಶಿರಶುದ್ಧೈಕಾದಶೀವಾಸರಂ
ರಜನೀವಲ್ಲಭವಾರಮಶ್ವಿನಿ ನಿಶಾನಾಥಾಂಶಕಂ ಕೂಡೆ ನಾ
ಕಜಮಂತ್ರಿಪ್ರಕಟೋದಯಂ ನೆಗೞ್ವಿನಂ ತನ್ನುಚ್ಚದೊಳ್ ಪುಟ್ಟಿದಳ್
ನಿಜವರ್ಣೋತ್ತಮೆಯತ್ತಿಮಬ್ಬೆಕವಿರತ್ನಾಂಬೋಧಿಯೊಳ್ ಲಕ್ಷ್ಮಿಯೊಲ್

ನೆಗೞ್ದವರಿರ್ವರ ಪೆಸರ್ಗಳ್
ನೆಗೞ್ದವು ತನ್ನೆರಡುಮುದ್ಧಕೃತಿಗಳ್ ರಾಯಂ
ಮಗನತ್ತಿಮಬ್ಬೆ ಮಗಳೆನೆ
ನೆಗೞ್ದಂ ಸಂತಾನವೃದ್ಧಿಯಿಂ ಕವಿರತ್ನಂ ೫೨

ಶಕವರ್ಷಂ ಪಂಚದಶಾ
ಧಿಕನವಶತಮಾಗೆ ವಿಜಯಸಂವತ್ಸರ ಕಾ
ರ್ತಿಕ ನಂದೀಶ್ವರದಿನದೊಳ್
ಪ್ರಕಟಿಸಿದುದು ರತ್ನನಿಂದಮಜಿತಪುರಾಣಂ ೫೪

ಇದು ಸಕಲ ಮುನೀಂದ್ರ ವೃಂದ ವೃಂದಾರಕ ಶ್ರೀಮತಜಿತಸೇನ ಭಟ್ಟಾರಕ

ಶ್ರೀಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ

ಶ್ರೀಮದಭಿನವ ಕವಿಚಕ್ರವರ್ತಿ

ಕವಿರತ್ನ ವಿರಚಿತ

ಶ್ರೀ ದಾನಚಿಂತಾಮಣಿ ನಿರ್ಮಾಪಿತ

ಶ್ರೀಮದಜಿತತೀರ್ಥಕರ ಪುರಾಣತಿಲಕದೊಳ್

ಪುರಾಣ ನಿರ್ಮಾಣ ವರ್ಣನಂ ದ್ವಾದಶಾಶ್ವಾಸಂ.

ಅಜಿತತೀರ್ಥಕರ ಪುರಾಣ ತಿಲಕಂ ಸಮಾಪ್ತಂ.

ಭದ್ರಂ

ಶುಭಂ

ಮಂಗಲಂ

★

ಪ್ರಕಾಶಕರ ವಂದನಾ ಪತ್ರ

ಧರ್ಮ ಬಾಂಧವರೇ!

ಮೈಸೂರು ಜೈನ ಸಾಹಿತ್ಯ ಪ್ರಚಾರ ಸಂಘವು 1950 ರಲ್ಲಿ ಜನ್ಮವೆತ್ತಿ ಅಖಂಡ ಕರ್ನಾಟಕ ಕೇರಳ ಇವೇ ಮುಂತಾದ ಪ್ರಾಂತಗಳಲ್ಲಿ ಸಾಕಾದಷ್ಟು ಪ್ರಚಾರವನ್ನು ಕೈಕೊಂಡು ಅಪೂರ್ವವಾದ ಸಾಹಿತ್ಯಸೇವೆಯನ್ನು ಸಲ್ಲಿಸುತ್ತಿದೆ. ಜೈ. ಸಾ. ಪ್ರ ಸಂಘದ ಸಂಸ್ಥಾಪಕರಾದ ಶ್ರೀ: ನ್ಯಾಯತೀರ್ಥ ಯಂ. ಸಿ. ಪದ್ಮನಾಭಶರ್ಮರವರು ಈ ಸಂಸ್ಥೆಗೆ ತನುಮನಧನಗಳಿಂದ ಸೇವೆಯನ್ನು ಸಲ್ಲಿಸುತ್ತಾ ಈ ಸಂಘದ ಸಂಚಾಲನಾಕಾರ್ಯವನ್ನೂ ನಿರ್ವಹಿಸುತ್ತಿರುವರಲ್ಲದೆ ಸುಮಾರು ಏಳೆಂಟು ಗ್ರಂಥಗಳ ಸಂಪಾದನಾದಿಕಾರ್ಯಗಳ ಮೂಲಕ ಧರ್ಮ ಸಾಹಿತ್ಯಾದಿಗಳ ಸೇವಾದೀಕ್ಷಾತತ್ಪರರಾಗಿರುತ್ತಾರೆ. ಇಂತಹ ಈ ಧರ್ಮಬಂಧುಗಳು ಮೈನಾಡಿನಲ್ಲಿ ಜೈನಸಾಹಿತ್ಯಸಂಘದ ಪ್ರಚಾರವನ್ನು ಕೈಕೊಂಡ ಕಾಲದಲ್ಲಿ ನಾವು ಮತ್ತು ನಮ್ಮ ಮಕ್ಕಳಾದ ಶ್ರೀ: ಪದ್ಮರಾಜಗೌಡರು, ಶ್ರೀ: ವಜ್ರೇಗೌಡರು, ಶ್ರೀ: ಪಿ ಕೆ. ನಾಗಪ್ಪಗೌಡರು ಇವರುಗಳೆಲ್ಲಾ ಸೇರಿ ಜೈನ ಸಾಹಿತ್ಯಪ್ರಚಾರ ಸಂಘದ ಆಶ್ರಯದಲ್ಲಿ ಉತ್ತಮಸಾಹಿತ್ಯವನ್ನು ಪ್ರಕಟಿಸಲು ನಿಶ್ಚಯಿಸಿದೆವು. ಅದೇ ಸಂದರ್ಭದಲ್ಲಿ ಮಾರುದೂರು ಕಡೇಮನೆ ಶ್ರೀ: ವಿ ಕೆ ವರ್ಧಮಾನಗೌಡರವರು ಕವಿಚಕ್ರವರ್ತಿ ಶ್ರೀ ರನ್ನಮಹಾಕವಿಯ ಅಜಿತ ತೀರ್ಥಂಕರ ಪುರಾಣ ತಿಲಕವನ್ನೇ ಪ್ರಕಟಿಸಬೇಕೆಂದರು. ಅದರಂತೆ ಸಂಘದ ಸಂಸ್ಥಾಪಕರಾದ ನ್ಯಾಯತೀರ್ಥ ಶ್ರೀ: M.C. ಪದ್ಮನಾಭಶರ್ಮರವರನ್ನು ಅಜಿತಪುರಾಣವನ್ನು ಮುದ್ರಣಕ್ಕೆ ಸಿದ್ಧಪಡಿಸುವಂತೆ ಪ್ರಾರ್ಥಿಸಿದೆವು. ಅದನ್ನು ಮನ್ನಿಸಿದ ಶ್ರೀ: ಪದ್ಮನಾಭಶರ್ಮರವರ ಪ್ರಾರ್ಥನೆಯಂತೆ ಮೈಸೂರು O.R.I. ಡೈರೆಕ್ಟರಾದ ಶ್ರೀ: ಹೆಚ್. ದೇವೀರಪ್ಪ, M.A., ರವರೂ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಧಿಕಾರಿಗಳಾದ ಶ್ರೀ: ಡಿ. ಜವರೇಗೌಡ, M.A., ರವರೂ ಶ್ರೀ: ಪದ್ಮನಾಭಶರ್ಮರಲ್ಲಿರುವ ಪ್ರೇಮ ವಿಶ್ವಾಸಾದಿಗಳಿಂದಲೂ ಕನ್ನಡಾಂಬೆಯಲ್ಲಿರುವ ಭಕ್ತಿಪರಾಕಾಷ್ಮತೆಯಿಂದಲೂ ಪ್ರೇರಿತರಾಗಿ ಬಹುಶ್ರಮವಹಿಸಿ ಅನೇಕತಾಲಪತ್ರಸಂಶೋಧನಪೂರ್ವಕವಾಗಿ ಈ ಅಜಿತಪುರಾಣವನ್ನು ಸಂಪಾದಿಸಿ ಗ್ರಂಥಮುದ್ರಣಕಾರ್ಯಕ್ಕೆ ಅತ್ಯಂತ ಉಪಕರಿಸಿರುವರು.

ಮೇಲ್ಕಂಡ ರೀತಿಯಲ್ಲಿ ಧರ್ಮಗ್ರಂಥಪ್ರಕಟನಕಾರ್ಯಕ್ಕೆ ಪ್ರೇರಕರಾದ ಸಂಘದ ಸಂಚಾಲಕರಾದ ಶ್ರೀ: M.C ಪದ್ಮನಾಭಶರ್ಮರವರಿಗೂ ಪುರಾಣಗ್ರಂಥ ಸಂಪಾದಕರಾದ ಶ್ರೀ ಎಚ್. ದೇವೀರಪ್ಪ ಮತ್ತು ಶ್ರೀ: ಡಿ. ಜವರೇಗೌಡ ಇವರುಗಳಿಗೆ ನಮ್ಮ ಹೃತ್ಪೂರ್ವಕವಾದ ಕೃತಜ್ಞತಾಪುರಸ್ಸರವಾದ ವಂದನೆಗಳನ್ನು ಸಮರ್ಪಿಸು

ತ್ತೇನೆ ಹಾಗೆಯೇ ಈ ಗ್ರಂಥವನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ವಿಜಯಲಕ್ಷ್ಮೀ ಪ್ರೆಸ್ ಪ್ರೊಪ್ರೈಟರವರಾದ ಶ್ರೀ B.V. ಅಳಹಿಯುಮಣ ವಾಳರವರಿಗೂ ಅನಂತವಂದನೆಗಳನ್ನು ಸಮರ್ಪಿಸುತ್ತೇನೆ. ಹಾಗೂ ಈ ಶಾಸ್ತ್ರ ಗ್ರಂಥಪ್ರಕಟನೆಗಾಗಿ ಪ್ರೇರೇಪಿಸಿದ ಎಲ್ಲಾ ಧರ್ಮಬಂಧುಗಳಿಗೂ ವಿಶೇಷವಾಗಿ ಶ್ರೀ: ಯಂ, ಸಿ. ಪದ್ಮನಾಭಶರ್ಮರವರಿಗೂ ನನ್ನ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ.

ಇಂತು ತಮ್ಮಗಳ ಧರ್ಮ ಬಂಧು

16—4—59 ಲಕ್ಷ್ಮೀದೇವಮ್ಮ

ವು. ಶ. 1621 ಕೀರೆಪಚ್ಚೆ

ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಗ್ರಂಥಗಳು

೧) ಅಜಿತ ತೀರ್ಥಂಕರ ಪುರಾಣ ತಿಲಕ 4 0 0 (೨) ಧರ್ಮ ನಾಥ ಪುರಾಣ 2 0 0 (೩) ಮುನಿ ಸುವ್ರತ ಕಾವ್ಯ 2 0 0 (೪) ಜ್ವಾಲಾಮಾಲಿನೀ ಮಾಹಾತ್ಮ್ಯೆ 2 8 0 (೫) ಯಶೋಧರ ಚರಿತ್ರೆ 1 0 0 (೬) ಸತ್ಕ್ರಿಯಾ ದರ್ಪಣ 1 0 0 (೭) ಭರತ ಬಾಹು ಬಲಿ 1 4 0 (೮) ಪಂಪನ ಕಲಿಕರ್ಣ 1 0 0 (೯) ಸಮ್ಯಕ್ತ್ವ ಸಾರ 0 15 0 (೧೦) ಕಾಲಜ್ಞಾನ ಪ್ರಕಾಶಿಕಾ 0 8 0 (೧೧) ಶ್ರೇಣಿಕ ಚರಿತ್ರೆ 0 8 0 (೧೨) ಅಭಿನವ ವಾಗ್ದೇವಿ ಕಂಠಿ 0 6 0 (೧೩) ಯೋಗಾಮೃತಶತಕ 0 6 0 (೧೪) ಯೋಗ ಸಾರ 0 4 0 (೧೫) ಜೈನ ನಿತ್ಯಪೂಜಾದಿ ಸಂಗ್ರಹ 0 5 0 (೧೬) ತತ್ವಾರ್ಥ ಸೂತ್ರ 0 4 0 (೧೭) ನನ್ನ ಭಾವನೆ 0 2 0 (೧೮) ಸಾಮಯಿಕಪಾಠ 0 2 6 (೧೯) ಜಿನಾಕ್ಷರಮಾ 0 3 0 (೨೦) ಉಪದೇಶ ರತ್ನ ಮಾಲಾ 0 2 0 (೨೧) ಮಹಾವೀರ ಗೀತಾಂಜಲಿ 1 4 0 (೨೨) ಅಹಿಂಸಾಜ್ಯೋತಿ ಮಹಾವೀರ 0 12 0 (೨೩) ಆದರ್ಶ ಸಾಹಿತಿಗಳು 0 12 0 (೨೪) ಶಾಂತಿನಾಥಗೀತಾಂಜಲಿ 0 8 0 (೨೫) ರನ್ನನ ಕುರುಕ್ಷೇತ್ರ 1 4 0 (೨೬) ಪಂಚಸ್ತೋತ್ರ (ಪ್ರಿಂಟಿಂಗಿನಲ್ಲಿದೆ) (೨೭) ಶಾಂತ ಶೃಂಗಾರ ವಿಲಾಸ 0 5 0 (೨೮) ಜಿನವಾಣಿ ತಿಳಿಗನ್ನಡ ಮಾಸ ಪತ್ರಿಕೆವಾರ್ಷಿಕ ಚಂದ 3 0 0